ಬುಧವಾರ, ಜನವರಿ 5, 2022 | ಬೆಂಗಳೂರು | ₹ 6.00 | ಸಂಪುಟ 75| ಸಂಚಿಕೆ 5 | ಪುಟ 16
● www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ
ಒಟಿಟಿ ಪ್ಲಾಟ್‌ಫಾರಂಗಳಿಗೆ ಅಲ್ಗಾರಿದಂ ಎಂಜಿನ್‌ಗಳನ್ನು ಒದಗಿಸುವುದೇ ಒಂದು ಉದ್ಯಮವಾಗಿಯೂ ಬೆಳೆದಿದೆ. ನಮ್ಮ ದೇಶವೊಂದರಲ್ಲೇ 90ಕ್ಕೂ ಹೆಚ್ಚು ಒಟಿಟಿ ಪ್ಲಾಟ್‌ಫಾರಂ ಇವೆ!

ಸಂಖ್ಯೆ-ಸುದ್ದಿ: ಹಿಂದಿ ಭಾಷಿಕ ರಾಜ್ಯಗಳಲ್ಲಿ ಬಡವರು ಹೆಚ್ಚು

ಸಚಿವ ಅಶ್ವತ್ಥನಾರಾಯಣ ವಿರುದ್ಧದ ಸಮನ್ಸ್ ರದ್ದು 4
'ಬುಲ್ಲಿ ಬಾಯಿ': ಮಹಿಳೆ ಬಂಧನ 11

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
59,855 ▲	17,805 ▲	₹49,440 (ಬೆಂಗಳೂರು) ▼	₹63,200 (ಬೆಂಗಳೂರು) ▼	74.58 ▼

ಬೆಂಗಳೂರಿನಲ್ಲಿ 10ರಿಂದ 12ಕ್ಕೆ ಮಾತ್ರ ಭೌತಿಕ ತರಗತಿ ● ಸಭೆ– ರ‍್ಯಾಲಿಗಳಿಗೆ ನಿರ್ಬಂಧ

ರಾಜ್ಯದಾದ್ಯಂತ ವಾರಾಂತ್ಯ ಕರ್ಫ್ಯೂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಪ್ರಕರಣಗಳು ಏಕಾಏಕಿ ಹೆಚ್ಚಳವಾಗುತ್ತಿರುವ ಹಿನ್ನೆಲೆಯಲ್ಲಿ ಇದೇ ಶುಕ್ರವಾರದಿಂದ (ಜ.7) ರಾಜ್ಯದಾದ್ಯಂತ ವಾರಾಂತ್ಯ ಕರ್ಫ್ಯೂ ಜಾರಿ ಮಾಡಲು ಸರ್ಕಾರ ನಿರ್ಧರಿಸಿದೆ.

ಬೆಂಗಳೂರಿನಲ್ಲಿ ಮಂಗಳವಾರ ಒಂದೇ ದಿನ 3,048 ಹೊಸ ಪ್ರಕರಣಗಳು ವರದಿಯಾಗಿವೆ. ಈಗ ಚಾಲ್ತಿಯಲ್ಲಿರುವ ರಾತ್ರಿ ಕರ್ಫ್ಯೂ ನಿಯಮ ಜ.8ಕ್ಕೆ ಕೊನೆಯಾಗಲಿದೆ. ಅದರ ಜತೆಗೆ ಮತ್ತಷ್ಟು ಕಠಿಣ ನಿಯಮಗಳನ್ನು ಹೇರಿರುವ ಸರ್ಕಾರ, ಜ.6ರ ಗುರುವಾರದಿಂದ ಅನ್ವಯವಾಗುವಂತೆ ಮತ್ತೆ ಎರಡು ವಾರಗಳ ಕಾಲ ಹೊಸ ನಿರ್ಬಂಧಗಳನ್ನು ಹೇರಿದೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಅಧ್ಯಕ್ಷತೆಯಲ್ಲಿ ಮಂಗಳವಾರ ಸಂಜೆ ನಡೆದ ಸಭೆಯಲ್ಲಿ ಸಚಿವರು, ಅಧಿಕಾರಿಗಳು, ಕೋವಿಡ್ ತಾಂತ್ರಿಕ ಸಲಹಾ ಸಮಿತಿ ಸದಸ್ಯರು ಮತ್ತು ಆರೋಗ್ಯ ತಜ್ಞರು ಪಾಲ್ಗೊಂಡಿದ್ದರು. ರಾತ್ರಿ 9.30ರವರೆಗೂ ನಡೆದ ಸಭೆ ಬಳಿಕ ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕಂದಾಯ ಸಚಿವ ಆರ್. ಅಶೋಕ ಹಾಗೂ ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಅವರು ಹೊಸದಾಗಿ ಜಾರಿ ಮಾಡಲಾಗುತ್ತಿರುವ ನಿರ್ಬಂಧಗಳ ಬಗ್ಗೆ ವಿವರ ನೀಡಿದರು.

ಬೆಂಗಳೂರಿನಲ್ಲಿ ಶಾಲೆ ಬಂದ್: ಬೆಂಗಳೂರಿನಲ್ಲಿ ಶಾಲೆಗಳು ಗುರುವಾರದಿಂದ ಬಂದ್ ಆಗಲಿವೆ. ಆದರೆ, 10,11 ಮತ್ತು 12 ನೇ ತರಗತಿಗಳಿಗೆ ಮಾತ್ರ ಶಾಲೆ–ಕಾಲೇಜುಗಳು ನಡೆಯಲಿವೆ. 1ರಿಂದ 9ರ ವರೆಗಿನ ವಿದ್ಯಾರ್ಥಿಗಳಿಗೆ ಆನ್‌ಲೈನ್ ತರಗತಿಗಳು ನಡೆಯಲಿವೆ. ವೈದ್ಯಕೀಯ, ಅರೆ ವೈದ್ಯಕೀಯ, ನರ್ಸಿಂಗ್ ಕಾಲೇಜುಗಳು ಮಾತ್ರ ನಡೆಯಲಿವೆ. ಪದವಿ, ಎಂಜಿನಿಯರಿಂಗ್ ಕಾಲೇಜುಗಳಲ್ಲಿ ಭೌತಿಕ ತರಗತಿ ನಡೆಯುವುದಿಲ್ಲ.

ರಾಜ್ಯದ ಉಳಿದ ಜಿಲ್ಲೆಗಳ ಶಾಲಾ ಕಾಲೇಜಗಳು ಯಥಾರೀತಿ ನಡೆಯಲಿವೆ. ಯಾವುದೇ ನಿರ್ಬಂಧ ವಿಧಿಸಿಲ್ಲ ಎಂದು ಸಚಿವ ಅಶೋಕ ಹೇಳಿದರು.

ವಾರಾಂತ್ಯ ಕರ್ಫ್ಯೂ: ಶುಕ್ರವಾರ ರಾತ್ರಿ 10ರಿಂದ ಸೋಮವಾರ ಬೆಳಿಗ್ಗೆ 5 ಗಂಟೆಯವರೆಗೆ ವಾರಾಂತ್ಯ ಕರ್ಫ್ಯೂ ಜಾರಿ ಮಾಡಲಾಗುತ್ತದೆ. ಈ ವೇಳೆ, ಹೊರಜಿಲ್ಲೆ, ರಾಜ್ಯಗಳಿಂದ ಬರುವವರಿಗೆ ವಾಹನಗಳ ಟಿಕೆಟ್ ಇದ್ದರೆ ಅಡ್ಡಿ ಇರುವುದಿಲ್ಲ. ಅನಗತ್ಯ ಓಡಾಟಗಳಿಗೆ ನಿರ್ಬಂಧ ವಿಧಿಸಲಾಗುತ್ತದೆ.

ಆದರೆ, ದಿನಸಿ ಅಂಗಡಿ, ಹಾಲು, ತರಕಾರಿ, ಔಷಧ, ಪೆಟ್ರೋಲ್ ಮತ್ತಿತರ ಅಗತ್ಯ ವಸ್ತುಗಳ ಖರೀದಿಗೆ ನಿರ್ಬಂಧ ಇರುವುದಿಲ್ಲ. ಕರ್ಫ್ಯೂ ಅವಧಿಯಲ್ಲಿ ಹೋಟೆಲ್‌ಗಳಲ್ಲಿ ಪಾರ್ಸೆಲ್ ಸೇವೆ ಮಾತ್ರ ಇರುತ್ತದೆ ಎಂದು ಸಚಿವ ಅಶೋಕ ಹೇಳಿದರು.

ಬಸ್, ರೈಲು, ಮೆಟ್ರೊ, ಆಟೋ ಸೇವೆಗಳಿಗೆ ವಾರದ ದಿನಗಳಲ್ಲಿ ನಿರ್ಬಂಧ ಇರುವುದಿಲ್ಲ.

ರಜಾದಿನ ಬಿಟ್ಟು ವಾರದ ಎಲ್ಲ ದಿನಗಳಲ್ಲಿ ಕೇಂದ್ರ ಸರ್ಕಾರ ಜಾರಿ ಮಾಡಿರುವಂತೆ ಸರ್ಕಾರಿ ಕಚೇರಿಗಳಲ್ಲಿ ಶೇ 50ರಷ್ಟು ಸಿಬ್ಬಂದಿ 50:50 ಅನುಪಾತದಲ್ಲಿ ಕೆಲಸ ಮಾಡಲು ಅವಕಾಶ ಕಲ್ಪಿಸಲಾಗಿದೆ. ಚಿತ್ರ ಮಂದಿರ, ಬಾರ್, ಪಬ್, ರೆಸ್ಟೋರೆಂಟ್‌ಗಳಲ್ಲಿ ಕೂಡ ಒಟ್ಟು ಆಸನ ಸಾಮರ್ಥ್ಯದ ಶೇ 50ರಷ್ಟು ಆಸನಗಳನ್ನು ಭರ್ತಿ ಮಾಡಲು ಅವಕಾಶ ನೀಡಲಾಗಿದೆ. ಕರ್ಫ್ಯೂ ದಿನಗಳಲ್ಲಿ ಪಾರ್ಸೆಲ್ ಮಾತ್ರ ಅವಕಾಶ ನೀಡಲಾಗಿದೆ.

ಸಭೆ–ಸಮಾರಂಭ: ಯಾವುದೇ ಪ್ರತಿಭಟನೆ, ಜಾತ್ರೆ, ರ‍್ಯಾಲಿ, ಮೆರವಣಿಗೆಗೆ ಅವಕಾಶ ಇರುವುದಿಲ್ಲ. ಈ ನಿರ್ಬಂಧ ಗುರುವಾರ ರಾತ್ರಿಯಿಂದಲೇ ಜಾರಿಯಾಗಲಿದೆ ಎಂದು ಕೆ.ಸುಧಾಕರ್ ಅವರು ಹೇಳಿದರು.

ಇನ್ನಷ್ಟು ಸುದ್ದಿಗಳು 3B, 3C, 8

ಕೋವಿಡ್: ದೇಶದಲ್ಲಿ ಒಂದೇ ದಿನ 37,379 ಪ್ರಕರಣಗಳು ಪತ್ತೆ

ನವದೆಹಲಿ (ಪಿಟಿಐ): ದೇಶದಲ್ಲಿ ಮಂಗಳವಾರ ಬೆಳಿಗ್ಗೆ 8 ಗಂಟೆಯ ಹಿಂದಿನ 24 ತಾಸುಗಳಲ್ಲಿ ಕೋವಿಡ್–19ರ 37,379 ಪ್ರಕರಣಗಳು ದೃಢಪಟ್ಟಿವೆ. ಈ ಅವಧಿಯಲ್ಲಿ 124 ಮಂದಿ ಕೋವಿಡ್‌ನಿಂದಾಗಿ ಜೀವ ಕಳೆದುಕೊಂಡಿದ್ದಾರೆ. ಸಕ್ರಿಯ ಪ್ರಕರಣಗಳ ಸಂಖ್ಯೆಯು 1,71,830ಕ್ಕೆ ಏರಿದೆ.

ಕೋವಿಡ್ ದೃಢಪಡುವಿಕೆಯ ದೈನಂದಿನ ಪ್ರಮಾಣವು ಶೇ 3.24ರಷ್ಟು ಮತ್ತು ವಾರದ ಪ್ರಮಾಣವು ಶೇ 2.05ರಷ್ಟಕ್ಕೆ ಏರಿಕೆಯಾಗಿದೆ. ಕೋವಿಡ್ ತಡೆ ಲಸಿಕೆಗಳ ಒಟ್ಟು 146.70 ಕೋಟಿ ಡೋಸ್‌ಗಳನ್ನು ಜನರಿಗೆ ಈವರೆಗೆ ಹಾಕಲಾಗಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯವು ತಿಳಿಸಿದೆ.

ಕೊರೊನಾ ವೈರಾಣುವಿನ ಹೊಸ ರೂಪಾಂತರ ತಳಿ ಓಮೈಕ್ರಾನ್ ಸೋಂಕು ಪತ್ತೆಯಾದ ಜನರ ಸಂಖ್ಯೆಯು 1,892ಕ್ಕೆ ಏರಿದೆ. ಇವರ ಪೈಕಿ 766 ಮಂದಿ ಗುಣಮುಖರಾಗಿದ್ದಾರೆ. ಮಹಾರಾಷ್ಟ್ರದಲ್ಲಿ ಅತಿ ಹೆಚ್ಚು ಅಂದರೆ, 568 ಪ್ರಕರಣಗಳು ದೃಢಪಟ್ಟಿವೆ. ನಂತರದ ಸ್ಥಾನಗಳಲ್ಲಿ ದೆಹಲಿ (382), ಕೇರಳ (185), ರಾಜಸ್ಥಾನ (174), ಗುಜರಾತ್ (152) ಮತ್ತು ತಮಿಳುನಾಡು (121) ಇವೆ.

ರಾಜ್ಯದಲ್ಲಿ ಪ್ರಕರಣ ಸಂಖ್ಯೆ ಮೂರು ಪಟ್ಟು ಹೆಚ್ಚಳ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಹೊಸ ಪ್ರಕರಣಗಳ ಸಂಖ್ಯೆ 24 ಗಂಟೆಗಳ ಅವಧಿಯಲ್ಲಿ ದುಪ್ಪಟ್ಟಾಗಿದ್ದು, ಮಂಗಳವಾರ ರಾಜ್ಯದಲ್ಲಿ 3,466 ಮಂದಿಗೆ ಕೊರೊನಾ ಸೋಂಕು ದೃಢಪಟ್ಟಿದೆ.

ಆರು ತಿಂಗಳ ಅವಧಿಯಲ್ಲಿ ವರದಿಯಾದ ಗರಿಷ್ಠ ಪ್ರಕರಣಗಳು ಇವಾಗಿವೆ. 2021ರ ಜು.8ರಂದು 2,530 ಪ್ರಕರಣಗಳು ಖಚಿತಪಟ್ಟಿದ್ದವು. ಬಳಿಕ ಪ್ರಕರಣಗಳ ಸಂಖ್ಯೆ ಇಳಿಮುಖವಾಗಿತ್ತು. ಈಗ ವಾರದಿಂದ ಏರುಗತಿ ಪಡೆದುಕೊಂಡಿದೆ. ವರದಿಯಾಗುತ್ತಿರುವ ಒಟ್ಟು ಪ್ರಕರಣಗಳಲ್ಲಿ ಶೇ 90 ರಷ್ಟು ಪ್ರಕರಣಗಳು ಬೆಂಗಳೂರಿನಲ್ಲಿಯೇ ದೃಢಪಡುತ್ತಿವೆ.

ಒಂದು ದಿನದ ಅವಧಿಯಲ್ಲಿ 95 ಸಾವಿರ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ರಾಜ್ಯದ 29 ಜಿಲ್ಲೆಗಳಲ್ಲಿ ಕೋವಿಡ್ ಪ್ರಕರಣಗಳು ಹೊಸದಾಗಿ ಪತ್ತೆಯಾಗಿವೆ. 12 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಎರಡಂಕಿ, 16 ಜಿಲ್ಲೆಗಳಲ್ಲಿ ಒಂದಂಕಿಯಲ್ಲಿದೆ. ಹಾವೇರಿಯಲ್ಲಿ ಹೊಸ ಪ್ರಕರಣ ವರದಿಯಾಗಿಲ್ಲ.

ರಾಜ್ಯದ ಕೋವಿಡ್ ಅಂಕಿ–ಅಂಶ

30,14,313	ಒಟ್ಟು ಪ್ರಕರಣಗಳು (30,10,847 ನಿನ್ನೆಯ ವಿವರ) ▲
14,519	ಸಕ್ರಿಯ ಪ್ರಕರಣಗಳು ▲
29,61,410	ಗುಣಮುಖರಾದವರು ▲
38,355	ಒಟ್ಟು ಸಾವು ▲

ದಿನದ ಏರಿಕೆ

ಹೊಸ ಪ್ರಕರಣ	3,466	▲
ಗುಣಮುಖ	288	▲
ಸಾವು	04	▼

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಸಂಪುಟ ಪುನರ್‌ರಚನೆ ಬಿಜೆಪಿ ವರಿಷ್ಠರ ಒಲವು?

8–10 ಸಚಿವರು ಹೊರಕ್ಕೆ: ಬೊಮ್ಮಾಯಿ ಸ್ಥಾನ ಅಬಾಧಿತ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭೆ ಚುನಾವಣೆಗೆ ತಯಾರಿ ಮತ್ತು ಆಡಳಿತವನ್ನು ಇನ್ನಷ್ಟು ಪರಿಣಾಮಕಾರಿಯಾಗಿಸುವ ಮೂಲಕ ಸರ್ಕಾರದ ವರ್ಚಸ್ಸು ಹೆಚ್ಚಿಸಲು ಮುಂದಾಗಿರುವ ಬಿಜೆಪಿ ವರಿಷ್ಠರು, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸಚಿವ ಸಂಪುಟದ 8 ರಿಂದ 10 ಮಂದಿ ಸಚಿವರನ್ನು ಕೈಬಿಟ್ಟು ಹೊಸಬರನ್ನು ಸೇರಿಸಿಕೊಳ್ಳುವತ್ತ ಮುಂದಡಿ ಇಟ್ಟಿದ್ದಾರೆ.

'ಗುಜರಾತ್ ಮತ್ತು ಉತ್ತರಪ್ರದೇಶದಲ್ಲಿ ನಡೆಸಿರುವ ಪ್ರಯೋಗವನ್ನು ರಾಜ್ಯದಲ್ಲೂ ನಡೆಸುವ ಬಗ್ಗೆ ವರಿಷ್ಠರು ಒಲವು ಹೊಂದಿದ್ದಾರೆ' ಎಂದು ಬಿಜೆಪಿ ಮೂಲಗಳು ಹೇಳಿವೆ.

2023ರ ವಿಧಾನಸಭಾ ಚುನಾವಣೆಗೆ ಸಜ್ಜಾಗಲು ಮತ್ತು ಪರಿಣಾಮಕಾರಿ ಆಡಳಿತ ನಡೆಸುವ ಮೂಲಕ ಜನರ ಮನಸ್ಸನ್ನು ಗೆಲ್ಲಲು ಈ ಪ್ರಯೋಗ ಸಹಾಯಕವಾಗಲಿದೆ.

8ನೇ ಪುಟ ನೋಡಿ

17–18ಕ್ಕೆ ಅಮಿತ್ ಶಾ ರಾಜ್ಯಕ್ಕೆ ಭೇಟಿ

ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಇದೇ 17–18ರಂದು ಕರ್ನಾಟಕಕ್ಕೆ ಭೇಟಿ ನೀಡುವ ಸಾಧ್ಯತೆ ಇದೆ.

'ಇದೇ 7ರಿಂದ ನಡೆಯಲಿರುವ ಬಿಜೆಪಿ ಚಿಂತನಾ ಸಭೆಯಲ್ಲಿ ಶಾ ಅವರು ಭಾಗಿಯಾಗಲಿದ್ದಾರೆ ಎಂಬ ಮಾಹಿತಿ ಮೊದಲು ಬಂದಿತ್ತು. ಅವರ ಭೇಟಿಯ ಬಗ್ಗೆ ಗೃಹ ಸಚಿವಾಲಯ ಅಥವಾ ಪಕ್ಷಕ್ಕೆ ಯಾವುದೇ ಅಧಿಕೃತ ಮಾಹಿತಿ ಬಂದಿಲ್ಲ. ಅವರ ಭೇಟಿ ಮುಂದೂಡಿಕೆಯಾಗಿದೆ. ರಾಜ್ಯಕ್ಕೆ ಬರಲಿರುವ ಅವರು, ಪಕ್ಷದ ಪ್ರಮುಖರು, ಸಚಿವರ ಜತೆ ಚರ್ಚೆ ನಡೆಸಲಿದ್ದಾರೆ. ಅದಾದ ಬಳಿಕವೇ ಸಂಪುಟ ಪುನಾರಚನೆಯಾಗುವ ಸಂಭವ ಇದೆ' ಎಂದು ಬಿಜೆಪಿ ಮೂಲಗಳು ಹೇಳಿವೆ.

ಸಂಘಟನೆಯಲ್ಲೂ ಬದಲಾವಣೆ

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರಾಗಿ ನಳಿನ್ ಕುಮಾರ್ ಕಟೀಲ್ ಮೂರು ವರ್ಷಗಳ ಅವಧಿ ಆಗಸ್ಟ್ ವೇಳೆಗೆ ಪೂರ್ಣಗೊಳ್ಳಲಿದೆ. ಆ ಹೊತ್ತಿಗೆ ಹೊಸ ಅಧ್ಯಕ್ಷರನ್ನು ನೇಮಕ ಮಾಡುವ ಚಿಂತನೆ ನಡೆದಿದೆ.

ಅಲ್ಲದೆ, ಪಕ್ಷದಲ್ಲಿ ಒಂದೆರೆಡು ಮೋರ್ಚಾಗಳನ್ನು ಬಿಟ್ಟು, ಉಳಿದ ಮೋರ್ಚಾ, ಘಟಕಗಳು ಕ್ರಿಯಾಶೀಲವಾಗಿಲ್ಲ. ರಾಜ್ಯ ಮತ್ತು ಜಿಲ್ಲಾ ಮಟ್ಟದ ಸಂಘಟನೆಯನ್ನು ಆಮೂಲಾಗ್ರವಾಗಿ ಬದಲಾಯಿಸುವ ಸಾಧ್ಯತೆ ಇದೆ ಎಂದು ಮೂಲಗಳು ಹೇಳಿವೆ.

ಸಿಖ್ ಬಾಲಕಿಯ ಕೇಶ ಮುಂಡನಕ್ಕೆ ತಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿಖ್ ಕುಟುಂಬಕ್ಕೆ ಸೇರಿದ ಪತಿ–ಪತ್ನಿ ಮಧ್ಯದ ಕೌಟುಂಬಿಕ ವ್ಯಾಜ್ಯವೊಂದಕ್ಕೆ ಸಂಬಂಧಿಸಿ ಉದ್ಭವಿಸಿರುವ ತಗಾದೆಯಲ್ಲಿ ದಂಪತಿಯ ಮಗುವಿನ (ಸುಮಾರು 11 ವರ್ಷದ ಬಾಲಕಿ) ಕೇಶ ಕತ್ತರಿಸದಂತೆ ಕೋರಿದ್ದ ಅರ್ಜಿಯನ್ನು ಹೈಕೋರ್ಟ್ ತಾತ್ಕಾಲಿಕವಾಗಿ ಮಾನ್ಯ ಮಾಡಿದ್ದು, 'ಮುಂದಿನ ವಿಚಾರಣೆಯ ದಿನದವರೆಗೂ ಬಾಲಕಿಯ ಕೂದಲು ಕತ್ತರಿಸಬಾರದು' ಎಂದು ಆದೇಶಿಸಿದೆ.

ಈ ಕುರಿತಂತೆ 44 ವರ್ಷದ ಪತಿ ಸಲ್ಲಿಸಿರುವ ಅರ್ಜಿಯನ್ನು ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿ, ಪ್ರತಿವಾದಿಯಾದ 41 ವರ್ಷದ ಪತ್ನಿಗೆ ತುರ್ತು ನೋಟಿಸ್ ಜಾರಿಗೊಳಿಸಲು ಆದೇಶಿಸಿತು.

ಪ್ರಕರಣವೇನು?: ಪತಿ ಪತ್ನಿ ಇಬ್ಬರೂ ಅಲ್ಪಸಂಖ್ಯಾತ ಸಿಖ್ ಧರ್ಮಕ್ಕೆ ಸೇರಿದವರು. ಪತಿ ನವದೆಹಲಿಯಲ್ಲಿ ನೆಲೆಸಿದ್ದರೆ, ಪತ್ನಿ ಬೆಂಗಳೂರಿನಲ್ಲೇ ಇದ್ದಾರೆ. 'ನನ್ನ ಪತಿಯಿಂದ ನನಗೆ ವಿಚ್ಛೇದನ ಬೇಕು' ಎಂದು ಕೋರಿ ಪತ್ನಿ ಬೆಂಗಳೂರಿನ ಕೌಟುಂಬಿಕ ನ್ಯಾಯಾಲಯದಲ್ಲಿ ದಾವೆ ಹೂಡಿದ್ದಾರೆ. ಈ ದಾವೆ ವಿಚಾರಣೆಯ ಹಂತದಲ್ಲಿದೆ. ಈ ದಂಪತಿಗೆ ಪ್ರೌಢಾವಸ್ಥೆ ಮೀರದ ಬಾಲಕಿಯೊಬ್ಬಳು ಇದ್ದಾಳೆ. ಈಕೆ ತಾಯಿಯ ಪಾಲನೆ–ಪೋಷಣೆಯಲ್ಲಿ ಇದ್ದಾಳೆ.

ಏತನ್ಮಧ್ಯೆ ಮಗುವಿನ ಭೇಟಿಗಾಗಿ ಕೋರಿದ್ದ ಪತಿಯ 'ಭೇಟಿಯ ಹಕ್ಕಿನ' ಅರ್ಜಿಯನ್ನು ಕೌಟುಂಬಿಕ ನ್ಯಾಯಾಲಯ ತಿರಸ್ಕರಿಸಿತ್ತು. ಆದರೆ, ವಾಟ್ಸ್ ಆ್ಯಪ್ ಕಾಲ್‌ನಲ್ಲಿ ಮಾತನಾಡಲು ಅವಕಾಶ ನೀಡಿತ್ತು. ತಂದೆಗೆ ಮೀಸಲಾದ, 'ಭೇಟಿಯ ಹಕ್ಕು' ನಿರಾಕರಿಸಿರುವುದನ್ನು ಪ್ರಶ್ನಿಸಿ ಪತಿ ಹೈಕೋರ್ಟ್‌ನಲ್ಲಿ ರಿಟ್ ಅರ್ಜಿ ದಾಖಲಿಸಿದ್ದಾರೆ.

8ನೇ ಪುಟ ನೋಡಿ

ಅತಿಥಿ ಉಪನ್ಯಾಸಕರ ಹೋರಾಟಕ್ಕೆ ಬೆಂಬಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಅತಿಥಿ ಉಪನ್ಯಾಸಕರು ಕೆಲ ದಿನಗಳಿಂದ ನಡೆಸುತ್ತಿರುವ ಹೋರಾಟಕ್ಕೆ ಸರ್ಕಾರಿ ಪದವಿಪೂರ್ವ ಕಾಲೇಜುಗಳ ಅತಿಥಿ ಉಪನ್ಯಾಸಕರು ಬೆಂಬಲ ವ್ಯಕ್ತಪಡಿಸಿದ್ದು, ಇದೇ ಗುರುವಾರ (ಜ.6) ತರಗತಿಗಳನ್ನು ಬಹಿಷ್ಕರಿಸುವುದಾಗಿ ತಿಳಿಸಿದ್ದಾರೆ.

ಸೇವಾ ಭದ್ರತೆ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಅತಿಥಿ ಉಪನ್ಯಾಸಕರು ಮುಷ್ಕರ ನಡೆಸುತ್ತಿದ್ದಾರೆ. ಅವರ ಪ್ರತಿಭಟನೆಗೆ ಸರ್ಕಾರಿ ಪದವಿಪೂರ್ವ ಕಾಲೇಜುಗಳ ಅತಿಥಿ ಉಪನ್ಯಾಸಕರ ಸಂಘಟನೆ ಬೆಂಬಲ ಸೂಚಿಸಿದೆ.

'ರಾಜ್ಯದ ಸರ್ಕಾರಿ ಪದವಿಪೂರ್ವ ಕಾಲೇಜುಗಳ ಎಲ್ಲ ಅತಿಥಿ ಉಪನ್ಯಾಸಕರು ತಮ್ಮ ತರಗತಿಗಳನ್ನು ಬಹಿಷ್ಕಾರ ಮಾಡಲಿದ್ದಾರೆ. ಈ ಕೂಡಲೇ ವೇತನ ಹೆಚ್ಚಳ, ಸೇವಾ ಭದ್ರತೆ ಸೇರಿದಂತೆ ಅವರ ಎಲ್ಲ ಬೇಡಿಕೆಗಳನ್ನು ಸರ್ಕಾರ ಈಡೇರಿಸಬೇಕು. ವಾರಕ್ಕೆ 10ರಿಂದ 12 ಗಂಟೆಗಳಿಗಿಂತ ಹೆಚ್ಚು ಕಾರ್ಯಾಭಾರ ನೀಡಬಾರದು' ಎಂದು ಸಂಘಟನೆ ಸಂಚಾಲಕ ರಾಜೇಶ್ ಭಟ್ ತಿಳಿಸಿದ್ದಾರೆ.

'ಅತಿಥಿ ಉಪನ್ಯಾಸಕರ ಬೇಡಿಕೆ: ಶೀಘ್ರ ಸಭೆ'

'ಅತಿಥಿ ಉಪನ್ಯಾಸಕರ ಬೇಡಿಕೆಗಳನ್ನು ಈಡೇರಿಸುವ ಕುರಿತಂತೆ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಚರ್ಚೆ ನಡೆಸಲಾಗುವುದು' ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ತಿಳಿಸಿದ್ದಾರೆ.

ಸಚಿವರನ್ನು ಮಂಗಳವಾರ ಭೇಟಿ ಮಾಡಿದ ವಿಧಾನಪರಿಷತ್ ಬಿಜೆಪಿ ಸದಸ್ಯರಾದ ಅರುಣ ಶಹಾಪುರ ಮತ್ತು ಎಸ್.ವಿ. ಸಂಕನೂರ, ಸೇವಾ ಭದ್ರತೆಯೂ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಮುಷ್ಕರ ನಡೆಸುತ್ತಿರುವ ಅತಿಥಿ ಉಪನ್ಯಾಸಕರ ಸಮಸ್ಯೆಗಳನ್ನು ಪರಿಹರಿಸಲು ತಕ್ಷಣ ಕ್ರಮ ತೆಗೆದುಕೊಳ್ಳಬೇಕು ಎಂದು ಮನವಿ ಮಾಡಿದರು.

'ಈ ಕುರಿತು ಚರ್ಚಿಸಲು ಶಿಕ್ಷಕ ಹಾಗೂ ಪದವೀಧರ ಕ್ಷೇತ್ರಗಳನ್ನು ಪ್ರತಿನಿಧಿಸುವ ಮೇಲ್ಮನೆ ಸದಸ್ಯರ ಮತ್ತು ಅತಿಥಿ ಉಪನ್ಯಾಸಕರ ಸಂಘಟನೆಗಳ ಜೊತೆ ಸಭೆ ನಡೆಸುವಂತೆ ಸಚಿವರಲ್ಲಿ ಮನವಿ ಮಾಡಿದ್ದೇವೆ. ಶೀಘ್ರದಲ್ಲೇ ಸಭೆ ಕರೆಯುವ ಭರವಸೆ ನೀಡಿದ್ದಾರೆ' ಎಂದು ಅರುಣ ಶಹಾಪುರ ಹೇಳಿದರು.

ಬ್ರಾಹ್ಮಣ ನಾಯಕರು ಎಸ್‌ಪಿಗೆ: ಬಿಜೆಪಿಗೆ ಕಳವಳ 9

ಒಳ ಪುಟಗಳು

ಆನೇಕಲ್ ಬಳಿ ಮತ್ತೆ ಆನೆಗಳ ಹಿಂಡು 8
ಸಿಇ, ಪ್ರಧಾನ ಎಂಜಿನಿಯರ್ ಬಡ್ತಿ ಅತಂತ್ರ? 4
ಜಟಾಪಟಿ: ಪೊಲೀಸರ ವೈಫಲ್ಯದತ್ತ ಬೆಟ್ಟು 8
ದಕ್ಷಿಣ ಧ್ರುವಕ್ಕೆ ಏಕಾಂಗಿ ಚಾರಣ 11
ಕೋವಿಡ್ ಹೆಚ್ಚಳ: ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿ ಮುಂದೂಡಿಕೆ 11

ಚಿನಕುರಳಿ

ಪ್ರಕಾಶ್ ಶೆಟ್ಟಿ

ಕ್ರೈಸ್ತ ಸಮುದಾಯದ ಮೇಲಿನ ದೌರ್ಜನ್ಯಗಳಿಗೆ ಖಂಡನೆ: ಕೆಪಿಸಿಸಿ ಅಲ್ಪಸಂಖ್ಯಾತ ಘಟಕ ಪ್ರತಿಭಟನೆ

‘ಧರ್ಮಾಕ್ರಸಿ ನಿಲ್ಲಿಸಿ; ದ್ವೇಷ ಬಿಟ್ಟು ದೇಶ ಕಟ್ಟಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಮಗೆ ಬೇಕಿರುವುದು ಡೆಮಾಕ್ರಸಿ, ಧರ್ಮಾಕ್ರಸಿಯಲ್ಲ. ಧರ್ಮದ ಹೆಸರಿನಲ್ಲಿ ದೇಶ ಒಡೆಯುವುದನ್ನು ನಿಲ್ಲಿಸಿ. ದ್ವೇಷ ಬಿಟ್ಟು ದೇಶ ಕಟ್ಟಿ’ ...

ರಾಜ್ಯದಲ್ಲಿ ಕ್ರೈಸ್ತ ಸಮುದಾಯದ ಮೇಲೆ ನಡೆಯುತ್ತಿರುವ ದೌರ್ಜನ್ಯಗಳನ್ನು ಖಂಡಿಸಿ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ (ಕೆಪಿಸಿಸಿ) ಅಲ್ಪಸಂಖ್ಯಾತ ಘಟಕದ ವತಿಯಿಂದ ನಡೆದ ಪ್ರತಿಭಟನೆಯಲ್ಲಿ ಕೇಳಿಬಂದ ಬೇಡಿಕೆ ಇದು.

ರೇಸ್‌ಕೋರ್ಸ್ ರಸ್ತೆಯಲ್ಲಿರುವ ಕಾಂಗ್ರೆಸ್ ಭವನದ ಎದುರು ನಡೆದ ಪ್ರತಿಭಟನೆಯಲ್ಲಿ ಸಾಹಿತಿಗಳು, ಚಿತ್ರನಟರು, ರಾಜಕಾರಣಿಗಳು ಹಾಗೂ ಸಾಂಸ್ಕೃತಿಕ ಚಿಂತಕರು ಪಾಲ್ಗೊಂಡಿದ್ದರು.

‘ದೇಶದಲ್ಲಿರುವ ಕ್ರೈಸ್ತ ಸಮುದಾಯದವರು ಸೌಹಾರ್ದ, ಶಾಂತಿ ಹಾಗೂ ಸಹಬಾಳ್ವೆಯ ಜೀವನ ನಡೆಸುತ್ತಿದ್ದಾರೆ. ಹೀಗಿದ್ದರೂ ಚರ್ಚ್‌ಗಳು, ಪಾದ್ರಿಗಳು ಹಾಗೂ ಕ್ರೈಸ್ತ ಮಿಷನರಿಗಳ ಮೇಲೆ ಕಿಡಿಗೇಡಿಗಳು ನಿರಂತರವಾಗಿ ದಾಳಿ ನಡೆಸುತ್ತಿದ್ದಾರೆ. ದ್ವೇಷ ಭಾಷಣಗಳ ಮೂಲಕ ಸಮಾಜದಲ್ಲಿ ಶಾಂತಿ ಕದಡಲು ಪ್ರಯತ್ನಿಸುತ್ತಿದ್ದಾರೆ. ರಾಷ್ಟ್ರದ ಏಕತೆಗೂ ಧಕ್ಕೆ ಉಂಟು ಮಾಡುತ್ತಿದ್ದಾರೆ. ಇಂತಹ ಘಟನೆಗಳು ಮರುಕಳಿಸದಂತೆ ಕಾನೂನಿನ ಅಡಿಯಲ್ಲಿ ಕ್ರಮ ಕೈಗೊಳ್ಳಬೇಕು. ಧರ್ಮಗಳ ನಡುವೆ ಸಂಘರ್ಷ ಏರ್ಪಡುವಂತೆ ಮಾಡುತ್ತಿರುವ ದುಷ್ಕರ್ಮಿಗಳನ್ನು ಯುಎಪಿಎ ಕಾಯ್ದೆಯಡಿ ಬಂಧಿಸಬೇಕು’ ಎಂದು ಪ್ರತಿಭಟನಕಾರರು ಆಗ್ರಹಿಸಿದರು.

‘ಹರಿದ್ವಾರದಲ್ಲಿ ನಡೆದಿರುವ ಧರ್ಮ ಸಂಸತ್ ಸಭೆಯಲ್ಲಿ ಕೆಲ ನಾಯಕರು ಮತೀಯ ಭಾವನೆ ಕೆರಳಿಸುವ ಮಾತುಗಳನ್ನು ಆಡಿದ್ದಾರೆ. ಪ್ರಧಾನಿ ಮತ್ತು ಗೃಹ ಸಚಿವರು ಇದನ್ನು ಖಂಡಿಸುವ ಸೌಜನ್ಯವನ್ನೂ ತೋರಿಲ್ಲ. ಪ್ರಚೋದನಕಾರಿ ಹೇಳಿಕೆ ನೀಡಿರುವ ಇವರ ವಿರುದ್ಧ ಗೂಂಡಾ ಕಾಯ್ದೆ ಹಾಗೂ ಯುಎಪಿಎ ಕಾಯ್ದೆಯಡಿ ಕ್ರಮ ಕೈಗೊಳ್ಳಬೇಕು’ ಎಂದು ಒತ್ತಾಯಿಸಿದರು.

ಸಾಹಿತಿಗಳಾದ ಎಸ್.ಜಿ.ಸಿದ್ಧರಾಮಯ್ಯ, ವಸುಂಧರಾ ಭೂಪತಿ, ನಟ ‘ಮುಖ್ಯಮಂತ್ರಿ’ ಚಂದ್ರು, ಶಾಸಕ ಎನ್.ಎ.ಹ್ಯಾರಿಸ್, ಕಾಂಗ್ರೆಸ್ ಮುಖಂಡರಾದ ಸಿ.ಎಸ್.ದ್ವಾರಕಾನಾಥ್, ಪ್ರೊ.ಕೆ.ಇ.ರಾಧಾಕೃಷ್ಣ ಹಾಗೂ ಕೆಪಿಸಿಸಿ ಅಲ್ಪಸಂಖ್ಯಾತ ಘಟಕದ ಅಧ್ಯಕ್ಷ ಅಬ್ದುಲ್ ಜಬ್ಬಾರ್ ಇದ್ದರು.

ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ (ಕೆಪಿಸಿಸಿ) ಅಲ್ಪಸಂಖ್ಯಾತ ಘಟಕದ ವತಿಯಿಂದ ಪ್ರತಿಭಟನೆ ನಡೆಸಲಾಯಿತು —ಪ್ರಜಾವಾಣಿ ಚಿತ್ರ

రాజాజినగర, ಕೆಂಪಾಪುರ ಅಗ್ರಹಾರದಲ್ಲಿ ಒತ್ತುವರಿ ತೆರವು

ಬಿಡಿಎ: 3 ಎಕರೆ 29 ಗುಂಟೆ ಜಾಗ ಮರುವಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಮೂರು ದಿನಗಳಲ್ಲಿ ಎರಡು ಪ್ರಮುಖ ಬಡಾವಣೆಗಳಲ್ಲಿ ಒಟ್ಟು 3 ಎಕರೆ 29 ಗುಂಟೆಗಳಷ್ಟು ಒತ್ತುವರಿ ತೆರವುಗೊಳಿಸಿದೆ. ಪ್ರಾಧಿಕಾರವು ಮರುಸ್ವಾಧೀನಪಡಿಸಿಕೊಂಡ ಸ್ವತ್ತುಗಳ ಮೌಲ್ಯ ₹ 300 ಕೋಟಿ ಎಂದು ಅಂದಾಜಿಸಲಾಗಿದೆ.

ರಾಜಾಜಿನಗರ ಆರನೇ ಹಂತದ ಪ್ರಸನ್ನ ಚಿತ್ರಮಂದಿರದ ಬಳಿ ಬಿಡಿಎ ಹೊಂದಿದ್ದ 2 ಎಕರೆ 20 ಗುಂಟೆ ಜಾಗದಲ್ಲಿ 5 ತಾತ್ಕಾಲಿಕ ಶೆಡ್‌ಗಳು ಮತ್ತು 1 ಗ್ಯಾರೇಜ್ ನಿರ್ಮಿಸಲಾಗಿತ್ತು. ಹಲವು ಬಾರಿ ನೋಟಿಸ್ ನೀಡಿದ್ದರೂ ತೆರವು ಮಾಡಿರಲಿಲ್ಲ. ಬಿಡಿಎ ಅಧಿಕಾರಿಗಳು ಅವುಗಳನ್ನು ತೆರವುಗೊಳಿಸಿ, ಜಾಗವನ್ನು ಮಂಗಳವಾರ ಸ್ವಾಧೀನಕ್ಕೆ ಪಡೆದರು. ತೆರವು ಕಾರ್ಯಾಚರಣೆಗೆ ಐದು ಜೆಸಿಬಿಗಳನ್ನು ಬಳಸಲಾಯಿತು. 50ಕ್ಕೂ ಹೆಚ್ಚು ಸಿಬ್ಬಂದಿ ಭಾಗವಹಿಸಿದರು. ತೆರವುಗೊಳಿಸಲಾದ ಜಾಗದ ಅಂದಾಜು ಮೌಲ್ಯ ₹ 175 ಕೋಟಿ ಎಂದು ಬಿಡಿಎ ತಿಳಿಸಿದೆ.

ವಿಜಯನಗರದ ಅತ್ತಿಗುಪ್ಪೆಯ ಕೆಂಪಾಪುರ ಅಗ್ರಹಾರದಲ್ಲಿ ಬಿಡಿಎಗೆ ಸೇರಿದ ಜಾಗದಲ್ಲಿ (ಸರ್ವೆ ನಂಬರ್ 329/3) ಅಕ್ರಮವಾಗಿ ನಿರ್ಮಿಸಲಾಗಿದ್ದ ಪೆಟ್ರೋಲ್ ಬಂಕ್ ಅನ್ನು ತೆರವುಗೊಳಿಸಲಾಗಿದೆ. ಇಲ್ಲಿದ್ದ ಖಾಲಿ ಜಾಗವೂ ಸೇರಿ ಒಟ್ಟು 1 ಎಕರೆ 9 ಗುಂಟೆ ಜಾಗವನ್ನು ಬಿಡಿಎ ವಶಪಡಿಸಿಕೊಂಡಿದೆ.

‘ಈ ಜಾಗವನ್ನು ಒತ್ತುವರಿ ಮಾಡಿಕೊಂಡಿದ್ದವರು ಮಾಲೀಕತ್ವಕ್ಕೆ ಸಂಬಂಧಿಸಿ ಹೈಕೋರ್ಟ್‌ನಲ್ಲಿ ದಾವೆ ಹೂಡಿದ್ದರು. ನ್ಯಾಯಾಲಯದಲ್ಲಿ ಅವರ ಪರವಾಗಿ ತೀರ್ಪು ಬಂದಿತ್ತು. ಇದನ್ನು ಪ್ರಶ್ನಿಸಿ ಬಿಡಿಎ ಮೇಲ್ಮನವಿ ಸಲ್ಲಿಸಿತ್ತು. ಅಂತಿಮ ತೀರ್ಪು ಬಿಡಿಎ ಪರವಾಗಿ ಬಂದಿತ್ತು. ಹಾಗಾಗಿ ಈ ಜಾಗವನ್ನು ಮತ್ತೆ ವಶಕ್ಕೆ ಪಡೆಯಲಾಗಿದೆ. ಈ ಜಾಗದ ಅಂದಾಜು ಮೌಲ್ಯ ₹ 125 ಕೋಟಿ’ ಎಂದು ಬಿಡಿಎ ಮಾಹಿತಿ ನೀಡಿದೆ.

21ರವರೆಗೆ ಅನುಮೋದನೆಗೆ ಅವಕಾಶ

ಬೆಂಗಳೂರು: ‘ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ಇದೇ 21ರೊಳಗೆ ಜಿಲ್ಲಾ, ಗಡಿನಾಡ ಘಟಕಗಳ ಕಾರ್ಯಕಾರಿ ಸಮಿತಿ ರಚಿಸಿಕೊಂಡು, ಕೇಂದ್ರ ಘಟಕದ ಅಧ್ಯಕ್ಷರ ಅನುಮೋದನೆ ಪಡೆಯುವುದು ಕಡ್ಡಾಯ’ ಎಂದು ಕಸಾಪ ಅಧ್ಯಕ್ಷ ಮಹೇಶ ಜೋಶಿ ಸೂಚಿಸಿದ್ದಾರೆ.

‘ಕಾರ್ಯಕಾರಿ ಸಮಿತಿ ಸಭೆಯನ್ನು ಜನವರಿ ತಿಂಗಳಲ್ಲಿ ನಡೆಸಲು ಉದ್ದೇಶಿಸಲಾಗಿದೆ. 2022-23ನೇ ಸಾಲಿನಲ್ಲಿ ಹಮ್ಮಿಕೊಳ್ಳುವ ಕಾರ್ಯಚಟುವಟಿಕೆ, ಯೋಜನೆಗಳ ವಿವರವನ್ನು ಇದೇ 10ರೊಳಗೆ ಕಳುಹಿಸಬೇಕು. ಮುಂದಿನ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಚರ್ಚಿಸಬಹುದು’ ಎಂದು ತಿಳಿಸಿದ್ದಾರೆ.

ಅಲ್ಪಸಂಖ್ಯಾತ ಮೋರ್ಚಾ: ಸೈಯದ್ ಅಧ್ಯಕ್ಷ

ಬೆಂಗಳೂರು: ಬಿಜೆಪಿ ರಾಜ್ಯ ಘಟಕದ ಅಲ್ಪಸಂಖ್ಯಾತ ಮೋರ್ಚಾದ ಅಧ್ಯಕ್ಷರನ್ನಾಗಿ ಸೈಯದ್ ಸಲಾಂ, ಉಪಾಧ್ಯಕ್ಷರನ್ನಾಗಿ ಮೊಹಮ್ಮದ್ ಫಾರೂಕ್ ಅವರನ್ನು ನೇಮಿಸಲಾಗಿದೆ.

ಎಂದು ನಳಿನ್ ಕುಮಾರ್ ಕಟೀಲ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಾಳೆ ನೀರು ಪೂರೈಕೆಯಲ್ಲಿ ವ್ಯತ್ಯಯ

ಬೆಂಗಳೂರು: ಜಲಮಂಡಳಿ ವತಿಯಿಂದ ಎಂಎಲ್‌ಡಿ ಜಲಶುದ್ಧೀಕರಣ ಘಟಕ ನಿರ್ಮಾಣದ ಚಾಲನಾ ಕಾಮಗಾರಿಗಳು ಹಾಗೂ ಜೋಡಣಾ ಕಾಮಗಾರಿಗಳನ್ನು ಕೈಗೆತ್ತಿಕೊಂಡಿರುವುದರಿಂದ ಜ.6ರ ಮಧ್ಯರಾತ್ರಿ 12.30ರಿಂದ ರಾತ್ರಿ 11.30ರವರೆಗೆ ನಗರದ ಹಲವೆಡೆ ಕಾವೇರಿ ನೀರು ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ಎಲ್ಲೆಲ್ಲಿ ವ್ಯತ್ಯಯ: ವಿದ್ಯಾಪೀಠ, ಗುರುರಾಜ್ ಬಡಾವಣೆ, ವಿವೇಕಾನಂದ ನಗರ, ಕತ್ರಿಗುಪ್ಪೆ, ತ್ಯಾಗರಾಜನಗರ, ಬಸವನಗುಡಿ, ಕುಮಾರಸ್ವಾಮಿ ಬಡಾವಣೆ, ಇಸ್ರೋ ಬಡಾವಣೆ, ದೊಮ್ಮಲೂರು, ಆಡುಗೋಡಿ, ಕೋರಮಂಗಲ, ಜಯನಗರ, ತಿಲಕ್ ನಗರ, ಕಸ್ತೂರಬಾ ನಗರ, ನ್ಯೂ ಗುಡ್ಡದಹಳ್ಳಿ, ಬಾಪೂಜಿ ನಗರ, ಕಲಾಸಿಪಾಳ್ಯ, ಸುಧಾಮನಗರ, ಕೆ.ಜಿ.ನಗರ, ಅಜಾದ್ ನಗರ, ಪಾದರಾಯನಪುರ, ಯಡಿಯೂರು, ಇಟ್ಟಮಡು, ಹೊಸಕೆರೆಹಳ್ಳಿ, ಪದ್ಮನಾಭನಗರ, ಉತ್ತರಹಳ್ಳಿ, ಚಿಕ್ಕಲ್ಲಸಂದ್ರ, ಶಾಂತಿನಗರ, ಭೈರಸಂದ್ರ, ಹೊಂಬೇಗೌಡ ನಗರ, ಸಿದ್ಧಾಪುರ, ವಿಲ್ಸನ್ ಗಾರ್ಡನ್, ಲಕ್ಕಸಂದ್ರ, ಜೆ.ಪಿ. ನಗರ, ಗಾಂಧಿನಗರ, ವಸಂತ ನಗರ, ಹೈಗ್ರೌಂಡ್ಸ್, ಸಂಪಂಗಿ ರಾಮನಗರ, ಟೌನ್ ಹಾಲ್, ಲಾಲ್‌ಬಾಗ್ ರಸ್ತೆ, ಕಬ್ಬನ್ ಪೇಟೆ, ಕಾಟನ್ ಪೇಟೆ, ಚಿಕ್ಕಪೇಟೆ, ಶಿವಾಜಿ ನಗರ, ಬ್ಯಾಡರಹಳ್ಳಿ, ಕಾಕ್ಸ್ ಟೌನ್, ಡಿ.ಜೆ.ಹಳ್ಳಿ ನಾಗವಾರ, ಲಿಂಗರಾಜಪುರ, ಚಾಮರಾಜಪೇಟೆ, ಗವಿಪುರ, ಹನುಮಂತನಗರ, ಗಿರಿನಗರ, ಬ್ಯಾಟರಾಯನಪುರ, ನೀಲಸಂದ್ರ, ಆವಲಹಳ್ಳಿ, ಶ್ರೀನಗರ, ಬನಶಂಕರಿ, ಯಶವಂತಪುರ, ಮಲ್ಲೇಶ್ವರ, ಶೇಷಾದ್ರಿಪುರ, ಸದಾಶಿವನಗರ, ಸಂಜಯ್ ನಗರ, ಡಾಲರ್ಸ್ ಕಾಲೊನಿ, ಗೆದ್ದಲಹಳ್ಳಿ, ಭೂಪಸಂದ್ರ, ಕಾವಲ್‌ಬೈರಸಂದ್ರ, ಆರ್.ಟಿ.ನಗರ, ಆನಂದ ನಗರ, ಸುಲ್ತಾನ್ ಪಾಳ್ಯ, ಎಂ.ಜಿ. ರಸ್ತೆ, ಇಂದಿರಾನಗರ, ಹಲಸೂರು, ಜೋಗುಪಾಳ್ಯ, ಕೆ.ಜಿ.ಹಳ್ಳಿ, ಬಿಟಿಎಂ ಬಡಾವಣೆ, ಮಡಿವಾಳ ಹಾಗೂ ಸುತ್ತಮುತ್ತಲಿನ ಪ್ರದೇಶಗಳು.

ವಿದ್ಯುತ್ ವ್ಯತ್ಯಯ ಇಂದು

ಬೆಂಗಳೂರು: ಬೆಸ್ಕಾಂ ವಿದ್ಯುತ್ ಕೇಂದ್ರಗಳಲ್ಲಿ ತುರ್ತು ಕಾರ್ಯನಿರ್ವಹಣೆ ಕೈಗೆತ್ತಿಕೊಂಡಿರುವುದರಿಂದ ಜwwww.5ರಂದು ಬೆಳಿಗ್ಗೆ 10ರಿಂದ ಸಂಜೆ 4ರವರೆಗೆ ನಗರದ ವಿವಿಧೆಡೆ ವಿದ್ಯುತ್ ವ್ಯತ್ಯಯ ಆಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ವ್ಯತ್ಯಯವಾಗುವ ಸ್ಥಳಗಳು: ದೊಮ್ಮಸಂದ್ರ, ಕೊಮ್ಮಸಂದ್ರ, ಹೆಗ್ಗೊಂಡನಹಳ್ಳಿ, ತಿಪ್ಪಸಂದ್ರ, ಕತ್ರಿಗುಪ್ಪೆ, ಮಾದಪ್ಪನಹಳ್ಳಿ, ಕಲ್ಲಹಳ್ಳಿ ಹಾಗೂ ಸುತ್ತಮುತ್ತಲಿನ ಪ್ರದೇಶಗಳು.

ಬ್ಯಾಂಕಿಂಗ್ ತರಬೇತಿ

ಬೆಂಗಳೂರು: ಬ್ಯಾಂಕಿಂಗ್ ಕ್ಷೇತ್ರದಲ್ಲಿ ವೃತ್ತಿ ಆರಂಭಿಸುವವರಿಗಾಗಿ ಮಣಿಪಾಲ್ ಬಿಎಫ್‌ಎಸ್‌ಐ ಅಕಾಡೆಮಿಯು ‘ದಿ ಆ್ಯಕ್ಸಿಸ್ ಬ್ಯಾಂಕ್ ಯಂಗ್ ಬ್ಯಾಂಕರ್ಸ್ ಪ್ರೋಗ್ರಾಮ್’ (ಎಬಿವೈಬಿಪಿ) ಮೂಲಕ ಒಂದು ವರ್ಷದ ತರಬೇತಿ ನೀಡಲಿದೆ.

ಫೆಬ್ರುವರಿಯಿಂದ ಆರಂಭಗೊಳ್ಳಲಿರುವ ತರಬೇತಿಗೆ ಪ್ರವೇಶ ಪ್ರಕ್ರಿಯೆ ಆರಂಭಗೊಂಡಿದೆ. ಪದವಿ ಮತ್ತು ಸ್ನಾತಕೋತ್ತರ ಪದವೀಧರರು ತರಬೇತಿಯಲ್ಲಿ ಭಾಗವಹಿಸಬಹುದು.

ಉಪನ್ಯಾಸಗಳು, ಇ-ಲರ್ನಿಂಗ್ ಮಾದರಿಗಳು, ಕ್ಷೇತ್ರ ಸಂದರ್ಶನ ತರಬೇತಿಯಲ್ಲಿ ಇರಲಿದೆ. 3 ತಿಂಗಳ ತರಬೇತಿ ನಂತರ ಅಭ್ಯರ್ಥಿಗಳಿಗೆ ಆ್ಯಕ್ಸಿಸ್ ಬ್ಯಾಂಕ್‌ನಲ್ಲಿ ವಿವಿಧ ಉದ್ಯೋಗಾವಕಾಶಗಳು ಸಿಗಲಿವೆ.

ಮಣಿಪಾಲ್ ಬಿಎಫ್‌ಎಸ್‌ಐ ಅಕಾಡೆಮಿ ನಿರ್ದೇಶಕ ತಮ್ಮಯ್ಯ ಚೆಕ್ಕೇರ,‘ಈ ತರಬೇತಿ ಮೂಲಕ ಅನೇಕರು ಮುಂಚೂಣಿ ಸ್ಥಾನದಲ್ಲಿದ್ದಾರೆ. ಬ್ಯಾಂಕಿಂಗ್ ಕ್ಷೇತ್ರದ ನಿರೀಕ್ಷೆಗೆ ತಕ್ಕಂತೆ ಅಭ್ಯರ್ಥಿಗಳಿಗೆ ತರಬೇತಿ ನೀಡಲಾಗುವುದು’ ಎಂದರು.

ನಗರದಲ್ಲಿ ಇಂದು

ಪದವಿ ಪ್ರದಾನ: ಮುಖ್ಯ ಭಾಷಣ–ಕೆ.ಕೆ. ಅಗರ್ವಾಲ್, ಅತಿಥಿಗಳು–ಎಂ.ಆರ್. ಜಯರಾಂ, ಎಂ.ಆರ್.ಸೀತಾರಾಂ, ಎಂ.ಆರ್.ರಾಮಯ್ಯ, ಬಿ.ಎಸ್. ರಾಮಪ್ರಸಾದ್, ಎನ್.ವಿ.ಆರ್. ನಾಯ್ಡು, ಆಯೋಜನೆ ಮತ್ತು ಸ್ಥಳ–ಎಂ.ಎಸ್.ರಾಮಯ್ಯ ತಾಂತ್ರಿಕ ಮಹಾವಿದ್ಯಾಲಯ, ಅಪೆಕ್ಸ್ ಸಭಾಂಗಣ, ಎಂ.ಎಸ್.ರಾಮಯ್ಯನಗರ, ಬೆಳಿಗ್ಗೆ 11

‘ಅವಿಸಾ’ ಮ್ಯಾಗಜಿನ್‌ಗೆ ಚಾಲನೆ: ಅತಿಥಿಗಳು–ವಿಜ್ಞಾನಿ ಎ.ಎಸ್. ಕಿರಣ್ ಕುಮಾರ್, ಲಿಂಗರಾಜ ಗಾಂಧಿ, ಆಯೋಜನೆ–ಸ್ಥಳ–ರಾಮನ್ ಸಮ್ಮೇಳನ ಸಭಾಂಗಣ, ಭೌತಶಾಸ್ತ್ರ ವಿಭಾಗ, ಸೆಂಟ್ರಲ್ ಕಾಲೇಜು, ಬೆಂಗಳೂರು ನಗರ ವಿಶ್ವವಿದ್ಯಾಲಯ, ಮಧ್ಯಾಹ್ನ 2


ಎ.ಎಸ್.ಕಿರಣ್ ಕುಮಾರ್

‘ವಿಷನ್ ಕರ್ನಾಟಕ–ಕೈಗಾರಿಕಾ ಬೆಳವಣಿಗೆಗೆ ಮುಂದಿನ ದಾರಿ ಮತ್ತು ಸರ್ಕಾರದ ಹೊಸ ಉಪಕ್ರಮಗಳು’ ಕುರಿತು ಚರ್ಚೆ: ಕೈಗಾರಿಕಾ ಸಚಿವ ಮುರುಗೇಶ್ ನಿರಾಣಿ, ಅತಿಥಿಗಳು–ಐ.ಎಸ್.ಪ್ರಸಾದ್, ಗೋಪಾಲ್ ರೆಡ್ಡಿ, ರಮೇಶ್ ಚಂದ್ರ ಲಾಹೋಟಿ, ಪೆರಿಕಲ್ ಎಂ.ಸುಂದರ್, ಜೆಸ್ಸೀ ಲಾರೆನ್ಸ್, ಆಯೋಜನೆ–ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ, ಸ್ಥಳ–ಸರ್.ಎಂ.ವಿ. ಸಭಾಂಗಣ, ಎಫ್‌ಕೆಸಿಸಿಐ, ಕೆ.ಜಿ.ರಸ್ತೆ, ಸಂಜೆ 5

ಸಿ.ಎಸ್.ದ್ವಾರಕಾನಾಥ್ ಅವರ ‘ಸಾಕ್ರಟೀಸ್ ಮತ್ತಿತರ ಸಣ್ಣ ಕತೆಗಳು’ ಪುಸ್ತಕ ಬಿಡುಗಡೆ: ಅತಿಥಿಗಳು–ಅಗ್ರಹಾರ ಕೃಷ್ಣಮೂರ್ತಿ, ಎಂ.ಎಸ್.ಆಶಾದೇವಿ, ಸಿ.ಜಿ.ಲಕ್ಷ್ಮೀಪತಿ, ಆಯೋಜನೆ–ಅಲೆಮಾರಿ ಬುಡಕಟ್ಟು ಮಹಾಸಭಾ, ಸ್ಥಳ–ಎಚ್ಚೆನ್ ಸಭಾಂಗಣ, ನ್ಯಾಷನಲ್ ಕಾಲೇಜು, ಬಸವನಗುಡಿ, ಸಂಜೆ 5.30

ರಾಷ್ಟ್ರಕವಿ ಕುವೆಂಪು ನಾಟಕೋತ್ಸವ: ಸಂಜೆ 6.30ಕ್ಕೆ ಉದ್ಘಾಟನೆ–ತೋಟಗಾರಿಕೆ ಸಚಿವ ಮುನಿರತ್ನ, ಅಧ್ಯಕ್ಷತೆ–ವಿಧಾನ ಪರಿಷತ್ ಸದಸ್ಯ ಅ.ದೇವೇಗೌಡ, ಪ್ರಾಸ್ತಾವಿಕ ನುಡಿ–ನ.ಶ್ರೀ. ಸುಧೀಂದ್ರರಾವ್, ರಾತ್ರಿ 7ಕ್ಕೆ ‘ನರಿಗಳಿಗೇಕೆ ಕೋಡಿಲ್ಲ’ ಜಾನಪದ ನಾಟಕ ಪ್ರದರ್ಶನ, ರಂಗರೂಪ–ಮಂಗಳ ನಾಗರಾಜ್, ನಿರ್ದೇಶನ–ಗಣಪತಿ ಗೌಡ, ಆಯೋಜನೆ–ರಂಗ ಪರಂಪರೆ ಟ್ರಸ್ಟ್, ಸ್ಥಳ–ಪ್ರಕೃತಿ ಸಂಘದ ರಂಗಮಂದಿರ, ನಾಗರಬಾವಿ ಎರಡನೇ ಹಂತ

ಕೋವಿಡ್ ಕಾರಣಕ್ಕೆ ಶಾಲೆಗಳನ್ನು ಮುಚ್ಚಬೇಕೆ?



ಬೆಂಗಳೂರು: ಒಂದೂವರೆ ವರ್ಷಗಳಿಗೂ ಹೆಚ್ಚು ಕಾಲ ಬಂದ್ ಆಗಿದ್ದ ಶಾಲೆ, ಕಾಲೇಜುಗಳಲ್ಲಿ ಭೌತಿಕ ತರಗತಿ ಆರಂಭವಾಗಿ ತಿಂಗಳುಗಳಷ್ಟೇ ಕಳೆದಿವೆ. ಈಗ ಮತ್ತೆ ಕೋವಿಡ್ ಪ್ರಕರಣಗಳ ಸಂಖ್ಯೆ ಹೆಚ್ಚುತ್ತಿರುವುದರಿಂದ ಶಾಲೆ, ಕಾಲೇಜುಗಳನ್ನು ಬಂದ್ ಮಾಡಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ದೀರ್ಘ ಕಾಲ ಶಾಲೆಯಿಂದ ದೂರ ಉಳಿದಿದ್ದ ಮಕ್ಕಳು ಈಗಷ್ಟೇ ತರಗತಿಗಳಿಗೆ ಹೊಂದಿಕೊಳ್ಳುತ್ತಿದ್ದಾರೆ. ಮಕ್ಕಳ ಸಮಗ್ರ ವಿಕಾಸದ ತಾಣವಾಗಿರುವ ಶಾಲೆಗಳಿಂದ ಮತ್ತೆ ಅವರನ್ನು ದೂರ ಇರಿಸಬೇಕೆ? ಎಂಬುದರ ಕುರಿತು ಸಾರ್ವಜನಿಕ ವಲಯದಲ್ಲಿ ಚರ್ಚೆ ನಡೆಯುತ್ತಿದೆ. ಈ ಕುರಿತು ಶಿಕ್ಷಣ ತಜ್ಞರು, ಮಕ್ಕಳ ಹಕ್ಕುಗಳ ಪರ ಹೋರಾಟಗಾರರು ಮತ್ತು ಶಾಲಾ ಆಡಳಿತ ಮಂಡಳಿಗಳ ಒಕ್ಕೂಟದ ಪ್ರತಿನಿಧಿಗಳ ಪ್ರತಿಕ್ರಿಯೆಗಳು ಈ ವಾರದ 'ಒಡಲ ದನಿ'ಯಲ್ಲಿ.

ರಾಜಧಾನಿ ಒಡಲದನಿ

'ಶಿಕ್ಷಣದ ಹಕ್ಕು ಮೊಟಕಾಗದಿರಲಿ'

ಎರಡು ವರ್ಷ ಶಾಲೆಗಳಿಂದ ದೂರ ಇದ್ದ ಮಕ್ಕಳು ಈಗಷ್ಟೇ ತರಗತಿ ಜೀವನಕ್ಕೆ ಹೊಂದಿಕೊಳ್ಳುತ್ತಿದ್ದಾರೆ. ಬಹುಪಾಲು ಮಕ್ಕಳಿಗೆ ಶಾಲೆಗೆ ಹೋಗಬೇಕೆಂಬ ಆಸೆ ಇದೆ. ಆನ್‌ಲೈನ್ ತರಗತಿಗಳ ಕುರಿತು ಮಕ್ಕಳು ಆಸಕ್ತಿ ಕಳೆದುಕೊಂಡಿದ್ದಾರೆ. ಈಗ ಮತ್ತೆ ಶಾಲೆಗಳನ್ನು ಮುಚ್ಚುವುದು ನೆಟ್ಟ ಗಿಡವನ್ನು ಕೆಲವೇ ದಿನಗಳಲ್ಲಿ ಕಿತ್ತು ಹಾಕಿದಂತೆ. ಈ ಸಂದರ್ಭದಲ್ಲಿ ಶಾಲೆಗಳನ್ನು ಮುಚ್ಚಬೇಕೆಂಬ ನಿರ್ಧಾರ ಸರಿ ಅಲ್ಲ.

ಮಕ್ಕಳ ಆರೋಗ್ಯದ ಹಕ್ಕು ಪ್ರಮುಖವಾದದ್ದು ನಿಜ. ಆದರೆ, ಅದರ ಹೆಸರಿನಲ್ಲಿ ಶಿಕ್ಷಣದ ಹಕ್ಕು ಮೊಟಕಾಗಬಾರದು. ಶಾಲಾ ವಾತಾವರಣವನ್ನು ಪ್ರಯೋಗಕ್ಕೆ ಒಡ್ಡುವುದು ಸರಿಯಲ್ಲ. ಸುರಕ್ಷತಾ ಕ್ರಮಗಳೊಂದಿಗೆ ತರಗತಿ ಮುಂದುವರಿಸುವುದಕ್ಕೆ ಸರ್ಕಾರ ಬೆಂಬಲಿಸಬೇಕಿತ್ತು.

ಮಕ್ಕಳ ಜತೆ ಸಮಾಲೋಚನೆ ನಡೆಸಬೇಕು. ಅವರಲ್ಲಿ ಧೈರ್ಯ ತುಂಬಬೇಕು. ಎಲ್ಲ ಹಂತದ ಚುನಾಯಿತ ಪ್ರತಿನಿಧಿಗಳು ಶಾಲೆಗಳಿಗೆ ತೆರಳಿ ಮಕ್ಕಳ ಜತೆ ಮಾತನಾಡಬೇಕು. ಪರಿಸ್ಥಿತಿ ಕೈಮೀರಿ ಹೋಗುತ್ತಿದೆ ಎಂಬಂತಹ ವಾತಾವರಣ ಇದ್ದರೆ ಮಾತ್ರ ಶಾಲೆಗಳನ್ನು ಬಂದ್ ಮಾಡುವ ಬಗ್ಗೆ ಯೋಚಿಸಬೇಕಿತ್ತು.

ನಾಗಸಿಂಹ ಜಿ. ರಾವ್, ನಿರ್ದೇಶಕ, ಚೈಲ್ಡ್ ರೈಟ್ಸ್ ಟ್ರಸ್ಟ್

'ಶಾಲೆ ಬಂದ್ ಕೊನೆಯ ಆಯ್ಕೆಯಾಗಬೇಕಿತ್ತು'

ಕೋವಿಡ್‌ನಿಂದ ಮಕ್ಕಳ ಆರೋಗ್ಯದ ಮೇಲೆ ಅತ್ಯಂತ ಕಡಿಮೆ ಪ್ರಮಾಣದ ಪರಿಣಾಮಗಳು ಆಗಲಿವೆ ಎಂಬುದು ಹಲವು ಅಧ್ಯಯನಗಳಲ್ಲಿ ದೃಢಪಟ್ಟಿದೆ. ಎರಡು ವರ್ಷಗಳ ಲಾಕ್‌ಡೌನ್ ಅವಧಿಯಲ್ಲಿ ಶಾಲೆಯಿಂದ ದೂರ ಉಳಿದಿದ್ದ ಸಾವಿರಾರು ಮಕ್ಕಳ ಭವಿಷ್ಯ ಹಾಳಾಗಿದೆ. ಸಹಸ್ರಾರು ಮಕ್ಕಳು ಬಾಲ ಕಾರ್ಮಿಕರಾಗಿದ್ದಾರೆ. ನೂರಾರು ಮಕ್ಕಳು ಬಾಲ್ಯವಿವಾಹಕ್ಕೆ ಒಳಗಾಗಿದ್ದಾರೆ. ಈ ಎಲ್ಲವನ್ನೂ ಸರ್ಕಾರ ಗಮನಿಸಬೇಕಿತ್ತು.

ಶಾಲೆಯಲ್ಲಿ ನೀಡುತ್ತಿದ್ದ ಬಿಸಿಯೂಟ ತಪ್ಪಿದ್ದರಿಂದ ಮಕ್ಕಳಲ್ಲಿ ಅಪೌಷ್ಟಿಕತೆ, ರಕ್ತಹೀನತೆ ದುಪ್ಪಟ್ಟಾಗಿದೆ. ಮಕ್ಕಳನ್ನು ಮನೆಯಲ್ಲೇ ಇರಿಸುವುದರಿಂದ ಅನಾಹುತವೇ ಜಾಸ್ತಿ. ಶಾಲೆ, ಕಾಲೇಜುಗಳನ್ನು ಬಂದ್ ಮಾಡುವುದು ಸರ್ಕಾರದ ಕೊನೆಯ ಆಯ್ಕೆಯಾಗಬೇಕಿತ್ತು. ಚುನಾವಣಾ ಪ್ರಚಾರ ಸಭೆ, ಜಾತ್ರೆಗಳಿಗೆ ಇಲ್ಲದ ನಿರ್ಬಂಧವನ್ನು ಶಾಲೆಗಳ ಮೇಲೆ ಏಕೆ ಹೇರಬೇಕು.

ಅಖಿಲ ಭಾರತ ವೈದ್ಯಕೀಯ ವಿಜ್ಞಾನ ಸಂಸ್ಥೆ, ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿಯಂತಹ ಉನ್ನತ ಸಂಸ್ಥೆಗಳ ಸಲಹೆ ಆಧಾರದಲ್ಲಿ ನಿರ್ಧಾರ ಕೈಗೊಳ್ಳಬೇಕಿತ್ತು. ಅನಿವಾರ್ಯ ಆದಲ್ಲಿ ಸ್ಥಳೀಯವಾಗಿ ನಿರ್ಧಾರ ಕೈಗೊಳ್ಳುವ ಅವಕಾಶ ಕಲ್ಪಿಸಬೇಕಿತ್ತು. ಕೇಂದ್ರೀಕೃತವಾಗಿ ಎಲ್ಲ ಶಾಲೆಗಳನ್ನು ಬಂದ್ ಮಾಡುವುದು ಸರಿಯಾದ ನಿರ್ಧಾರ ಅಲ್ಲ.

– **ವಿ.ಪಿ.ನಿರಂಜನಾರಾಧ್ಯ**, ಶಿಕ್ಷಣ ತಜ್ಞ

'ನಿರಂತರ ಕಲಿಕೆಗೆ ಅಡ್ಡಿಯಾಗಲಿದೆ'

ವಿದೇಶಗಳಲ್ಲಿ ಮಾಲ್, ಮಾರುಕಟ್ಟೆ, ಪಬ್, ಬಾರ್‌ಗಳನ್ನು ಮೊದಲು ಮುಚ್ಚಲಾಗುತ್ತಿದೆ. ಕೊನೆಯ ಹಂತದಲ್ಲಿ ಶಾಲಾ, ಕಾಲೇಜು ಬಂದ್ ನಿರ್ಧಾರ ಕೈಗೊಳ್ಳಲಾಗುತ್ತಿದೆ. ಆದರೆ, ಕರ್ನಾಟಕದಲ್ಲಿ ತದ್ವಿರುದ್ಧವಾಗಿ ಯೋಚಿಸುತ್ತಿರುವುದು ಸರಿಯಲ್ಲ. ಶಾಲೆ, ಕಾಲೇಜುಗಳನ್ನು ಕೊನೆಯ ಹಂತದವರೆಗೂ ತೆರೆದಿಡಲು ಸರ್ಕಾರ ಅವಕಾಶ ನೀಡಬೇಕಿತ್ತು.

ಹಿಂದಿನ ಲಾಕ್‌ಡೌನ್ ಜಾರಿಯಲ್ಲಿದ್ದಾಗ ಎರಡು ಲಕ್ಷ ಮಕ್ಕಳಿಗೆ ಕೋವಿಡ್ ತಗುಲಿತ್ತು. ಈಗ ಕೋವಿಡ್‌ನ ಹೊಸ ತಳಿ ವೈರಾಣುಗಳು ಮಕ್ಕಳ ಮೇಲೆ ಹೆಚ್ಚು ಪರಿಣಾಮ ಬೀರುವುದಿಲ್ಲ ಎಂದು ವೈಜ್ಞಾನಿಕ ವರದಿಗಳಿವೆ. ಕೋವಿಡ್ ಹರಡುವ ಕಾರಣವಾಗುವ ಸಭೆ, ಸಮಾರಂಭಗಳಿಗೆ ಅನುಮತಿ ನೀಡಿ ಶಾಲೆಗಳನ್ನು ಮುಚ್ಚಿಸುವ ನಿರ್ಧಾರ ಮಾಡಲಾಗಿದೆ. ಇದರಿಂದ ಮಕ್ಕಳ ಭವಿಷ್ಯಕ್ಕೆ ಅಪಾಯ.

ಶಶಿಕುಮಾರ್ ಡಿ., ಕರ್ನಾಟಕ ಪ್ರಾಥಮಿಕ ಮತ್ತು ಮಾಧ್ಯಮ ಶಾಲೆಗಳ ಆಡಳಿತ ಮಂಡಳಿಗಳ ಸಂಘದ ಪ್ರಧಾನ ಕಾರ್ಯದರ್ಶಿ

'ಎಲ್ಲರ ಅಭಿಪ್ರಾಯಕ್ಕೂ ಮನ್ನಣೆ ಇರಲಿ'

ಗ್ರಾಮೀಣ ಪ್ರದೇಶದ ಮಕ್ಕಳು ಲಾಕ್‌ಡೌನ್‌ನಿಂದ ಹೆಚ್ಚು ಸಂಕಷ್ಟ ಅನುಭವಿಸಿದ್ದಾರೆ. ಈಗ ಮತ್ತೆ ಸಂಕಷ್ಟ ಎದುರಿಸುವುದು ಅವರ ಆಯ್ಕೆಯಾಗಿರುವುದಿಲ್ಲ. ಶಾಲೆಗಳಲ್ಲಿ ತರಗತಿಗಳನ್ನು ನಡೆಸಬೇಕೆಂಬ ಅಭಿಪ್ರಾಯವುಳ್ಳ ಪೋಷಕರ ಸಂಖ್ಯೆಯೂ ಹೆಚ್ಚಾಗಿದೆ. ತಜ್ಞರ ಸಮಿತಿಯ ಶಿಫಾರಸು ಬಂದಿದೆ ಮತ್ತು ಕೆಲವು ಪೋಷಕರು ಬೇಡಿಕೆ ಇಡುತ್ತಿದ್ದಾರೆ ಎಂಬ ಕಾರಣಕ್ಕಾಗಿ ಸರ್ಕಾರ ತರಾತುರಿಯಲ್ಲಿ ಶಾಲೆಗಳನ್ನು ಬಂದ್ ಮಾಡುವ ನಿರ್ಧಾರ ಕೈಗೊಳ್ಳಬಾರದು.

ಹೆಚ್ಚು ಮಕ್ಕಳು ಈಗ ಸರ್ಕಾರಿ ಶಾಲೆಗಳಲ್ಲಿ ಕಲಿಯುತ್ತಿದ್ದಾರೆ. ಶಾಲೆಗಳನ್ನು ಮುಚ್ಚಿದ ಮಾತ್ರಕ್ಕೆ ಮಕ್ಕಳು ಮನೆಗಳಲ್ಲೇ ಇರುವುದಿಲ್ಲ. ಎಲ್ಲರ ಅಭಿಪ್ರಾಯವನ್ನು ಆಲಿಸಿದ ಬಳಿಕವೇ ಸರ್ಕಾರ ನಿರ್ಧಾರಕ್ಕೆ ಬರಬೇಕು. ಶಾಲೆಗಳಲ್ಲಿ ಮಕ್ಕಳ ಆರೋಗ್ಯ ರಕ್ಷಣೆಗೆ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳುವುದಕ್ಕೆ ಆದ್ಯತೆ ನೀಡಬೇಕು.

– **ಸುಜಾತಾ**, ಆರ್‌ಟಿಇ ಪರ ಹೋರಾಟಗಾರ್ತಿ

ಕೋವಿಡ್ ನಿಯಂತ್ರಣಕ್ಕೆ ಕಾರ್ಯತಂಡಗಳ ರಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಕೋವಿಡ್ ಹರಡುವಿಕೆ ನಿಯಂತ್ರಣಕ್ಕಾಗಿ ಐಎಎಸ್ ಹಾಗೂ ಐಪಿಎಸ್ ಅಧಿಕಾರಿಗಳ ನೇತೃತ್ವದಲ್ಲಿ ಆರು ಕಾರ್ಯತಂಡಗಳನ್ನು ರಚಿಸಲಾಗಿದೆ. ಸರ್ಕಾರದ ಮುಖ್ಯ ಕಾರ್ಯದರ್ಶಿ ಪಿ.ರವಿಕುಮಾರ್ ಅವರು ಈ ಕುರಿತು ಮಂಗಳವಾರ ಆದೇಶ ಹೊರಡಿಸಿದ್ದಾರೆ.

ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಕೋವಿಡ್ ನಿಯಂತ್ರಣ ಚಟುವಟಿಕೆ ನಿರ್ವಹಣೆಗೆ ಐಎಎಸ್ ಅಧಿಕಾರಿ ಸಿ.ಶಿಖಾ ನೇತೃತ್ವದಲ್ಲಿ ತಂಡ ರಚಿಸಲಾಗಿದೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಜಿಲ್ಲಾಧಿಕಾರಿ ಕೆ.ಶ್ರೀನಿವಾಸ್, ಅಶೋಕ್, ಸಿ.ಕೆ.ಬಾಬು, ಗ್ರಾಮಾಂತರ ಜಿಲ್ಲೆಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ತಿಪ್ಪೇಸ್ವಾಮಿ ಈ ತಂಡದಲ್ಲಿದ್ದಾರೆ. ಅಂತರರಾಷ್ಟ್ರೀಯ ಹಾಗೂ ದೇಶದ ಇತರ ವಿಮಾನನಿಲ್ದಾಣಗಳಿಂದ ವಾಯುಮಾರ್ಗದಲ್ಲಿ ಬರುವ ಪ್ರಯಾಣಿಕರ ಮೇಲೆ ಈ ತಂಡವು ನಿಗಾ ಇಡಲಿದೆ.

ಖಾಸಗಿ ವೈದ್ಯಕೀಯ ಕಾಲೇಜುಗಳಲ್ಲಿ ಹಾಸಿಗೆಗಳನ್ನು ಕೋವಿಡ್ ಚಿಕಿತ್ಸೆಗೆ ಮೀಸಲಿಡುವುದರ ಮೇಲೆ ನಿಗಾ ಇಡಲು ಎರಡು ತಂಡಗಳನ್ನು ರಚಿಸಲಾಗಿದೆ. ಕ್ಯಾ.ಮಣಿವಣ್ಣನ್ ಹಾಗೂ ಅಲೋಕ್ ಕುಮಾರ್ ಅವರು ಬಿಬಿಎಂಪಿ ಪೂರ್ವ ವಲಯ–1ರ ಹಾಗೂ ಮೊಹಮ್ಮದ್ ಮೊಹ್ಸಿನ್ ಹಾಗೂ ಹರಿಶೇಖರನ್ ಅವರು ಬಿಬಿಎಂಪಿ ಪೂರ್ವ ವಲಯ –2ರ ಉಸ್ತುವಾರಿ ನೋಡಿಕೊಳ್ಳಲಿದ್ದಾರೆ. ಉಮಾ ಮಹಾದೇವನ್ ಹಾಗೂ ಆರ್. ಹಿತೇಂದ್ರ ಅವರು ಮಹದೇವಪುರ ವಲಯದ, ಡಾ.ಎಂ.ಟಿ.ರೇಜು ಮತ್ತು ಕೆ.ಟಿ.ಬಾಲಕೃಷ್ಣ ಅವರು ಪಶ್ಚಿಮ ವಲಯದ, ರಾಜೇಂದ್ರ ಚೋಳನ್ ಮತ್ತು ಡಾ.ರಾಮಚಂದ್ರ ರಾವ್ ಅವರು ದಕ್ಷಿಣ ವಲಯದ, ವಿ.ರಾಮ್‌ಪ್ರಸಾದ್ ಮನೋಹರ್ ಮತ್ತು ಹೇಮಂತ್ ನಿಂಬಾಳ್ಕರ್ ಅವರು ಆರ್.ಆರ್.ನಗರ ವಲಯದ ಹಾಗೂ ಏಕ್‌ರೂಪ್ ಕೌರ್ ಮತ್ತು ಎಸ್.ರವಿ ಅವರು ಯಲಹಂಕ ಮತ್ತು ದಾಸರಹಳ್ಳಿ ವಲಯಗಳ ಉಸ್ತುವಾರಿ ನೋಡಿಕೊಳ್ಳಲಿದ್ದಾರೆ. ಪ್ರತಿ ತಂಡದಲ್ಲೂ ತಲಾ ಎಂಟು ಅಧಿಕಾರಿಗಳು ಸದಸ್ಯರಾಗಿರುತ್ತಾರೆ.

ಬಿಬಿಎಂಪಿ, ಬೆಂಗಳೂರು ನಗರ ಜಿಲ್ಲೆ, ಗ್ರಾಮಾಂತರ ಜಿಲ್ಲೆ ವ್ಯಾಪ್ತಿಯ ಖಾಸಗಿ ಆಸ್ಪತ್ರೆಗಳಲ್ಲಿ ಹಾಸಿಗೆ ಕಾಯ್ದಿರಿಸಲು ಐಎಎಸ್ ಅಧಿಕಾರಿ ಎನ್.ಜಯರಾಮ್ ನೇತೃತ್ವದಲ್ಲಿ ತಂಡ ರಚಿಸಲಾಗಿದೆ. ಬಿಡಿಎ ಆಯುಕ್ತ ರಾಜೇಶ್ ಗೌಡ, ನಗರ ಜಿಲ್ಲಾಧಿಕಾರಿ ಜೆ.ಮಂಜುನಾಥ್, ಗ್ರಾಮಾಂತರ ಜಿಲ್ಲಾಧಿಕಾರಿ ಕೆ.ಶ್ರೀನಿವಾಸ್, ಪೊಲೀಸ್ ಆಯುಕ್ತರು ಹಾಗೂ ಜಿಲ್ಲಾ ಆರೋಗ್ಯಾಧಿಕಾರಿಗಳು ಈ ತಂಡದಲ್ಲಿದ್ದಾರೆ.

ಕೋವಿಡ್‌ನಿಂದ ಮೃತಪಟ್ಟವರ ಅಂತ್ಯಕ್ರಿಯೆ ಹಾಗೂ ಚಿತಾಗಾರಗಳ ನಿರ್ವಹಣೆಗೆ ಐಪಿಎಸ್ ಅಧಿಕಾರಿ ರಾಜೇಂದ್ರ ಕುಮಾರ್ ಕಠಾರಿಯಾ ನೇತೃತ್ವದಲ್ಲಿ ತಂಡ ರಚಿಸಲಾಗಿದ್ದು, ಪಿ. ಮಣಿವಣ್ಣನ್, ಜೆ.ಮಂಜುನಾಥ್, ಬಿಬಿಎಂಪಿ ವಿಶೇಷ ಆಯುಕ್ತ ರೆಡ್ಡಿ ಶಂಕರ ಬಾಬು ಸದಸ್ಯರಾಗಿದ್ದಾರೆ.

ನಿಯಂತ್ರಣ (ಕಂಟೈನ್‌ಮೆಂಟ್) ವಲಯಗಳ ಉಸ್ತುವಾರಿಗಾಗಿ ಸತ್ಯವತಿ ನೇತೃತ್ವದಲ್ಲಿ ತಂಡ ರಚಿಸಲಾಗಿದ್ದು, ದಯಾನಂದ್, ಎಂ.ಎಚ್.ಮೊಹಮ್ಮದ್ ಸುಜಿತ ಅವರು ಸದಸ್ಯರಾಗಿದ್ದಾರೆ. ಈ ತಂಡವು ಕಂಟೈನ್‌ಮೆಂಟ್ ವಲಯದ ಚಟುವಟಿಕೆ ಮೇಲೆ ನಿಗಾ ಇಡುವುದರ ಜೊತೆಗೆ ಸೋಂಕಿತರ ಪತ್ತೆಗೂ ಕ್ರಮವಹಿಸಲಿದೆ. ಕಂಟೈನ್‌ಮೆಂಟ್ ವಲಯ ಹಾಗೂ ಸುತ್ತಮುತ್ತಲಿನ ಪ್ರದೇಶದಲ್ಲಿ ಸರ್ವೇಕ್ಷಣಾ ಕಾರ್ಯ ಕೈಗೊಳ್ಳಲಿದೆ.

ಬೆಂಗಳೂರು ನಗರದಲ್ಲಿ ತಲೆಮರೆಸಿಕೊಂಡ ಕೋವಿಡ್ ರೋಗಿಗಳ ಪತ್ತೆಗಾಗಿ ಐಪಿಎಸ್ ಅಧಿಕಾರಿ ಅನುಚೇತ್ ನೇತೃತ್ವದಲ್ಲಿ ತಂಡ ರಚಿಸಲಾಗಿದೆ.

ವಲಯ ಸಂಯೋಜಕರ ನೇಮಕ

ಕೋವಿಡ್ ಹಾಗೂ ಓಮೈಕ್ರಾನ್ ಸೋಂಕು ಹರಡುವಿಕೆ ತಡೆಯಲು, ನಿಯಂತ್ರಣಾ ಕ್ರಮಗಳ ಪರಿಶೀಲನೆ ಮತ್ತು ಮೇಲ್ವಿಚಾರಣೆಗೆ ಸರ್ಕಾರ ಬಿಬಿಎಂಪಿಯ ಪ್ರತಿ ವಲಯಕ್ಕೂ ಒಬ್ಬರು ಐಎಎಸ್ ಅಧಿಕಾರಿಯನ್ನು ವಲಯ ಸಂಯೋಜಕರನ್ನಾಗಿ ನಿಯೋಜಿಸಿದೆ. ಇವರು ಆಯಾ ವಲಯದ ಜಂಟಿ ಆಯುಕ್ತರು, ಬಿಬಿಎಂಪಿ ಅಧಿಕಾರಿಗಳು ಹಾಗೂ ಸರ್ಕಾರೇತರ ಸಂಸ್ಥೆಗಳ ಸಂಯೋಜಕರಿಗೆ ಸಲಹೆ ಸೂಚನೆ ನೀಡಲಿದ್ದಾರೆ.

ಅಧಿಕಾರಿ	ವಲಯ
ಜೆ.ರವಿಶಂಕರ್	ಪೂರ್ವ
ಉಜ್ವಲ್ ಕುಮಾರ್ ಘೋಷ್	ಪಶ್ಚಿಮ
ರವಿಕುಮಾರ್ ಸುರಪುರ	ಬೊಮ್ಮನಹಳ್ಳಿ
ವಿ.ಅನ್ಬುಕುಮಾರ್	ಯಲಹಂಕ
ಶಿವಯೋಗಿ ಕಳಸದ	ದಕ್ಷಿಣ
ಎನ್.ಮಂಜುಳಾ	ಮಹದೇವಪುರ
ಪಿ.ಸಿ.ಜಾಫರ್	ದಾಸರಹಳ್ಳಿ
ಆರ್.ವಿಶಾಲ್	ಆರ್.ಆರ್.ನಗರ

ಕೋವಿಡ್: 3,048 ಮಂದಿಗೆ ಸೋಂಕು

ಬೆಂಗಳೂರು: 'ನಗರದಲ್ಲಿ ಮಂಗಳವಾರ 3,048 ಮಂದಿಗೆ (ರಾತ್ರಿ 10 ಗಂಟೆ ವೇಳೆಗೆ) ಕೊರೊನಾ ಸೋಂಕು ದೃಢ ಪಟ್ಟಿದೆ' ಎಂದು ಕಂದಾಯ ಸಚಿವ ಆರ್. ಅಶೋಕ ತಿಳಿಸಿದರು.

ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಒಂದೇ ದಿನ ಓಮೈಕ್ರಾನ್‌ನ 147 ಪ್ರಕರಣಗಳು ವರದಿಯಾಗಿವೆ. ಕೋವಿಡ್ ಪ್ರಕರಣಗಳ ಸಂಖ್ಯೆ ನಗರದಲ್ಲಿ ದುಪ್ಪಟ್ಟು ಆಗುತ್ತಿದೆ. 5ರಿಂದ 6 ದಿನಗಳ ಅವಧಿಯಲ್ಲಿ ಪ್ರಕರಣಗಳ ಸಂಖ್ಯೆ 10 ಸಾವಿರಕ್ಕೆ ತಲುಪುವ ಸೂಚನೆ ಕಾಣುತ್ತಿದೆ. ಮಹಾನಗರಗಳಲ್ಲಿಯೇ ಹೆಚ್ಚಿನ ಸಂಖ್ಯೆಯಲ್ಲಿ ಪ್ರಕರಣಗಳು ಪತ್ತೆಯಾಗುತ್ತಿವೆ. ಹೀಗಾಗಿ, ಸೋಂಕು ಹರಡುವಿಕೆಗೆ ಕಡಿವಾಣ ಹಾಕಬೇಕಿದೆ' ಎಂದು ಹೇಳಿದರು.

ವಿಧಾನಸಭಾ ಕ್ಷೇತ್ರಕ್ಕೊಂದು ಆರೈಕೆ ಕೇಂದ್ರ: ಸೂಚನೆ

ಬೆಂಗಳೂರು: 'ನಗರದಲ್ಲಿ ಕೋವಿಡ್ ಸೋಂಕು ಹೆಚ್ಚುತ್ತಿರುವುದರಿಂದ ಪ್ರತಿ ವಿಧಾನಸಭಾ ಕ್ಷೇತ್ರದಲ್ಲಿ ತಲಾ ಒಂದು ಕೋವಿಡ್ ರೋಗಿಗಳ ಆರೈಕೆ ಕೇಂದ್ರವನ್ನು ಸಜ್ಜುಗೊಳಿಸಬೇಕು' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಅವರು ಆರೋಗ್ಯ ವಿಭಾಗದ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಕಾರ್ಪೊರೇಟ್ ಕಂಪನಿಗಳ ಸಾಮಾಜಿಕ ಹೊಣೆಗಾರಿಕೆ ನಿಧಿ ಬಳಸಿ ನಂದಿನಿ ಬಡಾವಣೆಯ ಕೆಂಪೇಗೌಡ ಸಮುದಾಯ ಭವನದಲ್ಲಿ ಸ್ಥಾಪಿಸಿರುವ ಕೋವಿಡ್ ಆರೈಕೆ ಕೇಂದ್ರವನ್ನು ಅವರು ಮಂಗಳವಾರ ಪರಿಶೀಲನೆ ನಡೆಸಿದರು.

'ನಗರದಲ್ಲಿ ಕೋವಿಡ್ ಸೋಂಕು ಹೆಚ್ಚುತ್ತಿದೆ. ಭವಿಷ್ಯದಲ್ಲಿ ಉಂಟಾಗ ಬಹುದಾದ ಪರಿಸ್ಥಿತಿ ನಿಭಾಯಿಸಲು ಸಕಲ ಸಿದ್ಧತೆಗಳನ್ನು ಮಾಡಿಕೊಳ್ಳಬೇಕು. ಆಯಾ ಎಲ್ಲಾ ವಿಧಾನಸಭಾ ಕ್ಷೇತ್ರದಲ್ಲಿ ಈ ಹಿಂದೆ ಕಾರ್ಯನಿರ್ವಹಿಸುತ್ತಿದ್ದ ಕೋವಿಡ್ ಆರೈಕೆ ಕೇಂದ್ರಗಳಲ್ಲಿ ಯಾವುದಾದರೂ ಒಂದನ್ನು ಗುರುತಿಸಿ ಅಗತ್ಯ ಸೌಕರ್ಯ ಕಲ್ಪಿಸಬೇಕು' ಎಂದು ಗೌರವ್ ಗುಪ್ತ ಅವರು ಮುಖ್ಯ ಆರೋಗ್ಯಾಧಿಕಾರಿ ಡಾ. ಬಾಲಸುಂದರ್ ಅವರಿಗೆ ನಿರ್ದೇಶನ ನೀಡಿದರು.

'ಕೋವಿಡ್ ಆರೈಕೆ ಕೇಂದ್ರದ ಹೆಸರು ಮತ್ತು ವಿಳಾಸ, ಅದರಲ್ಲಿ ಲಭ್ಯ ಇರುವ ಹಾಸಿಗೆಗಳ ಸಂಖ್ಯೆ, ಆಮ್ಲಜನಕ ಪೂರೈಕೆ ಹೊಂದಿರುವ ಹಾಸಿಗೆಗಳ ಸಂಖ್ಯೆ, ಆಮ್ಲಜನಕ ಸಿಲಿಂಡರ್‌ಗಳ ಮತ್ತು ಆಮ್ಲಜನಕ ಕಾನ್ಸಂಟ್ರೇಟರ್‌ಗಳ ಸಂಖ್ಯೆ. ಮೊದಲಾದುವುಗಳನ್ನು ಪರಿಶೀಲಿಸಿ ಕೊರತೆ ನೀಗಿಸಲು ಕ್ರಮಕೈಗೊಳ್ಳಬೇಕು. ಕೋವಿಡ್‌ನ ಸೌಮ್ಯ ಲಕ್ಷಣ ಇರುವವರು ಮನೆಯಲ್ಲಿ ಪ್ರತ್ಯೇಕವಾಗಿ ಚಿಕಿತ್ಸೆ ಪಡೆಯಲು ಸಾಧ್ಯವಾಗದಿದ್ದರೆ ಕೋವಿಡ್ ಆರೈಕೆ ಕೇಂದ್ರಕ್ಕೆ ದಾಖಲಾಗ ಬಹುದು' ಎಂದು ತಿಳಿಸಿದರು.

ಬಿಬಿಎಂಪಿ ವಿಶೇಷ ಆಯುಕ್ತ (ಆರೋಗ್ಯ) ಡಾ. ಕೆ.ವಿ. ತ್ರಿಲೋಕ ಚಂದ್ರ, ಪಶ್ಚಿಮ ವಲಯದ ಜಂಟಿ ಆಯುಕ್ತ ಶಿವಸ್ವಾಮಿ, ಮುಖ್ಯಆರೋಗ್ಯಾಧಿಕಾರಿಗಳಾದ ಡಾ. ಬಾಲಸುಂದರ್, ಡಾ.ನಿರ್ಮಲಾ ಬುಗ್ಗಿ, ವಲಯ ಆರೋಗ್ಯಾಧಿಕಾರಿ ಡಾ. ಮನೋರಂಜನ್ ಹೆಗ್ಡೆ ಹಾಜರಿದ್ದರು.

15ರಿಂದ 18 ವರ್ಷದ ವಿದ್ಯಾರ್ಥಿಗಳಿಗೆ ನಗರದಲ್ಲಿ ಬಿಬಿಎಂಪಿ ಆಯೋಜಿಸಿದ್ದ ಲಸಿಕೆ ವಿತರಣೆ ಕಾರ್ಯಕ್ರಮಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಚಾಲನೆ ನೀಡಿದರು – ಪ್ರಜಾವಾಣಿ ಚಿತ್ರ

'ಆರೈಕೆ ಕೇಂದ್ರದಲ್ಲಿ ಸಕಲ ಸೌಕರ್ಯ'

'ನಂದಿನಿ ಬಡಾವಣೆಯ ಕೆಂಪೇಗೌಡ ಸಮುದಾಯ ಭವನದಲ್ಲಿ ಈ ಹಿಂದೆಯೇ ಕೋವಿಡ್ ಆರೈಕೆ ಕೇಂದ್ರವನ್ನು ಸ್ಥಾಪಿಸಲಾಗಿತ್ತು. ಇದೀಗ ಸಿ.ಎಸ್.ಆರ್ ಅನುದಾನದಡಿ ಆಮ್ಲಜನಕ ಘಟಕವನ್ನು ಸ್ಥಾಪಿಸಲಾಗಿದೆ. ವೈದ್ಯರು ಹಾಗೂ ಆರೋಗ್ಯ ಸಿಬ್ಬಂದಿಯನ್ನು ನೇಮಿಸಿ ಇದನ್ನು ಸುಸಜ್ಜಿತವಾದ ಕೋವಿಡ್ ಆರೈಕೆ ಕೇಂದ್ರವನ್ನಾಗಿ ಸಜ್ಜುಗೊಳಿಸಲಾಗುತ್ತದೆ' ಎಂದು ಅಬಕಾರಿ ಸಚಿವ ಕೆ.ಗೋಪಾಲಯ್ಯ ತಿಳಿಸಿದರು.

'ಕೇಂದ್ರದಲ್ಲಿ ನೆಲಮಹಡಿಯಲ್ಲಿ 45 ಹಾಸಿಗೆ ವ್ಯವಸ್ಥೆ ಹಾಗೂ ಮೊದಲ ಮಹಡಿಯಲ್ಲಿ ಆಮ್ಲಜನಕ ಪೂರೈಕೆ ಹೊಂದಿರುವ 18 ಹಾಸಿಗೆಗಳ ವ್ಯವಸ್ಥೆ ಕಲ್ಪಿಸಲಾಗಿದೆ. 40 ಆಕ್ಸಿಜನ್ ಕಾನ್ಸಂಟ್ರೇಟರ್‌ಗಳು ಇಲ್ಲಿವೆ. ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಲಾಗಿದೆ' ಎಂದು ತಿಳಿಸಿದರು.

ಶ್ರೀ ಭುವನೇಶ್ವರಿ ಒಕ್ಕಲಿಗರ ಸಂಘ (ರಿ)
ನೊಂದಣಿ: 231/1984–85
ಬೆಂಗಳೂರು ಪೂರ್ವ ತಾಲ್ಲೂಕು, #102/1, ಬಿ.ನಾರಾಯಣಪುರ,
ಹೊರ ವರ್ತುಲ ರಸ್ತೆ, ಬೆಂಗಳೂರು–560016, ದೂರವಾಣಿ: +91 80 29918011

ಪ್ರಕಟಣೆ

ವಿಷಯ: ಮೇಲ್ಕಂಡ ಸಂಘದ ಸದಸ್ಯರುಗಳ ಪಟ್ಟಿಯನ್ನು ಸಮಗ್ರವಾಗಿ ತಯಾರಿಸುವ ಹಾಗೂ ಅವರುಗಳಿಗೆ ಹೊಸದಾಗಿ ಗುರುತಿನ ಕಾರ್ಡನ್ನು ವಿತರಿಸುವ ಬಗ್ಗೆ.

ದಿನಾಂಕ:30–12–2021ರಂದು ಉಪಸಮಿತಿ ಶಿಫಾರಸ್ಸಿನಂತೆ, ವಾರ್ಷಿಕ ಸಾಮಾನ್ಯ ಸಭೆ ಹಾಗೂ ಚುನಾವಣೆಗಾಗಿ ಮೇಲ್ಕಂಡ ಸಂಘದ ಎಲ್ಲಾ ಸದಸ್ಯರುಗಳ ಸಮಗ್ರ ಪಟ್ಟಿ ತಯಾರಿಸುವ ಸಂಬಂಧವಾಗಿ, ಅಂತಹವರು ಸಂಘದಲ್ಲಿ ಸದಸ್ಯರಾಗಿರುವುದಕ್ಕೆ ತಮ್ಮಲ್ಲಿರುವ ದಾಖಲೆ, ಜಾತಿ ದೃಡೀಕರಣ ಪತ್ರ, ಆಧಾರ್ ಕಾರ್ಡ್, ಇತ್ತೀಚಿನ 3 ಭಾವಚಿತ್ರ ಹಾಗೂ **ರೂ.500/– (ಐದು ನೂರು ರೂಪಾಯಿ)**ಗಳನ್ನು ಸಂಘಕ್ಕೆ ಪಾವತಿಸಿ ಹೊಸದಾಗಿ ಸದಸ್ಯತ್ವದ ಭಾವಚಿತ್ರವಿರುವ ಗುರುತಿನ ಕಾರ್ಡ್‌ನ್ನು ಪಡೆಯಲು ವಿನಂತಿಸಿದೆ.

ಈ ಕಾರ್ಯವನ್ನು **ದಿನಾಂಕ : 15–01–2022**ರೊಳಗಾಗಿ ಅಗತ್ಯ ದಾಖಲೆಗಳು ಹಾಗೂ ಶುಲ್ಕ ಪಾವತಿಸಿ ಹೊಸ ಕಾರ್ಡ್‌ನ್ನು ಪಡೆದುಕೊಳ್ಳಲು ವಿನಂತಿಸುತ್ತಿದ್ದೇವೆ. ದಯವಿಟ್ಟು ಸಹಕರಿಸಿ.

ಸಹಿ/– (ಹೆಚ್.ಎಸ್.ಮುನಿರಾಜು) ಕಾರ್ಯದರ್ಶಿ

ಸಹಿ/– (ಮಂಜುರಾಜು ಎನ್.ಎಂ.) ಅಧ್ಯಕ್ಷರು

CAPRI GLOBAL CAPITAL LIMITED

Registered/ Corporate Office: 502, Tower-A, Peninsula Business Park, Senapati Bapat Marg, Lower Parel, Mumbai, Maharashtra - 400 013. CIN: L65921MH1994PLC173469

DEMAND NOTICE

Under Section 13(2) of the Securitisation And Reconstruction of Financial Assets And Enforcement Of Security Interest Act, 2002 read with Rule 3 (1) of the Security Interest (Enforcement) Rules, 2002. The undersigned is the Authorised Officer of Capri Global Capital Limited (CGCL) under Securitisation And Reconstruction Of Financial Assets And Enforcement of Security Interest Act, 2002 (the said Act). In exercise of powers conferred under Section 13(12) of the said Act read with Rule 3 of the Security Interest (Enforcement) Rules, 2002, the Authorised Officer has issued Demand Notices under section 13(2) of the said Act, calling upon the following Borrower(s) (the "said Borrower(s)"), to repay the amounts mentioned in the respective Demand Notice(s) issued to them that are also given below. In connection with above, Notice is hereby given, once again, to the said Borrower(s) to pay to CGCL, within 60 days from the publication of this Notice, the amounts indicated herein below, together with further applicable interest from the date(s) mentioned below till the date of payment and/or realization, payable under the loan agreement read with other documents/writings, if any, executed by the said Borrower(s). As security for due repayment of the loan, the following assets have been mortgaged to CGCL by the said Borrower(s) respectively.

Sr. No.	Name of the Borrower/ (Co-Borrower)	Demand Notice Date & Amount	Description of secured asset (immovable property)
1	**Manyam Estates Private Limited - (Borrower)** Registered office: No.2273, 2nd Floor, Samruddhi 16th Cross, 24th Main Bangalore, Bangalore - 560105. AND Other Office: Survey No: 19, Beside Vijaya Bank, Surabhi Layout, Old Town Yelahanka, Bangalore-560064.	Demand Notice Date - 13th December 2021, Amount - Rs.13,10,74,992/- as on 1st December 2021 Loan Account No.: C0413	**Details of Project Land:** All the Property measuring an extent of about 3,855 Sq. mts., comprised in western portion of Sy. Nos. 18/1 and 19 situated at Shivannahalli Village, Yelahanka Hobli, Bangalore North Taluk, duly converted for non-agricultural residential purpose vide Conversion order bearing No. ALN (NAY) SR.180/2008-09 dated: 03/06/2009 and now bearing Municipal Katha No.876/4/Sy No18/1, 18/2,19 Shivannahalli village, in the records of Bruhat Bengaluru Mahanagara Palike (Project Land) and bounded by: East by: Portion of land in Survey No.18/1; West by: Road; North by: Private Property in Survey No.15, and South by: Private Property in Survey No. 20. **Details of Project:** Residential Project titled "Manyam Sky Park" owned and being developed by the Borrower on the Project Land. The project consists of 2 Towers developing in BF+ GF +10 Upper floors having an aggregate saleable area of about 1,72,261 sq. ft. (127 units) out of which Borrower's share is 94,713 sq. ft. (73 units). **Mortgaged Immovable Properties:** (I) Unsold Units. (ii) The development rights and all other rights and entitlements and interest of Borrower under the Project Documents; (iii) The undivided right, title, interest and share of Borrower in the Project; (iv) All right, title and interest of Borrower in / over the Project / Project Land, including all development rights of Borrower in / over the Project Land under the Project Documents and all present and future transferable development rights, utilized / unutilized floors space index (including any additional FSI / FAR which Borrower I and/or any Person on its behalf may be entitled to in respect of the Project Land), and all other rights and benefits accrued or accruing thereto and also together with all rights of Borrower under any other agreements, arrangements, contracts, documents, records, deeds, papers, writings, instruments by whatsoever name called, executed or which may be hereafter executed by Borrower / any other Person in favour of Borrower, including the Project Documents; (v) any profits and accretions accruing to (i) to (iv) above. **Details of Unsold Units:** **Tower 1:** 3B, 5B, 5C, 5D, 5E, 5F, 5H, 5J, B, 1A, 3A, 3C, 3D, 3H, 3J, 5A, 5G, 7A, 7B, 7C, 7D, 7H, 7J, 8B, 8C, 8D, 8E, 8F, 8G, 8H, 8J, 9A, 9C, 9D, 9H, 9J &10A. **Tower 2:** B, C, 1A, 1E, 2A, 2B, 2C, 2E, 3A, 4A, 4C, 4E, 5A, 5C, 6B, 6C, 6E, 7B, 7E, 8C, 8E, 9C, 9E, 10A & 10E.
2	**Mr. Manyam Vijayakumar (Co-borrower)** Promoter of M/s. Manyam Estates Private Limited Registered office: No.2273, 2nd Floor, Samruddhi 16th Cross, 24th Main Bangalore, Bangalore - 560105. Residential address: Flat No: 402, Vinayghar Apartment, Daspalla Hills, Visakhapatnam.		
3	**Ms. Anala Swathi (Co-borrower)** Promoter of M/s. Manyam Estates Private Limited Registered office: No.2273, 2nd Floor, Samruddhi 16th Cross, 24th Main Bangalore, Bangalore - 560105. Residential address: D.No.: 2-39-1/2, Plot No: MIG A32/10, Sector-10, MVP Colony, Visakhapatnam - 530017.		
4	**Ms. Mogili Kanaka Subhashini (Co-borrower)** Promoter of M/s. Manyam Estates Private Limited Registered office: No.2273, 2nd Floor, Samruddhi 16th Cross, 24th Main Bangalore Bangalore - 560105. Residential address: Flat No : 402, Vinayghar Apartment, Daspalla Hills, Visakhapatnam, Visakhapatnam - 530003.		
5	**Navya Infracon Projects India Private Limited (Co-borrower)** Registered office: Plot No.78, Sector-12 Mvp Colony, Visakhapatnam, Ap 530017.		

If the said Borrowers shall fail to make payment to CGCL as aforesaid, CGCL shall proceed against the above secured assets under Section 13(4) of the Act and the applicable Rules, entirely at the risks of the said Borrowers as to the costs and consequences. The said Borrowers are prohibited under the Act from transferring the aforesaid assets, whether by way of sale, lease or otherwise without the prior written consent of CGCL. Any person who contravenes or abets contravention of the provisions of the said Act or Rules made there under, shall be liable for imprisonment and/or penalty as provided under the Act.

Place: Mumbai
Date: 05-01-2022

IN THE COURT OF THE ADDITIONAL CITY CIVIL AND SESSIONS JUDGE AT BENGALURU (CCH 92)
MISC NO. 529/2020

BETWEEN
The State of Karnataka
Represented by Competent Authority
Assistant Commissioner, Bengaluru North
Sub Division, 2nd Floor Kandaya Bhavana
K.G. Road, Bengaluru-560009 ...Petitioner

AND
M/S. Capital Plus
Having its Office at
No. 19, 6th Cross Someshwaranagar,
Jayanagar, Bengaluru-560011 ...Respondents

Notice to Respondent No. 1 and 2

Respondent No. 1
M/S. Capital Plus
Having its Office at
No. 19, 6th Cross Someshwaranagar,
Jayanagar, Bengaluru-560011

Respondent No. 2
No. 19, 6th Cross Someshwaranagar,
Jayanagar, Bengaluru-560011
Represented by its PRO
Wajid Sheik @ Sheik Sameer

Whereas the Petitioner has filed the Misc, Petition No. 529/2020 under Section 5(2) of the Karnataka Protection of Interest of Depositors in Financial Establishments Act 2004 against respondents.

The Respondent No. 1 and 2 are hereby summoned to appear in the Court of the Additional City Civil & Sessions Judge at Bengaluru (CCH No.92), in person or by a pleader duly instructed and able to answer all material questions relating to Misc. Petition No. 529/2020 on 18-01-2022 at 11.00 'O'Clock in the forenoon to answer the claim.

Take notice that in default of your appearance on the date above mentioned the Misc. Petition will be heard and determined in your absence.

Given under my hand and seal of the court this day on 03-01-2022.

Sd/-
Shantha B Mullur
Special Public Prosecutor,
City Civil Court Bangalore.

By order of the court
Assistant Registrar
City Civil Court
Bengaluru

DIPR/DDU/2670/AKAR/2021-22

IN THE COURT OF THE ADDITIONAL CITY CIVIL AND SESSIONS JUDGE AT BENGALURU (CCH 92)
MISC NO.648/2020

BETWEEN
The State of Karnataka
Represented by Competent Authority
Assistant Commissioner, Bengaluru North
Sub Division, 2nd Floor Kandaya Bhavana
K.G. Road, Bengaluru-560009 ...Petitioner

AND
Heera Group of Companies and others
Having Office at
No. 8, Ground Floor, unit-2,
Cockborn cross Road,
New Bamboo Bazaar,
Bengaluru-560051. ...Respondents

Notice to Respondents No. 1 to 5

Respondent No.1
1. M/S Heera Group of Companies,
Having Office at
No. 8, Ground Floor, unit -2,
Cockborn cross Road,
New Bamboo Bazaar,
Bengaluru-560051

Respondent No. 2
2. HEERA GOLD EXIM LTD,
No. H12-6-2/268/1/2,3,4F,
Vivek nagar Kukatpalli, Hyderabad
Telangana-500072
Represented by tis C.E.O. & Director,
Nowhera Shaik.

Respondent No. 3
3. HEERA TEXTILES LTD,
No. H12-6-2/268/1/2,3,4F,
Vivek nagar Kukatpalli, Hyderabad
Telangana-500072
Represented by tis C.E.O. & Director,
Nowhera Shaik.

Respondent No. 4
4. HEERA FOODEX PVT LTD,
No. H12-6-2/268/1/2,3,4F,
Vivek nagar Kukatpalli, Hyderabad
Telangana-500072
Represented by tis C.E.O. & Director,
Nowhera Shaik.

Respondent No.5
5. Nowhera Shaik
C.E.O. & Director,
HEERA GROUP OF COMPANIES
Having Office at
No. 8, Ground Floor, unit-2,
Cockborn cross Road,
New Bamboo Bazaar,
Bengaluru-560051

Whereas the Petitioner has filed the Misc, Petition No. 648/2020 under Section 5(2) of the Karnataka Protection of Interest of Depositors in Financial Establishments Act 2004 against respondents.

The Respondent No. 1 and 5 are hereby summoned to appear in the Court of the Additional City Civil & Sessions Judge at Bengaluru (CCH No.92), in person or by a pleader duly instructed and able to answer all material questions relating to Misc. Petition No. 648/2020 on 17-01-2022 at 11.00 'O'Clock in the forenoon to answer the claim.

Take notice that in default of your appearance on the date above mentioned the Misc. Petition will be heard and determined in your absence.

Given under my hand and seal of the court this day on 03-01-2022.

Sd/-
Shantha B Mullur
Special Public Prosecutor,
City Civil Court Bangalore.

By order of the court
Assistant Registrar
City Civil Court
Bengaluru

DIPR/DDU/2663/AKAR/2021-22

ಕೋವಿಡ್: ಹೊಸ ಮಾರ್ಗಸೂಚಿ ಪ್ರಕಟ

- ಮದುವೆಗಳಿಗೆ ಒಳಾಂಗಣದಲ್ಲಿ 100, ಹೊರಾಂಗಣದಲ್ಲಿ 200 ಜನರಿಗೆ ಮಾತ್ರ ಅವಕಾಶ.
- ಮೆಟ್ರೊ, ಕೆಎಸ್ಆರ್‌ಟಿಸಿ, ರೈಲುಗಳ ಪ್ರಯಾಣಕ್ಕೆ ಪ್ರತ್ಯೇಕ ಮಾರ್ಗಸೂಚಿ ಹೊರಡಿಸಲಾಗುವುದು. ಬೆಂಗಳೂರಿನಲ್ಲಿ ವಾರಾಂತ್ಯದ ಕರ್ಫ್ಯೂ ವೇಳೆ ಅಗತ್ಯ ಸಂಚಾರಕ್ಕೆ ಮಾತ್ರ ಬಸ್‌ಗಳ ಸೇವೆ ಇರುತ್ತದೆ.
- ಪಬ್, ಕ್ಲಬ್, ರೆಸ್ಟೋರೆಂಟ್, ಬಾರ್‌ಗಳು, ಹೊಟೇಲ್‌ಗಳು ಮುಂತಾದ ಕಡೆಗಳಲ್ಲಿ ಶೇ 50ರಷ್ಟು ಸಾಮರ್ಥ್ಯ ದಲ್ಲಿ ಕಾರ್ಯ ನಿರ್ವಹಿಸುವುದು. ಎರಡು ಡೋಸ್ ಕೋವಿಡ್ ಲಸಿಕೆ ಹಾಕಿಸಿಕೊಂಡವರಿಗೆ ಮಾತ್ರ ಪ್ರವೇಶ.
- ಸಿನಿಮಾ ಮಂದಿರ, ಮಲ್ಟಿಪ್ಲೆಕ್ಸ್, ರಂಗ ಮಂದಿರ, ಸಭಾಂಗಣಗಳಲ್ಲಿ ಶೇ 50ರಷ್ಟು ಸಾಮರ್ಥ್ಯದಲ್ಲಿ ನಡೆಸಬಹುದು. ಕೋವಿಡ್ ಮಾರ್ಗಸೂಚಿ ಕಡ್ಡಾಯವಾಗಿ ಪಾಲಿಸಬೇಕು.
- ದೇವಸ್ಥಾನ, ಚರ್ಚ್ ಮತ್ತು ಮಸೀದಿಗಳಲ್ಲಿ ತಲಾ 50 ಜನರಿಗೆ ಮಾತ್ರ ಅವಕಾಶ. ಪೂಜೆ-ಪುನಸ್ಕಾರಗಳಿಗೆ ನಿರ್ಬಂಧವಿಲ್ಲ. ಪ್ರವೇಶ ಪಡೆಯುವವರು ಕೋವಿಡ್ ಲಸಿಕೆ ಪಡೆದಿರಬೇಕು.
- ಮಾಲ್, ಶಾಪಿಂಗ್ ಕಾಂಪ್ಲೆಕ್ಸ್, ಅಂಗಡಿ-ಮುಂಗಟ್ಟುಗಳು ವಾರದ ದಿನಗಳಲ್ಲಿ ಎಂದಿನಂತೆ ಕಾರ್ಯ-ನಿರ್ವಹಿಸಬಹುದು.
- ಈಜುಕೊಳಗಳು, ಜಿಮ್‌ಗಳು ಶೇ 50ರಷ್ಟು ಸಾಮರ್ಥ್ಯದೊಂದಿಗೆ ಕಾರ್ಯ ನಿರ್ವಹಿಸಬಹುದು.
- ಸಂಘ ಸಂಸ್ಥೆಗಳು, ರಾಜಕೀಯ ಪಕ್ಷಗಳೂ ಸೇರಿದಂತೆ ಎಲ್ಲ ರೀತಿಯ ಧರಣಿಗಳು, ರ್‍ಯಾಲಿಗಳು ಮತ್ತು ಪ್ರತಿಭಟನೆಗಳನ್ನು ನಿಷೇಧಿಸಲಾಗಿದೆ.
- ಮಹಾರಾಷ್ಟ್ರ, ಗೋವಾ, ಕೇರಳ ರಾಜ್ಯಗಳಿಂದ ಬರುವ ಪ್ರವಾಸಿಗರು (ರಸ್ತೆ, ರೈಲು ಮತ್ತು ವಿಮಾನ) ಕೋವಿಡ್ ಪರೀಕ್ಷೆ ಮಾಡಿಸಿ, ಕಡ್ಡಾಯವಾಗಿ ನೆಗೆಟಿವ್ ವರದಿ ಪ್ರಮಾಣ ಪತ್ರ ತರುವುದು ಕಡ್ಡಾಯ.
- ವಿದೇಶಗಳಿಂದ ಬರುವ ಪ್ರಯಾಣಿಕರಿಗೆ ವಿಮಾನ ನಿಲ್ದಾಣಗಳಲ್ಲೇ ಪರೀಕ್ಷೆ ಮಾಡಿಸಿ, ಕೋವಿಡ್ ದೃಢಪಟ್ಟವರಿಗೆ ನೇರವಾಗಿ ಸಾಂಸ್ಥಿಕ ಕ್ವಾರಂಟೈನ್‌ಗೆ ಕಳಿಸಲಾಗುವುದು.

‘ಕಾನೂನು ಕ್ರಮ ತೆಗೆದುಕೊಳ್ಳಲಿದೆ’

ಕೋವಿಡ್ ನಿಯಮ ಉಲ್ಲಂಘಿಸಿ ಪ್ರತಿಭಟನೆ, ರ್‍ಯಾಲಿ, ಧರಣಿ ನಡೆಸಿದರೆ ಕಾನೂನು ಕ್ರಮ ತೆಗೆದುಕೊಳ್ಳುತ್ತದೆ. ಇದು ಬಿಜೆಪಿಯೂ ಸೇರಿದಂತೆ ಎಲ್ಲರಿಗೂ ಅನ್ವಯವಾಗುತ್ತದೆ ಎಂದು ಕಂದಾಯ ಸಚಿವ ಆರ್.ಅಶೋಕ ಅವರು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ರಾಜಕೀಯ ಪಕ್ಷಗಳು ಸಭೆ ನಡೆಸುವುದಿದ್ದರೆ 50 ಮೇಲ್ಪಟ್ಟು ಜನ ಸೇರಬಾರದು ಎಂದರು.

ರಾತ್ರಿ ಕರ್ಫ್ಯೂ ಅರ್ಥಹೀನ ಎಂಬ ವಿಜ್ಞಾನಿಯೊಬ್ಬರ ಹೇಳಿಕೆಗೆ ಪ್ರತಿಕ್ರಿಯಿಸಿದ ಸಚಿವ ಡಾ.ಸುಧಾಕರ್, ರಾತ್ರಿ ಕರ್ಫ್ಯೂ ಸೇರಿ ಎಲ್ಲ ರೀತಿಯ ನಿರ್ಬಂಧಗಳನ್ನು ವಿಶ್ವ ಆರೋಗ್ಯ ಸಂಸ್ಥೆ ನಿರ್ಧರಿಸುತ್ತದೆ. ಅಲ್ಲಿ ವಿಜ್ಞಾನಿಗಳು, ವೈದ್ಯರು ಮತ್ತು ತಜ್ಞರು ಸೇರಿಯೇ ನಿಯಮಾವಳಿ ರೂಪಿಸುತ್ತಾರೆ ಎಂದು ಹೇಳಿದರು.

- ಮಾಸ್ಕ್ ಧರಿಸುವುದು ಕಡ್ಡಾಯವಾಗಿದ್ದು, ಮಾಸ್ಕ್ ಧರಿಸದವರಿಗೆ ದಂಡ ವಿಧಿಸಲಾಗುವುದು.

ಕೋವಿಡ್ ನಿರ್ವಹಣೆ ಕಾರ್ಯತಂಡಗಳ ರಚನೆ

ಕೋವಿಡ್-19 ಕಣ್ಗಾವಲು ಮೇಲುಸ್ತುವಾರಿ ಮತ್ತು ನಿರ್ವಹಣೆ ಹಾಗೂ ಸಮನ್ವಯಕ್ಕಾಗಿ ಐಎಎಸ್ ಅಧಿಕಾರಿಗಳ ನೇತೃತ್ವದಲ್ಲಿ ಕಾರ್ಯತಂಡಗಳನ್ನು ರಚಿಸಲಾಗಿದೆ.

ಕೋವಿಡ್ ವಾರ್ ರೂಮ್- ಮುನೀಶ್ ಮೌದ್ಗಿಲ್, ಐಎಲ್‌ಐ ಮತ್ತು ಸಾರಿ ಪ್ರಕರಣಗಳನ್ನು 108 ಆಂಬುಲೆನ್ಸ್ ಮೂಲಕ ಆಸ್ಪತ್ರೆಗಳಿಗೆ ದಾಖಲಿಸುವುದು- ಆರ್.ವಿನೂತ್ ಪ್ರಿಯಾ, ಸ್ಯಾಂಪಲ್ ಕಲೆಕ್ಷನ್ ಟೆಸ್ಟಿಂಗ್, ಲ್ಯಾಬ್ ಬಳಕೆ- ಶಾಲಿನಿ ರಜನೀಶ್, ಹೋಮ್ ಐಸೋಲೇಷನ್ ಮತ್ತು ನಿರ್ಬಂಧ ವಲಯ- ಪಂಕಜ್‌ಕುಮಾರ್ ಪಾಂಡೆ, ಲಿಕ್ವಿಡ್ ಆಕ್ಸಿಜನ್ ಟ್ಯಾಂಕರ್ ಚಲನೆಯ ಮೇಲ್ವಿಚಾರಣೆ- ಪ್ರತಾಪ್ ರೆಡ್ಡಿ ಮತ್ತು ಡಾ.ಎನ್. ಶಿವಶಂಕರ್, ಬಳ್ಳಾರಿ ಜಿಲ್ಲೆಯಲ್ಲಿ ಲಿಕ್ವಿಡ್ ಆಕ್ಸಿಜನ್ ಟ್ಯಾಂಕರ್‌ಗಳ ಚಲನೆಯನ್ನು ಮೇಲ್ವಿಚಾರಣೆ ಮಾಡುವುದು- ಪವನ್ ಕುಮಾರ್ ಮಾಲಪಾಟಿ, ರಾಜ್ಯದ ಮಟ್ಟದಲ್ಲಿ ಟೆಲಿ ಕೌನ್ಸೆಲಿಂಗ್, ಸಹಾಯವಾಣಿ- ವಿಪಿನ್ ಸಿಂಗ್, ಬಿಸ್ವಜಿತ್ ಮಿಶ್ರ, ಖಾಸಗಿ, ಎನ್‌ಜಿಒ, ಕಾರ್ಪೊರೇಟ್ ವಲಯಗಳೊಂದಿಗೆ ಸಮನ್ವಯ- ಉಮಾ ಮಹಾದೇವನ್, ಕೋವಿಡ್ ಸೋಂಕಿನಿಂದ ಪೋಷಕರನ್ನು ಕಳೆದುಕೊಂಡು ಅನಾಥರಾದ ಮಕ್ಕಳಿಗೆ ಸರ್ಕಾರದಿಂದ ಸೌಲಭ್ಯ ಒದಗಿಸುವುದು- ಪಲ್ಲವಿ ಆಕೃತಿ, ಅಂತರರಾಷ್ಟ್ರೀಯ ಸಂಸ್ಥೆ ಮತ್ತು ಸಮುದಾಯಗಳೊಂದಿಗೆ ಸಮನ್ವಯ ಸಾಧಿಸಿ ಸಹಕಾರ ಪಡೆಯುವ ಬಗ್ಗೆ- ಪೊನ್ನುರಾಜ್, ಕೋವಿಡ್ ಸಂಬಂಧಿತ ಪರಿಕರಗಳ ಆಮದು- ಉಮಾ ಮಹಾದೇವನ್ ಮತ್ತು ಪ್ರಿಯಾಂಕ ಮೇರಿ ಫ್ರಾನ್ಸಿಸ್.

ಹೈಕೋರ್ಟ್: ಕೋವಿಡ್ ಹೊಸ ನಿಯಮ ಜಾರಿಗೆ

ಬೆಂಗಳೂರು: ಕೋವಿಡ್ ಸೋಂಕು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಹೈಕೋರ್ಟ್‌ನ ಬೆಂಗಳೂರು ಪ್ರಧಾನ ಪೀಠದ ಕಲಾಪಗಳು ಇದೇ 5ರಿಂದ ಇದೇ 14ರ ವರೆಗೆ ವಿಡಿಯೊ ಕಾನ್ಫರೆನ್ಸ್ ಮೂಲಕ ನಡೆಯಲಿವೆ.

ಈ ಕುರಿತಂತೆ ರಿಜಿಸ್ಟ್ರಾರ್ ಜನರಲ್ ಟಿ.ಜಿ.ಶಿವಶಂಕರೇಗೌಡ ಮಂಗಳವಾರ ಅಧಿಸೂಚನೆ ಹೊರಡಿಸಿದ್ದಾರೆ. ಬೆಂಗಳೂರಿನ ಹೈಕೋರ್ಟ್ ಪೀಠ ಹಾಗೂ ಎಲ್ಲ ವಿಚಾರಣಾ ನ್ಯಾಯಾಲಯಗಳಿಗೂ ಪ್ರತ್ಯೇಕ ಮಾರ್ಗಸೂಚಿಯನ್ನು ಜಾರಿಗೊಳಿಸಿದ್ದು, ‘ತುರ್ತು ಪ್ರಕರಣಗಳ ವಿಚಾರಣೆಗೆ ಆದ್ಯತೆ ನೀಡಲಾಗುವುದು’ ಎಂದು ತಿಳಿಸಲಾಗಿದೆ.

‘ಧಾರವಾಡ ಮತ್ತು ಕಲಬುರಗಿ ಪೀಠಗಳಲ್ಲಿ ಎಂದಿನಂತೆ ಭೌತಿಕ ವಿಚಾರಣೆ ಜೊತೆಗೆ ಹೈಬ್ರಿಡ್ ಮಾದರಿ ಯಲ್ಲೇ ಕಲಾಪ ಮುಂದುವರಿಯಲಿದೆ. ಪರಿಸ್ಥಿತಿಯನ್ನು ಗಮನಿಸಿ ಮಾರ್ಗಸೂಚಿ ಹಾಗೂ ಆದೇಶಗಳನ್ನು ಪರಿಷ್ಕರಿಸಲಾಗುವುದು’ ಎಂದು ಆದೇಶದಲ್ಲಿ ತಿಳಿಸಲಾಗಿದೆ.

28 ಕ್ಷೇತ್ರಗಳಲ್ಲಿ ಆಂಬುಲೆನ್ಸ್

ಬೆಂಗಳೂರು ನಗರದ 28 ವಿಧಾನಸಭಾ ಕ್ಷೇತ್ರಗಳಲ್ಲಿ ತಲಾ 2 ಆಂಬುಲೆನ್ಸ್‌ಗಳಲ್ಲಿ ಸನ್ನದ್ಧ ಸ್ಥಿತಿಯಲ್ಲಿಡಲಾಗುವುದು. ಮುಂದಿನ ದಿನಗಳಲ್ಲಿ ಅಗತ್ಯವಿದ್ದರೆ ಆಂಬುಲೆನ್ಸ್‌ಗಳ ಸಂಖ್ಯೆ ಹೆಚ್ಚಿಸಲಾಗುವುದು ಮತ್ತು 198 ವಾರ್ಡ್‌ಗಳಲ್ಲೂ ಆಂಬುಲೆನ್ಸ್ ಲಭ್ಯವಿರುತ್ತದೆ ಎಂದು ಸಚಿವ ಡಾ.ಕೆ.ಸುಧಾಕರ್ ಹೇಳಿದರು.

ಬೆಂಗಳೂರಿನಲ್ಲಿ ಶೇ 80 ರಿಂದ ಶೇ 90 ರಷ್ಟು ಪ್ರಕರಣಗಳು ವರದಿಯಾಗುತ್ತಿವೆ. ಆದ್ದರಿಂದ ಬೆಂಗಳೂರನ್ನು ಎಂಟು ವಲಯಗಳನ್ನಾಗಿ ವಿಂಗಡಿಸಲಾಗಿದೆ. ಇದಕ್ಕಾಗಿ ಐಎಎಸ್ ಮತ್ತು ಐಪಿಎಸ್ ಅಧಿಕಾರಿಗಳ ತಂಡವನ್ನು ರಚಿಸಿದ್ದು, ಸಮಗ್ರವಾಗಿ ನಿರ್ವಹಣೆ ಮಾಡಲಾಗುವುದು ಎಂದು ಅವರು ತಿಳಿಸಿದರು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ:

080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Marketing & Sales

WANTED: SALES EXECUTIVE FOR IT TRADING COMPANY at Jayanagar- Experience 2-4 years- Phone: 26632953/ 959/ connect@mentorsystems.co.in

Wanted

WANTED EXPERIENCED Sales Executive, Delivery Boys (2 Wheeler) with Knowledge in Fans and Geyser (Brand: Usha & A.O.Smith): 9972873609 Mail Id : houseoflampske@yahoo.co.in

Receptionist/ Secretary

REQUIRE A Female Receptionist with English, Kannada, Basic Computer Knowledge for a Clinic in Malleshwaram. Contact 9845825616

Teachers/ Professors

HARWARD INTERNATIONAL SCHOOL (CBSE)
Affiliated No.830335
www.harwardinstitutions.com
Dasanapura, Tumkur Road, Bangalore North - 562162
Walk in interview
Regularly @ 10:30 am to 3:00 pm
Co-ordinator- PGT (10yrs Experienced in CBSE), Montessori Teachers, Yoga, Music, Accountant- (Female) (Exp in Education institutions with typing skill), PRO, Marketing Executives
Please send CV to infoharwardints@gmail.com
Ph:9880112833/9945230286

IMPACT GROUP OF INSTITUTIONS
WANTED LECTURERS
For Computer Science with First Class in BE
WALK IN INTERVIEW: Thursday & Friday 9:30 am to 12:30 pm on
VENUE: IMPACT Campus, Kodigehalli, Sahakaranagar, Bangalore-560092
Call: 94487 48297
IMP-21214

JOB OPENING AT DECCAN INTERNATIONAL SCHOOL

Deccan International School, is a progressive Pre K - Grade 12 school. We provide an empowering learning environment that nurtures empathy and inquiry in students, enabling them to excel in an ever-changing world.

Are you interested to be part of such motivational team !! here you have an opportunity!!

WE ARE LOOKING FOR TEACHERS WITH PASSION AND EXCELLENCE IN TEACHING (Specialized in CAIE (Cambridge), ICSE/ISC curricula)

Early Years' Teachers	Graduates with B. Ed / NTT /Montessori/ECCE
Primary / Middle School Teachers	Graduates/Post Graduates with B. Ed
Secondary Teachers	Post Graduates with B. Ed

- Languages: Kannada, Hindi, French and Sanskrit
- ECA/CCA: Western/Indian Music (vocal and instruments), Dance, Drama
- Sports: Swimming, Cricket, Basketball, Soccer, Athletics, Yoga
- Leadership: Head of the Academic Subjects (HODs)
- Non Academic Roles: Receptionist, Admission Officer, Librarian

Candidates are required to forward the below mentioned documents to:
CV | Educational Certificates | Experience Letters
work@deccan.edu.in

*The E-mail subject line should be clear with position applied for and curriculum taught
*Only shortlisted candidates will be notified about the interview schedules.

Deccan International School
#11, 18th Main Road, Brindavan Layout, Padmanabhanagar, Bengaluru, Karnataka 560 061
www.deccan.edu.in

WANTED ENGLISH Medium Trained LADY TEACHERS for Nursery/ Primary/ Higher Secondary for Teaching English; Kannada; Maths; Science; E.V.S; Hindi. Physical Education Teacher- (Female/Male). Walk-in interview 10:00 am- 4:00 pm. New Oxford English School, 185, 6th Cross, Gandhinagar, Bangalore-09. Ph: 22261590/ 41475015. Email: noes.school@gmail.com

Office Boys/ Peon

REQUIRED OFFICE Boy for VIDYARTHI KENDRA Pvt Ltd. Fresher Preferred Language Hindi and Kannada. Salary upto 12,000. vidyarthikendrabangalorepvtltd@gmail.com Contact: 7753888113

Multiple Vacancy

45 YEAR Engineering Company in Fraser Town needs EXPERIENCED ACCOUNTS and ADMINISTRATIVE OFFICER (AAO) familiar with Accounts, Computer operation,Tally, dealing with Auditor, Bank and other Agencies such as Professional Tax, Periodical returns, Shop and Establishment Dept, Sales Tax. Age- 40 to 45 years. Salary Rs. 18000- 22000 pm. Also, OFFICE SUPERINTENDENT (OS), who can attend to office matters, payment of bills, office and other maintenance, deal with Printer, Couriers, Stationers, and other vendors. Age about 40 years. Should have a 2-Wheeler. Salary Rs.17,000 to 21,000. Apply giving codes AAO and with full details to: spmnirvana@gmail.com

REQUIRED *IMMEDIATELY* for an ISO Plastic Moulding Industry. 1) ACCOUNTS MANAGER 2) ACCOUNTS EXECUTIVE 3) MS OFFICE- XLS/ WORD EXEC 4) LOGISTICS EXECUTIVE 5) SHOPPING MALL MERCHANDISERS South Bangalore *Experience*: Min 3 Years. *WAGES*: Attractive Salary with BONUS & other perks. *CONTACT* 9880125149/ 9590201077 jayceeindustries@gmail.com

REQUIRED BILLING /Delivery /Store Staff, Salary + Perks + incentives + Allowances. Call: 9916902503 Location: Banaswadi

HRD & Admin

ADMINISTRATION OFFICE STAFF young enthusiastic graduate freshers okay ready to join immediately, staying near Hulimavu, Bannerghatta Road, Bangalore. Long term career growth with Promotions golden opportunity, PF, ESIC Facilities, Strong Company of more than 18 years mail CV: dinesh.shastri@digitalage.co.in Call: 9448088666, 8095488666.

Hospital & Medical Jobs

HOSMAT HOSPITAL
Hosmat Hospitals is Recruiting the following Staff Male and Female at HOSMAT Second Unit at Ring Road, Hennur Junction (opened) and Third Unit of HOSMAT opening in a few months

1. Group Head for 3 Hospitals
2. Intensivists Senior and Junior
3. Anaesthesia Consultants/ Junior Consultants/ Sr. Registrars
4. Senior Physician Internal Medicine
5. Medical Director / Co-ordinator
6. Pulmonologist
7. Paediatrician
8. Diabetologist/ Endocrinologist
9. Emergency Medical Officer / Casualty Medical Officers
10. OT Incharge/ Manager
11. Front Office Manager
12. Human Resources
13. Referral Marketing / Sales
14. Patient Care Co-ordinators/ Counsellors
15. Purchase and Stores Manager
16. Orthotics and Prosthetics Manager
17. Pharmacists
18. Infection control Nurse
19. NABH Co-ordinator/ Quality Executive
20. Nurses for all Departments
21. Home Care Staff
22. A/C Technicians

Call: 080 4113 9762 / 91084 50312
recruitment@hosmathospitals.com / coordinatorhosmat@gmail.com

URGENTLY REQUIRED GYNECOLOGIST (preferable retired Doctor)
Contact : 7204415846

General

Sir MVIT, a reputed Engineering College in Bengaluru requires Office Manager.
Qualification: Any Degree/PG Degree with at least 10 years experience in the field. Apply with bio-data and copies of relevant certificates to The Secretary, Sri Krishnadevaraya Educational Trust, No.16, Ballari Road, Sadashivanagar, Bengaluru-560 080,within 7 Days. Ph: 080-23606999/23601340/23601370. E-mail: sriket@gmail.com.

SHEET METAL Fabrication Co in Bangalore Requires 3-5 Yrs Experienced, Draughtsman/ 3D Designer- Diploma/ BE Mechanical knowledge of Solid work, Fabricator: Experience in Fabrication works .Tool makers 3/5 Years experience in Machine, Contact: 8970070088/ 9844520035/ 9844520055

WANTED MALE/ Female OPERATION EXECUTIVE having good communication skills with computer knowledge staying near Rajajinagar for an advertising agency. Call: 9845597155

Janatha Education Society's
VIVEKANANDA EDUCATIONAL INSTITUTIONS
JOB OPPORTUNITIES
VIVEKANANDA COLLEGE OF PHARMACY
PROFESSOR : Pharmacology
ASSISTANT PROFESSOR : Pharm Chemistry | Pharmacognosy | Pharmaceutics
Qualification : As per PCI norms Exp : 4-5 Years
ASSISTANT PROFESSOR : Pharmacy Practice
Qualification : Pharm D / Pharmacy Practice
Experience : 4-5 Years
Boys Hostel- Warden / Manager :
Qualification : Any Degree-Preferably : Rtd. Army/ Police / Fire dept.
Eligible candidates may send their BIODATA along with 2 passport size photos to the Hon.Secretary to reach him within 10 days by post.
Dr.Rajkumar Road, Next to Orion Mall, 2nd stage, Rajajinagar, Bengaluru - 560055 Contact : 080-23377434 | 9513953489
Mail : jobs@jes-edu.in
H.C.Balakrishna, Hon.President — Dr.C.N.Manche Gowda, Hon.Secretary

WANTED:- BSC/ BCom/ BBA/ Diploma graduates for Electronic company, domains: Accounts/ Sales/ Digital Marketing Apply info@siricomindia.com -whatsApp: 9900733844

WANTED FRONT office Executive with min 3 yrs Exp, Any graduate with good communication skills and computer knowledge for a Company located in Bommanahalli, near HSR Layout, Bangalore-68. Age limit: within 35 yrs. Salary Rs. 25,000. Send CV to cpreddy@outlook.in , Contact: 94498 17703

SMT GROUP Require OFFICE EXECUTIVES M/F (Kannada + English). Walk-in Office, opp. Bowring Hospital Main Gate. Send details to wintreat@gmail.com Ph: 9611850338.

Engg/ Production Technical

A COMPANY situated at peenya 2nd stage Bangalore, who is Exporting Precision Machined Components to Europe, is looking for personnel to work as below: (1) SHIFT SUPERVISOR PRODUCTION BE/ DME/ ITI Experience: 5- 6 Years in similar capacity in precision machine shops. Hands-on experience in conventional/ CNC M/c, knowledge in programming, setting of CNC M/c will be considered as added qualifying criteria. Should be conversant in Engineering drawing, leadership qualities, computer & Documentation knowledge is preferred. Candidates, who are drawing less than 4.5L CTC need not apply. (2) HOD- HR Qualification: MSW/ MBA. Experience; 5- 8 Years of experience in HR/ IR. Salary: In commensurate with qualification and experience. Email: recruitmentdcap@gmail.com

REQUIRED IMMEDIATELY Electrical Engineer & Mechanical Engineer. Qualification: Diploma, Experience: Freshers or upto 2 years. Location: Mysore District. Mail resume to: rajeevkavara@gmail.com

Accounts & Finance

SENIOR ACCOUNTANT Purchase Assistant, Sales Co-Ordinator & Design Engineer, Exp 2-4 years, Contact: 9886549598

RENTAL PROPERTIES

Accommodation Available

Commercial

AVAILABLE OFFICE Accommodation with fully furnished at #29, 3rd floor, 3rd Cross, Vinayaka Layout, Bhoopasandra, Bangalore. Contact 9845922496

Accommodation Wanted

Industrial And Factory

WAREHOUSE/ GODOWN ready to move-in space require For Rent immediately 20000 sft to 50000 sft for grocery storage close to Surrounding Hubli 9740803686

REAL ESTATE SELLING

Commercial Building

General

HOTEL FOR sale in Belgaum. 32000 Sqft, Monthly sale Rs 30 Lacs, 31 AC Rooms, Restaurant, Bar (CL7), Banquet, Parking, Contact 9845273435

Commercial Land

General

Land For Sale 36000 sqft in Gandhinagar Belagavi, Single Layout, NA, NH4 adjacent, Near Hotel Sankam Contact 9845273435 Suitable: Showrooms, Hospitals, Hotels Etc

Flat

Vasanth Nagar

2 BHK flat for sale at palace cross Road, Vasanthnagar. 1262 sqft including covered car park. Contact: 9845493251/ 9449009325

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

BUSINESS

Business to Business

Financial Services

NRI'S INVESTMENT And Finance Available On Low Interest Against Properties, Land & Building, Sites, Flats, Converted & Agriculture Lands Call: 7411265189

EDUCATIONAL

Coaching Classes

THE CORPORATE ACCOUNTANT is an academy managed by professionals for training aspiring accountants to gain experience before seeking job. We offer 100% practical training using computers. Require experienced/retired TUTORS well versed in TALLY & statutory compliance filing online.Attractive salary.Contact 9880173407

PERSONAL

Change of Name

I, SERENA PECK, D/o. Late Grenville. A. Peck, R/at No. 406, Outer Circle, Whitefield, Bangalore-560066 have declared that the names SERENA PECK and SERENA MARIE PECK belong to me only, and both names belong to one and the same person. Vide affidavit dated 04-01-2022 sworn before notary Rajanna S.M. Bangalore.

I, M.PREM Kumar Son of Gangadharan Manuel aged about 46 Years, Residing at No. 42, Near RTO Office, Coromandel Post, K.G.F 563118, KGF Taluk, Kolar District, Karnataka have changed my name to Shanth Kumar vide affidavit dated 27.12.2021 before notary Thangaraj S, K G F-583117 Kolar Dist.

I, ADITYA Narayanan S/o Ganesh aged about 19 years have changed my name as Aditya Narayanan Ganesh vide Affidavit dated 31.12.2021 Sworn before Notary Harisha. G, Bangalore and henceforth I shall be known as Aditya Narayanan Ganesh and shall be known as Aditya Narayanan Ganesh for all purposes and Records.

I, MITHUN RAJ, S/o Vijay Kumar C.J, residing at #7, 6th cross, 9th C Main, near Chocolate Factory, Srinivasnagar, Banashankari III Stage, Bengaluru 560050, have changed my name to MUHAMMAD IBRAHIM, vide affidavit 24.11.2021 before Notary S.I. Balaguru, Bengaluru.

I, VIVIAN PATRICK NELSON R/a. No. 21/1, near Om Shakthi Temple Banjara Layout, Horamavu, Kalkere Post, Bangalore- 560043, have changed my name to VIVIAN PATRICK NELSON ADEN vide affidavit dated 04/01/2022, before notary O.S. Chengappa, Bangalore.

I INDIRA BOMMANAHALLI NARAYANRAO R/a #.284, Kaveri Nivas, 10th main Road, 3rd block Jayanagar, Bengaluru- 560011 Have Changed my name to INDIRA RAM PRASAD vide Affidavit Dated 27/12/2021 Before Notary Mamatha. N.K Bangalore

I, RAMESH KODIHALLI MUNISWAMEGOWDA have changed my name to RAMESH vide affidavit dated: 4/1/2022 Before Notary Manohar Jeerige Bangalore.

CHANDAR KALA W/o 6396496Y- HAV- KRISHAN KUMAR YADAV R/a Guwana, Behror, Alwar, Rajasthan changed name from CHANDAR KALA to CHANDER KALA notary KV Mani Bangalore.

CHANGE OF NAME
I, FATHIMA D/o Late HUSSAIN SAB, R/o. H.No.A8/3, Near G.H.P. School Gandhi Maidan, Hutti Camp, Tq: Lingasugur, Dist: Raichur, declare that I have changed my name from FATHIMA BEGUM D/o HUSAN SAB to FATHIMA D/o HUSSAIN SAB. and my date of birth is entered wrongly in my birth certificate as 21.06.1975 instead of 01.01.1979. Vide affidavit Dtd: 01.01.2022 sworn before Advocate & Notary Krishna at Lingasugur.

LALITA KAUSHIK, Wife/o, JC681931Y, SUB, SURENDER KUMAR, Vill- Chamkha, Morni, Panchkula, Haryana, have changed name from LALITA KAUSHIK to LALITA SHARMA, 03/01/2022, Notary K.V. Mani, Bangalore

LAKSHY S/O 6396496Y- HAV- KRISHAN KUMAR YADAV R/a Guwana, Behror, Alwar, Rajasthan changed name from LAKSHY to LAKSHAY notary KV Mani Bangalore.

I, ANITHA have changed my daughter's name from YAKSHA. M to YASHASWINI. M. (New Name) Vide affidavit dated 06-12-2021 before Notary R.T. Krishna Murthy, Bangalore

WE RAMESH and PRABHA RAMESH have changed our Daughter's Name from MADHUMITHA KODIHALLI RAMESH To MADHUMITHA RAMESH vide affidavit dated: 4/1/2022 Before Notary Manohar Jeerige Bangalore.

I, P.M. Poovaiah from Badragola, Kodagu, have changed my name to Visal Poovaiah on 22/12/2021 Sworn before notary S.D. Kaveriappa.

Lost

PUBLIC NOTICE
The original Gift deed of property bearing No.198, formed out of Property No.8, ITI Notified Area Katha No.67/4/8, situated at Sonnathammanahalli Village, K.R.Puram Hobli Now comes under B.B.M.P Limits, registered as Document No.KRI-1-09778/2018-19, Book-1, C.D.No.KRID638, Registered on dated 17.12.2018, registered before the Sub-Registrar, K.R.Puram, Bangalore, in favour of Mr. MOHAMMED ANEES.J, S/o Late Jamsheed.S, has been irretrievably lost or misplaced and a police complaint had also been filed on 4.01.2022 in K.R.Puram Police Station. Any person having possession of the said document or having any manner of claim in respect of the property may handover the document to the below named or make such claim with documentary proof on or before within 15 days of this notice failing which no claim will be entertained.
Sd/-
V. D. ASSOCIATES
M. VISWANATHA REDDY, B.Com.,LLB
D.J. RAJU, B.A., LLB, Advocates
4th Floor, above Health Plus Multi Speciality Hospital
Near St. Anthony Church, T.C.Palya Main Road, K. R. Puram (Post), Bangalore-560 036
9448791899 / 9448486046

ASTRO YATRA

ವಿಶ್ವವಿಖ್ಯಾತ ಕೇರಳ ಜೋತಿಷ್ಯರು
ಶ್ರೀ ಗುರೂಜಿ ಜಿ.ಕೆ.ಡಿ. ದಿವ್ಯದಾಸನ್
ಕಳೆದ 35 ವರ್ಷಗಳಿಂದ ಬೆಂಗಳೂರಿನಲ್ಲಿ ನಿರಂತರವಾಗಿ ನೆಲೆಸಿದ್ದಾರೆ. ಇವರನ್ನು ಇಂದೇ ಭೇಟಿಮಾಡಿ ನಿಮ್ಮ ಉದ್ಯೋಗ, ವ್ಯಾಪಾರ, ಅದೃಷ್ಟ, ಕುಟುಂಬ ಸಮಸ್ಯೆ,ಮದುವೆಯೋಗ, ಪ್ರೇಮ-ಪ್ರೀತಿ, ಆರೋಗ್ಯ, ವಿದೇಶ ಪ್ರಯಾಣ, ಶತ್ರು ದೋಷ, ಲಕ್ಷ್ಮಿಯೋಗ ಮತ್ತು ಮಕ್ಕಳ ವಿದ್ಯಾಭ್ಯಾಸ ಮತ್ತು ನಿಮ್ಮ ಜೀವನವು ಉತ್ತಮವಾಗಿ ಮೂಡಿಬರಲು ಕೇರಳ ಜ್ಯೋತಿಷ್ಯ ಶಕ್ತಿಯ ಮೂಲಕವಾಗಿಯೂ, ಗುರೂಜಿಯ ದಿವ್ಯಶಕ್ತಿಯಿಂದಲೂ, ಶಕ್ತಿಯುತವಾದ ಪರಿಹಾರ ನೀಡುವರು.
ಸೂಚನೆ : ಇಲ್ಲಿ ಹೇಳುವ ವಿಚಾರಗಳನ್ನು ರಹಸ್ಯವಾಗಿ ಇಡಲಾಗುತ್ತದೆ.
ಸಂದರ್ಶನದ ಸ್ಥಳ: ಶ್ರೀ ಗುರೂಜಿ ಜಿ.ಕೆ.ಡಿ. ದಿವ್ಯದಾಸನ್ (ಕೇರಳ)
ಹೋಟೆಲ್ ಸಭಾರ್‌ವಾಲ್ ವೈಸ್‌ರಾಯ್, ರೂಂ ನಂ. 102, ಲಾಲ್‌ಬಾಗ್ ಫೋರ್ಟ್ ರಸ್ತೆ, ಮಿನರ್ವ ವೃತ್ತ, (ನಂದಿನಿ ಹೋಟೆಲ್ ಎದುರು) ಬೆಂಗಳೂರು-04.
ನಂ. 24, 1ನೇ ಅಡ್ಡರಸ್ತೆ, ಕಮ್ಮನಹಳ್ಳಿ, ಕುಳ್ಳಪ್ಪ ವೃತ್ತ, ಬಾಣಸವಾಡಿ, ಸಿಟಿ ಸೂಪರ್ ಮಾರ್ಕೆಟ್ ಹತ್ತಿರ, ಬೆಂಗಳೂರು-84.
Ph: 080 25420833, 98441 65272 / 99727 41083
ಭೇಟಿಯ ವೇಳೆ: ಬೆಳಗ್ಗೆ 9 ರಿಂದ ಮಧ್ಯಾಹ್ನ 1 ರವರೆಗೆ ಸಂಜೆ 3 ರಿಂದ ರಾತ್ರಿ 8 ರವರೆಗೆ (ಭಾನುವಾರವೂ ತೆರೆದಿರುತ್ತದೆ)

DH DECCAN HERALD ಪ್ರಜಾವಾಣಿ

BOOK YOUR REAL ESTATE
Classified Advertisement In Deccan Herald & Prajavani

SATURDAY & SUNDAY COMBO OFFER

Ordinary Per word	Bold Per word	Ordinary Semi Display Per word	Bold Semi Display Per word	Single Col CD Per sqcm
80	125	95	155	570

For More Details Contact:
Ph:080- 45557160 | 163 | 164 | M: 9880856233 | 9731810277 | 9901641752 | 9845114560 | 9886213331
dhclassifieds@deccanherald.co.in www.dhclassifieds.com
condition apply*

ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳಿಂದ ಮುಂದುವರಿದ ದುರಸ್ತಿ ಕಾರ್ಯ

ತುಮಕೂರು ರಸ್ತೆ ಮೇಲ್ಸೇತುವೆ: 10 ದಿನ ನಿರ್ಬಂಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅತ್ಯಂತ ವಾಹನ ದಟ್ಟಣೆ ಇರುವ ತುಮಕೂರು ರಸ್ತೆಯ ಎಲಿವೇಟೆಡ್ ಕಾರಿಡಾರ್‌ನ (ಶಿವಕುಮಾರ ಸ್ವಾಮೀಜಿ ಮೇಲ್ಸೇತುವೆ) ಎರಡು ಪಿಲ್ಲರ್‌ಗಳನ್ನು ಸಂಪರ್ಕಿಸುವ ಕೇಬಲ್‌ನಲ್ಲಿ ಕಂಡುಬಂದಿರುವ ದೋಷ ಸರಿಪಡಿಸುವ ಕಾಮಗಾರಿ ಮುಂದುವರಿದಿದ್ದು, ಈ ಮೇಲ್ಸೇತುವೆ ಮೇಲೆ ಇನ್ನೂ 10 ದಿನಗಳ ಕಾಲ ವಾಹನ ಸಂಚಾರಕ್ಕೆ ನಿರ್ಬಂಧ ಮುಂದುವರಿಯಲಿದೆ.

ದುರಸ್ತಿ ಕಾಮಗಾರಿ ಪೂರ್ಣಗೊಳ್ಳದ ಕಾರಣ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ (ಎನ್‌ಎಚ್‌ಎಐ) ಅಧಿಕಾರಿಗಳ ಮನವಿ ಮೇರೆಗೆ ಮೇಲ್ಸೇತುವೆಯಲ್ಲಿ ಜ.14ರ ತನಕ ವಾಹನ ಸಂಚಾರ ನಿರ್ಬಂಧಿಸಲಾಗಿದೆ ಎಂದು ಯಶವಂತಪುರ ಸಂಚಾರ ಪೊಲೀಸರು ಟ್ವಿಟರ್‌ನಲ್ಲಿ ತಿಳಿಸಿದ್ದಾರೆ.

‘8ನೇ ಮೈಲಿ ಜಂಕ್ಷನ್‌ನ ಸ್ವಾತಿ ಪೆಟ್ರೋಲ್ ಬಂಕ್ ಮುಂಭಾಗದ 102 ಮತ್ತು 103ನೇ ಕಂಬಗಳ ನಡುವೆ ಸಂಪರ್ಕ ಕಲ್ಪಿಸುವ ಸೆಗ್‌ಮೆಂಟ್‌ಗಳ ಒಳಗೆ ಆರು ಕೇಬಲ್‌ಗಳಿವೆ. ಆ ಕೇಬಲ್‌ಗಳೇ ಕಾಂಕ್ರಿಟ್ ಸೆಗ್‌ಮೆಂಟ್‌ಗಳನ್ನು ಜಾರದಂತೆ ಹಿಡಿದಿಟ್ಟಿವೆ. ಒಂದು ಕಂಬದಿಂದ ಇನ್ನೊಂದು ಕಂಬದ ತನಕ ಪ್ರತಿ ಕೇಬಲ್‌ನಲ್ಲೂ 14 ಜೋಡಣೆಗಳಿರುತ್ತವೆ. ಅವುಗಳಲ್ಲಿ ಎರಡು ಕೇಬಲ್‌ಗಳು ಸ್ವಲ್ಪ ಬಾಗಿದಂತೆ ಮತ್ತು ಸಣ್ಣದಾಗಿ ಸವೆದಂತೆ ಕಾಣಿಸುತ್ತಿವೆ. ಅದನ್ನು ಬದಲಿಸುವ ಕಾರ್ಯ ನಡೆಯುತ್ತಿದೆ’ ಎಂದು ಎನ್‌ಎಚ್‌ಎಐ ಮೂಲಗಳು ತಿಳಿಸಿವೆ.

ಜಾಲಹಳ್ಳಿ ಕ್ರಾಸ್ ಬಳಿ ಉಂಟಾಗಿರುವ ಸಂಚಾರ ದಟ್ಟಣೆ

‘ರಸ್ತೆ ನಿರ್ವಹಣೆ ಮಾಡುತ್ತಿರುವ ಗುತ್ತಿಗೆದಾರರು ಪರಿಣಿತರನ್ನು ಕರೆಸಿ ದುರಸ್ತಿ ಕಾಮಗಾರಿ ಆರಂಭಿಸಿದ್ದಾರೆ. 102ನೇ ಕಂಬದ ಪಕ್ಕದಲ್ಲಿರುವ ಸೆಗ್‌ಮೆಂಟ್ ಒಳ ಪ್ರವೇಶಿಸಲು ಅವಕಾಶ ಕಲ್ಪಿಸಲಾಗಿದ್ದು, ಅದರ ಮೂಲಕ ಮೇಲ್ಸೇತುವೆ ಒಳಗೆ ಪ್ರವೇಶಿಸಿ ಕಾಮಗಾರಿಯನ್ನು ಸಿಬ್ಬಂದಿ ನಿರ್ವಹಿಸುತ್ತಿದ್ದಾರೆ. ಸೆಗ್‌ಮೆಂಟ್‌ನಲ್ಲಿ ತೊಂದರೆ ಕಾಣಿಸಿಕೊಂಡಿದ್ದರೆ ಸರಿಪಡಿಸಲು ಕನಿಷ್ಠ ಮೂರು ತಿಂಗಳ ಕಾಲಾವಕಾಶ ಬೇಕಾಗುತ್ತಿತ್ತು. ಆದರೆ, ಅಂತಹ ಗಂಭೀರ ಸಮಸ್ಯೆ ಇಲ್ಲದಿದ್ದರೂ, ಅತ್ಯಂತ ಸೂಕ್ಷ್ಮವಾಗಿ ಕಾಮಗಾರಿ ನಿರ್ವಹಿಸಬೇಕಿದೆ. ಆದ್ದರಿಂದ ಇನ್ನೂ 10 ದಿನಗಳ ಕಾಲಾವಕಾಶ ಬೇಕಾಗಲಿದೆ’ ಎಂದು ಹೇಳಿವೆ.

‘ಪ್ರತಿ ಮಳೆಗಾಲದ ಬಳಿಕ ಸಾಮಾನ್ಯವಾಗಿ ಮೇಲ್ಸೇತುವೆ ಸ್ಥಿತಿಗತಿ ಪರಿಶೀಲನೆಯನ್ನು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು ನಡೆಸುತ್ತಾರೆ. ಅದರಂತೆ ಜ.25ರಂದು ಪರಿಶೀಲನೆ ನಡೆಸುತ್ತಿದ್ದಾಗ ಈ ದೋಷ ಪತ್ತೆಯಾಗಿತ್ತು. ಮುನ್ನೆಚ್ಚರಿಕಾ ಕ್ರಮವಾಗಿ ವಾಹನ ಸಂಚಾರ ನಿರ್ಬಂಧಿಸಿ ದುರಸ್ತಿ ಕಾಮಗಾರಿ ಆರಂಭಿಸಲಾಗಿದೆ’ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ದಟ್ಟಣೆಯಲ್ಲಿ ಸವಾರರ ಪರದಾಟ

ಉತ್ತರ ಭಾಗದಿಂದ ನಗರಕ್ಕೆ ಸಂಪರ್ಕ ಕಲ್ಪಿಸುವ ಪ್ರಮುಖ ರಸ್ತೆ ಇದಾಗಿದ್ದು, ನೈಸ್ ರಸ್ತೆ ಜಂಕ್ಷನ್‌ನಿಂದಲೇ ಸರ್ವಿಸ್ ರಸ್ತೆಗೆ ಹೊರಳುವ ವಾಹನಗಳು ಗೊರಗುಂಟೆಪಾಳ್ಯ ಸಿಗ್ನಲ್‌ಗಳನ್ನು ದಾಟಿ ಬರಲು ಗಂಟೆಗಟ್ಟಲೆ ತಿಣುಕಾಡಬೇಕಾದ ಸ್ಥಿತಿ ಇದೆ.

ಬೆಳಿಗ್ಗೆ ಮತ್ತು ಸಂಜೆ ವಾಹನ ದಟ್ಟಣೆ ಹೆಚ್ಚಿರುವ ಸಂದರ್ಭದಲ್ಲಿ ಎಂಟನೇ ಮೈಲಿ, ದಾಸರಹಳ್ಳಿ, ಜಾಲಹಳ್ಳಿ ಕ್ರಾಸ್, ಪೀಣ್ಯ ಜಂಕ್ಷನ್ ದಾಟಲು ಸವಾರರು ಪರದಾಡುತ್ತಿದ್ದಾರೆ. ಪ್ರತಿ ಜಂಕ್ಷನ್ ದಾಟಲು ಕನಿಷ್ಠ 20 ನಿಮಿಷ ಕಾಲ ಹಿಡಿಯುತ್ತಿದೆ.ನಗರದಿಂದ ಹೊರ ಹೋಗುವ ವಾಹನಗಳ ಸ್ಥಿತಿಯೂ ಇದಕ್ಕೆ ಹೊರತಾಗಿಲ್ಲ. ಜಾಲಹಳ್ಳಿ ಕ್ರಾಸ್ ಜಂಕ್ಷನ್‌ನಲ್ಲಿ ಕಿಲೋ ಮೀಟರ್ ಉದ್ದದ ಸಾಲಿನಲ್ಲಿ ನಿಲ್ಲುವುದು ಸವಾರರಿಗೆ ಅನಿವಾರ್ಯವಾಗಿದೆ. ಜಾಲಹಳ್ಳಿ ಕ್ರಾಸ್‌ನಿಂದ ದಾಸರಹಳ್ಳಿ ವೃತ್ತದ ತನಕವೂ ವಾಹನಗಳು ಸಾಲುಗಟ್ಟಿ ನಿಲ್ಲುತ್ತಿವೆ. ಸಂಚಾರ ದಟ್ಟಣೆ ನಿಭಾಯಿಸಲು ಪೊಲೀಸರೂ ಹರಸಾಹಸ ಮುಂದುವರಿಸಿದ್ದಾರೆ.

ಆದಷ್ಟು ಬೇಗ ಕಾಮಗಾರಿ ಪೂರ್ಣಗೊಳಿಸಿ ಮೇಲ್ಸೇತುವೆಯಲ್ಲಿ ವಾಹನ ಸಂಚಾರಕ್ಕೆ ಅನುವು ಮಾಡಿಕೊಡಬೇಕು ಎಂಬುದು ವಾಹನ ಸವಾರರ ಒತ್ತಾಯ.

ಬೆಂಗಳೂರಿನ ಗೊರಗುಂಟೆಪಾಳ್ಯ ನೆಲಮಂಗಲ ನಡುವಿನ ಎಲಿವೆಟೆಡ್ ಕಾರಿಡಾರ್ ಪಿಲ್ಲರ್ ರೋಪ್ ಸರಿಪಡಿಸುತ್ತಿರುವುದು

ಮುಜಾಫರ್ ಅಸ್ಸಾದಿ ಪುಸ್ತಕ ಬಿಡುಗಡೆ

‘ಮತೀಯ ದ್ವೇಷ- ಮೌನ ಸಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮತೀಯ ದ್ವೇಷದ ಕುರಿತು ಹೆಚ್ಚು ಜನರು ಮೌನಕ್ಕೆ ಶರಣಾಗಿರುವುದು ಸರಿಯಲ್ಲ. ಮತೀಯ ದ್ವೇಷದ ಕೃತ್ಯಗಳನ್ನು ಒಕ್ಕೊರಲಿನಿಂದ ವಿರೋಧಿಸುವುದು ಈಗಿನ ತುರ್ತು’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.

ನಗರದ ಗಾಂಧಿ ಭವನದಲ್ಲಿ ಮಂಗಳವಾರ ನಡೆದ ಕಾರ್ಯಕ್ರಮದಲ್ಲಿ ಮೈಸೂರು ವಿಶ್ವವಿದ್ಯಾಲಯದ ಕಲಾ ನಿಕಾಯದ ಡೀನ್ ಪ್ರೊ. ಮುಜಾಫರ್ ಅಸ್ಸಾದಿ ಅವರ ‘ಅಲ್ಪಸಂಖ್ಯಾತರು ಮತ್ತು ಜಾತಿ ವ್ಯವಸ್ಥೆ’ ಕೃತಿ ಬಿಡುಗಡೆ ಮಾಡಿ ಅವರು ಮಾತನಾಡಿದರು. ‘ದೇಶದಲ್ಲಿ ಕಡಿಮೆ ಸಂಖ್ಯೆಯ ಜನರು ದೊಡ್ಡ ಧ್ವನಿಯಲ್ಲಿ ಮತೀಯ ದ್ವೇಷದ ಮಾತುಗಳನ್ನು ಆಡುತ್ತಿದ್ದಾರೆ. ಅವರ ಸದ್ದು ಜೋರಾಗಿದೆ. ಖಂಡಿಸುವವರ ಸಂಖ್ಯೆಯೂ ಕಡಿಮೆ ಇದೆ. ಆದರೆ, ಹೆಚ್ಚಿನ ಸಂಖ್ಯೆಯ ಜನರು ಈ ವಿಷಯದಲ್ಲಿ ಮೌನ ತಾಳಿದ್ದಾರೆ. ಇದು ಒಳ್ಳೆಯ ಬೆಳವಣಿಗೆ ಅಲ್ಲ’ ಎಂದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ ದಾಸ್ ಮಾತನಾಡಿದರು.

ಮುಜಾಫರ್ ಅಸ್ಸಾದಿ ಮಾತನಾಡಿ, ‘ಜಾತಿ ಎಂಬುದು ಅಸ್ಮಿತೆಯ ಕುರುಹು. ಅದು ವಾಸ್ತವವೂ ಹೌದು. ಮುಸ್ಲಿಮರಲ್ಲಿ ಇರುವ ಜಾತಿ ವ್ಯವಸ್ಥೆಯ ಚಿತ್ರಣವನ್ನು ಕಟ್ಟಿಕೊಡುವ ಪ್ರಯತ್ನವನ್ನು ಕೃತಿಯಲ್ಲಿ ಮಾಡಿದ್ದೇನೆ’ ಎಂದರು. ಬಹುರೂಪಿ ಪ್ರಕಾಶನದ ಶ್ರೀಜಾ, ವಿಸ್ತಾರ್ ಟ್ರಸ್ಟ್‌ನ ಡೇವಿಡ್ ಉಪಸ್ಥಿತರಿದ್ದರು.

ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಮುಜಾಫರ್ ಅಸ್ಸಾದಿ, ನ್ಯಾ. ನಾಗ ಮೋಹನದಾಸ್, ಸಿದ್ದರಾಮಯ್ಯ, ಸಿಂಥಿಯಾ ಸ್ಟೀಫನ್ ಇದ್ದಾರೆ –ಪ್ರಜಾವಾಣಿ ಚಿತ್ರ

ಕೃತಿಯ ವಿವರ

ಪ್ರೊ. ಮುಜಾಫರ್ ಅಸ್ಸಾದಿ ಅವರ ‘ಅಲ್ಪಸಂಖ್ಯಾತರು ಮತ್ತು ಜಾತಿ ವ್ಯವಸ್ಥೆ’ ಕೃತಿಯನ್ನು ಬೆಂಗಳೂರಿನ ಬಹುರೂಪಿ ಪ್ರಕಾಶನ ಪ್ರಕಟಿಸಿದೆ. 264 ಪುಟಗಳ ಕೃತಿಯ ಬೆಲೆ ₹ 300. ಕೃತಿ ಖರೀದಿಸುವವರು ದೂರವಾಣಿ ಸಂಖ್ಯೆ 7019182729 ಅಥವಾ ಆನ್‌ಲೈನ್ ಬುಕ್ ಮಳಿಗೆ bahuroopi.in ಸಂಪರ್ಕಿಸಬಹುದು.

ರೈತರಿಂದ ಸುಲಿಗೆ: ಮೂವರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಪಿಎಂಸಿ ಮಾರುಕಟ್ಟೆಗಳಿಗೆ ಬರುವ ರೈತರು ಹಾಗೂ ವರ್ತಕರನ್ನು ಗುರಿಯಾಗಿಸಿಕೊಂಡು ಕಳ್ಳತನ ಮಾಡುತ್ತಿದ್ದ ಮೂವರು ಆರೋಪಿಗಳನ್ನು ಮಾದನಾಯಕನಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಜಾನ್ಸನ್, ರಾಜ ಹಾಗೂ ಸತ್ಯವೇಲು ಬಂಧಿತರು. ಮುಂಜಾನೆ ಸಮಯದಲ್ಲಿ ಎಪಿಎಂಸಿ ಮಾರುಕಟ್ಟೆಗೆ ಬರುತ್ತಿದ್ದ ರೈತರು ಹಾಗೂ ವರ್ತಕರನ್ನು ಮಾರಕಾಸ್ತ್ರಗಳಿಂದ ಬೆದರಿಸುತ್ತಿದ್ದ ಆರೋಪಿಗಳು ಆಭರಣ ಹಾಗೂ ಹಣ ಲಪಟಾಯಿಸಿ ಪರಾರಿಯಾಗುತ್ತಿದ್ದರು. ಇವರ ಕೃತ್ಯಕ್ಕೆ ಸಹಕರಿಸಿದ್ದ ಇನ್ನಿಬ್ಬರು ತಲೆಮರೆಸಿಕೊಂಡಿದ್ದಾರೆ’ ಎಂದು ಪೊಲೀಸರು ಹೇಳಿದ್ದಾರೆ. ‘ಆರೋಪಿಗಳು ಪಿಳ್ಳಳ್ಳಿ ಮಾರುಕಟ್ಟೆಯಲ್ಲಿ ಕಳ್ಳತನಕ್ಕೆ ಸಂಚು ರೂಪಿಸುತ್ತಿದ್ದರು. ಈ ವೇಳೆ ದಾಳಿ ನಡೆಸಿ ಮೂವರನ್ನು ಬಂಧಿಸಲಾಗಿದೆ. ಅವರಿಂದ ಆಟೊ, ಚಾಕು ಹಾಗೂ ಮಚ್ಚು ಜಪ್ತಿ ಮಾಡಲಾಗಿದೆ’ ಎಂದರು.

ಲಂಚ: ಎಎಸ್‌ಐ ಬಂಧನ

ಬೆಂಗಳೂರು: ಉಕ್ಕಿನ ಉತ್ಪನ್ನಗಳ ವ್ಯಾಪಾರಿಯೊಬ್ಬರನ್ನು ನಿರಂತರವಾಗಿ ಪೀಡಿಸಿ ಲಂಚ ಪಡೆಯುತ್ತಿದ್ದ ವೈಟ್‌ಫೀಲ್ಡ್ ಪೊಲೀಸ್ ಠಾಣೆಯ ಸಹಾಯಕ ಸಬ್ ಇನ್‌ಸ್ಪೆಕ್ಟರ್ (ಎಎಸ್‌ಐ) ದೇವರಾಜ್ ಅವರನ್ನು ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ಮಂಗಳವಾರ ಬಂಧಿಸಿದೆ.

ಆರೋಪಿ ಎಎಸ್‌ಐ ಹಿಂದೆ ಯಶವಂತಪುರದ ಆರ್.ಎಂ.ಸಿ. ಯಾರ್ಡ್ ಠಾಣೆಯಲ್ಲಿದ್ದರು. ಆಗ ಬಿದರಹಳ್ಳಿ ಹೋಬಳಿ ಚಿಮ್ಮಸಂದ್ರ ನಿವಾಸಿಯಾದ ವ್ಯಾಪಾರಿಯನ್ನು ತಡೆದು ಉಕ್ಕಿನ ಉತ್ಪನ್ನಗಳ ಕಳ್ಳತನ ಮತ್ತು ಬಿಲ್ ರಹಿತವಾಗಿ ಉತ್ಪನ್ನ ಪೂರೈಸುತ್ತಿರುವ ಆರೋಪದಡಿ ಪ್ರಕರಣ ದಾಖಲಿಸುವುದಾಗಿ ಬೆದರಿಕೆ ಹಾಕಿದ್ದರು. ಆರ್.ಎಂ.ಸಿ. ಯಾರ್ಡ್ ಠಾಣೆಯಲ್ಲಿರುವಾಗಲೇ ವ್ಯಾಪಾರಿಯಿಂದ ನಗದು, ಆನ್‌ಲೈನ್ ಮತ್ತು ಗೂಗಲ್ ಪೇ ಮೂಲಕ ₹ 1.95 ಲಕ್ಷ ಲಂಚ ಪಡೆದಿದ್ದರು ಎಂದು ಎಸಿಬಿ ಅಧಿಕಾರಿಗಳು ತಿಳಿಸಿದ್ದಾರೆ.

ಅಪರಾಧ ಸುದ್ದಿ

ಬೈಕ್‌ಗೆ ಟಿಪ್ಪರ್ ಡಿಕ್ಕಿ: ವಿದ್ಯಾರ್ಥಿನಿ ಸಾವು

ಬೆಂಗಳೂರು: ಬೈಕ್‌ಗೆ ಟಿಪ್ಪರ್ ಡಿಕ್ಕಿಯಾಗಿ ಎಂಜಿನಿಯರಿಂಗ್ ವಿದ್ಯಾರ್ಥಿನಿ ಸಂಜನಾ ಪ್ರಿಯಾ (21) ಮೃತಪಟ್ಟಿದ್ದಾರೆ. ಅಶೋಕನಗರ ಸಂಚಾರಿ ಠಾಣೆ ಪೊಲೀಸರು ಚಾಲಕನನ್ನು ಬಂಧಿಸಿದ್ದು, ಟಿಪ್ಪರ್ ಜಪ್ತಿ ಮಾಡಿದ್ದಾರೆ.

‘ಬೆಳಿಗ್ಗೆ 7 ಗಂಟೆ ಸುಮಾರಿಗೆ ಗರುಡಾ ಮಾಲ್ ಬಳಿ ಅಪಘಾತ ನಡೆದಿದೆ. ಗಂಭೀರವಾಗಿ ಗಾಯಗೊಂಡಿದ್ದ ಸಂಜನಾ, ಚಿಕಿತ್ಸೆಗೆ ಸ್ಪಂದಿಸದೆ ಆಸ್ಪತ್ರೆಯಲ್ಲಿ ಅಸು ನೀಗಿದ್ದಾರೆ. ವಿನಯ್ ಕೈಗೆ ಪೆಟ್ಟಾಗಿದ್ದು, ಅವರು ಚೇತರಿಸಿಕೊಂಡಿದ್ದಾರೆ’ ಎಂದು ಮಾಹಿತಿ ನೀಡಿದರು.

ಆಭರಣಗಳ ಕಳ್ಳನ ಸೆರೆ

ಬೆಂಗಳೂರು: ವ್ಯಕ್ತಿಯೊಬ್ಬರ ಬಳಿ ಇದ್ದ ಚಿನ್ನದ ಆಭರಣಗಳನ್ನು ಕದ್ದು ಬಳಿಕ ಅವುಗಳನ್ನು ಕರಗಿಸಿ ಮಾರಲು ಮುಂದಾಗಿದ್ದ ಮೂವರನ್ನು ಸಿಟಿ ಮಾರುಕಟ್ಟೆ ಠಾಣೆ ಪೊಲೀಸರು ಬಂಧಿಸಿದ್ದಾರೆ. ಅವರಿಂದ ₹4.14 ಲಕ್ಷ ಮೌಲ್ಯದ 92 ಗ್ರಾಂ ಚಿನ್ನದ ಗಟ್ಟಿ ಜಪ್ತಿ ಮಾಡಿದ್ದಾರೆ. ‘ಸೈಯದ್ ಬಾಬಾ ಜಾನ್, ಕಲೀಂ ಖಾನ್ ಹಾಗೂ ಸುರೇಶ್ ಬಂಧಿತರು. 2021ರ ಡಿಸೆಂಬರ್ 21ರಂದು ವ್ಯಕ್ತಿಯೊಬ್ಬರು ಚಿನ್ನದ ಒಡವೆಗಳಿದ್ದ ಬಾಕ್ಸ್‌ವೊಂದನ್ನು ಜೇಬಿನಲ್ಲಿಟ್ಟುಕೊಂಡು ಠಾಣಾ ವ್ಯಾಪ್ತಿಯಲ್ಲಿ ನಡೆದು ಹೋಗುತ್ತಿದ್ದರು. ಜನಸಂದಣಿಯಲ್ಲಿ ಸಾಗುವ ವೇಳೆ ಆರೋಪಿಗಳು ಅದನ್ನು ಕದ್ದಿದ್ದರು. ಡಿಸೆಂಬರ್ 26ರಂದು ಆರೋಪಿಗಳನ್ನು ಬಂಧಿಸಲಾಗಿತ್ತು. ಕದ್ದ ಒಡವೆಗಳನ್ನು ಕರಗಿಸಿ ಮಾರಲು ಮುಂದಾಗಿದ್ದಾಗಿ ಅವರು ವಿಚಾರಣೆ ವೇಳೆ ಒಪ್ಪಿಕೊಂಡಿದ್ದರು’ ಎಂದು ಪೊಲೀಸರು ಹೇಳಿದ್ದಾರೆ.

ಸ್ನೇಹಿತನ ಕೊಲೆ: ಬಂಧನ

ಬೆಂಗಳೂರು: ಸ್ನೇಹಿತನ ಮನೆಗೆ ರಾತ್ರಿ ನುಗ್ಗಿ, ಶಸ್ತ್ರಚಿಕಿತ್ಸೆಗೆ ಬಳಸುವ ಬ್ಲೇಡ್‌ನಿಂದ ಆತನ ಕತ್ತು ಸೀಳಿ ಕೊಲೆ ಮಾಡಿದ್ದ ಪ್ರಕರಣದ ಮತ್ತೊಬ್ಬ ಆರೋಪಿಯನ್ನು ಹಲಸೂರು ಠಾಣೆ ಪೊಲೀಸರು ಬಂಧಿಸಿದ್ದಾರೆ. ‘2021ರ ಡಿಸೆಂಬರ್ 24ರಂದು ಮರ್ಫಿಟೌನ್ ನಿವಾಸಿ ವಿನ್ಸಸ್ ಕೊಲೆ ನಡೆದಿತ್ತು. ಮುಖ್ಯ ಆರೋಪಿ ಸಂತೋಷ್‌ನನ್ನು ಮರುದಿನವೇ ಬಂಧಿಸಲಾಗಿತ್ತು. ಅಜಯ್ ಎಂಬಾತನನ್ನು ಈಗ ಬಂಧಿಸಲಾಗಿದೆ. ಕೃತ್ಯಕ್ಕೆ ಸಹಕರಿಸಿದ್ದ ಮತ್ತಿಬ್ಬರು ತಲೆಮರೆಸಿಕೊಂಡಿದ್ದಾರೆ’ ಎಂದು ಪೊಲೀಸರು ಹೇಳಿದ್ದಾರೆ.

ಬಿಬಿಎಂಪಿ: ಜೆಟ್ ಪ್ರೆಷರ್/ ವಾಷರ್ ಯಂತ್ರ ಖರೀದಿ ಟೆಂಡರ್ ಅಕ್ರಮ?

ಮತ್ತಷ್ಟು ಸಂದೇಹ ಹುಟ್ಟಿಸುವಂತಿದೆ ಸ್ಪಷ್ಟೀಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಕೇಂದ್ರ ವಾಣಿಜ್ಯ ಪ್ರದೇಶದ ರಸ್ತೆ, ಪಾದಚಾರಿ ಮಾರ್ಗಗಳನ್ನು ಸ್ವಚ್ಛಗೊಳಿಸಲು ಜೆಟ್ ಪ್ರೆಷರ್/ ವಾಷರ್ ಯಂತ್ರಗಳ ಖರೀದಿಯ ಟೆಂಡರ್ ಪ್ರಕ್ರಿಯೆಯ ಅಕ್ರಮಗಳ ಕುರಿತು ‘ಪ್ರಜಾವಾಣಿ’ಯ ಭಾನುವಾರದ ಸಂಚಿಕೆಯಲ್ಲಿ ಪ್ರಕಟವಾದ ವಿಶೇಷ ವರದಿಗೆ ಬಿಬಿಎಂಪಿ ಸ್ಪಷ್ಟನೆ ನೀಡಿದೆ. ಈ ಸ್ಪಷ್ಟೀಕರಣವು ಸಂದೇಹಗಳನ್ನು ನಿವಾರಿಸುವ ಬದಲು ಮತ್ತಷ್ಟು ಪ್ರಶ್ನೆಗಳನ್ನು ಹುಟ್ಟುಹಾಕಿದೆ.

‘ಟೆಂಡರ್ ಪ್ರಕ್ರಿಯೆಯನ್ನು ಪಾರದರ್ಶಕವಾಗಿ ನಡೆಸಲಾಗಿದೆ. ಇದಕ್ಕೆ ಬಿಡ್‌ದಾರರಿಂದ ಆಕ್ಷೇಪಣೆ ವ್ಯಕ್ತವಾಗಿಲ್ಲ. ತಾಂತ್ರಿಕ ಮತ್ತು ಆರ್ಥಿಕ ಮೌಲ್ಯಮಾಪನ ಮತ್ತು ದರ ಸಂಧಾನ ಸಮಿತಿ ತೀರ್ಮಾನದ ಪ್ರಕಾರ ಎ.ಎಲ್. ಸತೀಶ್ ಕುಮಾರ್ ಅವರನ್ನು ಯಶಸ್ವಿ ಬಿಡ್‌ದಾರ ಎಂದು ಪರಿಗಣಿಸಲಾಗಿದೆ’ ಎಂದು ಬಿಬಿಎಂಪಿಯ ಕಾರ್ಯಪಾಲಕ ಎಂಜಿನಿಯರ್ ಸ್ಪಷ್ಟನೆ ನೀಡಿದ್ದಾರೆ.

‘ಇದು ಹೊಸ ಯೋಜನೆಯಾಗಿದ್ದು, ಇದಕ್ಕೆ ಯಂತ್ರ ತಯಾರಿಸುವ ಕಂಪನಿ, ನಿರ್ವಹಣೆ ಮಾಡುವ ಕಂಪನಿ ಅಥವಾ ವ್ಯಕ್ತಿ ಜೊತೆಗೂಡಿ ಒಕ್ಕೂಟ (ಕನ್ಸೋರ್ಟಿಯಂ) ಟೆಂಡರ್ ಮಾದರಿಯಲ್ಲಿ ಟೆಂಡರ್ ಆಹ್ವಾನಿಸಲಾಗಿದೆ’ ಎಂದು ಸ್ಪಷ್ಟನೆಯಲ್ಲಿ ಹೇಳಲಾಗಿದೆ. ಆದರೆ, ಟೆಂಡರ್ ಷರತ್ತುಗಳ ಪ್ರಕಾರ (ಸಂಖ್ಯೆ 6) ಯಾವುದೇ ಜಂಟಿ ಸಂಸ್ಥೆಗಳು/ ಕನ್ಸೋರ್ಟಿಯಂಗಳು ಟೆಂಡರ್‌ನಲ್ಲಿ ಭಾಗವಹಿಸುವಂತಿಲ್ಲ. ಈ ಕುರಿತು ವಿವರಣೆ ಕೇಳಿದಾಗ ಸೂಪರಿಂಟೆಂಡಿಂಗ್ ಎಂಜಿನಿಯರ್ (ಕಸ ನಿರ್ವಹಣೆ) ಬಸವರಾಜ ಕಬಾಡೆ ಅವರು, ‘ಈ ಕುರಿತ ಪರಿಷ್ಕೃತ ಟಿಪ್ಪಣಿಯನ್ನು (ಅಡೆಂಡಂ) ವೆಬ್‌ಸೈಟ್‌ನಲ್ಲಿ ಪ್ರಕಟಿಸಿದ್ದೇವೆ’ ಎಂದು ಸಮರ್ಥಿಸಿಕೊಂಡರು. ಆದರೆ, ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಲಭ್ಯವಿರುವ ಪರಿಷ್ಕೃತ ಟಿಪ್ಪಣಿಯಲ್ಲಿ ಎಲ್ಲೂ ‘ಟೆಂಡರ್ ಪ್ರಕ್ರಿಯೆಯಲ್ಲಿ ಕನ್ಸೋರ್ಟಿಯಂಗಳೂ ಭಾಗವಹಿಸಬಹುದು’ ಎಂಬ ತಿದ್ದುಪಡಿಯ ಉಲ್ಲೇಖವಿಲ್ಲ.

‘ಶುಭ್ರ ಬೆಂಗಳೂರು’ ಯೋಜನೆಯಡಿ ₹ 5 ಕೋಟಿಯಷ್ಟೇ ಲಭ್ಯವಿದ್ದರೂ ₹ 12.40 ಕೋಟಿ ವೆಚ್ಚಕ್ಕೆ ಟೆಂಡರ್ ಕರೆದ ಕುರಿತ ಸ್ಪಷ್ಟನೆಯಲ್ಲಿ, ‘₹ 7.81 ಕೋಟಿಗಳಷ್ಟು ವ್ಯತ್ಯಾಸ ಮೊತ್ತವನ್ನು ಬಿಬಿಎಂಪಿ ಬಜೆಟ್‌ನಲ್ಲಿ ಕಸ ನಿರ್ವಹಣೆಗೆ ಮೀಸಲಿಡುವ ₹ 650 ಕೋಟಿವರೆಗಿನ ಇಡುಗಂಟಿನಲ್ಲಿ ಭರಿಸಿ ಮರುಹೊಂದಾಣಿಕೆ ಮಾಡಲು ಮುಖ್ಯ ಆಯುಕ್ತರು ಅನುಮೋದನೆ ನೀಡಿದ್ದಾರೆ’ ಎಂದು ತಿಳಿಸಿದ್ದಾರೆ. ಈ ಇಡುಗಂಟಿನ ಅನುದಾನ ಭರಿಸಲು ಅನುಮೋದನೆ ನೀಡುವ ಅಧಿಕಾರ ಮುಖ್ಯ ಆಯುಕ್ತರಿಗೆ ಇರುವುದಿಲ್ಲ ಎಂಬುದನ್ನು ‘ಪ್ರಜಾವಾಣಿ’ ಬೊಟ್ಟು ಮಾಡಿತ್ತು. ಇದಕ್ಕೆ ಬಿಬಿಎಂಪಿ ಉತ್ತರಿಸಿಲ್ಲ.

‘ಪ್ರಜಾವಾಣಿ’ಯ ವರದಿಯಲ್ಲಿ ಎಲ್ಲೂ ಟೆಂಡರ್ ದಾಖಲೆಗಳನ್ನು ಪ್ರಶ್ನೆ ಮಾಡಿಲ್ಲ. ಅದರ ಷರತ್ತುಗಳನ್ನೇ ಕಡೆಗಣಿಸಿ ಅನರ್ಹರಿಗೆ ಗುತ್ತಿಗೆ ನೀಡುವ ಬಗ್ಗೆಯಷ್ಟೇ ಪ್ರಶ್ನೆಗಳನ್ನು ಎತ್ತಲಾಗಿತ್ತು. ಈ ಬಗ್ಗೆ ಮೌನ ವಹಿಸಲಾಗಿದೆ.

ಪೂರ್ವಾನುಭವವಿಲ್ಲದ ಸಂಸ್ಥೆಯಿಂದ ಯಂತ್ರ ಖರೀದಿ?

‘ದೇಶದ ಮೊಟ್ಟ ಮೊದಲ ಯೋಜನೆ ಇದು. ಪ್ರಷರ್ ಜೆಟ್ ಕ್ಲೀನರ್/ ವಾಷರ್ ಯಂತ್ರಗಳು ಅತ್ಯಂತ ನವನೂತನ ಯಂತ್ರಗಳು. ಅವುಗಳನ್ನು ದೇಶದ ಯಾವುದೇ ಪಾಲಿಕೆಗಳಲ್ಲಿ ಬಳಸಿಲ್ಲ. ಈ ಯಂತ್ರಗಳನ್ನು 26 ಟನ್ ತೂಕದ ಬಿಎಸ್–6 ಮಾದರಿಯ ಟ್ರಕ್‌ನಲ್ಲಿ ಅಳವಡಿಸಿ ಬಳಸಲಾಗುತ್ತದೆ. ಇಂತಹ ಟ್ರಕ್‌ನ ಮಾರುಕಟ್ಟೆ ದರವೇ ₹ 35 ಲಕ್ಷಕ್ಕೂ ಹೆಚ್ಚು ಇದೆ. 10 ಸಾವಿರ ಲೀ ಸಾಮರ್ಥ್ಯದ ತೊಟ್ಟಿಯನ್ನೂ ವಾಹನಕ್ಕೆ ಜೋಡಿಸಬೇಕಿದ್ದು, ಇದಕ್ಕೆ ₹ 15ರಿಂದ 20 ಲಕ್ಷ ವೆಚ್ಚವಾಗುತ್ತದೆ. ವಾಹನಕ್ಕೆ ಹೆಚ್ಚುವರಿ ಎಂಜಿನ್ ಹಾಗೂ ಪ್ರೆಷರ್ ನೋಝಲ್ ಅಳವಡಿಸಬೇಕು. ಈ ಘಟಕವನ್ನು ವಿದೇಶಗಳಿಂದ ತರಿಸಬೇಕು. ಇಂತಹ ಯಂತ್ರವನ್ನು ಕೇವಲ ನೀರನ್ನು ಸಿಂಪಡಿಸುವ ಯಂತ್ರಗಳ ಜೊತೆ ಹೋಲಿಸುವುದು ₹ 3 ಲಕ್ಷದ ಕಾರನ್ನು ₹ 10 ಕೋಟಿ ದರದ ಕಾರಿಗೆ ಹೋಲಿಸಿದಷ್ಟೇ ಅಸಮಂಜಸ’ ಎಂದು ಕಾರ್ಯಪಾಲಕ ಎಂಜಿನಿಯರ್ ಸ್ಪಷ್ಟನೆಯಲ್ಲಿ ತಿಳಿಸಿದ್ದಾರೆ.

ಇದನ್ನು ಒಪ್ಪಿಕೊಂಡಿದ್ದೇ ಆದರೂ, ನೀರನ್ನು ಸಿಂಪಡಿಸುವ ಯಂತ್ರ ಪೂರೈಸಿದ ಸಂಸ್ಥೆಯ ಅನುಭವವನ್ನು ಆಧುನಿಕ ಯಂತ್ರ ಪೂರೈಕೆಯ ಪೂರ್ವಾನುಭವ ಎಂದು ಬಿಬಿಎಂಪಿ ಪರಿಗಣಿಸಿದ್ದೇಕೆ. ಈ ಯಂತ್ರಗಳನ್ನು ದೇಶದ ಯಾವುದೇ ಇತರ ಪಾಲಿಕೆಗಳಲ್ಲಿ ಬಳಸಿಲ್ಲವೆಂದಾದರೆ ದೆಹಲಿಯ ಪಾಲಿಕೆಯಲ್ಲಿನ ಪೂರ್ವಾನುಭವದ ಪ್ರಮಾಣಪತ್ರವನ್ನು ಬಿಬಿಎಂಪಿ ಒಪ್ಪಿಕೊಂಡಿದ್ದೇಕೆ. ಈ ಯಂತ್ರಗಳನ್ನು ಸರಬರಾಜು ಅಥವಾ ನಿರ್ವಹಣೆ ಮಾಡಿಯೇ ಇರದ ಸಂಸ್ಥೆಯಿಂದ ಈ ಯಂತ್ರಗಳನ್ನು ಖರೀದಿಸಲಾಗುತ್ತಿದೆಯೇ ಎಂಬ ಸಂದೇಹವೂ ಮೂಡಿದೆ.

ಗುತ್ತಿಗೆದಾರರು ಯಂತ್ರದ ಅಧಿಕೃತ ಮಾರಾಟಗಾರರೇ?

ಯಂತ್ರಗಳ ಅಧಿಕೃತ ಮಾರಾಟಗಾರ ಎಂಬ ನೆಲೆಯಲ್ಲಿ ಗುತ್ತಿಗೆದಾರ ಎ.ಎಲ್ ಸತೀಶ್ ಕುಮಾರ್ ಅವರನ್ನು ಆರ್ಥಿಕ ಬಿಡ್‌ನಲ್ಲಿ ಅರ್ಹರೆಂದು ಬಿಬಿಎಂಪಿ ಪರಿಗಣಿಸಿದೆ. ‘ಈ ಯಂತ್ರಗಳ ಪೂರೈಕೆದಾರ ಸಂಸ್ಥೆ ಎಂದು ಗುರುತಿಸಲಾದ ಕ್ವಾಲಿಟಿ ಎನ್ವಿರೊ ಎಂಜಿನಿಯರ್ಸ್ ಸಂಸ್ಥೆಯ ಜೊತೆ ಒಪ್ಪಂದ ಮಾಡಿಕೊಂಡಿದ್ದು, ಅದರ ಪ್ರತಿಗಳನ್ನು ಸಲ್ಲಿಸಿದ್ದಾರೆ ಎಂದು ಬಿಬಿಎಂಪಿಯು ಸ್ಪಷ್ಟನೆ ನೀಡಿದೆ. ಆದರೆ ಈ ದಾಖಲೆಗಳು ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಲಭ್ಯವಿಲ್ಲ. ಗುತ್ತಿಗೆದಾರರು ಈ ಯಂತ್ರಗಳ ಅಧಿಕೃತ ಮಾರಾಟಗಾರ ಹೌದಾದರೆ ಅವರು ಯಾವುದಾದರೂ ಸಂಸ್ಥೆ/ ವ್ಯಕ್ತಿಗೆ ಎಷ್ಟು ಯಂತ್ರಗಳನ್ನು ಪೂರೈಕೆ ಮಾಡಿದ್ದಾರೆ ಎಂಬುದು ಪ್ರಶ್ನೆ.

ಚಿತ್ರಾವಳಿ

ಮೇಕೆದಾಟು ಕುಡಿಯುವ ನೀರಿನ ಯೋಜನೆಗಾಗಿ ಹಮ್ಮಿಕೊಂಡಿರುವ ಪಾದಯಾತ್ರೆ ಜಾಗೃತಿ ಅಭಿಯಾನಕ್ಕೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಮತ್ತು ಕಾರ್ಯಾಧ್ಯಕ್ಷ ರಾಮಲಿಂಗಾರೆಡ್ಡಿ ಚಾಲನೆ ನೀಡಿದರು. ಮುಖಂಡ ಎಚ್.ಎಂ. ರೇವಣ್ಣ, ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಅಹಮ್ಮದ್, ಮುಖಂಡರಾದ ಜಿ.ಜನಾರ್ದನ್, ಎಸ್. ಮನೋಹರ್ ಇದ್ದರು.

ಬ್ಯಾಟರಾಯನಪುರ ಕ್ಷೇತ್ರದ ವಿದ್ಯಾರಣ್ಯಪುರ ವಾರ್ಡ್ ವ್ಯಾಪ್ತಿಯ ಚಾಮುಂಡೇಶ್ವರಿ ದೇವಸ್ಥಾನ ರಸ್ತೆ ಮತ್ತು ಮುನಿಬೈರಪ್ಪ ಬಡಾವಣೆಯಲ್ಲಿ ₹40 ಲಕ್ಷ ವೆಚ್ಚದಲ್ಲಿ ಕೈಗೊಂಡಿರುವ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಕೃಷ್ಣಬೈರೇಗೌಡ ಚಾಲನೆ ನೀಡಿದರು. ಕಾಂಗ್ರೆಸ್ ಮುಖಂಡರಾದ ಎಂ.ಜಯಗೋಪಾಲಗೌಡ, ಎನ್.ಎನ್. ಶ್ರೀನಿವಾಸಯ್ಯ, ವಿ. ಹರಿ, ಆರ್.ಮಂಜುನಾಥ್, ಗೋಪಾಲಕೃಷ್ಣ, ಮಲ್ಯಾದ್ರಿ, ಉಮೇಶ್ ಇತರರು ಇದ್ದರು.

ಸಮಯಕ್ಕೆ ಸರಿಯಾಗಿ ಬಸ್ ಬಾರದೆ ಆಗುತ್ತಿರುವ ಸಮಸ್ಯೆ ಸರಿಪಡಿಸುವಂತೆ ಒತ್ತಾಯಿಸಿ ವಿದ್ಯಾರ್ಥಿಗಳು ದಾಬಸ್‌ಪೇಟೆಯ ಮುದ್ದಲಿಂಗನಹಳ್ಳಿ ಗೇಟ್ ಬಳಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಕೆಎಸ್‌ಆರ್‌ಟಿಸಿ ಬಸ್‌ಗಳ ಸಂಚಾರ ತಡೆದು ಮಂಗಳವಾರ ಪ್ರತಿಭಟನೆ ನಡೆಸಿದರು.

ಅತಿಥಿ ಉಪನ್ಯಾಸಕರ ಬೇಡಿಕೆ ಬೆಂಬಲಿಸಿ ಪ್ರತಿಭಟನೆ

ಬೆಂಗಳೂರು: ಅತಿಥಿ ಉಪನ್ಯಾಸಕರ ನ್ಯಾಯಯುತ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಎಐಡಿಎಸ್‌ಒ ಜಿಲ್ಲಾ ಸಮಿತಿ ನೇತೃತ್ವದಲ್ಲಿ ನೂರಾರು ವಿದ್ಯಾರ್ಥಿಗಳು ಸ್ವಾತಂತ್ರ್ಯ ಉದ್ಯಾನದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದರು.

‘ಸಮಾನ ಕೆಲಸಕ್ಕೆ ಸಮಾನ ವೇತನ ಜಾರಿಗೊಳಿಸಿ’, ‘ರಾಜ್ಯದಲ್ಲಿನ ಶೈಕ್ಷಣಿಕ ಗೊಂದಲ ಬಗೆಹರಿಸಿ’, ‘ಹೋರಾಟನಿರತ ಅತಿಥಿ ಉಪನ್ಯಾಸಕರೇ ನಿಮ್ಮೊಂದಿಗೆ ನಾವಿದ್ದೇವೆ’ ಎಂಬ ಬರಹಗಳುಳ್ಳ ಫಲಕಗಳನ್ನು ಹಿಡಿದಿದ್ದ ಪ್ರತಿಭಟನಕಾರರು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದರು.

ಎಐಡಿಎಸ್‌ಒ ಅಖಿಲ ಭಾರತ ಘಟಕದ ಅಧ್ಯಕ್ಷ ವಿ.ಎನ್.ರಾಜಶೇಖರ್, ‘ಬೇಡಿಕೆಗಳನ್ನು ಈಡೇರಿಸುವಂತೆ ಉಪನ್ಯಾಸಕರು ಶಿಕ್ಷಣ ಸಚಿವರ ಬಳಿ ಮನವಿ ಮಾಡಿದ್ದರು. ಅದಕ್ಕೆ ಸಚಿವರು ‘ಬೇಕಾದರೆ ಕೆಲಸ ಮಾಡಿ, ಇಲ್ಲವಾದರೆ ಬಿಟ್ಟು ಹೋಗಿ’ ಎಂದು ದರ್ಪದಿಂದ ಹೇಳಿದ್ದಾರೆ. ಅವರ ವರ್ತನೆ ಹಾಗೂ ಹೇಳಿಕೆ ಖಂಡನಾರ್ಹ’ ಎಂದು ಕಿಡಿಕಾರಿದರು.

ರಾಜ್ಯ ಘಟಕದ ಕಾರ್ಯದರ್ಶಿ ಅಜಯ್ ಕಾಮತ್, ‘ಅತಿಥಿ ಉಪನ್ಯಾಸಕರ ಪ್ರತಿಭಟನೆಯಿಂದಾಗಿ ತರಗತಿಗಳು ನಡೆಯುತ್ತಿಲ್ಲ. ಇದರಿಂದ ವಿದ್ಯಾರ್ಥಿಗಳ ಕಲಿಕೆಗೆ ತೊಂದರೆಯಾಗುತ್ತಿದೆ. ಲಾಕ್‌ಡೌನ್ ಸಮಯದಲ್ಲಿ ಶಿಕ್ಷಕರು ಸಂಬಳವಿಲ್ಲದೆ ಆನ್‌ಲೈನ್ ತರಗತಿಗಳನ್ನು ನಡೆಸಿದ್ದಾರೆ. ಅವರ ಸೇವೆ ಗಮನದಲ್ಲಿಟ್ಟುಕೊಂಡು ಸರ್ಕಾರವು ಅವರ ಬೇಡಿಕೆಗಳನ್ನು ಈಡೇರಿಸಬೇಕು’ ಎಂದು ಆಗ್ರಹಿಸಿದರು.

ಬೆಂಗಳೂರು ಜಿಲ್ಲಾ ಘಟಕದ ಅಧ್ಯಕ್ಷ ಅಭಯಾ ದಿವಾಕರ್, ಉಪಾಧ್ಯಕ್ಷ ಅಪೂರ್ವ, ಕಾರ್ಯದರ್ಶಿ ಕಲ್ಯಾಣ್, ಖಜಾಂಚಿ ವಿನಯ್ ಚಂದ್ರ, ಕಿರಣ್, ಶಾಜಿಯಾ ಇದ್ದರು.

ಬಿಬಿಎಂಪಿ: ಮೇಲ್ಮಟ್ಟದ ಫೈಬರ್ ಕೇಬಲ್ ತೆರವಿಗೆ ಆಕ್ಷೇಪ

ನವದೆಹಲಿ: ಮೇಲ್ಛಾವಣಿ ಮೇಲಿಂದ ಹಾದುಹೋಗುವ ಆಪ್ಟಿಕಲ್ ಫೈಬರ್ ಕೇಬಲ್‌ಗಳನ್ನು ತೆರವುಗೊಳಿಸುವ ಅಭಿಯಾನವನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಹಮ್ಮಿಕೊಂಡಿದೆ. ಈ ನಡೆಯನ್ನು ಖಂಡಿಸಿರುವ ಸೆಲ್ಯುಲಾರ್ ಆಪರೇಟರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ (ಸಿಒಎಐ), ಈ ಅಭಿಯಾನದಿಂದ ಬೆಂಗಳೂರಿನ ದೂರಸಂಪರ್ಕ ಸೇವೆಗೆ ಅಡ್ಡಿ ಉಂಟಾಗಲಿದೆ’ ಎಂದು ಹೇಳಿದೆ.

‘ಇದು ಕೇವಲ ಟೆಲಿಕಾಂ ಸೇವೆ ಪೂರೈಕೆದಾರರು ಮಾತ್ರವಲ್ಲದೇ, ಸಾರ್ವಜನಿಕರಲ್ಲೂ ಭೀತಿಯನ್ನು ಸೃಷ್ಟಿ ಮಾಡಬಹುದು. ಈ ಕ್ರಮವು ಇಂಟರ್‌ನೆಟ್ ಸೇವೆಯ ಮೇಲೆ ಪರಿಣಾಮ ಬೀರಲಿದೆ. ಪ್ರಮುಖವಾಗಿ ಐಟಿ ಸಂಸ್ಥೆಗಳು ತೊಂದರೆಗೊಳಗಾಗಲಿವೆ. ಕೋವಿಡ್ ಪರಿಸ್ಥಿತಿಯಲ್ಲಿ ಬಹುತೇಕ ಸಂಸ್ಥೆಗಳ ಉದ್ಯೋಗಿಗಳು ಮನೆಯಿಂದಲೇ ಕೆಲಸ ಮಾಡುತ್ತಿದ್ದಾರೆ. ನೆಲದಡಿಯಿಂದ ಫೈಬರ್ ಸೇವೆಯನ್ನು ಕಲ್ಪಿಸಲು ಸಂಸ್ಥೆಗಳು ಶ್ರಮಿಸುತ್ತಿವೆ. ಹಾಗಾಗಿ ಕೇಬಲ್ ತೆರವಿಗೆ ಸಂಬಂಧಿಸಿದಂತೆ ಯಾವುದೇ ಏಕಪಕ್ಷೀಯ ಕ್ರಮ ಕೈಗೊಳ್ಳಬಾರದು’ ಎಂದು ಸಿಒಎಐನ ವ್ಯವಸ್ಥಾಪಕ ನಿರ್ದೇಶಕ ಲೆಫ್ಟಿನೆಂಟ್ ಜನರಲ್ ಎಸ್. ಪಿ ಕೊಚ್ಚಾರ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

‘ಈ ಬಗ್ಗೆ ಟೆಲಿಕಾಂ ಕಂಪನಿಗಳಿಗೆ ಮುಂಚಿತವಾಗಿ ತಿಳಿಸದೆಯೇ ಅಭಿಯಾನವನ್ನು ಪ್ರಾರಂಭಿಸಲಾಗಿದೆ. ಕಗ್ಗದಾಸಪುರ, ಯಲಹಂಕ ವಲಯ ಮತ್ತು ಮಹದೇವಪುರ ವಲಯ ಸೇರಿದಂತೆ ನಗರದ ಹಲವೆಡೆ ಈ ಅಭಿಯಾನವನ್ನು ನಡೆಸಲಾಗುತ್ತಿದೆ. ಫೈಬರ್ ಸಂಪರ್ಕವನ್ನು ಕಡಿತಗೊಳಿಸುವುದರಿಂದ ಡಿಜಿಟಲ್ ಬೆಂಗಳೂರು ಯೋಜನೆಗೆ ಬಹಳ ತೊಂದರೆಯಾಗಲಿದೆ’ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಸಂಸದ ಡಿ.ಕೆ.ಸುರೇಶ್ ಮನೆಗೆ ಮುತ್ತಿಗೆ ಯತ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಸದ ಡಿ.ಕೆ.ಸುರೇಶ್ ಅವರು ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ಮೇಲೆ ಹಲ್ಲೆಗೆ ಯತ್ನಿಸಿದ್ದಾರೆ ಎಂದು ಆರೋಪಿಸಿ ಬಿಜೆಪಿ ಯುವ ಮೋರ್ಚಾ ಕಾರ್ಯಕರ್ತರು ಸದಾಶಿವನಗರದಲ್ಲಿರುವ ಡಿ.ಕೆ.ಸುರೇಶ್ ಮನೆಗೆ ಮುತ್ತಿಗೆ ಹಾಕಲು ಯತ್ನಿಸಿದರು.

‘ರಾಮನಗರದಲ್ಲಿ ನಡೆದಿದ್ದ ಸಮಾರಂಭದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭಾಗವಹಿಸಿದ್ದರು. ಅವರ ಎದುರಲ್ಲೇ ಸುರೇಶ್ ಅವರು ಅಮಾನವೀಯವಾಗಿ ವರ್ತಿಸಿದ್ದಾರೆ. ಇದು ಅವರ ಗೂಂಡಾ ಪ್ರವೃತ್ತಿಯನ್ನು ಬಿಂಬಿಸುತ್ತದೆ’ ಎಂದು ಪ್ರತಿಭಟನಕಾರರು ಆಕ್ರೋಶ ವ್ಯಕ್ತಪಡಿಸಿದರು.

‘ವಿಧಾನ ಪರಿಷತ್ ಸದಸ್ಯ ಎಸ್.ರವಿ ಅವರು ವೇದಿಕೆಯ ಮೇಲಿದ್ದ ಮೈಕ್ ಕಿತ್ತೆಸೆದಿರುವುದು ಕೂಡ ಖಂಡನಾರ್ಹ. ಆ ಮೂಲಕ ಅವರು ಸುರೇಶ್ ಅವರ ಗೂಂಡಾ ವರ್ತನೆಗೆ ಬೆಂಬಲ ನೀಡಿದ್ದಾರೆ. ಹೀಗಾಗಿ ಇಬ್ಬರ ಮೇಲೂ ಕಾನೂನು ಕ್ರಮ ಜರುಗಿಸಬೇಕು’ ಎಂದು ಒತ್ತಾಯಿಸಿದರು.

‘ಕಾಂಗ್ರೆಸ್ ನಾಯಕರ ಗೂಂಡಾ ವರ್ತನೆಯನ್ನು ಖಂಡಿಸಿ ಮುಂದಿನ ದಿನಗಳಲ್ಲಿ ರಾಮನಗರ ಚಲೋ ಹಮ್ಮಿಕೊಳ್ಳಲಿದ್ದೇವೆ’ ಎಂದು ಬೆಂಗಳೂರು ಉತ್ತರ ಜಿಲ್ಲೆಯ ಯುವ ಮೋರ್ಚಾ ಅಧ್ಯಕ್ಷ ಪ್ರಶಾಂತ್ ಗೌಡ ಹೇಳಿದರು.

ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹಾಗೂ ಸಂಸದ ಡಿ.ಕೆ.ಸುರೇಶ್ ವಿರುದ್ಧ ಘೋಷಣೆ ಕೂಗಿದ ಕಾರ್ಯಕರ್ತರು, ಬ್ಯಾರಿಕೇಡ್‌ಗಳನ್ನು ತಳ್ಳಿ ಮನೆಗೆ ಮುತ್ತಿಗೆ ಹಾಕಲು ಮುಂದಾದರು. ಮುಂಜಾಗ್ರತಾ ಕ್ರಮವಾಗಿ ಪೊಲೀಸರು ಪ್ರತಿಭಟನಕಾರರನ್ನು ಬಂಧಿಸಿ ಬಳಿಕ ಬಿಡುಗಡೆಗೊಳಿಸಿದರು.

ಯುವ ಮೋರ್ಚಾ ಸಂಘಟನಾ ಕಾರ್ಯದರ್ಶಿ ದಶರಥ್, ರಾಜ್ಯ ಕೋಶಾಧ್ಯಕ್ಷ ಅನಿಲ್ ಶೆಟ್ಟಿ, ರಾಜ್ಯ ಕಾರ್ಯಾಲಯ ಕಾರ್ಯದರ್ಶಿ ಎಸ್. ವಿ.ವಿನೋದ್‌ಕುಮಾರ್, ಅಭಿಲಾಷ್ ರೆಡ್ಡಿ (ಬೆಂಗಳೂರು ಕೇಂದ್ರ ಜಿಲ್ಲೆ) ಮತ್ತು ಪುನೀತ್ ರೆಡ್ಡಿ (ಬೆಂಗಳೂರು ದಕ್ಷಿಣ ಜಿಲ್ಲೆ) ಇದ್ದರು.

ಡಿ.ಕೆ.ಸುರೇಶ್ ಮನೆಗೆ ಮುತ್ತಿಗೆ ಹಾಕಲು ಯತ್ನಿಸಿದ ಬಿಜೆಪಿ ಯುವ ಮೋರ್ಚಾ ಕಾರ್ಯಕರ್ತರನ್ನು ಪೊಲೀಸರು ತಡೆದರು–ಪ್ರಜಾವಾಣಿ ಚಿತ್ರ

‘ಗಂಡಸುತನಕ್ಕೆ ಸವಾಲು: ಸುಮ್ಮನಿರಲು ಸಾಧ್ಯವೇ?’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಾವು ಬಿಜೆಪಿಯವರು, ನಾವು ಮಾಡುವುದೇ ಹೀಗೆ. ಗಂಡಸಾದವರು ಬನ್ನಿ’ ಎಂದು ಮುಖ್ಯಮಂತ್ರಿಯ ಮುಂದೆ ಒಬ್ಬ ಮಂತ್ರಿ ಅನವಶ್ಯಕವಾಗಿ ಸವಾಲು ಹಾಕಿದಾಗ ಅದನ್ನು ನೋಡಿಕೊಂಡು ಸುಮ್ಮನಿರಲು ಸಾಧ್ಯವೇ’ ಎಂದು ಸಂಸದ ಡಿ.ಕೆ. ಸುರೇಶ್ ಪ್ರಶ್ನಿಸಿದರು.

ರಾಮನಗರದಲ್ಲಿ ಸೋಮವಾರ ನಡೆದ ಘಟನೆಯ ಕುರಿತಂತೆ ಮಂಗಳವಾರ ಪ್ರತಿಕ್ರಿಯಿಸಿದ ಅವರು, ‘ಮುಖ್ಯಮಂತ್ರಿ ಮತ್ತು ಆ ಕ್ಷೇತ್ರದ ಶಾಸಕಿ ಅನಿತಾ ಕುಮಾರಸ್ವಾಮಿ ಅವರ ಮುಂದೆಯೇ ಸಚಿವ ಅಶ್ವತ್ಥನಾರಾಯಣ ಈ ರೀತಿ ಮಾತನಾಡಿದ್ದು ಸರಿಯೇ’ ಎಂದೂ ಪ್ರಶ್ನಿಸಿದರು. ‘ಭಾಷಣದಲ್ಲಿ ಸಚಿವರು ಬಳಸುತ್ತಿರುವ ಭಾಷೆ, ಶೈಲಿ ಸರಿಯಿಲ್ಲ. ಸಾಕು ನಿಲ್ಲಿಸಿ ಎಂದು ಸ್ವತಃ ಮುಖ್ಯಮಂತ್ರಿ ಸೂಚಿಸಿದರೂ ಅವರು ಆ ರೀತಿ ಮಾತನಾಡಿದ್ದು ಎಷ್ಟು ಸರಿ? ಮಾಜಿ ಉಪ ಮುಖ್ಯಮಂತ್ರಿ, ಹಾಲಿ ಉನ್ನತ ಶಿಕ್ಷಣ ಸಚಿವರಾಗಿ ಅವರು, ತಮ್ಮ ಮಾತು, ವರ್ತನೆಯಿಂದ ಯುವ ಸಮುದಾಯಕ್ಕೆ ಅಪಮಾನ ಮಾಡಿದ್ದಾರೆ’ ಎಂದರು.

‘ಇದು ನನಗೆ ಮಾತ್ರ ಹಾಕಿದ ಸವಾಲು ಅಲ್ಲ. ಇಡೀ ರಾಮನಗರ ಜಿಲ್ಲೆಯ ಜನರಿಗೆ ಹಾಕಿದ ಸವಾಲು. ಸಂವಿಧಾನ ಶಿಲ್ಪಿ ಅಂಬೇಡ್ಕರ್, ನಾಡಪ್ರಭು ಕೆಂಪೇಗೌಡರಿಗೆ ಮಾಡಿದ ಅಪಮಾನ. ಸಚಿವರು ರಾಮನಗರದ ಸ್ವಾಭಿಮಾನ ಕೆಣಕುವ ಪ್ರಯತ್ನ ಮಾಡಿದ್ದಾರೆ. ಆವೇಶ, ತೋಳ್ಬಲ, ಗಂಡಸ್ತನದ ಮಾತು ಸಚಿವರ ಬಾಯಲ್ಲಿ ಯಾಕೆ ಬರುತ್ತದೆ ಎಂದು ಮಾಧ್ಯಮಗಳು, ಬಿಜೆಪಿಯ ರಾಷ್ಟ್ರೀಯ ನಾಯಕರು, ರಾಜ್ಯ ನಾಯಕರು ಹೇಳಬೇಕು’ ಎಂದರು.

‘ಕಾಂಗ್ರೆಸ್ ಸಂಸ್ಕೃತಿ ಬಗ್ಗೆ ಮಾತನಾಡಿರುವ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಕಟೀಲ್, ಗಂಡಸುತನ ಇದೆಯಾ ಎಂದು ಕರೆಯುವುದು ಬಿಜೆಪಿ ಸಂಸ್ಕೃತಿಯಾ, ಸಂಸ್ಕಾರವೇ ಎಂದು ಸ್ಪಷ್ಟಪಡಿಸಬೇಕು’ ಎಂದರು.

ನಾನೂ ಕೆಂಪೇಗೌಡರ ನೆಲದವನೇ: ಅಶ್ವತ್ಥನಾರಾಯಣ

‘ನಾಡಪ್ರಭು ಕೆಂಪೇಗೌಡರ ನೆಲವಾದ ಮಾಗಡಿಯ ಚಿಕ್ಕಕಲ್ಯ ಗ್ರಾಮದಲ್ಲೇ ನನ್ನ ಕಂದಾಯ ದಾಖಲೆಗಳಿವೆ. ರಾಮನಗರ ಜಿಲ್ಲೆಯ ಜೊತೆ ನನಗೆ ಡಿಕೆ ಸಹೋದರರಿಗಿಂತಲೂ ದೀರ್ಘ ಇತಿಹಾಸವಿದೆ’ ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಪ್ರತಿಪಾದಿಸಿದರು.

‘ರಾಮನಗರಕ್ಕೂ ನನಗೂ ಏನು ಸಂಬಂಧ’ ಡಿ.ಕೆ. ಶಿವಕುಮಾರ್ ಕೇಳಿದ್ದಾರೆ. ಚಿಕ್ಕಕಲ್ಯ ನಾರಾಯಣಪ್ಪ ಅಶ್ವತ್ಥನಾರಾಯಣ ಎನ್ನುವ ನನ್ನ ಪೂರ್ಣ ಹೆಸರನ್ನು ನೆನಪಿಸುತ್ತೇನೆ. ಇಂತಹ ಕನಿಷ್ಠ ಪರಿಜ್ಞಾನವೂ ಇಲ್ಲದ ವ್ಯಕ್ತಿ ಕೆಪಿಸಿಸಿ ಅಧ್ಯಕ್ಷರಾಗಿರುವುದು ನಾಚಿಕೆಗೇಡಿನ ಸಂಗತಿ’ ಎಂದು ಅವರು ಹೇಳಿದರು.

‘ರಾಮನಗರದ ಸರ್ವತೋಮುಖ ಅಭಿವೃದ್ಧಿಗೆ ಬಿಜೆಪಿ ಸರ್ಕಾರ ಬದ್ಧ. ಕಾಂಗ್ರೆಸ್ ನಾಯಕರ ಧಮಕಿ, ದಬ್ಬಾಳಿಕೆಗಳಿಗೆ ನಮ್ಮ ಅಭಿವೃದ್ಧಿ ಯೋಜನೆಗಳೇ ಉತ್ತರ’ ಎಂದರು.

‘ಕಾರ್ಯಕ್ರಮದ ಆರಂಭದಿಂದಲೂ ಡಿ.ಕೆ ಸಹೋದರರ ಹಿಂಬಾಲಕರು ಕೆಣಕಲು ಆರಂಭಿಸಿದ್ದರು. ಬಳಿಕ ಗಲಾಟೆ ಮಾಡಿದರು. ಮುಖ್ಯಮಂತ್ರಿಯವರು ಇದ್ದ ಸಭೆಯಲ್ಲಿ ಹೇಗೆ ನಡೆದುಕೊಳ್ಳಬೇಕು ಎಂಬ ವಿವೇಚನೆಯೇ ಇವರಿಗಿಲ್ಲ. ಹೀಗಾಗಿ ಅವರ ಹಿಂಬಾಲಕರು ಸೇರಿ ಗಲಾಟೆ ಮಾಡಿದರು. ಈ ಸಹೋದರರಿಗೆ ಅಭದ್ರತೆ ಕಾಡಿರಬಹುದು. ಅದಕ್ಕೆಂದೇ ಈ ರೀತಿ ಮಾಡಿದ್ದಾರೆ’ ಎಂದರು.

‘ಡಿ.ಕೆ.ಶಿವಕುಮಾರ್ ಅವರಂತ ಭಂಡರಿಗೆ ನೇರವಾಗಿಯೇ ಹೇಳುತ್ತೇನೆ. ನಿಮ್ಮ ಪುಂಡಾಟಿಕೆಯನ್ನು ನಾವು ಸಹಿಸುವುದಿಲ್ಲ. ನಮ್ಮ ಸರ್ಕಾರ ಮಾಡಿದ ಕೆಲಸಗಳನ್ನು ಹೇಳಿಕೊಂಡಿದ್ದೇವೆ. ನಿಮ್ಮನ್ನು ಕೇಳಿ ಮಾತನಾಡುವ ಅಗತ್ಯವಿಲ್ಲ’ ಎಂದರು.

ಡಿಪಿಎಆರ್‌ನಿಂದ ಲೋಕೋಪಯೋಗಿ ಇಲಾಖೆಗೆ ಹಸ್ತಾಂತರ

ಸಿಇ, ಪ್ರಧಾನ ಎಂಜಿನಿಯರ್ ಬಡ್ತಿ ಅತಂತ್ರ?

● ರಾಜೇಶ್ ರೈ ಚಟ್ಲ

ಬೆಂಗಳೂರು: ಪ್ರಧಾನ ಎಂಜಿನಿಯರ್ ಮತ್ತು ಮುಖ್ಯ ಎಂಜಿನಿಯರ್ (ಸಿಇ) ಹುದ್ದೆಗೆ ಬಡ್ತಿ ಮತ್ತು ವರ್ಗಾವಣೆ ಪ್ರಕ್ರಿಯೆಯ ನಿರ್ವಹಣೆಯನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಡಿಪಿಎಆರ್) ಬದಲು ಆಯಾ ಇಲಾಖೆಗಳಿಗೆ ವಹಿಸಿರುವ ರಾಜ್ಯ ಸರ್ಕಾರ ನಡೆಗೆ ಅಧಿಕಾರಿಗಳ ವಲಯದಲ್ಲಿ ಆಕ್ಷೇಪ ವ್ಯಕ್ತವಾಗಿದೆ.

ಬಡ್ತಿ, ವರ್ಗಾವಣೆ ಪ್ರಕ್ರಿಯೆಯ ನಿರ್ವಹಣೆ ಹೊಣೆಯನ್ನು ಲೋಕೋಪಯೋಗಿ, ಜಲಸಂಪನ್ಮೂಲ, ಗ್ರಾಮೀಣಾಭಿವೃದ್ಧಿ ಇಲಾಖೆಗೆ ವಹಿಸಲು 'ಕರ್ನಾಟಕ ಸರ್ಕಾರದ (ಕೆಲಸಗಳ ಹಂಚಿಕೆ) ನಿಯಮಗಳು–1977' ಕ್ಕೆ ತಿದ್ದುಪಡಿ ತರಲಾಗಿದೆ. ಇದರಿಂದ ಸೂಪರಿಂಟೆಂಡಿಂಗ್ ಎಂಜಿನಿಯರ್(ಎಸ್‌ಇ) ಹುದ್ದೆಯಿಂದ ಮುಖ್ಯ ಎಂಜಿನಿಯರ್ ಹುದ್ದೆಗೆ ಮತ್ತು ಅಲ್ಲಿಂದ ಪ್ರಧಾನ ಎಂಜಿನಿಯರ್ ಹುದ್ದೆಗೆ ಬಡ್ತಿ ಸ್ಥಗಿತವಾಗುವ ಸಾಧ್ಯತೆ ಇದೆ ಎಂದು ಎಂಜಿನಿಯರ್‌ಗಳು ಆತಂಕ ವ್ಯಕ್ತಪಡಿಸಿದ್ದಾರೆ.

ಅಲ್ಲದೇ, ಈ ಬಗ್ಗೆ ಮುಖ್ಯ ಕಾರ್ಯದರ್ಶಿಗೆ ಮನವಿ ಸಲ್ಲಿಸಿರುವ ಸೂಪರಿಂಟೆಂಡಿಂಗ್, ಮುಖ್ಯ ಮತ್ತು ಪ್ರಧಾನ ಎಂಜಿನಿಯರ್‌ಗಳು, 'ಇಲಾಖಾ ಮುಖ್ಯಸ್ಥರ ಶ್ರೇಣಿಯ ಈ ಹುದ್ದೆಗಳಿಗೆ ಬಡ್ತಿ ಮತ್ತು ವರ್ಗಾವಣೆಯನ್ನು 1977ರಿಂದಲೂ ಡಿಪಿಎಆರ್ ವತಿಯಿಂದಲೇ ನಡೆಸುತ್ತಿದ್ದು, ಅದೇ ವ್ಯವಸ್ಥೆ ಮುಂದುವರಿಸಬೇಕು' ಎಂದು ಮನವಿ ಮಾಡಿದ್ದಾರೆ.

ನಿಯಮ ತಿದ್ದುಪಡಿಯಾದ ಬೆನ್ನಲ್ಲೇ ಲೋಕೋಪಯೋಗಿ, ಜಲಸಂಪನ್ಮೂಲ, ಗ್ರಾಮೀಣಾಭಿವೃದ್ಧಿ ಇಲಾಖೆ ಹಾಗೂ ಅನ್ಯ ಇಲಾಖೆಗಳಲ್ಲಿ ನಿಯೋಜನೆ ಮೇಲೆ ಕಾರ್ಯನಿರ್ವಹಿಸುತ್ತಿರುವ ಸೂಪರಿಂಟೆಂಡಿಂಗ್ ಎಂಜಿನಿಯರ್‌ಗಳು ಮತ್ತು ಮುಖ್ಯ ಎಂಜಿನಿಯರ್‌ಗಳಿಗೆ ಸಂಬಂಧಿಸಿದ ಎಲ್ಲ ಕಡತಗಳನ್ನು ಲೋಕೋಪಯೋಗಿ ಇಲಾಖೆಗೆ ಡಿಪಿಎಆರ್ ಹಸ್ತಾಂತರಿಸಿದೆ.

ಲೋಕೋಪಯೋಗಿ, ಜಲಸಂಪನ್ಮೂಲ ಮತ್ತು ಗ್ರಾಮೀಣಾಭಿವೃದ್ಧಿ ಇಲಾಖೆಗಳನ್ನು ಪ್ರತ್ಯೇಕಗೊಳಿಸುವ ಪ್ರಕ್ರಿಯೆ ನಡೆಯುತ್ತಿದೆ. ಈ ಇಲಾಖೆಗಳಲ್ಲಿ ಕಿರಿಯ ಎಂಜಿನಿಯರ್‌ಗಳಿಂದ ಪ್ರಧಾನ ಎಂಜಿನಿಯರ್‌ಗಳವರೆಗೆ ಒಟ್ಟು ಹುದ್ದೆಗಳ ಹಂಚಿಕೆ ಪೂರ್ಣಗೊಂಡಿಲ್ಲ. ಇಲಾಖೆ ಆಯ್ಕೆ ಮಾಡಿಕೊಳ್ಳಲು ಎಂಜಿನಿಯರ್‌ಗಳ ಸಹಮತ ಪಡೆಯುವ ಪ್ರಕ್ರಿಯೆ ಮುಗಿದಿಲ್ಲ. ಸದ್ಯ ಲೋಕೋಪಯೋಗಿ ಇಲಾಖೆಯಲ್ಲಿ ವಿವಿಧ ವೃಂದಗಳ ಎಂಜಿನಿಯರ್‌ಗಳು ಹೆಚ್ಚಿನ ಪ್ರಮಾಣದಲ್ಲಿ (ಶೇ 40) ಇದ್ದು, ಶೇ 20ರಷ್ಟು ಎಂಜಿನಿಯರ್‌ಗಳು ಈ ಪ್ರಸ್ತಾವಕ್ಕೆ ಸಹಮತ ನೀಡಿಲ್ಲ. ಹೀಗಾಗಿ, ಈ ಎಂಜಿನಿಯರ್‌ಗಳು ಅತಂತ್ರರಾಗಿದ್ದು, ಸ್ಥಳ ನಿಯುಕ್ತಿಗೊಳಿಸಲು ಇಲಾಖೆಗಳು ಹಿಂಜರಿಯುತ್ತಿವೆ.

'ನಿಯಮ ಬದಲಾದರೂ ಬಡ್ತಿ ಮತ್ತು ವರ್ಗಾವಣೆ ವಿಷಯದಲ್ಲಿ ಯಾವ ರೀತಿಯಲ್ಲಿ ನಿರ್ಣಯ ತೆಗೆದುಕೊಳ್ಳಬೇಕೆಂಬ ಬಗ್ಗೆ ಯಾವುದೇ ಸ್ಪಷ್ಟತೆ ಇಲ್ಲ. ಈವರೆಗೆ ಮುಖ್ಯ ಕಾರ್ಯದರ್ಶಿಯ ಅಧ್ಯಕ್ಷತೆಯ ಬಡ್ತಿ/ವರ್ಗಾವಣೆ ಪ್ರಕ್ರಿಯೆ ನಡೆಸುತ್ತಿತ್ತು. ಆದರೆ, ನಿಯಮ ತಿದ್ದುಪಡಿಯಾದರೂ ಇಲಾಖಾ ಪದೋನ್ನತಿ ಸಮಿತಿ ರಚಿಸುವ ಬಗ್ಗೆ ಸ್ಪಷ್ಟತೆ ಇಲ್ಲ' ಎಂದು ಮುಖ್ಯ ಎಂಜಿನಿಯರೊಬ್ಬರು ತಿಳಿಸಿದರು.

'ಬಡ್ತಿ ಮೀಸಲಾತಿ ಪ್ರಕರಣವು ಸುಪ್ರೀಂ ಕೋರ್ಟ್‌ನಲ್ಲಿ ವಿಚಾರಣೆಯಲ್ಲಿ ಇದ್ದುದರಿಂದ 2000ರಿಂದ ಬಡ್ತಿ ಪ್ರಕ್ರಿಯೆ ಸ್ಥಗಿತಗೊಂಡಿತ್ತು. 2007ರಿಂದ ನಿಯಮ 32 ಅಡಿ ಸ್ವತಂತ್ರ ಪ್ರಭಾರದ ವ್ಯವಸ್ಥೆ ಕಲ್ಪಿಸಲಾಗಿದೆ. 2018ರಿಂದ ಮತ್ತೆ ಬಡ್ತಿ ನೀಡಲಾಗುತ್ತಿದೆ. ಮತ್ತೆ ಲೋಕೋಪಯೋಗಿ ಇಲಾಖೆಗೆ ವಹಿಸಿದ್ದರಿಂದ ಬಡ್ತಿ ಸ್ಥಗಿತಗೊಳ್ಳುವ ಅಪಾಯವಿದೆ' ಎಂದರು.

ಬಡ್ತಿ, ವರ್ಗಾವಣೆಗೆ ಪೈಪೋಟಿ?

'ಪ್ರಧಾನ ಎಂಜಿನಿಯರ್ ಮತ್ತು ಮುಖ್ಯ ಎಂಜಿನಿಯರ್ ಹುದ್ದೆಗಳನ್ನು 'ಇಲಾಖಾ ಮುಖ್ಯಸ್ಥರು' ಮತ್ತು 'ಸರ್ಕಾರದ ಕಾರ್ಯದರ್ಶಿ' ಹುದ್ದೆ ಎಂದು ಡಿಪಿಎಆರ್ ಪರಿಗಣಿಸಿತ್ತು. ಇದೀಗ ಈ ಹುದ್ದೆಗಳಿಗೆ ಆಯಾ ಇಲಾಖೆಯವರೇ ಪದೋನ್ನತಿ ನೀಡಬಹುದೆಂದು ನಿಯಮ ಬದಲಾಗಿದೆ. ಹೀಗಾಗಿ, ಈ ಹುದ್ದೆಗಳ ಮೇಲಿನ ನಿಯಂತ್ರಣವನ್ನು ಡಿಪಿಎಆರ್ ಕಳೆದುಕೊಳ್ಳಲಿದೆ. ಆದರೆ, ಮೂರೂ ಇಲಾಖೆಗಳಲ್ಲಿನ ಎಂಜಿನಿಯರ್‌ಗಳ ಹಂಚಿಕೆ ಪೂರ್ಣಗೊಳ್ಳದೇ ಇರುವುದರಿಂದ, ಈ ಹಂತದಲ್ಲಿ ಪ್ರಧಾನ ಎಂಜಿನಿಯರ್ ಮತ್ತು ಮುಖ್ಯ ಎಂಜಿನಿಯರ್ ಹುದ್ದೆಗಳಿಗೆ ಬಡ್ತಿ ನೀಡುವ ಪ್ರಕ್ರಿಯೆಯನ್ನು ಈ ಮೂರು ಇಲಾಖೆಗಳ ಪೈಕಿ ಯಾರು ನಿರ್ವಹಿಸಬೇಕೆಂಬ ಬಗ್ಗೆಯೇ ಸ್ಪಷ್ಟತೆ ಇಲ್ಲದಿರುವುದು ಗೊಂದಲಕ್ಕೆ ಕಾರಣವಾಗಿದೆ' ಎಂದು ಅಧಿಕಾರಿಯೊಬ್ಬರು ಹೇಳಿದರು.

ಪ್ರಜಾವಾಣಿ ವಿಶೇಷ

ಮಹಿಳಾ ಅಧಿಕಾರಿ ಜೊತೆ ಶಾಸಕನ ಅಸಭ್ಯ ಮಾತು: ವರದಿಗೆ ಸೂಚನೆ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ಕನಕಗಿರಿಯ ಬಿಜೆಪಿ ಶಾಸಕ ಬಸವರಾಜ ದಢೇಸೂಗೂರು ಅವರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಮಹಿಳಾ ಅಧಿಕಾರಿಯೊಬ್ಬರ ಜೊತೆ ಅಸಭ್ಯವಾಗಿ ಮಾತನಾಡಿದ್ದಾರೆ ಎನ್ನಲಾಗುತ್ತಿರುವ ಆಡಿಯೊ ಕುರಿತಂತೆ ಬಿಜೆಪಿ ಶಿಸ್ತು ಸಮಿತಿ ವರದಿ ಕೇಳಿದೆ.

'ಆಡಿಯೊ ವೈರಲ್ ಆಗಿರುವುದು ನನ್ನ ಗಮನಕ್ಕೆ ಬಂದಿದೆ. ವರದಿ ನೀಡಲು ಕೊಪ್ಪಳ ಜಿಲ್ಲಾ ಘಟಕದ ಅಧ್ಯಕ್ಷರಿಗೆ ಸೂಚಿಸಿದ್ದೇನೆ' ಎಂದು ಬಿಜೆಪಿ ಶಿಸ್ತು ಸಮಿತಿಯ ಅಧ್ಯಕ್ಷ ಲಿಂಗರಾಜ ಪಾಟೀಲ ಅವರು ಮಂಗಳವಾರ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ವರದಿ ಕೈಸೇರಿದ ಬಳಿಕ ಪರಿಶೀಲನೆ ನಡೆಸಿ, ಪಕ್ಷದ ವರಿಷ್ಠರ ಗಮನಕ್ಕೆ ತರುತ್ತೇನೆ. ಶಾಸಕರು ತಪ್ಪಸಗಿರುವುದು ಸಾಬೀತಾದರೆ ಪಕ್ಷದ ಚೌಕಟ್ಟಿನಲ್ಲಿ ಶಿಸ್ತುಕ್ರಮ ಕೈಗೊಳ್ಳಲಾಗುವುದು' ಎಂದು ತಿಳಿಸಿದರು.

ಆಡಿಯೊ ವೈರಲ್ (ಕೊಪ್ಪಳ ವರದಿ): ಶಾಸಕ ಬಸವರಾಜ ದಢೇಸೂಗೂರು ಹಾಗೂ ಮಹಿಳಾ ಅಧಿಕಾರಿ ನಡುವೆ ನಡೆದಿದೆ ಎನ್ನಲಾದ ಸಂಭಾಷಣೆಯ ಆಡಿಯೊ ವೈರಲ್ ಆಗಿದ್ದು, ರಾಜಕೀಯ ವಲಯದಲ್ಲಿ ಸಂಚಲನ ಮೂಡಿಸಿದೆ.

12 ನಿಮಿಷದ ಆಡಿಯೋದಲ್ಲಿ ಇಬ್ಬರೂ ಏಕವಚನದಲ್ಲಿ ಮಾತನಾಡಿದ್ದಾರೆ. 'ನಿಮ್ಮವರು ಕಿರುಕುಳ ನೀಡುತ್ತಿದ್ದು, ನಾನು ಹೇಳಿದ ಸ್ಥಳಕ್ಕೆ ಬಂದು ಸಮಸ್ಯೆ ಬಗೆಹರಿಸದಿದ್ದರೆ ಮಾನ ಹರಾಜು ಹಾಕುತ್ತೇನೆ' ಎಂದು ಅಧಿಕಾರಿ ಆವೇಶದಿಂದ ಹೇಳುತ್ತಿರುವುದು ಸಂಭಾಷಣೆಯಲ್ಲಿದೆ.

'ಇವರಿಬ್ಬರ ಮಧ್ಯೆ ಸ್ನೇಹ ಇದೆ. ಇದೇ ವಿಚಾರವಾಗಿ ಚಕಮಕಿಯೂ ನಡೆದಿದೆ. ಅಧಿಕಾರಿಯು ಪೊಲೀಸರಿಗೆ ದೂರು ನೀಡಲು, ಕಾನೂನು ನೆರವು ಪಡೆಯಲೂ ಯತ್ನಿಸಿದ್ದರು' ಎಂದು ಮೂಲಗಳು ತಿಳಿಸಿವೆ. 'ಯಾವುದೇ ದೂರು ದಾಖಲಾಗಿಲ್ಲ' ಎಂದು ಎಸ್‌ಪಿ ಕಚೇರಿ ಮೂಲಗಳು ತಿಳಿಸಿವೆ.

ಪ್ರತಿಕ್ರಿಯೆಗೆ ಮಹಿಳಾ ಅಧಿಕಾರಿಯನ್ನು ದೂರವಾಣಿಯಲ್ಲಿ ಮೂರು ಸಲ ಸಂಪರ್ಕಿಸಿದರೂ ಕರೆ ಸ್ವೀಕರಿಸಲಿಲ್ಲ.

ಸಮರ್ಥನೆ: 'ಮಹಿಳಾ ಅಧಿಕಾರಿ ನಮ್ಮ ಸಂಬಂಧಿ. ಅನೇಕ ಬಾರಿ ಸಲುಗೆಯಿಂದ ಮಾತನಾಡಿದ್ದೇವೆ. ನಾನು ಈಗ ಶಾಸಕ. ಸಲುಗೆಯ ಮಾತನ್ನೇ ಕೆಲವರು ರಾಜಕೀಯ ಲಾಭಕ್ಕೆ ಬಳಸಿಕೊಳ್ಳುತ್ತಿದ್ದಾರೆ' ಎಂದು ಶಾಸಕ ಬಸವರಾಜ ದಢೇಸೂಗೂರು 'ಪ್ರಜಾವಾಣಿ'ಗೆ ಪ್ರತಿಕ್ರಿಯೆ ನೀಡಿದರು.

ತನಿಖೆ ಆಗ್ರಹ: 'ಸರ್ಕಾರ ಘಟನೆಯನ್ನು ಮುಚ್ಚಿಹಾಕಲು ಯತ್ನಿಸಬಾರದು. ಆ ಅಧಿಕಾರಿಯು ಘಟನೆ ಮಾಹಿತಿ ನೀಡಿದರೆ, ಅವರ ರಕ್ಷಣೆಗೆ ನಾವು ಬದ್ಧ. ತನಿಖೆ ಆಗಲಿ' ಎಂದು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಶಿವರಾಜ ತಂಗಡಗಿ ಆಗ್ರಹಿಸಿದ್ದಾರೆ.

ಕಲಬುರಗಿಯಲ್ಲಿ ನಡೆದ 36ನೇ ಪತ್ರಕರ್ತರ ಸಮ್ಮೇಳನದಲ್ಲಿ ಹಿರಿಯ ಪತ್ರಕರ್ತರಾದ ಟಿ.ವಿ. ಶಿವಾನಂದನ್, ಎಸ್.ಬಿ. ಜೋಶಿ, ಎಂ.ಕೆ. ಭಾಸ್ಕರರಾವ್, ಹುಣಸವಾಡಿ ರಾಜನ್, ದಿನೇಶ್ ಅಮಿನ್ ಮಟ್ಟು, ಜಗದೀಶ ಬುರ್ಲಬಡ್ಡಿ ಸೇರಿದಂತೆ ಇತರರಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ರಾಜ್ಯಮಟ್ಟದ ಪ್ರಶಸ್ತಿ ನೀಡಿ ಗೌರವಿಸಿದರು. ಜೆ.ಸಿ.ಲೋಕೇಶ್, ಭವಾನಿಸಿಂಗ್ ಠಾಕೂರ್, ಬಿ.ಜಿ. ಪಾಟೀಲ, ಶಶೀಲ್ ಜಿ. ನಮೋಶಿ, ಡಾ. ಉಮೇಶ ಜಾಧವ, ತಾರಾ ಅನುರಾಧಾ, ಶಿವಾನಂದ ತಗಡೂರ, ಮುರುಗೇಶ ನಿರಾಣಿ, ಡಾ. ಅಜಯ್ ಸಿಂಗ್, ದತ್ತಾತ್ರೇಯ ಪಾಟೀಲ, ಬಸವರಾಜ ಮತ್ತಿಮಡು ಇದ್ದರು –ಪ್ರಜಾವಾಣಿ ಚಿತ್ರ

'ಗ್ರಾಮೀಣ ಪತ್ರಕರ್ತರಿಗೆ ಆರೋಗ್ಯ ಕಾರ್ಡ್'

ಪ್ರಜಾವಾಣಿ ವಾರ್ತೆ

ಕಲಬುರಗಿ: 'ವರದಿ, ಲೇಖನಗಳ ಮೂಲಕ ಸಮಾಜ, ಸರ್ಕಾರವನ್ನು ಎಚ್ಚರದ ಸ್ಥಿತಿಯಲ್ಲಿಟ್ಟಿರುವ ಗ್ರಾಮೀಣ ಭಾಗದ ಪತ್ರಕರ್ತರಿಗೂ ಆರೋಗ್ಯ ಕಾರ್ಡ್ ಹಾಗೂ ಬಸ್ ಪಾಸ್ ವಿತರಿಸುವ ಚಿಂತನೆ ಇದೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮಂಗಳವಾರ ಹೇಳಿದರು.

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ಇಲ್ಲಿ ಹಮ್ಮಿಕೊಂಡಿದ್ದ 36ನೇ ರಾಜ್ಯ ಪತ್ರಕರ್ತರ ಸಮ್ಮೇಳನವನ್ನು ಉದ್ಘಾಟಿಸಿದ ಅವರು, 'ಪತ್ರಕರ್ತರಿಗೆ ಹೆಚ್ಚಿನ ಸವಲತ್ತು ನೀಡಲು ನಮ್ಮ ಸರ್ಕಾರ ಬದ್ಧವಾಗಿದೆ. ರಾಜ್ಯದ ಯಾವ ಪತ್ರಿಕೆಯೂ ಹಣಕಾಸಿನ ಬಿಕ್ಕಟ್ಟಿನಿಂದಾಗಿ ಮುದ್ರಣ ನಿಲ್ಲಿಸಬಾರದು ಎಂಬ ಕಾಳಜಿ ಸರ್ಕಾರಕ್ಕಿದೆ. ಆದ್ದರಿಂದ ನಿರಂತರವಾಗಿ ಜಾಹೀರಾತು ಬಿಡುಗಡೆ ಮಾಡುತ್ತಿದೆ' ಎಂದರು.

'ಕೋವಿಡ್ ಸಂದರ್ಭದಲ್ಲಿ ಪತ್ರಕರ್ತರು ವಹಿಸಿದ ಪಾತ್ರ ಶ್ಲಾಘನೀಯ. ಹಿಂದಿನ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು, ಕೋವಿಡ್‌ನಿಂದ ಮೃತಪಟ್ಟ ಪತ್ರಕರ್ತರ ಕುಟುಂಬಕ್ಕೆ ₹ 5 ಲಕ್ಷ ಪರಿಹಾರ ನೀಡುವ ಯೋಜನೆ ರೂಪಿಸಿದ್ದರು. ಅದನ್ನು ಮುಂದುವರಿಸಿದ್ದೇನೆ' ಎಂದು ತಿಳಿಸಿದರು.

ಕೆಕೆಆರ್‌ಡಿಬಿಗೆ ₹ 3 ಸಾವಿರ ಕೋಟಿ

'ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಗೆ ₹ 3 ಸಾವಿರ ಕೋಟಿ ಹಣ ಒದಗಿಸಲು ಕ್ರಿಯಾಯೋಜನೆ ರೂಪಿಸಲಾಗಿದೆ. ಮಾಸಾಂತ್ಯದಲ್ಲಿ ಈ ಭಾಗದ ಜನಪ್ರತಿನಿಧಿಗಳನ್ನು ಕರೆಸಿ ಚರ್ಚಿಸುತ್ತೇನೆ. ಒಂದು ವರ್ಷದಲ್ಲಿ ₹ 3 ಸಾವಿರ ಕೋಟಿ ಖರ್ಚು ಮಾಡಲು ಒತ್ತು ಕೊಡುತ್ತೇನೆ' ಎಂದು ಮುಖ್ಯಮಂತ್ರಿ ಹೇಳಿದರು.

'ಹಿಂದೆ ಘೋಷಿಸಿದ್ದಂತೆ ಒಂದು ವಾರದಲ್ಲಿ 371 (ಜೆ) ಕೋಶವನ್ನು ಕಲಬುರಗಿಗೆ ಸ್ಥಳಾಂತರಿಸುತ್ತೇನೆ. ಶೀಘ್ರವೇ ಈ ಭಾಗದ 14 ಸಾವಿರ ಖಾಲಿ ಹುದ್ದೆಗಳ ಭರ್ತಿಗೆ ಕ್ರಮ ಕೈಗೊಳ್ಳಲಾಗುವುದು' ಎಂದು ಭರವಸೆ ನೀಡಿದರು.

ಸಚಿವ ಅಶ್ವತ್ಥನಾರಾಯಣ ವಿರುದ್ಧದ ಸಮನ್ಸ್ ರದ್ದು

ಬೆಂಗಳೂರು: 'ಆಪರೇಷನ್ ಕಮಲದ ಕಾರಣಕ್ಕೆ ಜೆಡಿಎಸ್ ಶಾಸಕ ಶ್ರೀನಿವಾಸಗೌಡ ಅವರಿಗೆ ₹ 30 ಕೋಟಿ ಲಂಚದ ಆಮಿಷ ಒಡ್ಡಲಾಗಿತ್ತು' ಎಂದು ಆರೋಪಿಸಿ ಸಾಮಾಜಿಕ ಕಾರ್ಯಕರ್ತ ಟಿ.ಜೆ ಅಬ್ರಹಾಂ ದಾಖಲಿಸಿದ್ದ ದೂರಿನ ಅನುಸಾರ ಜನಪ್ರತಿನಿಧಿಗಳ ಕೋರ್ಟ್ ಹೊರಡಿಸಿದ್ದ ಸಮನ್ಸ್ ಅನ್ನು ಹೈಕೋರ್ಟ್ ರದ್ದುಪಡಿಸಿದೆ.

'ಶಾಸಕರು ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆಯ ವಿಶೇಷ ನ್ಯಾಯಾಲಯ ಜಾರಿ ಮಾಡಿದ್ದ ಸಮನ್ಸ್ ರದ್ದುಗೊಳಿಸಲು ಕೋರಿ ಸಚಿವ ಸಿ.ಎನ್ ಅಶ್ವತ್ಥನಾರಾಯಣ, ಶಾಸಕರಾದ ಶ್ರೀನಿವಾಸಗೌಡ, ಎಸ್. ಆರ್ ವಿಶ್ವನಾಥ್, ಸಿ.ಪಿ ಯೋಗೇಶ್ವರ್ ಸಲ್ಲಿಸಿದ್ದ ಅರ್ಜಿಗಳನ್ನು ನ್ಯಾಯಮೂರ್ತಿ ಎಸ್. ಸುನಿಲ್ ದತ್ ಯಾದವ್ ಅವರಿದ್ದ ಏಕಸದಸ್ಯ ಪೀಠ ವಿಚಾರಣೆ ನಡೆಸಿತು.

'ಸಕ್ಷಮ ಪ್ರಾಧಿಕಾರವಾದ, ವಿಧಾನಸಭೆ ಸಭಾಧ್ಯಕ್ಷರಿಂದ ಪೂರ್ವಾನುಮತಿ ಪಡೆಯಲು ದೂರುದಾರ ಟಿ.ಜೆ ಅಬ್ರಹಾಂ ಅವರಿಗೆ ನಿರ್ದೇಶಿಸಬೇಕು. ಪೂರ್ವಾನುಮತಿ ಸಿಕ್ಕ ಬಳಿಕ ಕಾನೂನು ಪ್ರಕ್ರಿಯೆಗಳನ್ನು ಮುಂದುವರಿಸಬೇಕು' ಎಂದು ನ್ಯಾಯಪೀಠವು ವಿಚಾರಣಾ ನ್ಯಾಯಾಲಯಕ್ಕೆ ನಿರ್ದೇಶಿಸಿತು.

ಕರ್ನಾಟಕ ಸರಕಾರ
ಕಾರ್ಯಕಾರಿ ಅಭಿಯಂತರವರ ಕಛೇರಿ, ಲೋಕೋಪಯೋಗಿ ಇಲಾಖೆ, ಉಡುಪಿ ವಿಭಾಗ, ಉಡುಪಿ E-mail : eeudp@kpwd.gov.in
ನಂ/ಪಿಡಬ್ಲ್ಯೂಡಿ/ಯುಡಿಎನ್/ಎನ್‌ಐಟಿ–49/2021–22/ಎಇ2 ದಿನಾಂಕ: 03.01.2022
ಟೆಂಡರು ಪ್ರಕಟಣೆ
ಈ ಕೆಳಕಂಡ ಕಾಮಗಾರಿಗೆ 'ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್' https://www.eproc.Karnataka.gov.in" ಮುಖಾಂತರ ಟೆಂಡರನ್ನು ಆಹ್ವಾನಿಸಲಾಗಿದೆ.
ಟೆಂಡರ್ ಸ್ವೀಕರಿಸುವ ಕೊನೆಯ **ದಿನಾಂಕ: 18.01.2022 ರ ಸಂಜೆ –5.30** ಘಂಟೆವರೆಗೆ
ಅರ್ಹ ಗುತ್ತಿಗೆದಾರರು: 3ನೇ ದರ್ಜೆ ಮತ್ತು ಮೇಲ್ಪಟ್ಟು ಗುತ್ತಿಗೆದಾರರು ಟೆಂಡರು ಸಲ್ಲಿಸಬಹುದಾಗಿದೆ.
ಕಾಮಗಾರಿಯ ಹೆಸರು: (1) ಕುಂದಾಪುರ ತಾಲೂಕು, ಮಡಾಮಕ್ಕಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಮಡಾಮಕ್ಕಿ – ಕಬ್ಬಿನಾಲೆ ರಸ್ತೆಯ ಮಡಾಮಕ್ಕಿ ದೇವಸ್ಥಾನದ ಹತ್ತಿರ ಕಲಾರ್‌ಬೆಟ್ಟು ಎಂಬಲ್ಲಿ ಸೇತುವೆ ನಿರ್ಮಾಣ. (144008) ಟೆಂಡರಿಗಿರಿಸಿದ ಅಂದಾಜು ಮೊಬಲಗು **ರೂ. 146.74 ಲಕ್ಷ. ಇಎಂಡಿ: ರೂ. 2,20,200.00.**
ಹೆಚ್ಚಿನ ವಿವರಗಳಿಗೆ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ.
ಸಹಿ/– ಕಾರ್ಯನಿರ್ವಾಹಕ ಇಂಜಿನಿಯರು, ಲೋಕೋಪಯೋಗಿ ಇಲಾಖೆ, ಉಡುಪಿ ವಿಭಾಗ, ಉಡುಪಿ
ವಾಸಾಇಂ/ಸನಿಉ/ಎಂಸಿಎ/518/21–22 ದಿ:04.01.2022

ಶಿವಮೊಗ್ಗ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿ.,
ಪ್ರಧಾನ ಕಛೇರಿ, ಬಾಲರಾಜ್ ಅರಸ್ ರಸ್ತೆ, ಶಿವಮೊಗ್ಗ - 577 201
ದೂ.ಸಂಖ್ಯೆ: 08182-222396/224734, ಫ್ಯಾಕ್ಸ್: 274396
email: shimogadccbank@sdccb.in Website: www.shimogadccbank.com
ಕ್ರ. ಸಂ: ಆ ಮತ್ತು ಸಿ/3500/2021-22 ದಿನಾಂಕ: 04-01-2022
ಟೆಂಡರ್ ಪ್ರಕಟಣೆ
Tender Ref. No: SDCCB.A&E/COMPU/DESKTOP/3494/2021-22 Dated: 04.01.2022
ಶಿವಮೊಗ್ಗ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿ., ಶಿವಮೊಗ್ಗ, ಈ ಬ್ಯಾಂಕಿನ ಪ್ರಧಾನ ಕಛೇರಿ ಮತ್ತು 28 ಶಾಖೆಗಳಿಗೆ ಅಗತ್ಯವಿರುವ 115 HP Desktop Computers ಗಳನ್ನು ಸರಬರಾಜು ಮಾಡಿ ಅಳವಡಿಸುವ ಸಂಬಂಧ ಇ-ಟೆಂಡರ್ ಪ್ರಕಟಣೆಯನ್ನು ಪ್ರಕಟಿಸಿದ್ದು, ಆಸಕ್ತಿಯುಳ್ಳ ಟೆಂಡರುದಾರರು ಕರ್ನಾಟಕ ಇ-ಪೋರ್ಟಲ್ ಜಾಲತಾಣ https://eproc.karnataka.gov.in/eprocportal ಮೂಲಕ ವಿವರಗಳನ್ನು ಪಡೆಯಬಹುದಾಗಿರುತ್ತದೆ. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ 25.01.2022 ರ ಸಂಜೆ 5.00 ಘಂಟೆ ಆಗಿರುತ್ತದೆ.
ಸಹಿ/-
ವ್ಯವಸ್ಥಾಪಕ ನಿರ್ದೇಶಕರು

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರವರ ಕಚೇರಿ ಕನೀನಿನಿ, ಮಬದಕಾನಿ ವಿಭಾಗ ನಂ. 3 ಬ್ಯಾಹಟ್ಟಿ. ತಾ:: ಹುಬ್ಬಳ್ಳಿ, ಜಿ: ಧಾರವಾಡ 580023.
e-mail :- knnl@knnlindia.com ಫೋನ್ :0836–2315225 ಫ್ಯಾಕ್ಸ್:2315226.
Website:- www.knnlindia.com e-mail :-eemrbcc3byt@gmail.com
ಸಂ.ಕನೀನಿನಿ/ಮಬದವಿ–3/ಎ.ಇ–1/ಇ–ಟೆಂಡರ/2021-22/1543 ದಿನಾಂಕ:03/01/2022
ಅಲ್ಪಾವಧಿ ಟೆಂಡರ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ ಪೋರ್ಟಲ್ ಮುಖಾಂತರ)
ವ್ಯವಸ್ಥಾಪಕ ನಿರ್ದೇಶಕರು, ಕನೀನಿನಿ, ಬೆಂಗಳೂರು ರವರ ಪರವಾಗಿ ಕಾರ್ಯನಿರ್ವಾಹಕ ಇಂಜಿನೀಯರ್ ಕನೀನಿನಿ, ಮಬದಕಾನಿ ವಿಭಾಗ ಸಂ.3, ಬ್ಯಾಹಟ್ಟಿ ವ್ಯಾಪ್ತಿಯ 4701 M & MI ಲೆಕ್ಕಶೀರ್ಷಿಕೆ ಅಡಿ ಈ ಕೆಳಗೆ ನಮೂದಿಸಿರುವ ಇಂಡೆಂಟ ನಂಬರಿನ 04 ಕಾಮಗಾರಿಗಳಿಗೆ ಶೇಕಡಾವಾರು ಟೆಂಡರನ್ನು ದ್ವಿಲಕೋಟೆ ಪದ್ಧತಿಯಲ್ಲಿ ಇ–ಪ್ರೋಕ್ಯೂರಮೆಂಟ ಮೂಲಕ ಆಹ್ವಾನಿಸಲಾಗಿದೆ.Work Indent No :-32076, 32077,32278 & 32279 , **ಕಾಮಗಾರಿಯ ಅಂದಾಜು ಮೊತ್ತ: ತಲಾ ರೂ.175.00 ಲಕ್ಷಗಳಿಂದ ರೂ.350.00 ಲಕ್ಷಗಳು, ಇ.ಎಂ.ಡಿ ಮೊತ್ತ:– ರೂ.1,75,000/– ರಿಂದ ರೂ.3,50,000/–.**
ಇ–ಪೋರ್ಟಲ್ ಮೂಲಕ ಟೆಂಡರಗಳನ್ನು ದಿನಾಂಕ: 19/01/2021 ರ 4.00 pm ತನಕ ಸಲ್ಲಿಸಬಹುದಾಗಿದೆ. ತಾಂತ್ರಿಕ ಬಿಡ್ ತೆರೆಯುವ ದಿನಾಂಕ:21/01/2021 ರಂದು ಮುಂಜಾನೆ: 11.00 am ರಿಂದ ಹಾಗೂ ಕಾಮಗಾರಿವಾರು ಇತರೆ ವಿವರಗಳನ್ನು ಇ–ಪ್ರೊಕ್ಯೂರಮೆಂಟ ಪೋರ್ಟಲ್ ವೆಬಸೈಟ್ ಮುಖೇನ http://eproc.karnataka.gov.in ಮೂಲಕ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಈ ಕಚೇರಿ ದೂರವಾಣಿ ಸಂಖ್ಯೆ: 0836–2315225 ನ್ನು ಕಚೇರಿಯ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.
ಸಹಿ/–ಕಾರ್ಯನಿರ್ವಾಹಕ ಇಂಜಿನೀಯರರು
ಕನೀನಿನಿ, ಮಬದಕಾನಿ ವಿಭಾಗ ನಂ. 3 ಬ್ಯಾಹಟ್ಟಿ
ವಾ.ಸಾ.ಇ/ಧಾ/839/2021–22/ದೇಶಪಾಂಡೆಪಬ್ಲಿಸಿಟಿ

MysoreSilk ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ದಿಮೆ)
3ನೇ ಮತ್ತು 4ನೇ ಮಹಡಿ, ಜನೋಪಯೋಗಿಕಟ್ಟಡ, ಎಂ.ಜಿ.ರಸ್ತೆ, ಬೆಂಗಳೂರು–560001.
ದೂ:080–25586550/25586399, ಫ್ಯಾಕ್ಸ್:080–25587020, ಇ–ಮೇಲ್: info@ksicsilk.com
ಸಂಖೆ:ಕೆಎಸ್‌ಐಸಿ/ಪಿಡಿ/ಎಫ್‌ಡಿ–ಇಂಟೆರೆಸ್ಟ್/08/2021–22 ದಿನಾಂಕ:30.12.2021
ಅಲ್ಪಾವಧಿ ಇ–ಟೆಂಡರ್‌ಗಾಗಿ ಅಧಿಸೂಚನೆ
ಕೆಎಸ್‌ಐಸಿ ಹೆಚ್ಚುವರಿ ನಿಧಿಯ ಮೊತ್ತವನ್ನು ಸ್ಥಿರ ಠೇವಣಿಯ ಹೂಡಿಕೆಗಾಗಿ ಸ್ಪರ್ಧಾತ್ಮಕ ಬಡ್ಡಿ ದರವನ್ನು ಉಲ್ಲೇಖಿಸಲು ಆಸಕ್ತಿಯುಳ್ಳ **ಪ್ರತಿಷ್ಠಿತ ಸಾರ್ವಜನಿಕ ವಲಯದ ಬ್ಯಾಂಕುಗಳು, ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು ಮತ್ತು ಖಾಸಗಿ ಷೆಡ್ಯೂಲ್ಡ್ ವಾಣಿಜ್ಯ ಬ್ಯಾಂಕುಗಳಿಂದ** ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಆಹ್ವಾನಿಸಲಾಗಿದೆ.
ಟೆಂಡರ್ ಕಡತ, ವೇಳಾಪಟ್ಟಿ, ನಿಯಮಗಳು ಮತ್ತು ಷರತ್ತುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ **www.eproc.karnataka.gov.in** ಇಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಪ್ರಿ–ಬಿಡ್ ಸಭೆಯ ದಿನಾಂಕ : **06.01.2022 ರಂದು ಬೆಳಗ್ಗೆ 11.00 ಗಂಟೆಗೆ** ನಡೆಯಲಿದೆ. ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **17.01.2022ರ ಅಪರಾಹ್ನ 3.00 ಗಂಟೆಯವರೆಗೆ.** ಇ.ಎಂ.ಡಿ. ಪಾವತಿಗೆ ವಿನಾಯಿತಿ ನೀಡಲಾಗಿದೆ. ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ: **18.01.2022 ರ ಸಂಜೆ 4.00 ಗಂಟೆಗೆ.** ಹೆಚ್ಚಿನ ವಿವರಗಳಿಗಾಗಿ ಈ ಕೆಳಸಹಿದಾರರ ಕಛೇರಿಯ ಕೆಲಸದ ವೇಳೆಯಲ್ಲಿ ಖುದ್ದಾಗಿ, ಪ್ರಧಾನ ವ್ಯವಸ್ಥಾಪಕರು (ಹ) ಇವರ ಮೊಬೈಲ್ ಸಂಖ್ಯೆ 7338462106ಕ್ಕೆ ಕರೆ ಮಾಡಿ ಅಥವಾ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನ ಸಹಾಯವಾಣಿ 080–46010000, 080–22631200 ಮೂಲಕ ಮಾಹಿತಿಯನ್ನು ಪಡೆದುಕೊಳ್ಳಬಹುದಾಗಿದೆ.
ಸಹಿ/–
ವಾಸಾಸಂಇ/ಬೆಂ.ನ/ಜಿಎ/2673/2021–22 ಪ್ರಧಾನ ವ್ಯವಸ್ಥಾಪಕರು(ಹಣಕಾಸು)
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
(ಕಾರಾಗೃಹ ಮತ್ತು ಸುಧಾರಣಾ ಸೇವೆಗಳು)
ಮುಖ್ಯ ಅಧೀಕ್ಷಕರ ಕಾರ್ಯಾಲಯ,
ಕೇಂದ್ರ ಕಾರಾಗೃಹ ಮತ್ತು ಸುಧಾರಣಾ ಸೇವಾ ಕಛೇರಿ, ಶಿವಮೊಗ್ಗ.
ದೂರವಾಣಿ:08182–295502
Email:- cpsmg.prisons@ka.gov.in
ಸಂಖ್ಯೆ:ಕೇಕಾಶಿ/ದರಖಾಸ್ತು/3172/2021–22 ದಿನಾಂಕ:31–12–2021.
ಪ್ರಕಟಣೆ
ಶಿವಮೊಗ್ಗ ಜೋನ್
ಟೆಂಡರ್ ಸಂಖ್ಯೆ: CPS/E-Tender/2021-22/CALL-1 ನಲ್ಲಿ ದಿನಾಂಕ: 31/12/2021 ರಂದು ಇ–ದರಖಾಸ್ತು ಕರೆಯಲಾಗಿ, ಕೊನೆಯ ದಿನಾಂಕ: 29/01/2022 ಆಗಿದ್ದು, ಭಾಗ–1, 2, 3, 4, 5, 7, 8, 9, 10, 11, 12 ರಲ್ಲಿ ಬರುವ ಆಹಾರ ಪದಾರ್ಥಗಳು, ಇನ್ನಿತರ ವಸ್ತುಗಳ ಅಂದಾಜು ಮೊತ್ತ ರೂ.4,84,64,662–00 ಇದಕ್ಕೆ ಇ.ಎಂ.ಡಿ ಮೊತ್ತ ರಿಯಾಯಿತಿ ಇರುತ್ತದೆ. ಕೇಂದ್ರಕಾರಾಗೃಹ, ಶಿವಮೊಗ್ಗದಲ್ಲಿ ಇ–ದರಖಾಸ್ತು ಕರೆಯಲಾಗಿದ್ದು, ಸದರಿ ದರಖಾಸ್ತಿನಲ್ಲಿ ಭಾಗವಹಿಸಲು ಈ ದರಖಾಸ್ತಿನ ಕುರಿತು ಹೆಚ್ಚಿನ ಮಾಹಿತಿಯನ್ನು ಆನ್‌ಲೈನ್ www.eproc.karnataka.gov.in ನಲ್ಲಿ ಪಡೆಯಲು ತಿಳಿಸಿದೆ. ಹಾಗೂ ಸದರಿ ದರಖಾಸ್ತಿನ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಈ ಕೆಳಕಂಡ ವಿಳಾಸದಲ್ಲಿ ಪಡೆಯಲು ಸೂಚಿಸಿದೆ.
ಮುಖ್ಯ ಅಧೀಕ್ಷಕರು, ಕೇಂದ್ರ ಕಾರಾಗೃಹ ಮತ್ತು ಸುಧಾರಣಾ ಸೇವಾ ಕಛೇರಿ, ಸೋಗಾನೆ (ಗ್ರಾ), ನಿಧಿಗೆ ಅಂಚೆ, ಶಿವಮೊಗ್ಗ, ಪಿನ್ ಕೋಡ್: 577222 ದೂರವಾಣಿ ಸಂಖ್ಯೆ: 08182–295502 / 9480806465 / 9342629522
ಸಹಿ/– (ಮಹೇಶ್ ಕುಮಾರ್.ಎಸ್.ಜಿಗಣಿ)
ಮುಖ್ಯ ಅಧೀಕ್ಷಕರು, ಕೇಂದ್ರ ಕಾರಾಗೃಹ, ಶಿವಮೊಗ್ಗ.
ವಾ.ಸಾ.ಸಂ.ಇ/ಶಿ/ನಂ–07/01/ಎಂಸಿಎ/21–22/982

ಕರ್ನಾಟಕ ಸರಕಾರ
(ಲೋಕೋಪಯೋಗಿ ಇಲಾಖೆ)
ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಚಿಕ್ಕೋಡಿ
ನಂ.ಲೋ.ಇ./ಚಿ.ವಿ./ಸ.ಇಂ.–1/ಟೆಂಡರ/2021–22/5070 ದಿನಾಂಕ:03/01/2022
ಅಲ್ಪಾವಧಿ ಇ–ಟೆಂಡರ/ಮರುಟೆಂಡರ್ ಪ್ರಕಟಣೆ
ಲೋಕೋಪಯೋಗಿ ಇಲಾಖೆ ಚಿಕ್ಕೋಡಿ ವಿಭಾಗದಡಿ 2021–22 ನೇ ಸಾಲಿನ ಲೆಕ್ಕ ಶಿರ್ಷಿಕೆ 8443–ಠೇವಣಿ ವಂತಿಕೆ (ಕರ್ನಾಟಕ ಪಬ್ಲಿಕ ಶಾಲೆ) ಅಡಿ 2 ಕಾಮಗಾರಿಗಳ ಗುತ್ತಿಗೆ ಇಟ್ಟ ಮೊತ್ತ ಪ್ರತಿ ಕಾಮಗಾರಿಗೆ ರೂ. 175.44 ಲಕ್ಷ ಇರುವ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿದೆ.
ಗುತ್ತಿಗೆ ಪ್ರಕ್ರಿಯೆಯ ನಿಗದಿತ ದಿನಾಂಕಗಳು ಈ ಕೆಳಗಿನಂತೆ ಇರುವುದು
1)ಗುತ್ತಿಗೆ ಪೂರ್ವಭಾವಿ ಸಭೆ ವಿಭಾಗ ಕಚೇರಿಯಲ್ಲಿ:10–01–2022 ರಂದು (11.00 ಗಂಟೆಗೆ), 2)ಆಕ್ಷೇಪಣೆ – ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ:12–01–2022(ಸಾಯಂಕಾಲ 5.30 ಗಂಟೆಯ ವರೆಗೆ), 3)ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ:14–01–2022 (ಸಾಯಂಕಾಲ 5.00 ಗಂಟೆಯವರೆಗೆ), 4)ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ (Two Cover System): 17–01–2022 (ಸಾಯಂಕಾಲ 4.30 ಗಂಟೆಗೆ), 5)ಹಣಕಾಸು ಬಿಡ್‌ನ್ನು ತೆರೆಯುವ ದಿನಾಂಕ (Two Cover System): "ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ"
ಕಾಮಗಾರಿಯ ಎಲ್ಲ ವಿವರಗಳಿಗಾಗಿ ಇಲಾಖೆಯ ವೆಬ್‌ಸೈಟ್ www.eproc.karnataka.gov.in ನ್ನು ಮತ್ತು ಟೆಂಡರ ಪ್ರಕಟಣೆಗಾಗಿ www.kpwd.gov.in ನ್ನು ಗಮನಿಸಲು ಅಥವಾ ಲೋಕೋಪಯೋಗಿ ಇಲಾಖೆ ವಿಭಾಗ ಚಿಕ್ಕೋಡಿ ಕಾರ್ಯಾಲಯವನ್ನು ಕಚೇರಿಯ ವೇಳೆಯಲ್ಲಿ ಸಂಪರ್ಕಿಸಲು ಕೋರಲಾಗಿದೆ.
ಸಹಿ/–ಕಾರ್ಯನಿರ್ವಾಹಕ ಇಂಜಿನೀಯರರು,
ಲೋಕೋಪಯೋಗಿ ಇಲಾಖೆ, ವಿಭಾಗ ಚಿಕ್ಕೋಡಿ.
DIPR/BGM/RO-NO-1169/MCA/2021-22

ಬೆವಿಕಂ BESCOM ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ರಾಜ್ಯ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
(CIN-U04010KA2002SGC030438)
ಸಂಕ್ಷಿಪ್ತ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)
ಬೆವಿಕಂ ರವರು ಈ ಕೆಳಗಿನ ಕೆಲಸಕ್ಕಾಗಿ ಟೆಂಡರ್‌ಗಳನ್ನು ಆಹ್ವಾನಿಸುತ್ತದೆ. **ವಿಚಾರಣೆ ಸಂಖ್ಯೆ:** ಬೆವಿಕಂ/ಉ.ಪ್ರವ್ಯ (ಎಸ್.ಜಿ & ಇ.ವಿ)/ಬಿಸಿ–53/2021–22/ವಿಚಾರಣೆ ಸಂಖ್ಯೆ–12 ದಿನಾಂಕ: 04.01.2022 **ಕಾಮಗಾರಿ ವಿವರ:** ಬೆವಿಕಂ ಸ್ವಾಮ್ಯದ ಸ್ಥಳಗಳಲ್ಲಿ ಪಿಪಿಪಿ ಮಾದರಿಯಲ್ಲಿ ವಿದ್ಯುತ್ ವಾಹನ ಚಾರ್ಜಿಂಗ್ ಕೇಂದ್ರಗಳ ಸ್ಥಾಪನೆ. **ಬಿಡ್ ದಾಖಲೆಗಳ ಲಭ್ಯತೆ:** 12.01.2022 ರಂದು 17.00 ಗಂಟೆಯಿಂದ. **ಬಿಡ್ ದಾಖಲೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ:** 11.02.2022 ರಂದು 17.00 ಗಂಟೆಯವರೆಗೆ. **ಬಿಡ್ ದಾಖಲೆಗಳನ್ನು ತೆರೆಯುವ ದಿನಾಂಕ:** 14.02.2022 ರಂದು 11.00 ಗಂಟೆಗೆ. **ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಪ್ರಶ್ನೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ:** 20.01.2022 ರಂದು 17.00 **ಗಂಟೆಯವರೆಗೆ. ಬಿಡ್ ಪೂರ್ವ ಸಭೆ:** 21.01.2022 ರಂದು 11.00 ಗಂಟೆಗೆ. ಬಿಡ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪ್ರಕ್ರಿಯೆಯಲ್ಲಿ ಬೆವಿಕಂ ಆಹ್ವಾನಿಸಿದೆ. ಸಂಬಂಧಿಸಿದ ವಿಚಾರಣೆಯ ಬಗ್ಗೆ ವಿವರವಾದ ಪ್ರಕಟಣೆಯನ್ನು ವೆಬ್‌ಸೈಟ್ https://eproc.karnataka.gov.in ನಲ್ಲಿ ಲಾಗಿನ್ ಆಗಿ ಪಡೆಯಬಹುದು. ಇತರೆ ಯಾವುದೇ ವಿವರಗಳನ್ನು ಕೆಳಸಹಿದಾರರ ಕಛೇರಿಯಿಂದ ಪಡೆದುಕೊಳ್ಳಬಹುದು.
ಸಹಿ/– ಉಪ ಪ್ರಧಾನ ವ್ಯವಸ್ಥಾಪಕರು (ಎಸ್.ಜಿ & ಇ.ವಿ),
ಕಂಪನಿ ಕಾರ್ಯಾಲಯ, ಬೆವಿಕಂ
ವಿದ್ಯುತ್ ಸಂಬಂಧಿತ ದೂರುಗಳಿಗೆ ಕರೆ ಮಾಡಿ: 1912
ಬೆಸ್ಕಾಂ ಮಿತ್ರ mobile app ಅನ್ನು ಡೌನ್‌ಲೋಡ್ ಮಾಡಿಕೊಳ್ಳಿ

ಕರ್ನಾಟಕ ಅರಣ್ಯ ಇಲಾಖೆ
ಉಪ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ನಿರ್ದೇಶಕರ ಕಛೇರಿ,
ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶ, ಹುಣಸೂರು
ಸಂಖ್ಯೆ: ಬಿ1/ಬಿ.ಜಿ.ಟಿ/ಸಿ.ಆರ್–65/2021–22 ದಿನಾಂಕ: 31.12.2021
ಟೆಂಡರ್ ಅಧಿಸೂಚನೆ
ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ 2021–22ನೇ ಸಾಲಿನಲ್ಲಿ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ವಿವಿಧ ವನ್ಯಜೀವಿ ವಲಯ ವ್ಯಾಪ್ತಿಯಲ್ಲಿ ಈ ಕೆಳಕಂಡ ಕಾಮಗಾರಿಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ ಪೋರ್ಟಲ್ (http://eproc.karnataka.gov.in) ಮೂಲಕ ಕರೆಯಲಾಗಿದೆ.
ಕೆಲಸದ ವಿವರ: ಇಲಾಖಾ ಕಟ್ಟಡಗಳ ನಿರ್ಮಾಣ ಮತ್ತು ನಿರ್ವಹಣೆ. **ಪರಿಮಾಣ (ಕಿ.ಮೀ):** 5 ಸಂಖ್ಯೆ. **ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ):** 101.00
ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: 15.01.2022 ಮತ್ತು ಸಂಜೆ 17.30 ಗಂಟೆ. ಸದರಿ ದಿನಾಂಕದಂದು ಯಾರು ಭಾಗವಹಿಸದೇ ಇದ್ದಲ್ಲಿ ಮರು ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: 17.01.2022 ಮತ್ತು ಸಂಜೆ 17.30 ಗಂಟೆ (ಇದಕ್ಕೆ ಪ್ರತ್ಯೇಕ ಪ್ರಕಟಣೆ ಹೊರಡಿಸಲಾಗುವುದಿಲ್ಲ). ಹೆಚ್ಚಿನ ಮಾಹಿತಿಗಾಗಿ ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದು. ದೂ.ಸಂ.: 08222–252041 Email: dirnagarahole@aranya.gov.in
ಸಹಿ/– ಉಪ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ನಿರ್ದೇಶಕರು,
ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶ, ಹುಣಸೂರು
DIPR/DDMYS/MCA/781/2020-21

ಕೆ.ಎಂ.ಎಫ್ ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ
ಕಹಾಮ ಸಂಕೀರ್ಣ ಡಾ: ಎಂ. ಹೆಚ್. ಮರೀಗೌಡ ರಸ್ತೆ ಬೆಂಗಳೂರು–560 029
ಫೋನ್: 26096832/910/835 Email: purchase@kmf.coop
ಅಧಿಸೂಚನೆ ಸಂಖ್ಯೆ: ಕಹಾಮ/ಖರೀದಿ/ಟೆಂಡರ್–341/2021–22 ದಿನಾಂಕ: 04.01.2022
ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)
ಕರ್ನಾಟಕ ಹಾಲು ಮಹಾಮಂಡಳಿಯು ಆಸಕ್ತಿಯುಳ್ಳ ಅರ್ಹ ಸಂಸ್ಥೆದಾರರಿಂದ ಉತ್ತರ ಕರ್ನಾಟಕದ ಭಾಗದ ಜಿಲ್ಲೆಗಳಿಗೆ 03 ವರ್ಷದ ಅವಧಿಗೆ exclusive ಆಗಿ ಬ್ರೆಡ್, ರಸ್ಕ್ ಹಾಗೂ ಬನ್ ಉತ್ಪನ್ನಗಳನ್ನು ಉತ್ಪಾದಿಸಿ ಮಾರುಕಟ್ಟೆ ಸೌಕರ್ಯವನ್ನು ನಿರ್ವಹಿಸಿ, ರಿಟೇಲರ್ಸ್‌ಗಳಿಗೆ ಸರಬರಾಜು ಮಾಡುವ ಕಾರ್ಯಗಳನ್ನು ನಿರ್ವಹಿಸಲು ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಟೆಂಡರ್ ದಾಸ್ತಾವೇಜುಗಳನ್ನು eProcurement website http://eproc.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ

ಕ್ರ. ಸಂ.	ಸಾಮಗ್ರಿಗಳ ವಿವರ	ಅಂದಾಜು ಪರಿಮಾಣ	ಇ ಎಂ ಡಿ ಮೊತ್ತ ರೂ.
01	ವಿವಿಧ ರೀತಿಯ ಬ್ರೆಡ್, ರಸ್ಕ್ & ಬನ್	5,000 loaves day	5,00,000/–

ಟೆಂಡರ್ ಡೌನ್‌ಲೋಡ್ ಪ್ರಾರಂಭದ ದಿನಾಂಕ	05.01.2022 ರಿಂದ
ಟೆಂಡರ್ ಪೂರ್ವಭಾವಿ ಸಭೆ ದಿನಾಂಕ	18.01.2022 ರಂದು ಪೂರ್ವಾಹ್ನ 11.00 ಗಂಟೆಗೆ
ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ	05.02.2022 ರಂದು ಸಂಜೆ 5.00 ಗಂಟೆಯವರೆಗೆ
ತಾಂತ್ರಿಕ ಟೆಂಡರ್ ತೆರೆಯುವ ದಿನಾಂಕ	07.02.2022 ರಂದು ಪೂರ್ವಾಹ್ನ 11.00 ಗಂಟೆಗೆ
ಕಮರ್ಷಿಯಲ್ ಟೆಂಡರ್ ತೆರೆಯುವ ದಿನಾಂಕ	ತಾಂತ್ರಿಕ ಟೆಂಡರ್ ಪರಿಶೀಲನೆಯ ನಂತರ ತಿಳಿಸಲಾಗುವುದು

ಆಸಕ್ತಿಯುಳ್ಳ ಟೆಂಡರ್‌ದಾರರು ಟೆಂಡರ್ ದಾಖಲಾತಿಯಲ್ಲಿ ನಮೂದಿಸಿರುವ ಇ.ಎಂ.ಡಿ ಪಾವತಿಸಿ ಭಾಗವಹಿಸಬಹುದಾಗಿದೆ.
ಇನ್ನಿತರ ವಿವರಗಳನ್ನು ಟೆಂಡರ್ ದಾಖಲಾತಿಯಲ್ಲಿ ನೋಡಬಹುದು.
ಕರ್ನಾಟಕ ಸಹಕಾರ ಹಾಲು ಮಹಾಮಂಡಳ ಪರವಾಗಿ
ಸಹಿ/–
ನಿರ್ದೇಶಕರು (ಖರೀದಿ)

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ
ಜಿಲ್ಲಾಧಿಕಾರಿಗಳ ಕಛೇರಿ ಆವರಣ, ಚಪ್ಪರದಕಲ್ಲು (ಬೀರಸಂದ್ರ), ದೇವನಹಳ್ಳಿ ತಾ. ಬೆಂಗಳೂರು ಗ್ರಾಮಾಂತರ ಜಿಲ್ಲೆ–562110 ದೂ: 080–29787463,
email: eerdwsd.bngr1@gmail.com
ಸಂ:ಕಾಪಾಅ/ಗ್ರಾ.ಕು.ನೀ.& ನೈ.ವಿ/ಬೆಂ.ಗ್ರಾ/ISRA/ಟೆಂಡರ್/21–22/884 ದಿನಾಂಕ: 03.01.2022
ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ ಸಂಖ್ಯೆ: 12/2021–22
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)
ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ, ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗದಲ್ಲಿ Empanelment of Implementation Support Agencies (NGOs/VOs/SHGs) for providing services related to IEC & HRD activities under Jal Jeevan Mission (JJM) in rural areas under Rural Drinking Water & Sanitation Department, ಸೂಕ್ತ ಏಜನ್ಸಿಗಳಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ದ್ವಿ–ಲಕೋಟೆ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿದೆ. ಕರಾರು ನಿಯಮಗಳು ಹಾಗೂ ಇನ್ನಿತರ ವಿವರಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (http://eproc.karnataka.gov.in) ನಲ್ಲಿ ಪಡೆಯಬಹುದಾಗಿರುತ್ತದೆ. ನಿಗದಿಪಡಿಸಿರುವ ಕರಾರು ನಿಯಮಗಳಂತೆ ಸಂಬಂಧಪಟ್ಟ ದಾಖಲಾತಿಗಳನ್ನು ದರಗಳೊಂದಿಗೆ ಸಲ್ಲಿಸಲು ಕೋರಿದೆ. ಹೆಚ್ಚಿನ ಮಾಹಿತಿಗಳು ಬೇಕಾಗಿದ್ದಲ್ಲಿ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬೆಂಗಳೂರು ಗ್ರಾಮಾಂತರ, ಬೀರಸಂದ್ರ, ದೇವನಹಳ್ಳಿ ಕಛೇರಿಯ ವೇಳೆಯಲ್ಲಿ (ರಜೆ ದಿನಗಳನ್ನು ಹೊರತುಪಡಿಸಿ) ಪಡೆದುಕೊಳ್ಳಬಹುದಾಗಿದೆ. ಟೆಂಡರ್ ಮಾಹಿತಿ ಈ ಕೆಳಗಿನಂತಿವೆ:
1) ಟೆಂಡರ್ ದಾಸ್ತಾವೇಜುಗಳನ್ನು ವೆಬ್‌ಸೈಟ್ ನಿಂದ ಡೌನ್‌ಲೋಡ್ ಮಾಡಿಕೊಳ್ಳುವ **ದಿನಾಂಕ: 03.01.2022ರ ಸಂಜೆ 4.00 ಗಂಟೆಯ** ನಂತರ **2)** ಭರ್ತಿಮಾಡಿದ ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 18.01.2022 ಸಂಜೆ 4.30 ಗಂಟೆಯ ವರೆಗೆ 3)** ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 19.01.2022 ಸಂಜೆ 5.00 ಗಂಟೆಗೆ. 4) ಆರ್ಥಿಕ ಬಿಡ್ ತೆರೆಯುವ ದಿನಾಂಕ: 21.01.2022 ಸಂಜೆ 5.00 ಗಂಟೆಗೆ.**
ಸಹಿ/–
ಕಾರ್ಯಪಾಲಕ ಅಭಿಯಂತರರು
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ
ಬೆಂಗಳೂರು ಗ್ರಾಮಾಂತರ
ವಾಸಾಸಂಇ/ಉನಿಕ/ಬೆಂಗ್ರಾಜಿ/ಶಿರಡಿ ಸಾಯಿ/360/2021–22
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್
(ಕರ್ನಾಟಕ ಸರ್ಕಾರದ ಉದ್ಯಮ)
ಗ್ರಾಮೀಣಾಭಿವೃದ್ಧಿ ಭವನ, 4 ಮತ್ತು 5ನೇ ಮಹಡಿ, ಆನಂದರಾವ್ ವೃತ್ತ, ಬೆಂಗಳೂರು–09
ಸಂಖ್ಯೆ: ಕೆಆರ್‌ಐಡಿಎಲ್/ಡಬ್ಲ್ಯೂಕೆಎಸ್/ಡೆಸ್ಕ್‌ಟಾಪ್/ಟಿಎನ್‌ಡಿ/2021–22 ದಿನಾಂಕ: 04.01.2022
ಮರು ಟೆಂಡರ್ ಪ್ರಕಟಣೆ
ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್, ಬೆಂಗಳೂರು ಇವರು ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್‌ಗೆ 240 ಸಂಖ್ಯೆಗಳ ಐ5 ಡೆಸ್ಕ್‌ಟಾಪ್, 8 ಸಂಖ್ಯೆ ಐ7 ಎಐಒ ಡೆಸ್ಕ್‌ಟಾಪ್ ಮತ್ತು 5 ಸಂಖ್ಯೆ ಐ7 ಲ್ಯಾಪ್‌ಟಾಪ್‌ಗಳನ್ನು ಖರೀದಿಸಲು ಸಂಸ್ಥೆಗಳಿಂದ (ಒಇಎಂ) ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಅಡಿಯಲ್ಲಿ ಪ್ರಸ್ತಾವನೆಗಳನ್ನು ಆಹ್ವಾನಿಸಿದ್ದಾರೆ.
ಆಸಕ್ತಿಯುಳ್ಳ ಬಿಡ್ಡುದಾರರು ಇ–ಆಡಳಿತ ಕೇಂದ್ರದ ಯೂನಿಫೈಡ್ ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರಂ ಬಳಸಿ ವಿದ್ಯುನ್ಮಾನವಾಗಿ ತಮ್ಮ ತಾಂತ್ರಿಕ ಹಾಗೂ ವಾಣಿಜ್ಯ ಪ್ರಸ್ತಾವನೆಗಳನ್ನು ಸಲ್ಲಿಸಬೇಕು. ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನ ಯುಆರ್‌ಎಲ್: http://www.eproc.karnataka.gov.in
ಸರಬರಾಜು ಮಾಡುವ ಅವಧಿ: ಸರಬರಾಜು ಆದೇಶ ನೀಡಿದ ದಿನಾಂಕದಿಂದ ಮೂರು ತಿಂಗಳು. ವಿಚಾರಣೆಗೆ ಕಡೆಯ ದಿನಾಂಕ ಮತ್ತು ಸಮಯ: **20.01.2022ರಂದು 14.00 ಗಂಟೆವರೆಗೆ.** ಟೆಂಡರ್ ಸ್ವೀಕರಿಸುವ ಕಡೆಯ ದಿನಾಂಕ ಮತ್ತು ಸಮಯ: **20.01.2022ರಂದು 16.00 ಗಂಟೆವರೆಗೆ.** ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **21.01.2022ರಂದು 16.00 ಗಂಟೆಗೆ.** ಹಣಕಾಸಿನ ಬಿಡ್ ತೆರೆಯುವ ದಿನಾಂಕ: **24.01.2022ರಂದು 16.00 ಗಂಟೆಗೆ.**
ಹೆಚ್ಚಿನ ವಿವರಗಳಿಗೆ ದಯವಿಟ್ಟು ಸಂಪರ್ಕಿಸಿ: ಮುಖ್ಯ ಅಭಿಯಂತರರು (ಬಿಬಿಎಂಪಿ), ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್, ಬೆಂಗಳೂರು–09. ದೂ.ಸಂಖ್ಯೆ: 080–28015604. ಮಾಹಿತಿಗಾಗಿ ಇಲ್ಲಿಗೆ ಲಾಗಾನ್ ಆಗಿ: www.kridl.org.in
ವಾಸಾಸಂಇ/ಉನಿ.ನ/2690/ಎಂಸಿಎ/2021–22 ಸಹಿ/- ಮುಖ್ಯ ಅಭಿಯಂತರರು (ಬಿಬಿಎಂಪಿ)
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಚೇರಿ, ಮಹಾಲಕ್ಷ್ಮಿಪುರಂ ವಿಭಾಗ, 12ನೇ ಮುಖ್ಯರಸ್ತೆ, 11ನೇ ಅಡ್ಡರಸ್ತೆ, ಪಶ್ಚಿಮ ಕಾರ್ಡ್ ರಸ್ತೆ, ಬೆಂಗಳೂರು.
ಸಂಖ್ಯೆ: ಕಾಪಾಅ/ಮಪು/ಟೆಂಡರ್/ಇ–ಪ್ರೊಕ್/11/2021–22 ದಿನಾಂಕ: 03.01.2022
ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ) ದ್ವಿಲಕೋಟೆ ಟೆಂಡರ್ ದಾಖಲೆ ಪದ್ಧತಿ
(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)
ಕಾರ್ಯಪಾಲಕ ಅಭಿಯಂತರರು, ಮಹಾಲಕ್ಷ್ಮಿಪುರಂ ವಿಭಾಗ, ಬೃ.ಬೆಂ.ಮ.ಪಾಲಿಕೆ, ಬೆಂಗಳೂರು, ಇವರು ಕೆ.ಪಿ.ಡಬ್ಲ್ಯೂ.ಡಿ/ಸಿ.ಪಿ.ಡಬ್ಲ್ಯೂ.ಡಿ/ರೈಲ್ವೇಸ್/ಎಂ.ಇ.ಎಸ್/ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ 1ನೇ ದರ್ಜೆ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕಾಮಗಾರಿಯ ಹೆಸರು	ಕಾಮಗಾರಿಯ ಅಂದಾಜು ಮೊತ್ತ (₹. ಲಕ್ಷಗಳಲ್ಲಿ)	ಇಎಂಡಿ ಮೊತ್ತ (₹. ಲಕ್ಷಗಳಲ್ಲಿ)
ವಾರ್ಡ್ ಸಂಖ್ಯೆ–43, ನಂದಿನಿ ಬಡಾವಣೆಯಲ್ಲಿ ಶ್ರೀ. ಶ್ರೀ. ಬಾಲಗಂಗಾಧರನಾಥ ಸ್ವಾಮೀಜಿ ಕಂಚಿನ ಪ್ರತಿಮೆ ನಿರ್ಮಿಸುವುದು ಮತ್ತು ಒದಗಿಸುವುದು ಹಾಗೂ ಸುತ್ತ–ಮುತ್ತಲ ಪ್ರದೇಶಗಳಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಮಾಡುವುದು.	165.00	2.48

ಟೆಂಡರ್ ವೇಳಾಪಟ್ಟಿ: (1) ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಸಲ್ಲಿಸಲು ಕೊನೆಯ ದಿನಾಂಕ **27.01.2022**ರ ಮಧ್ಯಾಹ್ನ **3:00** ಗಂಟೆವರೆಗೆ ಅಥವಾ ಮುಂಚಿತವಾಗಿ. (2) ಬಿಡ್ ಪೂರ್ವಭಾವಿ ಸಭೆಯನ್ನು ಕಾರ್ಯಪಾಲಕ ಅಭಿಯಂತರರ ಕಚೇರಿ, ಮಹಾಲಕ್ಷ್ಮಿಪುರಂ ವಿಭಾಗದಲ್ಲಿ ದಿನಾಂಕ **18.01.2022**ರ ಬೆಳಿಗ್ಗೆ **11:30** ಗಂಟೆಗೆ ನಡೆಸಲಾಗುವುದು. (3) ತಾಂತ್ರಿಕ ಬಿಡ್‌ಗಳನ್ನು ಕಾರ್ಯಪಾಲಕ ಅಭಿಯಂತರರ ಕಚೇರಿ, ಮಹಾಲಕ್ಷ್ಮಿಪುರಂ ವಿಭಾಗದಲ್ಲಿ ದಿನಾಂಕ **29.01.2022**ರ ಬೆಳಿಗ್ಗೆ **11:00** ಗಂಟೆಗೆ ತೆರೆಯಲಾಗುವುದು. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್:https://eproc.karnataka.gov.in ನಲ್ಲಿ ಪಡೆದುಕೊಳ್ಳಬಹುದಾಗಿದೆ.
ಸಹಿ/– ಕಾರ್ಯಪಾಲಕ ಅಭಿಯಂತರರು,
ಮಹಾಲಕ್ಷ್ಮಿಪುರಂ ವಿಭಾಗ
ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ



ಒಟಿಟಿ ಲೋಕದಲ್ಲಿ ಪಾತಾಳಗರಡಿ

> ಒಟಿಟಿ ಪ್ಲಾಟ್‌ಫಾರಂಗಳಿಗೆ ಅಲ್ಗಾರಿದಂ ಎಂಜಿನ್‌ಗಳನ್ನು ಒದಗಿಸುವುದೇ ಒಂದು ಉದ್ಯಮವಾಗಿಯೂ ಬೆಳೆದಿದೆ. ನಮ್ಮ ದೇಶವೊಂದರಲ್ಲೇ 90ಕ್ಕೂ ಹೆಚ್ಚು ಒಟಿಟಿ ಪ್ಲಾಟ್‌ಫಾರಂ ಇವೆ!

ಕೃಷ್ಣ ಭಟ್

ಶಿಫಾರಸು ಅನ್ನೋದು ಪ್ರಭಾವಿ ವ್ಯಕ್ತಿಗಳು ಮತ್ತು ರಾಜಕಾರಣಿಗಳಿಗೆ ಮಾತ್ರ ಸೀಮಿತವಲ್ಲ! ಬಹಳಷ್ಟು ಕೆಲಸಗಳು ಶಿಫಾರಸಿನ ಮೇಲೆಯೇ ನಡೆಯುತ್ತಿರುತ್ತವೆ. ನಾವು ಒಂದು ಬೈಕ್ ಸರ್ವೀಸ್ ಮಾಡಿಸುವುದಕ್ಕೂ, ಸ್ನೇಹಿತರನ್ನು ಕೇಳುತ್ತೇವೆ. ಯಾವ ಬೈಕ್ ಸರ್ವೀಸ್ ಮಾಡುವವ ಚೆನ್ನಾಗಿದ್ದಾನೆ ಅಂತ. ‘ನಾನು 4-5 ವರ್ಷದಿಂದ ಇವನತ್ರಾನೇ ಬೈಕ್ ಸರ್ವೀಸ್ ಮಾಡಿಸ್ತಿದ್ದೇನೆ. ಚೆನ್ನಾಗಿ ಮಾಡ್ತಾನೆ’ ಅಂತ ಅಂದ ಕೂಡಲೇ ನಾವು ಬೇರೆ ಯೋಚನೆ ಮಾಡದೇ ಅಲ್ಲಿಗೆ ಹೋಗುತ್ತೇವೆ.

ಇಂಥ ಶಿಫಾರಸು ವ್ಯವಸ್ಥೆ ಮಾಡುವ ವ್ಯವಸ್ಥೆಯನ್ನ ಅತ್ಯಂತ ಅದ್ಭುತವಾಗಿ ಮತ್ತು ಹೊಸ ತಂತ್ರಜ್ಞಾನಗಳನ್ನು ಅಳವಡಿಸಿಕೊಂಡು ಬಳಸಿದ್ದು ಒಟಿಟಿ ಪ್ಲಾಟ್‌ಫಾರಂಗಳು!

ಹೊಸದಾಗಿ ಒಟಿಟಿ ಪ್ಲಾಟ್‌ಫಾರಂವೊಂದಕ್ಕೆ ಒಂದು ವರ್ಷದ ಚಂದಾ ಕೊಟ್ಟು ಸೇರಿರುತ್ತೀರಿ ಅಂದುಕೊಳ್ಳಿ. ಅದರಲ್ಲಿ ಸಾವಿರಾರು ಸಿನಿಮಾ, ಸಿರೀಸ್‌ಗಳಿವೆ. ಟಾಪ್ ಟೆನ್ ಪಟ್ಟಿಯನ್ನೇನೋ ಕೊಟ್ಟಿದ್ದಾರೆ. ಆದರೆ, ಅದರಲ್ಲಿ ನಿಮ್ಮ ರುಚಿಗೆ ತಕ್ಕ ಸಿನಿಮಾ ಇಲ್ಲ. ನಿಮಗೆ ಇಷ್ಟವಾಗುವ ಸಿನಿಮಾ ಆ ಪ್ಲಾಟ್‌ಫಾರಂನಲ್ಲಿ ಇರಬಹುದು. ಆದರೆ, ಅದರ ಹೆಸರು ನಿಮಗೆ ಗೊತ್ತಿಲ್ಲ. ಹೀಗಾಗಿ, ನಿಮಗೆ ಯಾವುದನ್ನು ನೋಡಬೇಕು ಎಂಬುದು ಗೊತ್ತಿಲ್ಲ.

ಇಂಥ ಸಮಸ್ಯೆಯನ್ನು ನೀಗಿಸುವುದಕ್ಕೆಂದೇ ಆರ್ಟಿಫಿಶಿಯಲ್ ಇಂಟಲಿಜೆನ್ಸ್ ಜೊತೆಗೆ ಅಲ್ಗಾರಿದಂ ಅನ್ನು ಬಹುತೇಕ ಒಟಿಟಿ ಪ್ಲಾಟ್‌ಫಾರಂಗಳು ಬಳಸುತ್ತಿವೆ.

ವ್ಯಕ್ತಿಯೊಬ್ಬ ಹೊಸದಾಗಿ ಒಟಿಟಿ ಪ್ಲಾಟ್‌ಫಾರಂಗೆ ಸೇರುತ್ತಿದ್ದ ಹಾಗೆಯೇ ಜ್ಞಾನ ಆಧಾರಿತವಾದ ಅಲ್ಗಾರಿದಂ ಕೆಲಸ ಮಾಡುತ್ತದೆ. ವ್ಯಕ್ತಿಯ ವಯೋಮಾನಕ್ಕೆ ಸೂಕ್ತವಾದ ಒಂದಿಷ್ಟು ಸಿರೀಸ್ ಹಾಗೂ ಸಿನಿಮಾಗಳನ್ನು ಅದರಲ್ಲಿ ಶಿಫಾರಸು ಮಾಡಲಾಗುತ್ತದೆ. ಈ ಶಿಫಾರಸುಗಳಲ್ಲಿ ತೋರಿಸಿದ ಕೆಲವು ಟೈಟಲ್‌ಗಳನ್ನು ನೋಡುತ್ತಿದ್ದ ಹಾಗೆಯೇ, ನೀವು ಇದನ್ನು ನೋಡಿದ್ದರಿಂದ ನಿಮಗೆ ಇದೇ ವಿಭಾಗದ ಇನ್ನಷ್ಟು ಸಿನಿಮಾ, ಸಿರೀಸ್‌ಗಳನ್ನು ತೋರಿಸಲಾಗುತ್ತದೆ. ಇದು ಕಂಟೆಂಟ್ ಆಧಾರಿತ ಅಲ್ಗಾರಿದಂಗಳು. ನಂತರದ ಹಂತದಲ್ಲಿ ಸಂಯೋಜಿತ ಫಿಲ್ಟರ್ ಶಿಫಾರಸುಗಳನ್ನು ಒಟಿಟಿ ಪ್ಲಾಟ್‌ಫಾರಂಗಳು ನಿಮ್ಮ ಮುಂದಿಡುತ್ತವೆ!

ಎಲ್ಲಕ್ಕಿಂತ ಹೆಚ್ಚು ನಿಖರ ಮತ್ತು ಪಾರದರ್ಶಕವಾಗಿ ನೆಟ್‌ಫ್ಲಿಕ್ಸ್ ತನ್ನ ಅಲ್ಗಾರಿದಂಗಳನ್ನು ರೂಪಿಸಿಕೊಂಡಿದೆ. ನೀವು ಒಂದು ನಾಲ್ಕಾರು ಸಿನಿಮಾ ಅಥವಾ ಸಿರೀಸ್‌ಗಳನ್ನು ನೋಡಿದ ನಂತರ ನಿಮಗೆ ಅಷ್ಟೇ ನಿಖರವಾದ ಶಿಫಾರಸುಗಳನ್ನು ಅದು ಮಾಡುತ್ತದೆ. ತೀರಾ ಸಣ್ಣಪುಟ್ಟ ಒಟಿಟಿ ಪ್ಲಾಟ್‌ಫಾರಂಗಳನ್ನು ಹೊರತುಪಡಿಸಿ ಬಹುತೇಕ ಎಲ್ಲ ಒಟಿಟಿ ಪ್ಲಾಟ್‌ಫಾರಂಗಳು ಈ ಅಲ್ಗಾರಿದಂ ವ್ಯವಸ್ಥೆಯನ್ನು ಅಳವಡಿಸಿಕೊಂಡಿವೆ. ಈ ವ್ಯವಸ್ಥೆಯೇನೂ ಹೊಸದಲ್ಲದಿದ್ದರೂ, ಒಟಿಟಿ ಪ್ಲಾಟ್‌ಫಾರಂಗಳು ಹಾಗೂ ಆರ್ಟಿಫಿಶಿಯಲ್ ಇಂಟಲಿಜೆನ್ಸ್ ಎಲ್ಲ ಬಂದ ಮೇಲೆ ಈ ಅಲ್ಗಾರಿದಂಗೆ ಹೊಸ ರೂಪ ಸಿಕ್ಕಿದೆ.

> ಒಟಿಟಿ ಪ್ಲಾಟ್‌ಫಾರಂಗೆ ನಾವು ಸೇರುತ್ತಿದ್ದ ಹಾಗೆಯೇ ಜ್ಞಾನ ಆಧಾರಿತವಾದ ಅಲ್ಗಾರಿದಂ ಕೆಲಸ ಮಾಡುತ್ತದೆ.

ಅಲ್ಗಾರಿದಂಗಳಲ್ಲಿ ಹಲವು ಡೇಟಾ ಸೆಟ್‌ಗಳು ಕೆಲಸ ಮಾಡುತ್ತವೆ. ಗ್ರಾಹಕರ ಡೇಟಾ, ವೀಡಿಯೊ ಪ್ಲೇ ಆದ ಅಂಕಿ–ಅಂಶಗಳು, ಒಂದು ವಿಡಿಯೊವನ್ನು ವ್ಯಕ್ತಿ ಎಷ್ಟು ಹೊತ್ತು ನೋಡಿದ್ದಾನೆ, ಯಾವ ಸಾಧನಗಳನ್ನು ಬಳಸಿದಾಗ ಯಾವ ವಿಡಿಯೊ ನೋಡಿದ್ದಾನೆ (ಉದಾ.: ಟಿವಿಯಲ್ಲಿ ಒಂದು ರೀತಿಯ ಕಂಟೆಂಟ್, ಮೊಬೈಲ್‌ನಲ್ಲಿ ಒಂದು ರೀತಿಯ ಕಂಟೆಂಟ್), ಯಾವ ಪ್ರದೇಶದ ಜನರು ಯಾವ ಕಂಟೆಂಟ್ ನೋಡಿದ್ದಾರೆ (ಕರ್ನಾಟಕದ ಜನರು ಕನ್ನಡವನ್ನೂ, ತಮಿಳುನಾಡಿನವರು ತಮಿಳನ್ನೂ ನೋಡುವುದು) ಎಂಬ ಅಂಕಿ–ಅಂಶಗಳೆಲ್ಲವೂ ಇಲ್ಲಿ ಕೆಲಸ ಮಾಡುತ್ತವೆ. ಇವೆಲ್ಲವನ್ನೂ ಪರಿಗಣಿಸಿದಯೇ ಅಲ್ಗಾರಿದಂ ನಮಗೆ ಶಿಫಾರಸು ಮಾಡುತ್ತವೆ.

ಒಟಿಟಿ ಪ್ಲಾಟ್‌ಫಾರಂಗಳು ಒದಗಿಸುವ ಈ ಶಿಫಾರಸುಗಳೇ ಅವುಗಳಿಗೆ ಮುಳುವಾಗಬಹುದು ಎಂದೂ ಒಂದು ಅಭಿಪ್ರಾಯವಿದೆ. ಅದು ಹೇಗೆಂದರೆ, ನೀವು ಒಂದು ಕ್ರೈಂ ಸಿರೀಸ್ ನೋಡುತ್ತೀರಿ. ಅದನ್ನು ನೋಡಿ ಮುಗಿಸುತ್ತಿದ್ದ ಹಾಗೆಯೇ, ನಿಮಗೆ ಬರಿ ಕ್ರೈಂ ಸಿರೀಸ್‌ಗಳದ್ದೇ ಶಿಫಾರಸು ಬರುತ್ತದೆ. ಆದರೆ, ನೀವು ಆ ಮೂಡ್‌ಗೆ ಸರಿಯಾಗಿ ಆ ಕ್ರೈಂ ಸಿರೀಸ್ ನೋಡಿರುತ್ತೀರಿ. ಬೇರೆ ಸಿನಿಮಾ ನೋಡಬೇಕು ಎಂದಾದರೆ ನೀವೇ ಹುಡುಕಬೇಕು. ಹೀಗಾಗಿ, ಈ ಅಲ್ಗಾರಿದಂಗಳು ನಮ್ಮ ಮನಸ್ಸನ್ನೇನೂ ಓದುವುದಿಲ್ಲವಾದ್ದರಿಂದ ಬಹುಬೇಗ ರೇಜಿಗೆ ಹುಟ್ಟಿಸುವ ಸಾಧ್ಯತೆ ಇರುತ್ತದೆ.

ಇದನ್ನು ನಿವಾರಿಸುವುದಕ್ಕೆಂದೇ ಕೆಲವು ಒಟಿಟಿಗಳು ಇದಕ್ಕೊಂದು ಮಾನವೀಯ ಸ್ಪರ್ಶವನ್ನೂ ನೀಡಿವೆ. ಕೆಲವು ದೊಡ್ಡ ದೊಡ್ಡ ನಟರು, ನಿರ್ದೇಶಕರಿಂದ ಅವರ ಮೆಚ್ಚಿನ ಸಿನಿಮಾ, ಸಿರೀಸ್‌ಗಳ ಶಿಫಾರಸು ಪಟ್ಟಿಗಳನ್ನು ಇವು ಪ್ರಕಟಿಸುತ್ತವೆ. ಈ ತಂತ್ರವನ್ನು ಅಮೆರಿಕದ ಜನಪ್ರಿಯ ಟೆಲಿವಿಷನ್ ನೆಟ್‌ವರ್ಕ್ ಹಾಗೂ ಒಟಿಟಿ ಪ್ಲಾಟ್‌ಫಾರಂ ಎಚ್‌ಬಿಒ ಮಾಡುತ್ತದೆ.

ಒಟಿಟಿ ಪ್ಲಾಟ್‌ಫಾರಂಗಳಿಗೆ ಈ ಅಲ್ಗಾರಿದಂ ಎಂಜಿನ್‌ಗಳನ್ನು ಒದಗಿಸುವುದೇ ಒಂದು ಉದ್ಯಮವಾಗಿಯೂ ಬೆಳೆದಿದೆ. ಒಟಿಟಿ ಪ್ಲಾಟ್‌ಫಾರಂ ಎಂದ ತಕ್ಷಣ ನಮ್ಮ ಕಣ್ಣಮುಂದೆ 2-3 ಹೆಸರುಗಳು ಬರಬಹುದು. ಆದರೆ, ನಮ್ಮ ದೇಶವೊಂದರಲ್ಲೇ 90ಕ್ಕೂ ಹೆಚ್ಚು ಒಟಿಟಿ ಪ್ಲಾಟ್‌ಫಾರಂ ಇವೆ ಎಂದರೆ ಆಶ್ಚರ್ಯವಾದೀತು! ಆದರೆ, ಅದು ನಿಜ. ಇವೆಲ್ಲಕ್ಕೂ ತಮ್ಮ ಚಂದಾದಾರರನ್ನು ಮೆಚ್ಚಿಸಲು ಅಲ್ಗಾರಿದಂ ಬೇಕು. ಸಣ್ಣ ಸಣ್ಣ ಪ್ಲಾಟ್‌ಫಾರಂಗಳು ತಾವೇ ಅಲ್ಗಾರಿದಂ ಅನ್ನು ಅಭಿವೃದ್ಧಿಪಡಿಸಲು ಸಾಧ್ಯವಾಗುವುದಿಲ್ಲ. ಅದು ವೆಚ್ಚದಾಯಕವೂ ಹೌದು. ಹೀಗಾಗಿ, ಇಂಥ ಸೇವೆಯನ್ನೇ ಒದಗಿಸುವವರಿಗೆ ಗುತ್ತಿಗೆ ಕೊಟ್ಟು ಸುಮ್ಮನಾಗುತ್ತವೆ.

ಕಂಟೆಂಟ್‌ಗಳು ಹೃದಯವಿದ್ದ ಹಾಗೆ, ಅಲ್ಗಾರಿದಂಗಳು ಒಟಿಟಿ ಪ್ಲಾಟ್‌ಫಾರಂಗಳಿಗೆ ಮನಸ್ಸು!

‘ಧ್ರುವ’ ದೇಶೀಯ ಮಾರ್ಗದರ್ಶಿ ಚಿಪ್

ಸುಧೀರ ಎಚ್. ಎಸ್.

ಸ್ಥಳ ಆಧಾರಿತ ಸೇವೆಗಳು ಪ್ರತಿಯೊಬ್ಬರ ಜೀವನದ ಅತ್ಯಗತ್ಯ ಭಾಗವಾಗಿದೆ. ವಿಶೇಷವಾಗಿ ಸ್ಮಾರ್ಟ್‌ಫೋನ್ ಮೂಲಕ ಬಳಸುವ ಗೂಗಲ್ ಮ್ಯಾಪ್ಸ್, ಓಲಾ, ಉಬರ್‌ನಂತಹ ಆ್ಯಪ್‌ಗಳು ಇಂತಹ ಸ್ಥಳ ಆಧಾರಿತ ಸೇವೆಯ ಮೇಲೆ ಅವಲಂಬಿತವಾಗಿವೆ. ಈ ಸೇವೆಯನ್ನು ಕಲ್ಪಿಸುವುದಕ್ಕೆ ಪೂರಕವಾದ ಅಂಶವೆಂದರೆ ಅಮೆರಿಕಕ್ಕೆ ಸೇರಿದ ಗ್ಲೋಬಲ್ ಪೊಸಿಷನಿಂಗ್ ಸಿಸ್ಟಮ್ (ಜಿಪಿಎಸ್), ರಷ್ಯಾದ ಗ್ಲೊನಾಸ್ (GLONAS) ಅಥವಾ ಯುರೋಪ್‌ನ ಗೆಲಿಲಿಯೋ (Galileo) ಎಂಬ ಜಾಗತಿಕ ಯಾನ (ನ್ಯಾವಿಗೇಷನಲ್) ಉಪಗ್ರಹ ವ್ಯವಸ್ಥೆ.

ಈ ವ್ಯವಸ್ಥೆಯಲ್ಲಿ ಉಪಗ್ರಹಗಳು ಭೂಮಿಯ ಯಾವುದೇ ಪ್ರದೇಶಕ್ಕೆ ಅಭಿಮುಖವಾಗಿ, ಕನಿಷ್ಠ 5–6 ಉಪಗ್ರಹಗಳು ತಮ್ಮ ವ್ಯಾಪ್ತಿಯನ್ನು ಹೊಂದಿರುತ್ತವೆ. ಅವುಗಳಿಂದ ಬರುವ ಸಂಕೇತಗಳನ್ನು ಸ್ವೀಕರಿಸಿ ಮತ್ತು ಅವುಗಳನ್ನು ವಿಶ್ಲೇಷಿಸಿದಾಗ ಆ ಸ್ಥಳದ ಅಕ್ಷಾಂಶ– ರೇಖಾಂಶ(latitude - longitude) ಗಳನ್ನು ನಿಖರವಾಗಿ ಗುರುತಿಸಲು ಸಾಧ್ಯ. ಈ ಎಲ್ಲ ಕಾರ್ಯಗಳನ್ನು ಸರಾಗವಾಗಿ ನೆರವೇರಿಸಲು ಸ್ಮಾರ್ಟ್‌ಫೋನ್ ತಯಾರಕರು ಅದಕ್ಕೆ ಪೂರಕವಾದ ಚಿಪ್ ಅನ್ನು ಬಳಸುತ್ತಾರೆ. ಸದ್ಯಕ್ಕೆ ಅತಿ ಹೆಚ್ಚು ಪ್ರಮಾಣದ ಸ್ಮಾರ್ಟ್‌ಫೋನ್‌ಗಳಲ್ಲಿ ಅಮೆರಿಕದ ಜಿಪಿಎಸ್ ವ್ಯವಸ್ಥೆಗೆ ಪೂರಕವಾದ ಚಿಪ್ ಬಳಕೆಯೇ ಹೆಚ್ಚು.

ಈ ವ್ಯವಸ್ಥೆಗಳು ಆಯಾ ದೇಶದ ಸ್ವತ್ತಾಗಿರುವುದರಿಂದ, ಅಮೆರಿಕ ಅಥವಾ ರಷ್ಯಾದೇಶಗಳು ಸಂಕೇತಗಳ ಬಳಕೆಯ ಅನುಮತಿಯನ್ನು ಯಾವಾಗ ಬೇಕಾದರೂ ತಡೆಯಬಹುದು. ಈ ಹಿಂದೆ ಕಾರ್ಗಿಲ್ ಯುದ್ಧದ ಸಮಯದಲ್ಲಿ ಭಾರತೀಯ ಸಶಸ್ತ್ರಪಡೆಗಳಿಗೆ ಜಿಪಿಎಸ್ ಬಳಸಲು ಅಮೆರಿಕ ಅನುಮತಿಸಲಿಲ್ಲ. ಇದರಿಂದ ಭಾರತವು ತನ್ನದೇ ಆದ ಉಪಗ್ರಹ ಮೂಲಕ ಸ್ಥಳ ಆಧಾರಿತ ಸೇವೆಗಳನ್ನು ಕಲ್ಪಿಸಲು ನಾವಿಕ್ (NAVIC) ಎಂಬ ಭಾರತೀಯ ಯಾನ ಉಪಗ್ರಹ ವ್ಯವಸ್ಥೆಯನ್ನು ರೂಪಿಸಲಾಯಿತು.

ನಾವಿಕ್ ವ್ಯವಸ್ಥೆ ಎಂಟು ಉಪಗ್ರಹಗಳ ಒಂದು ‘ನಕ್ಷತ್ರಪುಂಜ’. ಈ ಸಮೂಹವು ಭಾರತದೊಳಗಿನ ಬಳಕೆದಾರರಿಗೆ ನಿಖರವಾದ ಸ್ಥಾನದ ಮಾಹಿತಿಯನ್ನು ಒದಗಿಸುತ್ತದೆ ಮತ್ತು ಗಡಿಯಿಂದ 1,500 ಕಿಮೀವರೆಗೂ ಈ ಮಾಹಿತಿಯ ವ್ಯಾಪ್ತಿ ಇರುತ್ತದೆ. ಪ್ರಮುಖವಾಗಿ ಭಾರತೀಯ ಉಪಖಂಡದಾದ್ಯಂತ ವಿಶ್ವಾಸಾರ್ಹ ಸೇವೆಯನ್ನು ಒದಗಿಸಲು ಇದನ್ನು ಅಭಿವೃದ್ಧಿಪಡಿಸಲಾಗಿದೆ.

ಈ ವ್ಯವಸ್ಥೆಯನ್ನು ಭೂ, ವೈಮಾನಿಕ ಮತ್ತು ಸಮುದ್ರಸಂಚಾರಗಳಲ್ಲಿ ಬಳಸಬಹುದು. ವಿಪತ್ತು ನಿರ್ವಹಣೆ, ವಾಹನ ಟ್ರ್ಯಾಕಿಂಗ್ ಮತ್ತು ಫ್ಲೀಟ್ ನಿರ್ವಹಣೆ, ಚಾಲಕರಿಗೆ ದೃಶ್ಯ ಮತ್ತು ಧ್ವನಿ ಯಾನ; ಮೊಬೈಲ್ ಫೋನ್‌ಗಳೊಂದಿಗೆ ಏಕೀಕರಣ, ಮ್ಯಾಪಿಂಗ್ ಮತ್ತು ಜಿಯೋಡೆಟಿಕ್ ಡೇಟಾ ಕ್ಯಾಪ್ಚರ್, ಚಾಲಕರಿಗೆ ದೃಶ್ಯ ಮತ್ತು ಧ್ವನಿ ಸಂಚರಣೆ, ಮೊಬೈಲ್ ಫೋನ್‌ಗಳೊಂದಿಗೆ ಏಕೀಕರಣ, ಮ್ಯಾಪಿಂಗ್ ಮತ್ತು ಜಿಯೋಡೆಟಿಕ್ ಡೇಟಾ ಕ್ಯಾಪ್ಚರ್, ಸ್ಥಳ ಆಧಾರಿತ ಸೇವೆಗಳು, ಹುಡುಕಾಟ ಮತ್ತು ಪಾರುಗಾಣಿಕಾ ಸೇವೆಗಳು, ಚಾಲಕರಿಗೆ ದೃಶ್ಯ ಮತ್ತು ಧ್ವನಿಯಾನ – ಈ ಎಲ್ಲ ರೀತಿಯ ಬಳಕೆಗೆ ಒದಗುತ್ತದೆ.

ಇಷ್ಟಾದರೂ ಯಾವುದೇ ಮೊಬೈಲ್ ತಯಾರಕರು ನಾವಿಕ್ ಅನ್ನು ಇನ್ನೂ ಸ್ಥಳ ಆಧಾರಿತ ಸೇವಾವ್ಯವಸ್ಥೆಯ ಮುಖ್ಯವಾಹಿನಿಯ ಆಯ್ಕೆಯಾಗಿ ಸಂಯೋಜಿಸಿಲ್ಲ. ಪ್ರಸ್ತುತ, ನಾವಿಕ್‌ನ ಎಲ್ಲ ಬ್ಯಾಂಡ್‌ಗಳು ಮತ್ತು ಇತರ ವಿವಿಧ ಜಾಗತಿಕ ಯಾನ ಉಪಗ್ರಹ ವ್ಯವಸ್ಥೆ (ಜಿಪಿಎಸ್, ಗೆಲಿಲಿಯೋ, ಗ್ಲೊನಾಸ್) ಸ್ವೀಕರಿಸುವ ಏಕೈಕ ಏಕೀಕೃತ ಸಾಧಕವು ಅಸ್ತಿತ್ವದಲ್ಲಿಲ್ಲ. ಇದನ್ನು ಭೇದಿಸಲೆಂದು ಐಐಟಿ ಬಾಂಬೆಯಲ್ಲಿ ಪ್ರೊ. ರಾಜೇಶ್ ಹರಿಶ್ಚಂದ್ರ ಝೆಲೆ ಮತ್ತು ಅವರ ತಂಡವವು ‘ಧ್ರುವ’ ಎಂಬ ನಾವಿಕ್ ಸಾಮರ್ಥ್ಯದ ರೇಡಿಯೊ ಆವರ್ತನ (RF) ರಿಸೀವರ್ ಅನ್ನು ಅಭಿವೃದ್ಧಿಪಡಿಸಿದ್ದಾರೆ.

ನಾವಿಕ್ (L5 & S) ಮತ್ತು ಜಿಪಿಎಸ್ (L1 & L2)ನ ಎಲ್ಲಾ ನ್ಯಾವಿಗೇಷನ್ ಫ್ರೀಕ್ವೆನ್ಸಿ ಬ್ಯಾಂಡ್‌ಗಳಿಗಾಗಿ ಕಾರ್ಯನಿರ್ವಹಿಸಲು ಧ್ರುವ ಮೊದಲ ಸ್ಥಳೀಯವಾಗಿ ವಿನ್ಯಾಸಗೊಳಿಸಲಾದ ನ್ಯಾವಿಗೇಷನ್ ರಿಸೀವರ್ ಚಿಪ್ ಆಗಿದೆ. ಈ ಉನ್ನತ ತಂತ್ರಜ್ಞಾನ ಕ್ಷೇತ್ರದಲ್ಲಿ ಸ್ವಾವಲಂಬಿಯಾಗಲು ಇದು ಆರಂಭಿಕ ಹಂತವಾಗಿದೆ. ಹಲವಾರು ಪಿಎಚ್.ಡಿ. ಮತ್ತು ಎಂ. ಟೆಕ್ ವಿದ್ಯಾರ್ಥಿಗಳು ವಿನ್ಯಾಸ ಪರಿಕಲ್ಪನೆಯಿಂದ ಚಿಪ್ ತಯಾರಿಕೆ ಮತ್ತು ಪರೀಕ್ಷೆಗೆ ಸರ್ಕ್ಯೂಟ್ ಕಲ್ಪನೆಗಳನ್ನು ರೂಪಿಸಲು ವ್ಯಾಪಕವಾಗಿ ತರಬೇತಿ ಪಡೆದಿದ್ದಾರೆ.

ಇಂತಹ ಚಿಪ್ ಒಂದನ್ನು ರೂಪಿಸಲು ಹಲವಾರು ಸವಾಲುಗಳನ್ನು ಜಯಿಸಬೇಕಾಗಿದೆ. ಎಲ್ಲ ಸಂಕೇತಗಳಿಗೆ ಹೋಲಿಸಿದರೆ ಸ್ವೀಕರಿಸಿದ ಸಂಕೇತಗಳು ತುಂಬಾ ದುರ್ಬಲವಾಗಿರುತ್ತವೆ. ಹೀಗಾಗಿ, ರಿಸೀವರ್ ಎಲ್ಲಾ ಅಡ್ಡಿಪಡಿಸುವ ಸಂಕೇತಗಳನ್ನು ತೊಡೆದುಹಾಕಬೇಕು, ದುರ್ಬಲ ಅಪೇಕ್ಷಿತ ನ್ಯಾವಿಗೇಷನ್ ಸಿಗ್ನಲ್‌ಗಳನ್ನು ಬೇರ್ಪಡಿಸಬೇಕು, ನಂತರ ಅವುಗಳನ್ನು ಸುಮಾರು 400,000 ಬಾರಿ ವರ್ಧಿಸಬೇಕು ಮತ್ತು ನಂತರ ಆನ್-ಚಿಪ್ ಅನಲಾಗ್ ಟು ಡಿಜಿಟಲ್ ಪರಿವರ್ತಕಗಳನ್ನು ಬಳಸಿಕೊಂಡು ಅನಲಾಗ್ ಸಿಗ್ನಲ್‌ಗಳನ್ನು ಡಿಜಿಟೈಜ್ ಮಾಡಬೇಕು. ಧ್ರುವದಲ್ಲಿರುವ ಡಿಜಿಟಲ್ ಸಿಗ್ನಲ್ ಪ್ರೊಸೆಸರ್ ಬಳಕೆದಾರರ ಸ್ಥಳವನ್ನು ನಿರ್ಧರಿಸಲು ಡಿಜಿಟಲ್ ಸಿಗ್ನಲ್‌ಗಳನ್ನು ಸಂಸ್ಕರಣಗೊಳಿಸುತ್ತದೆ.

ಧ್ರುವದಲ್ಲಿನ ವಿವಿಧ ಸರ್ಕ್ಯೂಟ್ ವಿನ್ಯಾಸದ ಆವಿಷ್ಕಾರಗಳು ತೀವ್ರತರವಾದ ತಾಪಮಾನದ ಪರಿಸ್ಥಿತಿಗಳಲ್ಲಿ ದೃಢವಾದ ಕಾರ್ಯಕ್ಷಮತೆಯೊಂದಿಗೆ ಉತ್ಪಾದನೆ-ಸಿದ್ಧ ರಿಸೀವರ್ ಚಿಪ್‌ನ ಅಭಿವೃದ್ಧಿಗೆ ಕಾರಣವಾಯಿತು. ಇದನ್ನು 65 ನಾನೋ ಮೀಟರ್ (nm) ಸಿಮಾಸ್ (CMOS) ತಂತ್ರಜ್ಞಾನದಲ್ಲಿ ನಿರ್ಮಿಸಲಾಗಿದೆ. ರಿಸೀವರ್ 1.96 mm2ನ ಸಕ್ರಿಯ ಡೈ ಪ್ರದೇಶವನ್ನು ಆಕ್ರಮಿಸುತ್ತದೆ. ಹೀಗಾಗಿ, ರಿಸೀವರ್ ಯಾವುದೇ ಬಾಹ್ಯ ಘಟಕಗಳೊಂದಿಗೆ ಸಂಪೂರ್ಣವಾಗಿ ಸಂಯೋಜಿಸಲು ಸುಲಭ. ಇದರ ಪ್ರಸ್ತುತ ಟೆಕ್ನಾಲಜಿ ರೆಡಿನೆಸ್ ಲೆವೆಲ್ (TRL) 7. ಧ್ರುವ ಚಿಪ್ ಅನ್ನು ಲ್ಯಾಬ್‌ನಲ್ಲಿ ನಾವಿಕ್ ಮತ್ತು ಜಿಪಿಎಸ್ ಕಾರ್ಯವನ್ನು ಪ್ರದರ್ಶಿಸಲು ವ್ಯಾಪಕವಾಗಿ ಪರೀಕ್ಷಿಸಲಾಗಿದೆ. ಇದಕ್ಕೆ ಭಾರತೀಯ ಬಾಹ್ಯಾಕಾಶ ಸಂಸ್ಥೆ (ಇಸ್ರೋ) ಮತ್ತು ಕೇಂದ್ರ ಸರ್ಕಾರವು ವಿವಿಧ ಪರೀಕ್ಷೆಯ ಫಲಿತಾಂಶಗಳನ್ನು ವಿವರವಾಗಿ ಪರಿಶೀಲಿಸಿ ಸಂಪೂರ್ಣ ತೃಪ್ತಿ ವ್ಯಕ್ತಪಡಿಸಿವೆ.

ಎಲ್ಲ ಮೊಬೈಲ್‌ನಲ್ಲಿ ಮತ್ತು ಇತರೆ ವಿದ್ಯುನ್ಮಾನ ಸಾಧನಗಳು ಭಾರತೀಯ ಯಾನ ಉಪಗ್ರಹ ವ್ಯವಸ್ಥೆಯಾದ ನಾವಿಕ್ ಸಂಕೇತಗಳನ್ನು ಬಳಸಿ ಸ್ಥಳ ಆಧಾರಿತ ಸೇವೆಯನ್ನು ಕಲ್ಪಿಸಲು ಸಿದ್ಧವಾಗಿದೆ ‘ಧ್ರುವ’ ದೇಶೀಯ ಮಾರ್ಗದರ್ಶಿ ಚಿಪ್.



5ಜಿಗೂ ಮೊದಲು 6ಜಿ ಚಿಂತೆ!

ಉದಯ ಶಂಕರ ಪುರಾಣಿಕ

5ಜಿ ತಂತ್ರಜ್ಞಾನ ಸೌಲಭ್ಯವಿನ್ನೂ ಹಲವಾರು ಕಡೆ ಲಭ್ಯವಾಗಿಲ್ಲ. ಹೀಗಿರುವಾಗ 6ಜಿ ತಂತ್ರಜ್ಞಾನ ಸೌಲಭ್ಯಗಳನ್ನು ಕುರಿತು ಚರ್ಚೆ ನಡೆದಿರುವುದೇಕೆ ಎನ್ನುವ ಪ್ರಶ್ನೆಯನ್ನು ಹಲವರು ಕೇಳುತ್ತಾರೆ. ಆದರೆ 6ಜಿ ಚರ್ಚೆಗೆ ಸೀಮಿತವಾಗಿಲ್ಲ, ಹಲವಾರು ದೇಶಗಳು ಈ ತಂತ್ರಜ್ಞಾನ ಅಭಿವೃದ್ಧಿಗೆಂದು ಸಾವಿರಾರು ಕೋಟಿ ರೂಪಾಯಿ ಬಂಡವಾಳ ಹೂಡಲು ಮುಂದಾಗುತ್ತಿವೆ; ತಂತ್ರಜ್ಞಾನ ಕುರಿತು ಸಂಶೋಧನೆ, ಅಭಿವೃದ್ಧಿ ಮತ್ತು ಕಾರ್ಯಯೋಜನೆ ರೂಪಿಸಲು ತಜ್ಞರ ಸಮಿತಿಗಳ ನೇಮಕ ಮತ್ತು ವಿಜ್ಞಾನಿಗಳು, ಸಂಶೋಧಕರು ಹಾಗೂ ಉದ್ಯಮಗಳಿಗೆ ಪ್ರೋತ್ಸಾಹ ಯೋಜನೆಗಳನ್ನು ಘೋಷಿಸಿವೆ. ಅಮೆರಿಕದಲ್ಲಿ ವಿಜ್ಞಾನಿಗಳಿಗೆ ಮತ್ತು ಸಂಶೋಧಕರಿಗೆ 6ಜಿ ತಂತ್ರಜ್ಞಾನ ಅಭಿವೃದ್ಧಿಗಾಗಿ ಅಗತ್ಯವಾಗುವ 95 ಗಿಗಾ ಹರ್ಟ್ಸ್‌ದಿಂದ 3 ಟೆರಾ ಹರ್ಟ್ಸ್ ಸ್ಪೆಕ್ಟರ್ಮ್‌ನಲ್ಲಿ 21.2 ಗಿಗಾ ಹರ್ಟ್ಸ್ ತರಾಂಗಾಂತರವನ್ನು ಅಲ್ಲಿಯ ಟೆಲಿಕಾಂ ನಿಯಂತ್ರಣ ಪ್ರಾಧಿಕಾರವು ನೀಡಿದೆ.

> 6ಜಿ ತಂತ್ರಜ್ಞಾನ ಬಳಕೆಗೆ ಬಂದಾಗ ಸ್ಮಾರ್ಟ್‌ಫೋನ್‌ಗಳ ಯುಗ ಅಂತ್ಯವಾಗಲಿದೆ!

5ಜಿ–6ಜಿ: ಕೆಲವು ಪ್ರಮುಖ ವ್ಯತ್ಯಾಸಗಳು

5ಜಿ(ಎನ್‌ಆರ್) ಸೌಲಭ್ಯ ಬಳಸಿದಾಗ ಸೆಕೆಂಡಿಗೆ 1ರಿಂದ 20 ಗಿಗಾಬೈಟ್‌ಗಳವರೆಗೆ ಡೇಟಾ ಸಂವಹನ (ಅಪ್‌ಲೋಡ್ ಮತ್ತು ಡೌನ್‌ಲೋಡ್) ಮಾಡಬಹುದಾಗಿದೆ. 6ಜಿ ಸೌಲಭ್ಯ ಬಳಕೆಗೆ ಬಂದಾಗ ಸೆಕೆಂಡಿಗೆ 1 ಟೆರ್‍ರಾಬೈಟ್ ಅಂದರೆ 1000ಗಿಗಾಬೈಟ್ ಮತ್ತು ಅದಕ್ಕಿಂತ ಹೆಚ್ಚಿನವರೆಗೆ ಡೇಟಾ ಸಂವಹನ ಮಾಡಲು ಸಾಧ್ಯವಾಗುತ್ತದೆ. (ಈಗ ಅಮೆರಿಕದಲ್ಲಿ ಲಭ್ಯವಿರುವ ಅತಿವೇಗದ 4ಜಿ ಸೌಲಭ್ಯದಲ್ಲಿ ಸೆಕೆಂಡಿಗೆ 35 ಮೆಗಾಬೈಟ್‌ಗಳವರೆಗೆ ಡೇಟಾ ಸಂವಹನ ಮಾಡಲು ಸಾಧ್ಯವಾಗುತ್ತಿದೆ. (1 ಗಿಗಾಬೈಟ್ ಅಂದರೆ ಸುಮಾರು 1000 ಮೆಗಾಬೈಟ್‌ಗಳಷ್ಟಾಗುತ್ತದೆ ಮತ್ತು 1 ಟೆರ್‍ರಾಬೈಟ್ ಅಂದರೆ 10 ಲಕ್ಷ ಮೆಗಾಬೈಟ್‌ಗಳಷ್ಟಾಗುತ್ತದೆ).

5ಜಿ ಸೌಲಭ್ಯವನ್ನು ಬಳಸುವಾಗ, ಒಂದು ಕಡೆಯಿಂದ ಮತ್ತೊಂದು ಕಡೆಗೆ ಮಾಹಿತಿ ವಿನಿಮಯ (ಉದಾಹರಣೆಗೆ ಟೆಲಿಫೋನ್ ಕರೆ) ಮಾಡುವಾಗ, ಸುಮಾರು 1ರಿಂದ 5 ಮಿಲಿಸೆಕೆಂಡ್‌ಗಳ ವಿಳಂಬವಾಗಬಹುದು. ಆದರೆ 6ಜಿ ಸೌಲಭ್ಯದಲ್ಲಿ 0.1 ಮಿಲಿಸೆಕೆಂಡ್‌ಗಳ ವಿಳಂಬವಾಗುವ ನಿರೀಕ್ಷೆಯಿದೆ.

5ಜಿ ಸೌಲಭ್ಯವನ್ನು ಸ್ಮಾರ್ಟ್‌ಫೋನ್‌ಗಳು, ಐಓಟಿ ಸೆನ್ಸರ್‌ಗಳು ಮತ್ತು ಡ್ರೋನ್‌ಗಳಲ್ಲಿ ಬಳಸಬಹುದಾದರೆ, 6ಜಿ ಸೌಲಭ್ಯವನ್ನು ಇವೆಲ್ಲದರ ಜೊತೆಯಲ್ಲಿ ಐಓಟಿ, ರೋಬೋಟಿಕ್ಸ್‌ಗೆ ಅಗತ್ಯವಾದ ಡಿಸ್ಟ್ರಿಬ್ಯೂಟೆಡ್ ಲೆಡ್ಜರ್ ತಂತ್ರಜ್ಞಾನ, ಕ್ಲೌಡ್, ಸ್ಮಾರ್ಟ್ ವಿಡಿಯೊ ಹಾಗೂ ವೈದಕೀಯ ಕ್ಷೇತ್ರದಲ್ಲಿ ಮಾಹಿತಿ ತಂತ್ರಜ್ಞಾನದ ಸುರಕ್ಷತೆಗೆ ಅಗತ್ಯವಾದ ಸಿ.ಆರ್.ಎ.ಎಸ್. ತಂತ್ರಜ್ಞಾನ, ಮೆದುಳು ಮತ್ತು ಕಂಪ್ಯೂಟರ್ ಸಂವಹನ ವ್ಯವಸ್ಥೆ (ಬಿ.ಸಿ.ಐ.), ವಿಸ್ತರಿಸಲಾದ ರಿಯಾಲ್ಟಿ (ಇ.ಆರ್.) ತಂತ್ರಜ್ಞಾನ, ಮಾನವದೇಹದಲ್ಲಿ ಬಳಸಲಾಗುವ ಸ್ಮಾರ್ಟ್ ಹಾಗೂ 3-ಡಿ ಮುದ್ರಣ ತಂತ್ರಜ್ಞಾನದಿಂದ ತಯಾರಿಸಲಾದ ಹೃದಯ, ಮೂತ್ರಪಿಂಡ, ಯಕೃತ್ತು ಮೊದಲಾದ ಅಂಗಾಂಗಳ ನಿರ್ವಹಣೆ – ಹೀಗೆ ಹಲವು ಕಡೆಯಲ್ಲಿ ಬಳಸಬಹುದಾಗಿದೆ.

5ಜಿ ತಂತ್ರಜ್ಞಾನ ಬಳಸಲು ಸೂಕ್ತವಾದ ಸ್ಮಾರ್ಟ್‌ಫೋನ್‌ಗಳು ಮಾರುಕಟ್ಟೆಯಲ್ಲಿ ಲಭ್ಯವಾಗುತ್ತಿವೆ. ಆದರೆ 6ಜಿ ತಂತ್ರಜ್ಞಾನ ಬಳಕೆಗೆ ಬಂದಾಗ ಸ್ಮಾರ್ಟ್‌ಫೋನ್‌ಗಳ ಅಗತ್ಯವಿರುವುದಿಲ್ಲ. ಸ್ಮಾರ್ಟ್‌ಫೋನ್‌ಗಳ ಯುಗ ಅಂತ್ಯವಾಗಲಿದ್ದು, ಈಗ ಲಭ್ಯವಿರುವ ದೂರವಾಣಿ, ಇಂಟರ್ನೆಟ್, ವಿಡಿಯೊ ಕಾಲ್‌ಗಳಿಗಿಂತ ಹಲವು ಪಟ್ಟು ಉತ್ತಮವಾದ ಮತ್ತು ಅಧುನಿಕವಾದ ಸೌಲಭ್ಯಗಳು ಗ್ರಾಹಕರಿಗೆ ದೊರೆಯಲಿವೆ.

6ಜಿ ತಂತ್ರಜ್ಞಾನ ಬಳಕೆಗೆ ಬಂದಾಗ ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ತಂತ್ರಜ್ಞಾನವನ್ನು ಪೂರ್ಣ ಪ್ರಮಾಣದಲ್ಲಿ ಬಳಸಿಕೊಳ್ಳಲು ಸುಲಭವಾಗುತ್ತದೆ. ಇದರಿಂದಾಗಿ ಆರೋಗ್ಯಸೇವೆಗಳು, ದೂರವಾಣಿಸೇವೆಗಳು, ಮಾಧ್ಯಮ, ಶಿಕ್ಷಣ, ಸಾರಿಗೆ, ಸರ್ಕಾರದ ಸೇವೆಗಳು, ಉದ್ಯಮ, ವಾಣಿಜ್ಯ, ಕೃಷಿ – ಹೀಗೆ ಹಲವು ಕ್ಷೇತ್ರಗಳಲ್ಲಿ ಜನಸಾಮಾನ್ಯರಿಗೆ ಅನೇಕ ಮೌಲ್ಯಾಧಾರಿತ ಸೇವೆಗಳು, ಸುಲಭ ದರದಲ್ಲಿ ದೊರೆಯುವ ನಿರೀಕ್ಷೆ ಇದೆ. ಈಗ ಲಭ್ಯವಿರುವ ಚಲನಚಿತ್ರಗಳು, ಟಿವಿ, ಮುದ್ರಿತ ಪತ್ರಿಕೆಗಳು ಮತ್ತು ಪ್ರಕಟಣೆಗಳ ಬದಲಾಗಿ ಗ್ರಾಹಕನ ಅಭಿರುಚಿಗೆ ಮತ್ತು ಅಗತ್ಯಕ್ಕೆ ತಕ್ಕಂತೆ ವಿಶ್ವದ ಮೂಲೆಮೂಲೆಯಿಂದ ಸುದ್ದಿ ಸಮಾಚಾರ, ಸಿನಿಮಾ, ಮನೋರಂಜನೆ – ಹೀಗೆ ಹಲವಾರು ಸೌಲಭ್ಯಗಳು ಸುಲಭ ದರದಲ್ಲಿ ದೊರೆಯಲಿವೆ. ನಾವು ಧರಿಸುವ ಕನ್ನಡಕಗಳು ಮುಂದೆ ಸ್ಮಾರ್ಟ್ ಕನ್ನಡಕಗಳಾಗಲಿದ್ದು, ಕನ್ನಡಕದಲ್ಲೇ ದೂರವಾಣಿ ಕರೆಗಳನ್ನು ಮಾಡಲು, ಸ್ವೀಕರಿಸಲು ವ್ಯವಸ್ಥೆಯ ಜೊತೆಗೆ, ಬೇಕೆಂದಾಗ ಸುದ್ದಿ ಸಮಾಚಾರದಂತಹ ವಿವಿಧ ಸೌಲಭ್ಯಗಳನ್ನು ಬಳಸುವ ಆಯ್ಕೆ ಇರಲಿದೆ.

6ಜಿ ತಂತ್ರಜ್ಞಾನ ಭಾರತಕ್ಕೆ ಹೇಗೆ ಉಪಯೋಗ?

ನಮ್ಮ ದೇಶದಲ್ಲಿರುವ ಅಪಾರವಾದ ಪ್ರಾಕೃತಿಕ ವೈವಿಧ್ಯ, ನೈಸರ್ಗಿಕ ಸಂಪನ್ಮೂಲಗಳು, ಕಲೆ, ಭಾಷೆಗಳು – ಹೀಗೆ ವಿವಿಧ ಕಡೆ ಲಭ್ಯವಿರುವ ಮಾಹಿತಿಯನ್ನು ವೈಜ್ಞಾನಿಕವಾಗಿ ಸಂಗ್ರಹಿಸಲು, ಸಂಸ್ಕರಿಸಲು, ವಿತರಿಸಲು ಮತ್ತು ಬಳಸಲು 6ಜಿ ತಂತ್ರಜ್ಞಾನ ಸಹಾಯಕವಾಗುತ್ತದೆ. ಒಂದು ಸೆಕೆಂಡಿಗೆ 10ಲಕ್ಷ ಮೆಗಾಬೈಟ್‌ನಷ್ಟು ಡೇಟಾವನ್ನು ಒಂದು ಕಡೆಯಿಂದ ಮತ್ತೊಂದು ಕಡೆ ಕಳುಹಿಸಲು ಸಾಧ್ಯವಾಗುತ್ತದೆ ಅಂದಾಗ ನಮ್ಮ ದೇಶದ ಆಡಳಿತ, ದೈನಂದಿನ ಜೀವನಶೈಲಿ, ಸಾರ್ವಜನಿಕ ಸೇವೆಗಳು, ಶಿಕ್ಷಣ, ಆರೋಗ್ಯ ಸೇವೆಗಳು, ಹೀಗೆ ಹಲವು ಕ್ಷೇತ್ರಗಳಲ್ಲಿ ಆಗುವ ಬದಲಾವಣೆಯನ್ನು ನಾವು ಕಲ್ಪಿಸಿಕೊಳ್ಳಬಹುದಾಗಿದೆ. ಹವಾಮಾನ ಮುನ್ಸೂಚನೆ, ವಾಯುಮಾಲಿನ್ಯ, ಪ್ರಕೃತಿವಿಕೋಪಗಳು, ಸಾಂಕ್ರಾಮಿಕ ರೋಗಗಳನ್ನು ಕುರಿತ ಮಾಹಿತಿಯನ್ನು ಹೆಚ್ಚು ನಿಖರವಾಗಿ ಸಂಗ್ರಹಿಸಿ, ಸಂಸ್ಕರಿಸಿ ಮತ್ತು ಜನಸಾಮಾನ್ಯರಿಗೆ ನೀಡಲು ಸುಲಭವಾಗುತ್ತದೆ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಸುಭಾಷಿತ

ಹೌದು, ಪ್ರತಿಯೊಂದೂ ಸರಳವಾಗಿಯೇ ಇರುತ್ತದೆ. ಆದರೆ ಜನ ಅದನ್ನು ಸಂಕೀರ್ಣಗೊಳಿಸುತ್ತಾರೆ.

–ಅಲ್ಬರ್ಟ್ ಕಮು

ಆಫ್‌ಲೈನ್ ಪಾವತಿಗೆ ನಿಯಮ ಜನಪ್ರಿಯಗೊಳಿಸುವ ಸವಾಲು

ಇಂಟರ್ನೆಟ್ ಲಭ್ಯವಿಲ್ಲದ ಅಥವಾ ಇಂಟರ್ನೆಟ್ ಲಭ್ಯತೆಯು ತೀರಾ ದುರ್ಬಲವಾಗಿರುವ ಕಡೆಗಳಲ್ಲಿ ಆಫ್‌ಲೈನ್ ಮೂಲಕ ಹಣ ಪಾವತಿಸಲು ಅಗತ್ಯವಿರುವ ನಿಯಮಗಳ ಚೌಕಟ್ಟನ್ನು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಸೋಮವಾರ ಪ್ರಕಟಿಸಿದೆ. ಇದರ ಪ್ರಕಾರ, ಆಫ್‌ಲೈನ್ ಮೂಲಕ ಪ್ರತೀ ವಹಿವಾಟಿನಲ್ಲಿ ಗರಿಷ್ಠ ₹ 200ರವರೆಗೆ ಪಾವತಿಸಲು ಅವಕಾಶ ಸಿಗಲಿದೆ. ಕಳೆದ ಒಂದು ದಶಕದ ಅವಧಿಯಲ್ಲಿ, ಜನಸಾಮಾನ್ಯರ ಹಣಕಾಸಿನ ವಹಿವಾಟುಗಳಲ್ಲಿ ದೊಡ್ಡ ಮಟ್ಟದ ಬದಲಾವಣೆಯನ್ನು ತಂದಿರುವುದು ಏಕೀಕೃತ ಪಾವತಿ ವ್ಯವಸ್ಥೆ (ಯೂನಿಫೈಡ್ ಪೇಮೆಂಟ್ ಇಂಟರ್‌ಫೇಸ್–ಯುಪಿಐ). ರಾಷ್ಟ್ರೀಯ ಪಾವತಿ ನಿಗಮ (ಎನ್‌ಪಿಸಿಐ) ಅಭಿವೃದ್ಧಿಪಡಿಸಿದ ಈ ವ್ಯವಸ್ಥೆಯು ಡಿಜಿಟಲ್ ಪಾವತಿಯನ್ನು, ಬಹುಶಃ ಬೇರೆ ಯಾವ ಯೋಜನೆಗಳಿಂದಲೂ ಸಾಧಿಸಲಾಗದ ಮಟ್ಟಕ್ಕೆ ಜನಪ್ರಿಯಗೊಳಿಸಿದೆ. ನಗರ, ಪಟ್ಟಣಗಳ ಚಿಕ್ಕ-ಪುಟ್ಟ ಅಂಗಡಿಗಳ ಎದುರು ತೀರಾ ಸಣ್ಣ ಮೊತ್ತದ ವಹಿವಾಟಿಗೆ ಕೂಡ ಜನಸಾಮಾನ್ಯರು ಯುಪಿಐ ಆಧಾರಿತ ಆ್ಯಪ್ ಬಳಸಿ, ಹಣ ಪಾವತಿ ಮಾಡುತ್ತಿರುವುದು ಇದರ ಜನಪ್ರಿಯತೆಯನ್ನು ಹೇಳುತ್ತಿದೆ. ಯುಪಿಐ ಮೂಲಕ ನಡೆಯುವ ಪಾವತಿಗಳು ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿರುವುದನ್ನು ಅಂಕಿ-ಅಂಶಗಳು ಸ್ಪಷ್ಟವಾಗಿ ಹೇಳುತ್ತಿವೆ. ತರಕಾರಿ, ಸೊಪ್ಪು ಖರೀದಿಸಿದ್ದಕ್ಕೆ ಹಣ ಪಾವತಿಯಿಂದ ಆರಂಭಿಸಿ ಷೇರು ಹೂಡಿಕೆಗಳವರೆಗಿನ ಕೆಲಸವನ್ನು ಯುಪಿಐ ಮೂಲಕವೇ ಮಾಡಬಹುದು. ಅಷ್ಟು ಉಪಯುಕ್ತವಾಗಿದೆ, ದೈನಂದಿನ ಬದುಕಿನಲ್ಲಿ ಅಷ್ಟು ಮಹತ್ವದ್ದಾಗಿದೆ ಈ ವ್ಯವಸ್ಥೆ.

ಇದು, ಎಷ್ಟರಮಟ್ಟಿಗೆ ಬಳಕೆದಾರಸ್ನೇಹಿ ಆಗಿರುತ್ತದೆ ಎನ್ನುವುದು ವ್ಯವಸ್ಥೆಯ ಯಶಸ್ಸನ್ನು ತೀರ್ಮಾನಿಸುತ್ತದೆ

ಆದರೆ, ಇಂಟರ್ನೆಟ್ ಲಭ್ಯ ಇರುವವರಿಗೆ, ಸ್ಮಾರ್ಟ್ ಫೋನ್ ಹೊಂದಿರುವವರಿಗೆ ಮಾತ್ರ ಈ ವ್ಯವಸ್ಥೆಯನ್ನು ಬಳಸಲು ಸಾಧ್ಯ. 2ಜಿ ತಂತ್ರಜ್ಞಾನ ಬಳಸಿ ಕೆಲಸ ಮಾಡುವ ಫೀಚರ್ ಫೋನ್‌ಗಳನ್ನು ಹೊಂದಿರುವವರ ಸಂಖ್ಯೆ ಕೋಟಿಗಳ ಲೆಕ್ಕದಲ್ಲಿ ಇರುವ ಭಾರತದಲ್ಲಿ ಯುಪಿಐ ವ್ಯವಸ್ಥೆಯು ಎಲ್ಲರನ್ನೂ ತಲುಪಿಲ್ಲ ಎಂಬುದೂ ಸತ್ಯ. ಇದನ್ನು ಗಮನಿಸಿದ್ದ ಆರ್‌ಬಿಐ, ಇಂಟರ್ನೆಟ್ ಇಲ್ಲದೆಯೂ ಡಿಜಿಟಲ್ ಪಾವತಿಯನ್ನು ಸಾಧ್ಯವಾಗಿಸಬಹುದೇ ಎಂಬ ಬಗ್ಗೆ ಪರಿಶೀಲನೆ ನಡೆಸಿತ್ತು. ಪ್ರಾಯೋಗಿಕ ಪರೀಕ್ಷೆಯ ನಂತರದಲ್ಲಿ ಈಗ ಅದು ನಿಯಮಗಳ ಚೌಕಟ್ಟನ್ನು ರೂಪಿಸಿದೆ. ಮೊಬೈಲ್ ಫೋನ್, ಡೆಬಿಟ್ ಅಥವಾ ಕ್ರೆಡಿಟ್ ಕಾರ್ಡ್, ವಾಲೆಟ್ ಬಳಸಿ ಆಫ್‌ಲೈನ್ ಪಾವತಿ ಮಾಡಬಹುದು. ಯುಪಿಐ ಪಾವತಿಯಲ್ಲಿ ಮಹತ್ವದ ಹಂತ, ಬಳಕೆದಾರರು ಪಾಸ್‌ವರ್ಡ್ ನಮೂದಿಸಿ, ತಾವು ಮಾಡಬೇಕಿರುವ ಪಾವತಿಯನ್ನು ಅನುಮೋದಿಸುವುದು. ಹಣ ಪಾವತಿಯ ಸಂದರ್ಭದಲ್ಲಿ ವಂಚನೆ ಆಗದಂತೆ ನೋಡಿಕೊಳ್ಳುವಲ್ಲಿ ಇದು ಮಹತ್ವದ್ದು. ಆದರೆ, ಈಗ ಆಫ್‌ಲೈನ್ ಪಾವತಿಗಳಿಗೆ ರೂಪಿಸಿರುವ ನಿಯಮಗಳ ಪ್ರಕಾರ ಪಾಸ್‌ವರ್ಡ್ ಅಥವಾ ಒಟಿಪಿ (ಒಂದು ಬಾರಿ ಮಾತ್ರ ಬಳಸಬಹುದಾದ ಪಾಸ್‌ವರ್ಡ್) ಬಳಕೆ ಇರುವುದಿಲ್ಲ. ಆಫ್‌ಲೈನ್ ಮೂಲಕ ಒಂದು ವಹಿವಾಟಿನಲ್ಲಿ ₹ 200 ಮಾತ್ರ ಪಾವತಿಸಬಹುದಾದರೂ, ಪಾವತಿಯ ಸುರಕ್ಷತೆಯನ್ನು ಖಾತರಿಪಡಿಸುವ ಹಂತವೊಂದು ಇರುವುದು ಸೂಕ್ತ. ಈಗ ಬಿಡುಗಡೆ ಮಾಡಿರುವ ನಿಯಮಗಳ ಪ್ರಕಾರ, ದೂರದಲ್ಲಿರುವ ವ್ಯಕ್ತಿಗೆ ಆಫ್‌ಲೈನ್ ಮೂಲಕ ಹಣ ಪಾವತಿ ಸಾಧ್ಯವಿಲ್ಲ. ಹಣ ಕೊಡುವವ ಹಾಗೂ ಸ್ವೀಕರಿಸುವವ ಒಂದೇ ಕಡೆ ಇದ್ದಾಗ ಮಾತ್ರ ಈ ಬಗೆಯ ಪಾವತಿ ಸಾಧ್ಯವಾಗಲಿದೆ. ವಹಿವಾಟಿನ ಮೇಲಿರುವ ಈ ಎರಡು ಮಿತಿಗಳನ್ನು ಗಮನಿಸಿದಾಗ, ಆಫ್‌ಲೈನ್ ಪಾವತಿ ವ್ಯವಸ್ಥೆಯು ಪೂರ್ಣ ಪ್ರಮಾಣದಲ್ಲಿ ಜಾರಿಗೆ ಬಂದಾಗ ಸಣ್ಣ ಮೊತ್ತದ ಖರೀದಿಗಳಿಗೆ ಮಾತ್ರ ಸೀಮಿತವಾಗಿ ನಡೆಯಬಹುದು ಎಂದು ಅನ್ನಿಸುತ್ತಿದೆ. ಪಾವತಿಯಲ್ಲಿ ಲೋಪವಾದರೆ, ಗ್ರಾಹಕ ಆರ್‌ಬಿಐನ ಒಂಬುಡ್ಸ್‌ಮನ್ ವ್ಯವಸ್ಥೆಯ ಮೊರೆ ಹೋಗಿ ನ್ಯಾಯ ಕೇಳಲು ಅವಕಾಶ ಇರಲಿದೆ. ಇದು ಗ್ರಾಹಕರಲ್ಲಿ ಒಂದಿಷ್ಟು ವಿಶ್ವಾಸ ಮೂಡಿಸುವಂಥದ್ದಾದರೂ, ಒಂಬುಡ್ಸ್‌ಮನ್ ಬಗ್ಗೆ ಎಷ್ಟರಮಟ್ಟಿಗೆ ಅರಿವು ಮೂಡಿಸಲು ಬ್ಯಾಂಕಿಂಗ್ ವ್ಯವಸ್ಥೆಗೆ ಸಾಧ್ಯವಾಗಲಿದೆ, ಸ್ಥಳೀಯ ಭಾಷೆಗಳಲ್ಲಿ ಒಂಬುಡ್ಸ್‌ಮನ್ ಸೇವೆ ಎಷ್ಟರಮಟ್ಟಿಗೆ ಲಭ್ಯವಾಗಲಿದೆ ಎನ್ನುವುದು ಇಡೀ ವ್ಯವಸ್ಥೆಯ ಯಶಸ್ಸನ್ನು ತೀರ್ಮಾನಿಸಬಹುದು.

ಯುಪಿಐ ವ್ಯವಸ್ಥೆಯು ಜನಪ್ರಿಯತೆ ಪಡೆದುಕೊಂಡಿರುವುದಕ್ಕೆ ಒಂದು ಬಹುಮುಖ್ಯ ಕಾರಣ ಇಡೀ ಪಾವತಿ ಪ್ರಕ್ರಿಯೆಯು ಅತ್ಯಂತ ಸರಳವಾಗಿ ನಡೆಯುವುದು. ಸಾಂಪ್ರದಾಯಿಕ ಆನ್‌ಲೈನ್ ಬ್ಯಾಂಕಿಂಗ್‌ನಲ್ಲಿ ಇರುವ ಸಂಕೀರ್ಣತೆಗಳು ಇದರಲ್ಲಿ ಇಲ್ಲ. ಅಷ್ಟೇ ಅಲ್ಲ, ತೀರಾ ಕಡಿಮೆ ಸಾಮರ್ಥ್ಯದ ಸ್ಮಾರ್ಟ್ ಫೋನ್ ಮೂಲಕವೂ ಇಡೀ ಪ್ರಕ್ರಿಯೆ ಪೂರ್ಣಗೊಳ್ಳುತ್ತದೆ. ಇದೇ ಮಾತನ್ನು ಆಫ್‌ಲೈನ್ ಪಾವತಿಗೆ ಅನ್ವಯಿಸಿ ಹೇಳುವುದಾದರೆ, ಇದು ಎಷ್ಟರಮಟ್ಟಿಗೆ ಬಳಕೆದಾರಸ್ನೇಹಿ ಆಗಿರುತ್ತದೆ ಎನ್ನುವುದು ವ್ಯವಸ್ಥೆಯ ಯಶಸ್ಸನ್ನು ತೀರ್ಮಾನಿಸುತ್ತದೆ. ಸ್ಮಾರ್ಟ್ ಫೋನ್ ಹೊಂದಲಾಗದವರು, 4ಜಿ ಇಂಟರ್ನೆಟ್ ಸೇವೆಗಳನ್ನು ಪಡೆಯಲಾಗದವರು ಡಿಜಿಟಲ್ ಸಾಧನಗಳ ಬಳಕೆಯಲ್ಲಿ ಹೆಚ್ಚು ನುರಿತವರಾಗಿರುವುದಿಲ್ಲ ಎಂದು ಭಾವಿಸುವುದಾದಲ್ಲಿ, ಆಫ್‌ಲೈನ್ ಪಾವತಿ ಪ್ರಕ್ರಿಯೆಯು ಅವರಿಗೆ ಸರಳವೆನಿಸುವಂತೆ ಮಾಡುವುದು ದೊಡ್ಡ ಸವಾಲಾಗಬಹುದು. ಆದರೆ, ಆರ್‌ಬಿಐನ ಹೊಸ ಉಪಕ್ರಮದ ಯಶಸ್ಸು ಬಳಕೆಯನ್ನು ಸುಲಭಗೊಳಿಸುವುದರ, ಜನರಿಗೆ ಅವರ ಭಾಷೆಯಲ್ಲಿಯೇ ಸೇವೆಗಳನ್ನು ಒದಗಿಸುವುದರ ಹಾಗೂ ವ್ಯವಸ್ಥೆಯ ಮೇಲೆ ವಿಶ್ವಾಸ ಮೂಡಿಸುವುದರ ಮೇಲೆಯೇ ನಿಂತಿರುತ್ತದೆ.

ದಿನದ ಟ್ವೀಟ್

ಮುಕ್ತಗೊಳಿಸಿ

ಕ್ರಿಕೆಟ್ ಆಟಗಾರರು ಮತ್ತು ಸಿಬ್ಬಂದಿಯನ್ನು ‘ಬಯೋಬಬಲ್’ ಕಠಿಣ ನಿಯಮಗಳಿಂದ ಎಷ್ಟು ಸಾಧ್ಯವೋ ಅಷ್ಟು ಬೇಗ ಮುಕ್ತಗೊಳಿಸಬೇಕು. ಕೋವಿಡ್– 19ರ ತಡೆಗೆ ಮಾಡಿರುವ ಈ ವ್ಯವಸ್ಥೆಯು ವಿಶ್ವದ ಅತ್ಯುತ್ತಮ ಆಟವನ್ನು ಹಾಳು ಮಾಡುತ್ತಿದೆ.

ಕೆವಿನ್ ಪೀಟರ್ಸನ್, ಇಂಗ್ಲೆಂಡ್ ಕ್ರಿಕೆಟ್ ತಂಡದ ಮಾಜಿ ನಾಯಕ

ಕಿಡಿನುಡಿ

ಅಮರಿಂದರ್ ಸಿಂಗ್ ಅವರು ಅಧಿಕಾರದಲ್ಲಿ ಇದ್ದಾಗ ಹೇಳಬೇಕಾಗಿದ್ದುದನ್ನೆಲ್ಲ ನಾನು ನಾಲ್ಕು ಗೋಡೆಗಳ ಮಧ್ಯದಲ್ಲಿಯೇ ಹೇಳುತ್ತಿದ್ದೆ. ಫಲಿತಾಂಶ ಏನಾಯಿತು? ಬಹಿರಂಗವಾಗಿ ಹೇಳುವುದರಿಂದ ಹಾನಿಯೇನೂ ಇಲ್ಲ.

ನವಜೋತ್ ಸಿಂಗ್ ಸಿಧು, ಪಂಜಾಬ್ ಕಾಂಗ್ರೆಸ್ ಘಟಕದ ಅಧ್ಯಕ್ಷ

25 ವರ್ಷಗಳ ಹಿಂದೆ

ಭಾನುವಾರ, 5-1-1997

• **ಸಂಸ್ಕೃತ ಅಧ್ಯಯನದಲ್ಲಿ ಆಧುನಿಕ ವಿಜ್ಞಾನ ಬಳಕೆಗೆ ಕರೆ**

ಬೆಂಗಳೂರು, ಜ. 4– ಒಂದು ಕಾಲದಲ್ಲಿ ರಾಷ್ಟ್ರದ ಏಕತೆಯ ಸೇತುವೆಯಾದ ಸಂಸ್ಕೃತದ ಅಧ್ಯಯನಕ್ಕೆ ನಾಗಾಲೋಟದಲ್ಲಿ ಸಾಗಿರುವ ಆಧುನಿಕ ವಿಜ್ಞಾನ ಹಾಗೂ ತಂತ್ರಜ್ಞಾನವನ್ನು ಬಳಸಿಕೊಳ್ಳುವಂತೆ ಪ್ರಧಾನಿ ಎಚ್.ಡಿ. ದೇವೇಗೌಡರು ಇಂದು ಇಲ್ಲಿ ಕರೆ ನೀಡಿದರು.

ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ನಡೆದ ಹತ್ತನೇ ವಿಶ್ವ ಸಂಸ್ಕೃತ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದ ಅವರು, ಸಂಸ್ಕೃತ ಕೇವಲ ಮೇಲ್ವರ್ಗದವರ ಭಾಷೆ ಎಂಬ ವಾದವನ್ನು ತಳ್ಳಿಹಾಕಿದರು.

‘ಸಂಸ್ಕೃತವು ಗ್ರಾಂಥಿಕ ಭಾಷೆಯಾಗಿ ಪುರಾತನ ಸಾಹಿತ್ಯದ ಅಧ್ಯಯನಕ್ಕೆ ಮಾತ್ರ ಮೀಸಲಾಗಿದೆ ಎಂದು ದೇಶದ ಒಳಗೆ ಮತ್ತು ಹೊರಗೆ ಹಲವರು ಅಭಿಪ್ರಾಯ ತಳೆದಿದ್ದಾರೆ. ಇದು ಕಲಿತವರ ಹಾಗೂ ಪ್ರಜ್ಞಾವಂತರ ಭಾಷೆ, ಇದಕ್ಕೂ ವಾಸ್ತವ ಬದುಕಿಗೂ ಯಾವುದೇ ರೀತಿಯ ಸಂಬಂಧವಿಲ್ಲ ಎಂಬ ಭಾವನೆ ಇದೆ. ಆದರೆ, ಇದು ತಪ್ಪುಕಲ್ಪನೆ. ಸಂಸ್ಕೃತ ಅರಿಯದವರ ನಿರ್ಲಕ್ಷ್ಯದಿಂದ ಹುಟ್ಟಿರುವ ಕಲ್ಪನೆ ಇದು. ಒಂದು ವಿಷಯವನ್ನು ಸ್ಪಷ್ಟವಾಗಿ, ಮನೋಜ್ಞವಾಗಿ ಸಂವಾದಿಸಬಲ್ಲ ವಿಶಿಷ್ಟ ಗುಣ ಸಂಸ್ಕೃತಕ್ಕಿದೆ’ ಎಂದು ಹೇಳಿದರು.

• **‘ನಿದ್ರಿಸುವ ಪ್ರಧಾನಿ ನಾನಲ್ಲ’**

ಬೆಂಗಳೂರು, ಜ. 4– ‘ಗಾಣದ ಎತ್ತಿನಂತೆ ದುಡಿಯುವುದು ಗೊತ್ತು; ಅದಕ್ಕೆಂದೇ ದಿನಕ್ಕೆ 18–19 ತಾಸು ದುಡಿಯುತ್ತೇನೆ. ಆದರೆ ಮಾಧ್ಯಮಗಳು ನನ್ನನ್ನು ನಿದ್ರೆ ಮಾಡುವ ಪ್ರಧಾನಿ ಎಂದು ಚಿತ್ರಿಸುತ್ತಿವೆ...’

‘ಹಗಲಿರುಳೂ ನನಗೆ ಈ ದೇಶದ ಬಡವರಿಗೆ ಏನಾದರೂ ಒಳ್ಳೆಯದನ್ನು ಮಾಡಬೇಕು ಎಂಬ ಹಂಬಲ. ಇದನ್ನೇ ಯೋಚಿಸುತ್ತ ತಲೆಗೋ, ಹಣೆಗೋ ಕೈಯಿಟ್ಟು ಕುಳಿತರೆ ಅದನ್ನೇ ನಿದ್ರೆ ಎಂದು ತಿಳಿದು ಫೋಟೊ ಹಾಕಿ ಬರೆಯುತ್ತಾರೆ... ಬರೆಯಲಿ...’

ರಾಜ್ಯ ಸರ್ಕಾರಿ ನೌಕರರ ಸಂಘದ ಅಮೃತ ಮಹೋತ್ಸವವನ್ನು ಉದ್ಘಾಟಿಸಿ ಮಾತನಾಡಿದ ಪ್ರಧಾನಿ ಎಚ್.ಡಿ. ದೇವೇಗೌಡ ಮಾಧ್ಯಮಗಳ ವಿರುದ್ಧ ಕಿಡಿಕಾರಿದರು.

50 ವರ್ಷಗಳ ಹಿಂದೆ

ಬುಧವಾರ, 5-1-1972

• **ಅಮೆರಿಕ ನೆರವು ನಿಲ್ಲಿಸಿದ ಹಿನ್ನೆಲೆಯಲ್ಲಿ ರಾಷ್ಟ್ರದ ಆರ್ಥಿಕ ಪರಿಸ್ಥಿತಿ ಸಮೀಕ್ಷೆ**

ನವದೆಹಲಿ, ಜ. 4– ಅಮೆರಿಕವು ಆರ್ಥಿಕ ನೆರವು ನಿಲ್ಲಿಸಿರುವುದರಿಂದ ರಾಷ್ಟ್ರದ ಹಣಕಾಸು ಪರಿಸ್ಥಿತಿ ಮೇಲೆ ಉಂಟಾಗಿರುವ ಪರಿಣಾಮವನ್ನು ಸಂಪುಟದ ರಾಜಕೀಯ ವ್ಯವಹಾರಗಳ ಸಮಿತಿ ಇಂದು ಚರ್ಚಿಸಿತು.

ಈ ಹಿನ್ನೆಲೆಯಲ್ಲಿ ವಿದೇಶಿ ವಿನಿಮಯ ಸಂಚಿತ ನಿಧಿಗಳ ಪರಿಸ್ಥಿತಿ ಹಾಗೂ ತುರ್ತು ಅಗತ್ಯವಿರುವ ಉಕ್ಕು, ರಾಸಾಯನಿಕ ಗೊಬ್ಬರಗಳು, ಲೋಹಗಳು ಹಾಗೂ ಬಿಡಿ ಭಾಗಗಳ ಉತ್ಪಾದನೆಯನ್ನು ರಾಷ್ಟ್ರದಲ್ಲಿ ಹೆಚ್ಚಿಸುವುದರ ಜತೆಗೆ ಬೇರೆ ಮೂಲಗಳಿಂದ ಪಡೆಯುವ ಕ್ರಮಗಳನ್ನು ಸಮಿತಿ ಚರ್ಚಿಸಿತು.

ಭಾಷೆಗೆಲ್ಲಾದರೂ ನಮ್ಮ ಸೈದ್ಧಾಂತಿಕ ಸರಿತನದ ಗೊಡವೆ ಇರುತ್ತದೆಯೇ?

‘ಎಲ್ಲರ ಕನ್ನಡ’: ಸಾಧ್ಯತೆ, ಸವಾಲು

ವಿಶ್ಲೇಷಣೆ

ಡಾ. ಟಿ.ಎನ್.ವಾಸುದೇವಮೂರ್ತಿ

ಭಾಷೆ ಹರಿವ ನೀರಿನಂತೆ ನಿರಂತರವಾಗಿ ಬದಲಾಗುವಂತಹದು. ಕಡಲಿನತ್ತ ಹರಿವ ನದಿ ಹೇಗೆ ನಿರ್ದಿಷ್ಟ ಪಥ ಪಾತ್ರಗಳನ್ನು ಮುನ್ನವೇ ಗೊತ್ತು ಮಾಡಿಕೊಳ್ಳುವುದಿಲ್ಲವೋ ಅಂತೆಯೇ ಭಾಷೆಯೂ ಯಾರ ಊಹೆಗೂ ನಿಲುಕದಂತೆ, ಯಾರ ಅಪೇಕ್ಷೆ ಅಂದಾಜುಗಳಿಗೂ ಸಿಲುಕದಂತೆ ಬದಲಾಗುತ್ತಿರುತ್ತದೆ.

ಭಾಷೆಯ ಹುಟ್ಟು-ವಿಕಾಸಗಳ ಪ್ರಶ್ನೆಗೆ ಭಾಷಾವಿಜ್ಞಾನಕ್ಕೆ ಈವರೆಗೆ ಸ್ಪಷ್ಟ ಉತ್ತರ ಸಿಕ್ಕಿಲ್ಲ. ಹಿಂದಿದ್ದ ಭಾಷೆ ಈಗ ಬದಲಾಗಿದ್ದಲ್ಲಿ ಇಂತಿಂಥ ಕಾರಣಗಳಿಗೆ ಬದಲಾಗಿದೆ ಎಂದು ಭಾಷಾವಿಜ್ಞಾನಿಗಳು ವಿವರಿಸಬಲ್ಲರಲ್ಲದೇ ಈಗಿರುವ ಭಾಷೆ ಮುಂದೆ ಇಂತಿಂಥ ಕಾರಣಗಳಿಗೇ ಬದಲಾಗಬಲ್ಲದು ಎಂಬ ಭವಿಷ್ಯವಾಣಿಯನ್ನಾಗಲೀ ಅಥವಾ ಇಂತಿಂಥ ಕಾರಣಗಳಿಗೇ ಬದಲಾಗತಕ್ಕದ್ದು ಎಂಬ ಆಗ್ರಹದ ಮಾತನ್ನಾಗಲೀ ಭಾಷಾವಿಜ್ಞಾನ ನುಡಿಯಲಾರದು. ಅಂತಹ ಆಗ್ರಹಗಳಿಗೆ ಬೌದ್ಧಿಕ ವಿಲಾಸಕ್ಕಿಂತ ಮಿಗಿಲಿನ ವ್ಯಾಪ್ತಿ ಇಲ್ಲ.

ಭಾಷೆ ಅಯಾದೃಚ್ಛಿಕವಾಗಿ ಬದಲಾಗುತ್ತದಲ್ಲದೇ ಚಳವಳಿ, ಅಭಿಯಾನಗಳಿಂದ ಬದಲಾವಣೆ ತರಲಾಗುವುದಿಲ್ಲ. ಒಂದು ಭಾಷಾ ಸಮುದಾಯ ಅಂತಹ ಬದಲಾವಣೆಗೆ ಆಸ್ಪದವನ್ನೂ ನೀಡುವುದಿಲ್ಲ. ಪದ-ವಾಕ್ಯಗಳ ರಚನೆ-ಪ್ರಯೋಗಗಳ ವಿಷಯದಲ್ಲಿ ಒಂದು ಭಾಷಾ ಸಮುದಾಯವು ಸರ್ವಸಮ್ಮತವಾದ ಒಂದು ಕರಾರನ್ನು (ಪ್ರಮಾಣೀಕರಣವನ್ನು) ನಿಗದಿ ಮಾಡಿರುತ್ತದೆ. ಅದನ್ನೇ ವ್ಯಾಕರಣವೆನ್ನುವುದು. ಒಬ್ಬ ವೈಯಾಕರಣಿ ಭಾಷೆಯ ಗತಿ-ಬದಲಾವಣೆಗಳನ್ನು ವೈಜ್ಞಾನಿಕ ನೆಲೆಯಲ್ಲಿ ವಿವರಿಸಿ ವಿಶ್ಲೇಷಿಸಬಲ್ಲನಲ್ಲದೇ ಭಾಷೆಯ ಹಣೆಬರಹವನ್ನು ತಿದ್ದುವ ಶಕ್ತಿ ಅವನಿಗಿರುವುದಿಲ್ಲ.

ಹಳಗನ್ನಡ ವೈಯಾಕರಣಿ ಕೇಶಿರಾಜನು ಭಾಷೆಯನ್ನು ಹೀಗೆಯೇ ಬಳಸಬೇಕೆಂದು ನಿಯಮ ರೂಪಿಸಿದನಾದರೂ ಆ ನಿಯಮವನ್ನು ಉಲ್ಲಂಘಿಸಿರುವ ಅನೇಕ ಪ್ರಯೋಗಗಳು ಅವನಿಗೂ ಹಿಂದಿನ ಕವಿಗಳಲ್ಲಿ, ಹಾಗೆಯೇ ಅವನ ಸಮಕಾಲೀನರಲ್ಲಿ ಕಂಡುಬಂದಿರುವುದುಂಟು. ಅಂತಹ ‘ನಿಯಮಬಾಹಿರ’ ಪ್ರಯೋಗವನ್ನು ಅವನು ಪ್ರತ್ಯೇಕವಾಗಿ ಉಲ್ಲೇಖಿಸಿ, ಹೀಗೂ ಪ್ರಯೋಗಿಸಬಹುದು ಎಂದು ತನ್ನ ‘ಶಬ್ದಮಣಿದರ್ಪಣ’ದಲ್ಲಿ ಅಲ್ಲಲ್ಲಿ ಷರಾ ಬರೆದಿರುವುದನ್ನು ನಾವು ಕಾಣಬಹುದು.

ಇದು ಬರೀ ಕೇಶಿರಾಜನ ಕತೆಯಲ್ಲ, ಜಗತ್ತಿನ ಎಲ್ಲ ವೈಯಾಕರಣಿಗಳ ಕತೆಯಾಗಿದೆ. ವ್ಯಾಸ, ವಾಲ್ಮೀಕಿ, ವೈದಿಕ ಋಷಿಗಳ ನಂತರ ಜನಿಸಿದ ಪಾಣಿನಿ ತನ್ನ ‘ಅಷ್ಟಾಧ್ಯಾಯಿ’ಯ ನಿಯಮಗಳನ್ನು ಉಲ್ಲಂಘಿಸಿರುವ ಪುರಾತನರ ಪ್ರಯೋಗಗಳನ್ನು ದೋಷವೆನ್ನದೇ ‘ಆರ್ಷಪ್ರಯೋಗ’ ಎಂದು ಕರೆಯುತ್ತಾನೆ.

ಇಂದು ‘ಎಲ್ಲರ ಕನ್ನಡ’ವನ್ನು ಪ್ರಚಾರ ಮಾಡಬೇಕೆಂಬ ಅಭಿಯಾನ ನಡೆಯುತ್ತಿದೆ. ಕನ್ನಡಕ್ಕೆ ಕನ್ನಡದ್ದೇ ವ್ಯಾಕರಣ, ಶಬ್ದಸಂಪತ್ತು, ಪದ-ವಾಕ್ಯರಚನೆ ಬೇಕೆಂಬ ಕೂಗು ಇಂದು ನಿನ್ನೆಯದಲ್ಲ. ‘ಕಬ್ಬಿಗರ ಕಾವಂ’ ಬರೆದ ಆಂಡಯ್ಯನ ಕಾಲದಿಂದಲೂ ಕನ್ನಡದ ಅನನ್ಯತೆಯನ್ನು ಸ್ಥಾಪಿಸುವ ಪ್ರಯತ್ನ ನಡೆದಿದೆ. ಕನ್ನಡಿಗರ ಸಂಸ್ಕೃತ ಮೋಹವನ್ನು, ಸಂಸ್ಕೃತ ಮಿಶ್ರಿತ ಕನ್ನಡ ಭಾಷಾ ಪ್ರಯೋಗವನ್ನು ಟೀಕಿಸುವ ಮಹಲಿಂಗರಂಗ ‘ತುಪ್ಪಕ್ಕೆ ಎಣ್ಣೆ ಬೆರೆಸುವುದು ತರವೇ?’ ಎಂದು ಕೇಳುತ್ತಾನೆ. ಆದರೆ ಆಂಡಯ್ಯ, ಮಹಲಿಂಗರಂಗನಂಥವರು ನಮ್ಮ ಪರಂಪರೆಯಲ್ಲಿ ಕಂಡುಬರುವ ವಿಶಿಷ್ಟ ನಮೂನೆಗಳೇ ವಿನಾ ಅಂತಹವರನ್ನು ಹೊಸ ಪರಂಪರೆಯ ಪ್ರವರ್ತಕರೆನ್ನಲಾಗುವುದಿಲ್ಲ.

ಅಕ್ಷರವೆಂಬುದು ಶತಶತಮಾನಗಳಿಂದಲೂ ಸಂಸ್ಕೃತದೊಂದಿಗೆ ನಂಟುಳ್ಳ ಮೇಲ್ವರ್ಗದ ಸ್ವತ್ತಾಗಿತ್ತು. ಸಹಜವಾಗಿಯೇ ಕನ್ನಡವು ಸಂಸ್ಕೃತದ ವರ್ಣಮಾಲೆ, ಪದಸಂಪತ್ತು, ವ್ಯಾಕರಣ ಮತ್ತು ಪ್ರಯೋಗಗಳಿಂದ ಪ್ರಭಾವಿತವಾಗಿತ್ತು. ಭಾರತದಂತಹ ದೇಶದಲ್ಲಿ ಎಲ್ಲ ಜಾತಿಗಳಿಗೆ ಸೇರಿದ ಬಹುಜನರು ಕೇವಲ ಇನ್ನೂರು ವರ್ಷಗಳ ಹಿಂದಷ್ಟೇ ಅಕ್ಷರಜ್ಞಾನ ಪಡೆಯಲಾರಂಭಿಸಿದ್ದಾರೆ. ಹಾಗಾಗಿ ಕನ್ನಡ ಭಾಷೆ ಈ ಬಹುಜನರ ನುಡಿಬಳಕೆಯ ಪ್ರಭಾವವನ್ನು ಹೊಂದತಕ್ಕದ್ದು ಎಂಬುದು ಈ ‘ಎಲ್ಲರ ಕನ್ನಡ’ ಪ್ರಚಾರಕರ ವಾದವಾಗಿದೆ.

ಅವರ ಪ್ರಕಾರ, ವರ್ಣಮಾಲೆಯಿಂದ ಮಹಾಪ್ರಾಣಾಕ್ಷರಗಳೆಲ್ಲವನ್ನೂ ತೆಗೆಯುವುದು, ವರ್ಣಮಾಲೆಯ ಅಕ್ಷರಗಳನ್ನು 52ರಿಂದ 32 ಅಕ್ಷರಗಳಿಗೆ ಇಳಿಸುವುದು, ಅದಕ್ಕನುಗುಣವಾಗಿ ಕಂಪ್ಯೂಟರ್ ಕೀಬೋರ್ಡ್ ವಿನ್ಯಾಸ ಪಡಿಸುವುದು, ಕನ್ನಡದ್ದೇ ಆದ ವ್ಯಾಕರಣ, ಪದರಚನೆ, ವಾಕ್ಯರಚನೆಗಳನ್ನು ರೂಪಿಸುವುದು, ಸಂಸ್ಕೃತದ ಬದಲಿಗೆ ಕನ್ನಡದ್ದೇ ಪದಗಳನ್ನು ಬಳಸುವುದು ಇತ್ಯಾದಿ ಸುಧಾರಣೆಗಳಾಗತಕ್ಕದ್ದು.

ಈ ದಿಸೆಯಲ್ಲಿ ಹಿರಿಯ ಭಾಷಾವಿಜ್ಞಾನಿ ಡಿ.ಎನ್.ಶಂಕರ ಬಟ್ ಅವರು ಹಲವು ದಶಕಗಳಿಂದ ಸಂಶೋಧಿಸುತ್ತಿದ್ದಾರೆ ಮತ್ತು ನಾಡಿನ ಬಹುತೇಕ ಎಲ್ಲ ಪ್ರಮುಖ ಭಾಷಾವಿಜ್ಞಾನಿಗಳೂ ಶಂಕರ ಬಟ್ ವಾದವನ್ನು ಅನುಮೋದಿಸುತ್ತಲೇ ಬಂದಿದ್ದಾರೆ. ಶಂಕರ ಬಟ್ ಅವರ ಸಂಶೋಧನೆಗಳನ್ನು ಲೇವಡಿ, ಅಪಹಾಸ್ಯದ ಧಾಟಿಯಲ್ಲಿ ಟೀಕಿಸಿರುವವರುಂಟೇ ವಿನಾ ದೃಢವಾದ ಸೈದ್ಧಾಂತಿಕ ತಳಹದಿಯಲ್ಲಿ ಅದನ್ನು ವಿರೋಧಿಸಿದವರಿಲ್ಲ. ಅಲ್ಲದೇ ಶಂಕರ ಬಟ್‌ರ ಈ ಎಲ್ಲರ ಕನ್ನಡವೆಂಬ ಅಭಿಯಾನ ರಾಜಕೀಯ, ಸಾಮಾಜಿಕ ‘ಸರಿತನ’ದ (ಕರೆಕ್ಟ್‌ನೆಸ್) ಅಭಿಯಾನವೂ ಆಗಿದೆ. ಆದರೆ ಭಾಷೆಗೆಲ್ಲಾದರೂ ನಮ್ಮ ಸೈದ್ಧಾಂತಿಕ ಸರಿತನದ ಗೊಡವೆ ಇರುತ್ತದೆಯೇ?

ಅಲ್ಲದೆ ನಮ್ಮ ಬಹುತೇಕ ಸಾಹಿತಿ, ಬುದ್ಧಿಜೀವಿಗಳು ಶಂಕರ ಬಟ್‌ರ ವಾದವನ್ನು ಒಪ್ಪುವರಾದರೂ ತಮ್ಮ ಬರವಣಿಗೆಯಲ್ಲಿ ಪ್ರಯೋಗತಃ ಅಳವಡಿಸಿಕೊಳ್ಳಲು ಹಿಂಜರಿಯುತ್ತಿರುವುದು ಕೌತುಕದ ಸಂಗತಿಯಾಗಿದೆ.

ಈ ಹಿಂದೆ ನನ್ನ ಕೃತಿಯೊಂದು ಕನ್ನಡ ಪುಸ್ತಕ ಪ್ರಾಧಿಕಾರದ ವತಿಯಿಂದ ಪ್ರಕಟಗೊಳ್ಳಲು ಆಯ್ಕೆಯಾಗಿತ್ತು. ನಾನು ಪ್ರಯೋಗಾರ್ಥವಾಗಿ ಇಡೀ ಕೃತಿಯನ್ನು ಶಂಕರ ಬಟ್‌ರ ಕನ್ನಡದಲ್ಲಿ ಬರೆದು ಸಲ್ಲಿಸಿದಾಗ ಅಂದಿನ ಅಧ್ಯಕ್ಷರು (ನನ್ನ ವಿದ್ಯಾಗುರುಗಳಾದ ದಿವಂಗತ ಡಾ. ಸಿದ್ಧಲಿಂಗಯ್ಯನವರು) ನನ್ನ ಪ್ರಯೋಗವನ್ನು ಆಕ್ಷೇಪಿಸಿದ್ದರು. ‘ಇದನ್ನು ಮಾಮೂಲಿ ಕನ್ನಡದಲ್ಲಿ ಬರೆದುಕೊಡು’ ಎಂದು ಸೂಚಿಸಿದರು. ಆಗ ನಾನು ‘ಶಂಕರ ಬಟ್‌ರ ವಿಚಾರಗಳನ್ನು ಪುಸ್ತಕ ಪ್ರಾಧಿಕಾರವೇ ಪ್ರಕಟಿಸಿದೆಯಲ್ಲ ಸರ್’ ಎಂದು ವಾದಿಸಿದ್ದೆ. ‘ನಾವು ಎಲ್ಲ ವೈವಿಧ್ಯಮಯ ವಿಚಾರಗಳನ್ನೂ ಪ್ರಕಟಿಸಲು ಸಿದ್ಧರಿದ್ದೇವೆ. ಆದರೆ ಪ್ರಕಟಿಸಿದ ಮಾತ್ರಕ್ಕೆ ಆ ಎಲ್ಲ ವಿಚಾರಗಳನ್ನು ನಾವೂ ಅಂಗೀಕರಿಸಿ ಅಳವಡಿಸಿಕೊಳ್ಳಲು ಸಮ್ಮತಿಸಿದ್ದೇವೆ ಎಂದಲ್ಲ’ ಎಂದು ಹೇಳಿ ಕಳಿಸಿದ್ದರು. ನಾನು ಇಡೀ ಪುಸ್ತಕವನ್ನು ಮತ್ತೊಮ್ಮೆ ಮಾಮೂಲಿ ಕನ್ನಡದಲ್ಲಿ ಬರೆಯಬೇಕಾಯಿತು.

ಕನ್ನಡವನ್ನು ಸುಧಾರಿಸುವ ಈ ಪ್ರಯತ್ನ ಹಲವು ಪ್ರಶ್ನೆಗಳನ್ನು ಮೂಡಿಸುತ್ತದೆ. ಎಲ್ಲರ ಭಾಷೆ ನಿಜಕ್ಕೂ ಎಲ್ಲರಿಗೂ ಸೇರಿದ ಭಾಷೆಯೇ? ಕರ್ನಾಟಕದಲ್ಲಿ ನೂರು ಕಿ.ಮೀ. ವ್ಯಾಪ್ತಿಯಾಚೆಗೆ ಕನ್ನಡ ಬದಲಾಗುತ್ತದೆ, ಭಾಷೆಯ ಸ್ವರೂಪ, ಉಚ್ಚಾರಣಾ ವಿಧಾನಗಳು ಬದಲಾಗುತ್ತಾ ಹೋಗುತ್ತವೆ. ಅಂದಮೇಲೆ ಯಾವ ಕನ್ನಡ ಎಲ್ಲರ ಕನ್ನಡವಾಗುತ್ತದೆ? ಬ್ರಾಹ್ಮಣರು, ಮುಸ್ಲಿಮರು ಮತ್ತು ಧಾರವಾಡ ಪ್ರಾಂತ್ಯದ ಹಲವು ಉಪಭಾಷಿಕರು ಮಹಾಪ್ರಾಣವನ್ನು ಸಹಜವಾಗಿ ತಮ್ಮ ಆಡುನುಡಿಯಲ್ಲಿ ಬಳಸುತ್ತಾರೆ. ಅವರನ್ನು ಈ ಅಭಿಯಾನಕ್ಕೆ ಹೊರಗಿನವರೆಂದು ಭಾವಿಸುವುದೇ? ಅಲ್ಲದೆ ವರ್ಣಮಾಲೆಯ ಸಂಖ್ಯೆ ಕಡಿಮೆಯಾದ ಮಾತ್ರಕ್ಕೆ ಕಲಿಕೆಯ ಹೊರೆ ಕಡಿಮೆಯಾಗುತ್ತದೆ ಎನ್ನಲು ಯಾವ ವೈಜ್ಞಾನಿಕ ಆಧಾರಗಳಿವೆ? ತಳವರ್ಗಗಳು ಸಾಮಾಜಿಕವಾಗಿ ಪ್ರಬಲವಾದಾಗ ಅವು ತಮಗೆ ವಿಶಿಷ್ಟವಾದ ಸಂಸ್ಕೃತಿ, ಆಚಾರ-ವಿಚಾರಗಳನ್ನು ನಿರ್ಲಕ್ಷಿಸಿ ಮೇಲ್ವರ್ಗದ ಸಂಸ್ಕೃತಿ, ಆಚಾರ-ವಿಚಾರಗಳನ್ನು ಅಳವಡಿಸಿಕೊಳ್ಳುವುದನ್ನು ನಾವು ಕಾಣುತ್ತಿದ್ದೇವೆ. ಈ ಹಿನ್ನೆಲೆಯಲ್ಲಿ ನೋಡುವುದಾದರೆ, ಬಹುಜನ ಸಮಾಜ ಸಾಕ್ಷರವಾದ ಕೂಡಲೇ ಅದು ತನಗೆ ವಿಶಿಷ್ಟವಾದ ಭಾಷೆಯನ್ನು ‘ಎಲ್ಲರ ಭಾಷೆ’ಯ ಸ್ಥಾನಮಾನಕ್ಕೆ ಒಯ್ಯುವುದನ್ನು ಬಿಟ್ಟು ಸಂಸ್ಕೃತ ಭೂಯಿಷ್ಠವಾದ ಮೇಲ್ವರ್ಗದ ಭಾಷೆಯನ್ನು ಅನುಕರಿಸುವ ಸಾಧ್ಯತೆಯನ್ನು ತಳ್ಳಿಹಾಕಲಾದೀತೇ?

ಎಲ್ಲಕ್ಕಿಂತ ಮುಖ್ಯವಾಗಿ ಕನ್ನಡ ಭಾಷೆಗೆ ಭಾಷಾ ವಿಜ್ಞಾನ ಸಂಬಂಧಿ ಚರ್ಚೆಗಳಾಚೆಗೂ ಅಸ್ತಿತ್ವವಿದೆ ಎಂಬುದನ್ನು ನಾವು ಮರೆಯಬಾರದು. ಕನ್ನಡವೆಂದರೇನು ಎಂಬ ಪ್ರಶ್ನೆಗೆ ಕವಿ ಗೋಪಾಲಕೃಷ್ಣ ಅಡಿಗರು, ‘ನಾನು ನೀನು ಅವರು’ ಎಂದು ಉತ್ತರಿಸಿದ್ದಾರೆ. ಕನ್ನಡದ ಸುಧಾರಣೆಯೆಂದರೆ ನಮ್ಮೆಲ್ಲರ, ಒಟ್ಟಾರೆ ಸಮಾಜದ ಸುಧಾರಣೆಯಾಗಿದೆ. ಕನ್ನಡ ಅನ್ನದ ಭಾಷೆಯಾದಾಗ ಮಾತ್ರ ನಿಜಾರ್ಥದಲ್ಲಿ ಕನ್ನಡದ ಉದ್ಧಾರವಾಗುತ್ತದೆ.

ಲೇಖಕ: ಸಹಾಯಕ ಪ್ರಾಧ್ಯಾಪಕ
ಜ್ಯೋತಿನಿವಾಸ್ ಕಾಲೇಜ್, ಬೆಂಗಳೂರು

ಚುರುಮುರಿ

ಪಾದಯಾತ್ರೆ ಪವಾಡ

• ಮಣ್ಣೆ ರಾಜು

‘ಜನನಾಯಕರು ಪಾದಯಾತ್ರೆ ಮಾಡಿದರೆ ತೀರ್ಥಯಾತ್ರೆಯಷ್ಟೇ ಫಲ-ಪುಣ್ಯ ಸಿಗುತ್ತೇನ್ರೀ?’ ಸುಮಿ ಕೇಳಿದಳು.

‘ಫಲ-ಪುಣ್ಯ ಅಲ್ಲದಿದ್ದರೂ ಅಧಿಕಾರದ ಬಲ ಸಿಗುತ್ತೆ ಅನ್ನುವ ನಂಬಿಕೆಯಂತೆ. ಪಾದಯಾತ್ರೆ ಪವಾಡದಿಂದ ಅಧಿಕಾರ ಹಿಡಿದವರ ಇತಿಹಾಸವಿದೆ. ಬಳ್ಳಾರಿಗೆ ನಡೆದು ಅಧಿಕಾರಕ್ಕೆ ಬಂದ ಕಾಂಗ್ರೆಸ್‌ನವರು ಈಗ ಮೇಕೆದಾಟುವಿಗೆ ನಡೆದು ಆಡಳಿತ ನಡೆಸುವ ಪ್ರಯತ್ನ ಮಾಡ್ತಿದ್ದಾರಂತೆ’ ಅಂದ ಶಂಕ್ರಿ.

‘ಅವರ ಪಕ್ಷ, ಅವರ ಪಾದ. ಕಾಂಗ್ರೆಸ್‌ನವರು ಪಾದಯಾತ್ರೆ ಮಾಡಿದರೆ ಬಿಜೆಪಿ, ಜೆಡಿಎಸ್‌ನವರಿಗೆ ಯಾಕಂತೆ ಹೊಟ್ಟೆ ಉರಿ? ಇವರೂ ಪಾದಯಾತ್ರೆ ಮಾಡಬಹುದಲ್ವಾ?’

‘ಪಾದಯಾತ್ರೆಯಲ್ಲಿ ನೀವೂ ಬಂದು ಭಾಗವಹಿಸಿ ಅದರ ಫಲಾಫಲಗಳನ್ನು ಪಡೆಯಿರಿ ಅಂತ ಕಾಂಗ್ರೆಸ್‌ನವರು ಕರೆದರೂ ಹೋಗ್ತಿಲ್ಲವಂತೆ. ಕಾಲು ನೋವಿಗೆ ಹೆದರಿದರೇನೋ...’

‘ಹಾಗೇನಿಲ್ಲ, ಬಿಜೆಪಿ, ಜೆಡಿಎಸ್‌ನಲ್ಲೂ ಪರಿಣತ ಪಾದಯಾತ್ರಿಗಳಿದ್ದಾರೆ. ಮೈಲಿಗಳ ಲೆಕ್ಕವಿಡದೆ ರಾಜಕಾರಣದಲ್ಲಿ ಬಹುದೂರ ನಡೆದುಬಂದಿರುವ ದೇವೇಗೌಡರು, ಯಡಿಯೂರಪ್ಪನೋರು ಪಾದಯಾತ್ರೆಗಳಿಗೆ ಮೈಲಿಗಲ್ಲಾಗಿದ್ದಾರೆ. ಈಗಿನವರಂತೆ ಟಾರು ರಸ್ತೆಯಲ್ಲಿ ನಡೆದವರಲ್ಲ, ಕಲ್ಲುಮುಳ್ಳು ತುಳಿದು ಬಂದಿದ್ದಾರೆ ಕಣ್ರೀ’.

‘ಪಕ್ಷವನ್ನು ಅಧಿಕಾರಕ್ಕೆ ತರಲು ತಾವು ರಾಜ್ಯ ಸುತ್ತುವುದಾಗಿ ಯಡಿಯೂರಪ್ಪ ಹೇಳಿದ್ದಾರೆ’.

‘ತಮ್ಮ ಕುರ್ಚಿ ಕಂಟಕ ನಿವಾರಣೆ ಆದಮೇಲೆ ಮುಖ್ಯಮಂತ್ರಿ ಬಸಣ್ಣರ ಶಕ್ತಿ, ಸಾಮರ್ಥ್ಯವೂ ಹೆಚ್ಚಾಗಿ ರಾಜ್ಯವ್ಯಾಪಿ ನಡೆಯುವ ಉತ್ಸಾಹ ತೋರಿದ್ದಾರಂತೆ’.

‘ಮುಖ್ಯಮಂತ್ರಿ ಸಾಮರ್ಥ್ಯದ ವಿಚಾರವಿರಲಿ, ಸಂಪುಟದ ಸಚಿವರಿಗೆ ಪಾದಯಾತ್ರೆಯ ಸ್ಪರ್ಧೆ ಏರ್ಪಡಿಸಿ ಅವರ ನಡಿಗೆ, ಕೊಡುಗೆ ಸಾಮರ್ಥ್ಯ ಪರೀಕ್ಷೆ ನಡೆಸಿ ಅಂತ ಅನೇಕ ಶಾಸಕರು ಹೈಕಮಾಂಡ್‌ಗೆ ಕೋರಿಕೆ ಸಲ್ಲಿಸಿದ್ದಾರಂತೆ’.

‘ಸಚಿವರಿಗೆ ನಡಿಗೆಯ ಆಟೋಟ ಸ್ಪರ್ಧೆ ನಡೆಸಿ, ಗೆದ್ದವರಿಗೆ ಬಹುಮಾನ ಕೊಡಬೇಕಂತಾ?’ ಸುಮಿ ಕೇಳಿದಳು.

‘ಅಲ್ಲಾ, ಮೈಲೇಜ್ ಇಲ್ಲದ ಮಂತ್ರಿಗಳನ್ನು ಔಟ್ ಮಾಡಿ, ಹೊಸಬರಿಗೆ ಸಂಪುಟದಲ್ಲಿ ಅವಕಾಶ ನೀಡಿ ಅಂತ ಸಚಿವ ಸ್ಥಾನ ಆಕಾಂಕ್ಷಿ ಶಾಸಕರು ಕೇಳಿಕೊಂಡಿದ್ದಾರಂತೆ’ ಎಂದ ಶಂಕ್ರಿ.

ಸಂಗತ

ಮೆದುಳಿನ ಮೇವಿಗೊಂದು ‘ಗೂಡು’!

ಬಸ್ ನಿಲ್ದಾಣಗಳಲ್ಲಿ ತೆರೆದಿರುವ ‘ಪುಸ್ತಕದ ಗೂಡು’ಗಳು ಅನುಕರಣೀಯ

• ಪ.ರಾಮಕೃಷ್ಣ ಶಾಸ್ತ್ರಿ

ದಕ್ಷಿಣ ಕನ್ನಡದ ಎಲ್ಲೆಡೆ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಡಾ. ಕುಮಾರ್ ಅವರು ವಿಶಿಷ್ಟ, ವಿನೂತನ ಎನ್ನಬಹುದಾದ ಒಂದು ಜನಪ್ರಿಯ ಯೋಜನೆಯನ್ನು ಜಾರಿಗೆ ತಂದಿದ್ದಾರೆ. ಅದು ‘ಪುಸ್ತಕ ಗೂಡು’ ಎಂಬ ಕಾರ್ಯಕ್ರಮ. ಬಸ್ಸಿಗಾಗಿ ನಿಲ್ದಾಣಗಳ ಆಸನದಲ್ಲಿ ಕಾದು ಕುಳಿತಿರುವ ಪ್ರಯಾಣಿಕರನ್ನೇ ಗುರಿಯಾಗಿಸಿಕೊಂಡು ನಿಲ್ದಾಣದಲ್ಲಿ ಒಂದು ಗೂಡು ಸ್ಥಾಪನೆಯಾಗುತ್ತದೆ. ಅದರೊಳಗೆ ವೈವಿಧ್ಯಮಯವಾದ ಪುಸ್ತಕಗಳಿರುತ್ತವೆ. ಮೊಬೈಲ್ ಗುಂಡಿಯ ಮೇಲೆ ಪಥಸಂಚಲನ ಮಾಡುವ ಬೆರಳುಗಳಿಗೂ ಮೆದುಳಿಗೂ ಒಂದಿಷ್ಟು ಹೊಸ ಬಗೆಯ ಸ್ವಾದ ಅನುಭವಿಸಲು ಇದರ ಆಯೋಜನೆಯಾಗಿದೆ.

ಹೀಗೆಂದು ಜಿಲ್ಲಾ ಪಂಚಾಯಿತಿಯು ಹೊಸ ಪುಸ್ತಕಗಳ ಖರೀದಿಗೆ ತೆರಿಗೆಯ ಹಣ ಖರ್ಚು ಮಾಡುತ್ತಿಲ್ಲ. ಪ್ರತಿಯೊಂದು ಗ್ರಾಮ ಪಂಚಾಯಿತಿಯ ಅಧಿಕಾರಿಗಳು ಪುಸ್ತಕ ಸಂಗ್ರಹದ ಹೊಣೆ ಹೊತ್ತುಕೊಳ್ಳುತ್ತಾರೆ. ಮನೆಮನೆಗೂ ಭೇಟಿ ನೀಡುತ್ತಾರೆ. ‘ಓದಿದ ಬಳಿಕ ರದ್ದಿ ಅಂಗಡಿಗೆ ಕೊಡಲು ತೆಗೆದಿರಿಸಿದ ವಾರಪತ್ರಿಕೆಗಳು, ಮಾಸಪತ್ರಿಕೆಗಳಿದ್ದರೆ ನಮಗೆ ಕೊಡಿ’ ಎಂದು ಕೇಳುತ್ತಾರೆ.

ಪುಸ್ತಕಗಳನ್ನೂ ಹಾಗೆಯೇ ಪಡೆಯುತ್ತಾರೆ. ಕಥೆ, ಕಾದಂಬರಿ, ಕವಿತೆ, ಮಕ್ಕಳ ಸಾಹಿತ್ಯ, ನಾಟಕ ಯಾವುದೇ ಇರಲಿ ದಾನವಾಗಿ ಪಡೆದುಕೊಳ್ಳುತ್ತಾರೆ. ಈ ಗೂಡುಗಳು ಹಳ್ಳಿಗಳು, ಗ್ರಾಮಾಂತರ ಪ್ರದೇಶದ ಬಸ್ ತಂಗುದಾಣಗಳಲ್ಲಿದ್ದರೆ ಅದರ ನಿರ್ವಹಣೆಯನ್ನು ಸ್ಥಳೀಯ ರಿಕ್ಷಾ ಚಾಲಕರು ಹೊತ್ತುಕೊಳ್ಳುತ್ತಾರೆ. ಬೆಳಿಗ್ಗೆ ಗೂಡಿನ ಬಾಗಿಲು ತೆರೆಯುವುದು, ಸಂಜೆ ಬಾಗಿಲಿಗೆ ಬೀಗ ಜಡಿಯುವುದು ಅವರ ಜವಾಬ್ದಾರಿ. ಇದು, ರಾತ್ರಿ ವೇಳೆ ಪುಸ್ತಕಗಳ ಸುರಕ್ಷತೆಗಾಗಿ ವಹಿಸುವ ನಿಗಾ ಅಷ್ಟೇ.

ಯಾರೋ ಒಬ್ಬರು ಜಿಲ್ಲಾ ಪಂಚಾಯಿತಿ ಅಧಿಕಾರಿಗೆ, ‘ಸಾರ್, ಹೀಗೆ ಇಟ್ಟರೆ ಪುಸ್ತಕಗಳನ್ನು ಯಾರಾದರೂ ಕದ್ದುಕೊಂಡು ಹೋಗುವುದಿಲ್ಲವೇ?’ ಎಂದು ಕೇಳಿದರಂತೆ. ಅದಕ್ಕೆ ಅವರು, ‘ಹೋಗ್ಲಿ ಬಿಡಿ, ಓದುವ ಆಸಕ್ತಿ ಇದ್ದವರು ಪುಸ್ತಕ ಕೊಂಡುಹೋಗಿ ಮನೆಯಲ್ಲಿ ಇಟ್ಟುಕೊಂಡರೆ ಹಾಗಾದರೂ ಪುಸ್ತಕಾಭಿಮಾನ ಬೆಳೆಯುತ್ತದಲ್ಲ?’ ಎಂದು ಉತ್ತರಿಸಿದರಂತೆ.

ವಾಚನಾಲಯಗಳಲ್ಲಿ ಬಹಳಷ್ಟು ಪುಸ್ತಕಗಳ ಸಂಗ್ರಹವಿದೆ. ಅಲ್ಲಿ ಹೋಗಿ ಓದುವವರ ಸಂಖ್ಯೆ ವಿರಳವಾಗುತ್ತಿದೆ. ಅಂಥದ್ದರಲ್ಲಿಯೂ ಪುಸ್ತಕ ಗೂಡುಗಳು ಹೆಚ್ಚು ಜನರನ್ನು ತಲುಪುತ್ತವೆಂಬ ವಿಶ್ವಾಸ ಅಧಿಕಾರಿಗಳಿಗೆ ಇದೆ. ಸಮಯವನ್ನು ಕೊಲ್ಲಲು ಪುಸ್ತಕಗಳನ್ನು ತಿರುವಿ ಹಾಕುವುದರ ಮೂಲಕ ಓದಿನ ಪ್ರೇಮ ಗಾಢವಾಗಿ ಬೆಳೆಯುವುದು ಖಚಿತ ಎನ್ನುತ್ತಾರೆ ಅವರು.

ಇಂತಹ ಯೋಜನೆ ಸಾರ್ವತ್ರಿಕವಾಗಿ ಮೆಚ್ಚುಗೆ ಗಳಿಸಿದೆ. ಹಲವಾರು ಲೇಖಕರು ಲಭ್ಯವಿರುವ ಕೃತಿಗಳನ್ನು ಕೊಡುತ್ತಿದ್ದಾರೆ. ವಿಮರ್ಶಕರು ವಿಮರ್ಶೆಗಾಗಿ ಬರುವ ಪುಸ್ತಕಗಳನ್ನು ನೀಡುತ್ತಾರೆ. ‘ಯಾವುದೇ ಪುಸ್ತಕ ಕೊಡಿ, ನಾವು ಸ್ವೀಕರಿಸುತ್ತೇವೆ’ ಎಂಬುದು ಪಂಚಾಯಿತಿ ಅಧಿಕಾರಿಗಳ ನಿಲುವು. ಭಿನ್ನ ರುಚಿಯ ಓದುಗರಿರುತ್ತಾರೆ. ಒಂದೊಂದು ಪುಸ್ತಕವೂ ಅಂತಹ ವಾಚಕರಿಗೆ ಇಷ್ಟವಾಗುವುದು ಎನ್ನುತ್ತಾರೆ ಅವರು.

ಜಿಲ್ಲೆಯ ಎಲ್ಲ ಗ್ರಾಮಗಳಲ್ಲೂ ಹತ್ತಾರು ಕಡೆ ಬಸ್ಸಿಗಾಗಿ ಕಾಯುವ ಪ್ರಯಾಣಿಕರು ಇರುವ ಎಲ್ಲೆಡೆಯೂ ಪುಸ್ತಕ ಗೂಡುಗಳು ಈಗಾಗಲೇ ಪ್ರತಿಷ್ಠಾಪನೆಗೊಂಡಿವೆ.

ಪುಸ್ತಕೋದ್ಯಮ ಹಿಂದೆ ಸರಿಯುತ್ತಿದೆ ಎಂದು ಪ್ರಕಾಶಕರು ಮಾಡುತ್ತಿರುವ ಚಿಂತೆ ಪರೋಕ್ಷವಾಗಿ ನೂರಾರು ಲೇಖಕರ ಪಾಲಿಗೆ ಹೊಡೆತವೂ ಹೌದು. ಪುಸ್ತಕ ಮಾರಾಟ ಕಡಿಮೆಯಾದರೆ ಹೊಸ ಲೇಖಕರ ಕೃತಿಗಳನ್ನು ಪ್ರಕಟಿಸಲು ಪ್ರಕಾಶಕರು ಹಿಂದೇಟು ಹಾಕುತ್ತಾರೆ. ಕೊರೊನಾ ಸಂಕಷ್ಟದಿಂದ ಪ್ರಕಾಶಕರೂ ನಷ್ಟ ಅನುಭವಿಸಿದ್ದಾರೆ. ಹೆಸರಾಂತ ಪ್ರಕಾಶನ ಸಂಸ್ಥೆಗಳು ಡಿಜಿಟಲ್ ಕೃತಿಯ ತಯಾರಿಗೆ ಮುಂದಾಗಿದ್ದರೂ ಅದರ ಖರ್ಚು ವೆಚ್ಚ ದುಬಾರಿಯಾಗಿದೆ. ಹಾಕಿದ ಹಣ ಹಿಂದೆ ಬರುವ ವೇಗ ಚೆನ್ನಾಗಿಲ್ಲ ಎನ್ನುವುದೂ ಗೊತ್ತಾಗಿದೆ. ಪುಸ್ತಕ ಉದ್ಯಮ ಕ್ಷೇಮವಾಗಿರಬೇಕಾದರೆ ಓದುಗರು, ಅದರಲ್ಲೂ ಕೊಂಡು ಓದುವ ಓದುಗರೇ ಜೀವಾಳವಾಗುತ್ತಾರೆ.

ಸರ್ಕಾರವು ಗ್ರಂಥಾಲಯಗಳಿಗಾಗಿ ಪುಸ್ತಕ



ಗಳನ್ನು ಖರೀದಿಸುವ ಒಂದೇ ಕಾರಣಕ್ಕೆ ಪುಸ್ತಕಗಳ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತದೆ ಎಂಬುದು ಎಲ್ಲರಿಗೂ ತಿಳಿದಿರುವ ಸತ್ಯ. ಇಂತಹ ಸಂಕೀರ್ಣ ಸ್ಥಿತಿಯಲ್ಲಿ ಉದ್ಯಮ ತೂಗುಯ್ಯಾಲೆಯಾಡುತ್ತಿರುವಾಗ ವಿದ್ಯಾರ್ಥಿಗಳು, ಕಾರ್ಮಿಕರು, ಗೃಹಿಣಿಯರು ಬಸ್ಸು ಬರುವ ತನಕ ಒಂದು ಪುಸ್ತಕ ಓದಬಹುದು. ಓದು ಅರ್ಧದಲ್ಲಿ ನಿಂತುಹೋದರೆ, ಅದು ಆಸಕ್ತಿದಾಯಕವಾಗಿದ್ದರೆ ಮರಳಿ ಅದೇ ನಿಲ್ದಾಣಕ್ಕೆ ಬಂದು ಓದು ಮುಂದುವರಿಸಬಹುದು ಅಥವಾ ಆ ಪುಸ್ತಕವನ್ನು ಖರೀದಿಸಿ ಮನೆಗೆ ಒಯ್ಯಬಹುದು ಎಂಬ ಭಾವನೆ ಪಂಚಾಯಿತಿ ಅಧಿಕಾರಿಗಳದ್ದು.

ಯಾರೋ ಈ ಯೋಜನೆ ಮಾಡಿದ್ದಾರೆ ಎಂದು ಸರ್ಕಾರವೂ ಸುಮ್ಮನಿರಬೇಕಾಗಿಲ್ಲ. ಗ್ರಾಮ ಪಂಚಾಯಿತಿ ಮತ್ತು ನಗರಸಭೆ ವ್ಯಾಪ್ತಿಯಲ್ಲಿ ಗ್ರಂಥಾಲಯಗಳಿವೆ, ಗ್ರಂಥಪಾಲಕರಿದ್ದಾರೆ. ಆದರೆ ಅಲ್ಲಿಗೆ ಹೋಗಿ, ಕುಳಿತು ಓದಿನಲ್ಲಿ ಆಸಕ್ತರಾಗುವವರು ನಿವೃತ್ತ ನೌಕರರು ಸೇರಿ ಬೆರಳೆಣಿಕೆಯಷ್ಟು ಜನ.

ಬಸ್ ತಂಗುದಾಣಗಳಲ್ಲಿ ವಿವಿಧ ಮನೋಭಿರುಚಿಯ ತುಂಬಾ ಜನ ಸುಮ್ಮನೆ ಕುಳಿತುಕೊಳ್ಳುತ್ತಾರೆ. ಗ್ರಂಥಾಲಯದ ಪುಸ್ತಕ, ಪತ್ರಿಕೆಗಳು ವಾರದ ಏಳು ದಿನಗಳೂ ಸರ್ಕಾರಿ ರಜೆಯ ಹಂಗಿಲ್ಲದೆ ಅವರ ಕೈಗೆ ಸಿಗಲು ಪ್ರಾಯೋಗಿಕವಾಗಿ ಒಂದು ಪ್ರಯತ್ನ ಕೈಗೊಳ್ಳಬಹುದಲ್ಲವೇ? ಪಂಚಾಯಿತಿ ಅಧಿಕಾರಿಯೊಬ್ಬರು ಬಿತ್ತಿರುವ ಓದಿನ ಹವ್ಯಾಸದ ಬೀಜ ಹೆಮ್ಮರವಾಗಿ ಬೆಳೆಯಲು ಸರ್ಕಾರದ ಸಹಕಾರವೂ ಇದ್ದರೆ ಒಳ್ಳೆಯದಲ್ಲವೇ?

ವಾಚಕರ ವಾಣಿ

ಜನಪ್ರತಿನಿಧಿಗಳಿಗೆ ಸ್ವಪ್ರತಿಷ್ಠೆ ಸಲ್ಲದು

ಜನಪ್ರತಿನಿಧಿಗಳ ನಡುವೆ ಭಿನ್ನಾಭಿಪ್ರಾಯ ಸಹಜ. ಆದರೆ ಅದು ತೋಳೇರಿಸಿ ಗುದ್ದಾಟಕ್ಕೆ ಇಳಿಯುವ ಮಟ್ಟಕ್ಕೆ ಹೋಗಬಾರದು. ರಾಮನಗರದಲ್ಲಿ ಮುಖ್ಯಮಂತ್ರಿ ಭಾಗವಹಿಸಿದ್ದ ಸಮಾರಂಭದಲ್ಲಿ ಸಚಿವ ಡಾ. ಅಶ್ವತ್ಥ ನಾರಾಯಣ ಮತ್ತು ಸಂಸದ ಡಿ.ಕೆ.ಸುರೇಶ್ ಅವರು ಸಾರ್ವಜನಿಕರ ಸಮ್ಮುಖದಲ್ಲಿ ಪರಸ್ಪರ ವಾಕ್ಸಮರಕ್ಕೆ ಇಳಿದು ಕೈಕೈ ಮಿಲಾಯಿಸುವ ಹಂತಕ್ಕೂ ಹೋಗಿದ್ದು ದುರದೃಷ್ಟಕರ.

ಜನಪ್ರತಿನಿಧಿಗಳಾದವರು ಯಾವುದೇ ಸಭೆ ಸಮಾರಂಭಗಳಲ್ಲಿ ಭಾಗವಹಿಸಿದಾಗ ಸಹನೆ, ತಾಳ್ಮೆ, ಸಭ್ಯತೆಯಿಂದ ವರ್ತಿಸಬೇಕು. ಇಲ್ಲದಿದ್ದರೆ ಸಾರ್ವಜನಿಕರ ಸಮ್ಮುಖದಲ್ಲಿ ಅಪಹಾಸ್ಯಕ್ಕೆ ಈಡಾಗಿ, ಅವರ ನಾಯಕತ್ವ ಗುಣದ ಮತ್ತೊಂದು ಮುಖ ಸಭಿಕರಿಗೆ ಪರಿಚಯವಾಗುವ ಮೂಲಕ ನಗೆಪಾಟಲಿಗೆ ಈಡಾಗಬೇಕಾಗುತ್ತದೆ. ಯಾವುದೇ ಪಕ್ಷದ ಸಚಿವರಾಗಿರಲಿ, ಮುಖ್ಯಮಂತ್ರಿಯಾಗಿರಲಿ ಯೋಜನೆಗಳನ್ನು ರೂಪಿಸಿ ಅನುಷ್ಠಾನಕ್ಕೆ ತರುವುದು ಸರ್ಕಾರದ ಹಣದಿಂದಲೇ ವಿನಾ ರಾಜಕಾರಣಿಗಳ ಸ್ವಂತ ಹಣದಿಂದ ಅಲ್ಲ. ಕಾರ್ಯಕ್ರಮದಲ್ಲಿ ವಿಷಯವನ್ನು ಅಷ್ಟೊಂದು ವೈಯಕ್ತಿಕ ಪ್ರತಿಷ್ಠೆಯಂತೆ ತೆಗೆದುಕೊಂಡು ಇಬ್ಬರೂ ನಾಯಕರು ಪರಸ್ಪರ ಬೈದಾಡಿಕೊಂಡು ಸಭಿಕರಿಗೆ ಮನರಂಜನೆ ಒದಗಿಸುವ ಅವಶ್ಯಕತೆ ಇರಲಿಲ್ಲ.

ವಿ.ಜಿ.ಇನಾಮದಾರ, ಸಾರವಾಡ, ವಿಜಯಪುರ

ಪಾವಿತ್ರ್ಯ ಉಳಿಸಿಕೊಂಡಿರುವ ಜೋಳಿಗೆ ಇದೆ

‘ಗುರು ಲಘುವಾದರೆ ಹೇಗೆ ಸ್ವಾಮಿ?’ ಎಂಬ ರವೀಂದ್ರ ಭಟ್ಟ ಅವರ ಲೇಖನಕ್ಕೆ (ಪ್ರ.ವಾ., ಡಿ. 30) ಪ್ರತಿಕ್ರಿಯೆಯಾಗಿ ಬರೆದ ಹಿರಿಯ ಕವಿ ಎಸ್.ಜಿ.ಸಿದ್ಧರಾಮಯ್ಯ ಅವರ ಪತ್ರ (ವಾ.ವಾ., ಜ. 1) ಓದಿದೆ. ತಮ್ಮ ಪಾವಿತ್ರ್ಯವನ್ನು ಉಳಿಸಿಕೊಂಡಿರುವ ಜೋಳಿಗೆಗಳನ್ನು ಹುಡುಕಬೇಕಿದೆ ಎಂದು ಅವರು ಹೇಳಿದ್ದಾರೆ. ವಿಜಯಪುರದ ಜ್ಞಾನಯೋಗಾಶ್ರಮದ ಶ್ರೀಗಳಾದ ಸಿದ್ಧೇಶ್ವರ ಸ್ವಾಮಿಗಳು ಆ ಪಾವಿತ್ರ್ಯವನ್ನು ಉಳಿಸಿಕೊಂಡಿದ್ದಾರೆ. ಮುಖ್ಯಮಂತ್ರಿಯೇ ಖುದ್ದಾಗಿ ಕೇಳಿಕೊಂಡಾಗಲೂ ನಿರಾಕರಿಸಿದಂಥ ದಿಟ್ಟ ಸ್ವಾಮಿಗಳವರು.

ಗುಬ್ಬಿ ರೇವಣಾರಾಧ್ಯ, ಬೆಂಗಳೂರು

ಅಮಾನವೀಯ ದ್ವೇಷ: ಕಠಿಣ ಶಿಕ್ಷೆಯಾಗಲಿ

ಹಾಸನ ಜಿಲ್ಲೆಯ ಹಳೇಬೀಡು ಸಮೀಪದ ಅಜ್ಜೇನಹಳ್ಳಿಯಲ್ಲಿ ಇತ್ತೀಚೆಗೆ ವೈಯಕ್ತಿಕ ದ್ವೇಷಕ್ಕೆ ರಾತ್ರೋರಾತ್ರಿ 600ಕ್ಕೂ ಹೆಚ್ಚು ಅಡಿಕೆ ಮರಗಳನ್ನು ಕಡಿದುಹಾಕಿರುವುದು ಖಂಡನಾರ್ಹ. ಕುಟುಂಬಗಳ ನಡುವೆ ಅಥವಾ ಯಾವುದೋ ಹಳೆಯ ದ್ವೇಷಕ್ಕೆ ವ್ಯಕ್ತಿಯನ್ನು ನೇರಾನೇರ ಎದುರಿಸಲಾಗದೆ ಅಡಿಕೆ ಮರಗಳನ್ನು ತುಂಡರಿಸುವ ಅನೇಕ ಪ್ರಕರಣಗಳು ಇತ್ತೀಚೆಗೆ ಬೆಳಕಿಗೆ ಬರುತ್ತಿವೆ. ಲಕ್ಷಾಂತರ ರೂಪಾಯಿ ಸಾಲಸೋಲ ಮಾಡಿ, ನಾಲ್ಕೈದು ವರ್ಷ ಕಷ್ಟಪಟ್ಟು ಮಕ್ಕಳಂತೆ ಸಾಕಿ ಬೆಳೆಸಿದ ಮರಗಳನ್ನು ಹೀಗೆ ಕಡಿದು ಹಾಕಿದರೆ, ಆ ಬಡಪಾಯಿ ರೈತನಿಗೆ ಹೇಗಾಗಬಹುದು ಎಂಬುದು ಊಹಿಸಲು ಅಸಾಧ್ಯ.

ರೈತರ ಬದುಕು ಮೊದಲೇ ಶೋಚನೀಯವಾಗಿದೆ. ಅದರಲ್ಲೂ ಇಂತಹ ಘಟನೆಗಳು ನಡೆದರೆ ಮೇಲೇಳಲಾರದಂತಹ ಹೀನಾಯ ಸ್ಥಿತಿಗೆ ತಲುಪುವ ಸಾಧ್ಯತೆಯೇ ಹೆಚ್ಚು. ದ್ವೇಷಕ್ಕಾಗಿ ಹೀಗೆ ಬೆಳೆಯನ್ನು ಕಡಿದು ಹಾಕುವ ದುಷ್ಕರರನ್ನು ಕಠಿಣಾತಿ ಕಠಿಣ ಶಿಕ್ಷೆಗೆ ಒಳಪಡಿಸುವ ಕಾನೂನನ್ನು ಜಾರಿಗೆ ತರಬೇಕಾಗಿದೆ. ನಷ್ಟಕ್ಕೆ ಒಳಗಾದ ರೈತರಿಗೆ ಯಾವುದಾದರೂ ಮೂಲದಿಂದ ಸರ್ಕಾರ ನಷ್ಟ ಪರಿಹಾರದ ನೆರವು ನೀಡಬೇಕಾಗಿದೆ.

ಮುರುಗೇಶ ಡಿ., ದಾವಣಗೆರೆ

ಉದಯಾಸ್ತಮಾನ ಸೇವೆ: ಅನ್ಯಾಯದ ಪ್ರಶ್ನೆಯಿಲ್ಲ

ತಿರುಮಲ ತಿರುಪತಿ ದೇವಸ್ಥಾನದಲ್ಲಿ ಒಂದು ಕೋಟಿಯಿಂದ ಒಂದೂವರೆ ಕೋಟಿ ರೂಪಾಯಿ ವೆಚ್ಚದಲ್ಲಿ ಉದಯಾಸ್ತಮಾನ ಸೇವೆ ಪಡೆಯುವ ಅವಕಾಶ ಕಲ್ಪಿಸಿರುವ ವಿಷಯಕ್ಕೆ ಸಂಬಂಧಿಸಿದಂತೆ ಪತ್ರ ಬರೆದಿರುವ (ವಾ.ವಾ., ಜ. 3) ಪತ್ತಂಗಿ ಎಸ್. ಮುರಳಿ ಅವರು, ಬಡವನ ಕೈಗೆಟುಕದಿರೆ ಆತ ದೇವರು ಅಂತ ಹೇಗೆ ಆದಾನು ಎಂದು ಪ್ರಶ್ನಿಸಿದ್ದಾರೆ. ತಿಮ್ಮಪ್ಪನು ಬಡವರು ಮತ್ತು ಬಲ್ಲಿದರಿಗೆ ಒಂದೇ ರೀತಿಯಲ್ಲಿ ದರ್ಶನ ಕೊಡುತ್ತಾನೆ. ಟಿಕೆಟ್ ಕೊಂಡವರು ಮತ್ತು ಧರ್ಮ ದರ್ಶನದವರು ಗರ್ಭಗುಡಿಯ ಹತ್ತಿರ ಬಂದಾಗ ಒಂದೇ ಸಾಲಿನಲ್ಲಿ ದರ್ಶನ ಮಾಡಿ ಹೊರಗೆ ಬರುತ್ತಾರೆ. ದರ್ಶನಕ್ಕೆ ದಿನವೊಂದಕ್ಕೆ ಅನಿವಾಸಿ ಭಾರತೀಯರೂ ಸೇರಿದಂತೆ ಲಕ್ಷಾಂತರ ಭಕ್ತರು ಬರುತ್ತಾರೆ. ಎಲ್ಲರನ್ನೂ ಮಣೆ ಹಾಕಿ ಒಳಗೆ ಕುಳ್ಳಿರಿಸಲು ಸಾಧ್ಯವಿಲ್ಲ.

ಅಪೇಕ್ಷೆಯುಳ್ಳವರು, ಶ್ರೀಮಂತರು ಉದಯಾಸ್ತಮಾನ ಸೇವೆಯ ಮೂಲಕ ದರ್ಶನ ಪಡೆಯಲು ಇಚ್ಛಿಸುತ್ತಾರೆ. ಇದರಲ್ಲಿ ನ್ಯಾಯ, ಅನ್ಯಾಯದ ಪ್ರಶ್ನೆಯೇ ಬರುವುದಿಲ್ಲ. ಈ ಸೇವೆಯ ಹೊರತು ಸಾಮಾನ್ಯ ಭಕ್ತರಿಗೆ, ಹಣವಿಲ್ಲದವರಿಗೂ ಯಾವುದೇ ಅಡಚಣೆ ಇಲ್ಲದೆ ವರ್ಷಪೂರ್ತಿ ದರ್ಶನ ಲಭ್ಯವಿದೆ.

ರಾ.ಬಾ.ವರದರಾಜನ್, ಬೆಂಗಳೂರು

ಪೊಲೀಸರಿಂದ ವರದಿ ಕೇಳಿದ್ದೇಕೆ?

ಸಚಿವ ಡಾ. ಅಶ್ವತ್ಥನಾರಾಯಣ ಹಾಗೂ ಸಂಸದ ಡಿ.ಕೆ.ಸುರೇಶ್ ಅವರ ನಡುವೆ ರಾಮನಗರದಲ್ಲಿ ನಡೆದ ಮಾತಿನ ಜಟಾಪಟಿಯಿಂದ ವೇದಿಕೆಯಲ್ಲಿ ಉಂಟಾದ ಅಹಿತಕರ ಘಟನೆಯ ಬಗ್ಗೆ ಗೃಹ ಸಚಿವರು ಪೊಲೀಸ್ ಅಧಿಕಾರಿಗಳಿಂದ ವರದಿ ಕೇಳಿರುವುದು ಪೊಲೀಸರನ್ನು ಇಕ್ಕಟ್ಟಿಗೆ ಸಿಲುಕಿಸುತ್ತದೆ. ರಾಜ್ಯದಲ್ಲಿ ನಡೆದ ಯಾವುದೇ ಘಟನೆಯ ಬಗ್ಗೆ ಒಳಾಡಳಿತದ ಮುಖ್ಯಸ್ಥರಾಗಿ ಗೃಹ ಸಚಿವರು ಘಟನೆಯ ವರದಿ ಪಡೆದು ಅದನ್ನು ಮುಖ್ಯಮಂತ್ರಿಗೆ ಸಲ್ಲಿಸಿ ಮುಂದಿನ ಕ್ರಮದ ಬಗ್ಗೆ ಅಭಿಪ್ರಾಯ ಕೇಳುವುದು ಆಡಳಿತದ ಸಂಪ್ರದಾಯ. ಇಲ್ಲಿ ಮುಖ್ಯಮಂತ್ರಿಯವರೇ ಈ ಘಟನೆಯ ಪ್ರತ್ಯಕ್ಷದರ್ಶಿ. ಅವರ ಸಮ್ಮುಖದಲ್ಲಿಯೇ ಘಟನೆ ನಡೆದಿದೆ. ಅವರು ಇದರ ಮರ್ಮ ಅರಿತು, ಮುಜಗರಕ್ಕೊಳಗಾಗಿ, ಪ್ರಾಂತೀಯವಾರು ಗೌರವದ ಧಾಟಿಯಲ್ಲಿ ಮಾತನಾಡಿದ್ದಾರೆ. ಹಿಂದೆಲ್ಲ ಮೈಸೂರು ಭಾಗದ ಮುಖ್ಯಮಂತ್ರಿಯು ಉತ್ತರ ಕರ್ನಾಟಕಕ್ಕೆ ಬಂದಾಗ ಪಕ್ಷಭೇದ ಮರೆತು ಆ ಭಾಗದಲ್ಲಿ ನೀಡುತ್ತಿದ್ದ ಸಭಾ ಗೌರವ ಈ ಭಾಗದಲ್ಲಿ ಇಲ್ಲ ಎಂದಿದ್ದಾರೆ. ಇದು ಈ ನಾಡಿನ ಯಾವುದೇ ಪಕ್ಷದ ಮಂತ್ರಿ ಮಹೋದಯರು ಬಯಸುವ ಅಲಿಖಿತ ಶಿಷ್ಟಾಚಾರ. ಈ ಘಟನೆಯ ಬಗ್ಗೆ ಗೃಹ ಸಚಿವರು ನೇರವಾಗಿ ಮುಖ್ಯಮಂತ್ರಿಯವರನ್ನೇ ಭೇಟಿಯಾಗಿ ವಿವರಣೆ ಪಡೆಯಬಹುದಿತ್ತು. ಇಷ್ಟೆಲ್ಲಾ ಅವಕಾಶ ಇದ್ದರೂ ಘಟನೆಯ ಬಗ್ಗೆ ಪೊಲೀಸರಿಂದ ವರದಿ ಕೇಳಿದ್ದು ಅಂಗೈ ಹುಣ್ಣಿಗೆ ಕನ್ನಡಿ ಹಿಡಿದಂತಾಗಿದೆ.

ಗಣಪತಿ ನಾಯ್ಕ್, ಕಾನಗೋಡ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಹಿಂದಿ ಭಾಷಿಕ ರಾಜ್ಯಗಳಲ್ಲಿ ಬಡವರು ಹೆಚ್ಚು

● ಜಯಸಿಂಹ ಆರ್., ಅಮೃತ್ ಕಿರಣ್ ಬಿ.ಎಂ.

ಹಿಂದಿ ಭಾಷಿಕ ರಾಜ್ಯಗಳಲ್ಲಿ ಶೇ 30ಕ್ಕಿಂತಲೂ ಹೆಚ್ಚು ಜನರು ಬಡವರು ಎನ್ನುತ್ತದೆ ಕೇಂದ್ರ ಸರ್ಕಾರದ 'ಬಹು ಆಯಾಮದ ಬಡತನ ಸೂಚ್ಯಂಕ ವರದಿ'. ದಕ್ಷಿಣ ಮತ್ತು ಉತ್ತರ ಭಾರತದ ರಾಜ್ಯಗಳಿಗೆ ಹೋಲಿಸಿದರೆ, ಹಿಂದಿ ಭಾಷಿಕ ರಾಜ್ಯಗಳಲ್ಲಿ ಬಡವರ ಪ್ರಮಾಣ ಅತ್ಯಂತ ಹೆಚ್ಚು. ಅಂದರಂತೆಯೇ ಈಶಾನ್ಯ ಭಾರತದ ಹಲವು ರಾಜ್ಯಗಳಲ್ಲಿ ಬಡವರ ಪ್ರಮಾಣ ಶೇ 20ರಿಂದ ಶೇ 35ರವರೆಗೂ ಇದೆ.

ಪೌಷ್ಟಿಕ ಆಹಾರ, ಆರೋಗ್ಯ ಸೇವೆ ಲಭ್ಯತೆ, ಮರಣ ಪ್ರಮಾಣ, ಶುದ್ಧ ಕುಡಿಯುವ ನೀರಿನ ಲಭ್ಯತೆ, ಶೌಚಾಲಯ, ವಿದ್ಯುತ್ ಸಂಪರ್ಕ, ಮನೆ ಬಳಕೆ ವಸ್ತುಗಳು, ಶಿಕ್ಷಣ, ವಸತಿಯ ಸ್ವರೂಪ ಮತ್ತು ಬ್ಯಾಂಕ್ ಖಾತೆ ಹೊಂದಿರುವುದರ ಆಧಾರದಲ್ಲಿ ಈ ಸೂಚ್ಯಂಕವನ್ನು ಸಿದ್ಧಪಡಿಸಲಾಗಿದೆ. ಹೀಗಾಗಿ ಇಲ್ಲಿ ಬಡತನವು, ಇಡೀ ರಾಜ್ಯವೇ ಹಿಂದುಳಿದಿರುವುದನ್ನು ಸೂಚಿಸುತ್ತದೆ.

ಕೇಂದ್ರ ಸರ್ಕಾರವು ಇದೇ ಮೊದಲ ಬಾರಿಗೆ ಈ ಸೂಚ್ಯಂಕವನ್ನು ಸಿದ್ಧಪಡಿಸಿದೆ. 2015-16ನೇ ಸಾಲಿನ ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ-4ರ ವರದಿಯ ದತ್ತಾಂಶಗಳನ್ನು ಆಧಾರವಾಗಿಟ್ಟುಕೊಂಡು ಅಧ್ಯಯನ ಮಾಡಲಾಗಿದೆ. ಆ ದತ್ತಾಂಶಗಳನ್ನು 2019-20ನೇ ಸಾಲಿನ ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ-5ರ ವರದಿಯ ದತ್ತಾಂಶಗಳಿಗೆ ಹೋಲಿಸಿ ಈ ಸೂಚ್ಯಂಕವನ್ನು ಸಿದ್ಧಪಡಿಸಲಾಗಿದೆ.

ಸುಧಾರಣೆ: 2015-16ಕ್ಕೆ ಹೋಲಿಸಿದರೆ, 2019-20ರ ಅವಧಿಯಲ್ಲಿ ಶಾಲೆ ವಂಚಿತರ ಪ್ರಮಾಣ ಕಡಿಮೆಯಾಗಿದೆ. ಬಿಹಾರದಲ್ಲಿ ಶೇ 9.8ರಷ್ಟು ಮತ್ತು ನಾಗಾಲ್ಯಾಂಡ್‌ನಲ್ಲಿ ಶೇ 5.40ರಷ್ಟು ಮಂದಿ ಶಾಲೆ ವಂಚಿತರಾಗಿದ್ದಾರೆ. ಬೇರೆ ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಶಾಲೆ ವಂಚಿತರ ಪ್ರಮಾಣವು ಶೇ 5ಕ್ಕಿಂತಲೂ ಕಡಿಮೆ ಇದೆ.

ಶೇ 50ಕ್ಕಿಂತಲೂ ಹೆಚ್ಚು ಬಡವರು ಇರುವ ರಾಜ್ಯಗಳು	1 ರಾಜ್ಯ
ಶೇ 40-50ರಷ್ಟು ಬಡವರು ಇರುವ ರಾಜ್ಯಗಳು	1 ರಾಜ್ಯ
ಶೇ 30-40ರಷ್ಟು ಬಡವರು ಇರುವ ರಾಜ್ಯಗಳು	4 ರಾಜ್ಯಗಳು
ಶೇ 20-30ರಷ್ಟು ಬಡವರು ಇರುವ ರಾಜ್ಯಗಳು	6 ರಾಜ್ಯಗಳು
ಶೇ 10-20ರಷ್ಟು ಬಡವರು ಇರುವ ರಾಜ್ಯಗಳು	9 ರಾಜ್ಯಗಳು
ಶೇ 0-10ರಷ್ಟು ಬಡವರು ಇರುವ ರಾಜ್ಯಗಳು	7 ರಾಜ್ಯಗಳು

- ಬಿಹಾರದಲ್ಲಿ ಶೇ 51.91ರಷ್ಟು ಜನರು ಬಡವರು ಎಂದು ಈ ವರದಿಯು ಹೇಳುತ್ತದೆ. ಈ ಪ್ರಕಾರ, ದೇಶದಲ್ಲಿ ಅತ್ಯಂತ ಹಿಂದುಳಿದ ರಾಜ್ಯಗಳಲ್ಲಿ ಬಿಹಾರ ಮೊದಲ ಸ್ಥಾನದಲ್ಲಿದೆ
- ಜಾರ್ಖಂಡ್‌ನಲ್ಲಿ ಶೇ 42.16ರಷ್ಟು ಜನರು ಬಡವರ ಸಾಲಿಗೆ ಸೇರುತ್ತಾರೆ. ಉತ್ತರ ಪ್ರದೇಶ, ಮಧ್ಯಪ್ರದೇಶದಲ್ಲಿ ಬಡವರ ಪ್ರಮಾಣ ಶೇ 30-40ರಷ್ಟಿದೆ
- ಛತ್ತೀಸಗಡ, ರಾಜಸ್ಥಾನ ಮತ್ತು ಒಡಿಶಾದಲ್ಲಿ ಶೇ 29ಕ್ಕಿಂತಲೂ ಹೆಚ್ಚು ಜನರು ಬಡವರು ಎನ್ನುತ್ತದೆ ಈ ವರದಿ
- ಕೇರಳವು ದೇಶದಲ್ಲಿ ಅತ್ಯಂತ ಕಡಿಮೆ ಬಡವರು ಇರುವ ರಾಜ್ಯ ಎನಿಸಿದೆ. ರಾಜ್ಯದಲ್ಲಿರುವ ಬಡವರ ಪ್ರಮಾಣ ಶೇ 0.71ರಷ್ಟು
- ಗೋವಾ, ಸಿಕ್ಕಿಂ ಮತ್ತು ತಮಿಳುನಾಡಿನಲ್ಲಿ ಬಡವರ ಪ್ರಮಾಣ ಶೇ 5ಕ್ಕಿಂತಲೂ ಕಡಿಮೆ ಎನಿಸಿದೆ

ರಾಜ್ಯಗಳಲ್ಲಿ ಬಡವರ ಪ್ರಮಾಣ



ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 12

ಭಕ್ತಿಯಿಂದ ಕೇಳಿದರೆ ಮುಕ್ತಿ ಪ್ರಾಪ್ತಿ

ಶಿವಕಥಾಶ್ರವಣವು ನಿರ್ವಿಘ್ನವಾಗಿ ನೆರವೇರಲು ಮೊದಲು ಗಣಪತಿಯನ್ನು ಪೂಜಿಸಿ, ಅನಂತರ ಶಿವನನ್ನೂ, ಮಂಗಳಕರ ದೇವತೆಯಾಗಿರುವ ಪುರಾಣದ ಪುಸ್ತಕವನ್ನೂ ಭಕ್ತಿಯಿಂದ ಪೂಜಿಸಬೇಕು. ಶಿವಪೂಜೆಯ ವಿಧಿಯಂತೆ ಸಂಕ್ಷೇಪವಾಗಿ ಪ್ರಾಯಶ್ಚಿತ್ತವನ್ನಾಚರಿಸಿ, ನವಗ್ರಹಗಳ ಪೂಜೆಮಾಡಬೇಕು. ಪೂಜೆಯಾದ ನಂತರ ಅತ್ಯಂತ ಭಕ್ತಿಯಿಂದ ಕೈಗಳನ್ನು ಜೋಡಿಸಿಕೊಂಡು ನಮ್ರವಾಗಿ ನಿಂತು ಶಿವಸ್ವರೂಪವಾಗಿರುವ ಪುಸ್ತಕವನ್ನು 'ಎಲೈ, ಶಿವಸ್ವರೂಪವಾದ ಗ್ರಂಥವೇ. ನಿನ್ನಲ್ಲಿರುವ ಶಿವಾಮೃತವನ್ನು ಸವಿಯಲು ಬಂದಿರುವೆ. ಪ್ರಸನ್ನನಾಗಿ ಅನುಗ್ರಹಿಸು' ಅಂತ ಪ್ರಾರ್ಥಿಸಿ, ನಮಸ್ಕರಿಸಬೇಕು.

ಶಿವಪುರಾಣದ ಆಚಾರ-ವಿಚಾರಗಳನ್ನು ತಿಳಿದು, ಶುದ್ಧಚಿತ್ತನಾಗಿ ಕೇಳುವವನು, ಪುರಾಣಿಕನಲ್ಲಿ ಭಕ್ತಿಯಿಟ್ಟು, ಸಂತೋಷಚಿತ್ತನಾಗಿ ಕೇಳಬೇಕು. ಶಿವಪುರಾಣ ಕೇಳುವ ಮುನ್ನ ಪರಶಿವನನ್ನುದ್ದೇಶಿಸಿ 'ಎಲೈ ಶಂಕರನೇ, ಸಂಸಾರಸಾಗರದಲ್ಲಿ ಮುಳುಗಿ ದೀನನಾಗಿಯೂ, ಪೂರ್ವಾರ್ಜಿತ ಕರ್ಮಗಳೆಂಬ ಮೊಸಳೆಗಳಿಂದ ಹಿಡಿಯಲ್ಪಟ್ಟಿರುವ ನನ್ನನ್ನು ಸಂಸಾರ ಎಂಬ ಸಮುದ್ರದಿಂದ ಪಾರುಮಾಡು. ನನ್ನ ಮನೋರಥವೆಲ್ಲವೂ ಸಫಲವಾಗುವಂತೆ ಮಾಡು ಮತ್ತು ನಿರ್ವಿಘ್ನವಾಗಿ ಸಂಪೂರ್ಣ ಕಥಾಶ್ರವಣವಾಗುವಂತೆ ನನಗೆ ಅನುಗ್ರಹಿಸು' ಅಂತ ಪ್ರಾರ್ಥಿಸಬೇಕು. ನಂತರ ಶಿವಪೂಜಾವಿಧಿಯಂತೆ ಪುರಾಣಿಕನನ್ನು ಪುಷ್ಪ, ವಸ್ತ್ರ, ಒಡವೆ, ಧೂಪ, ದೀಪಾದಿ ಸಾಮಗ್ರಿಗಳಿಂದ ಪೂಜಿಸಬೇಕು. ಪುರಾಣಿಕನ ಎದುರಿಗೆ ಶುದ್ಧವಾದ ಮನಸ್ಸಿನಿಂದ 'ನಾನು ಪುರಾಣ ಮುಗಿಯುವವರೆಗೂ ಪ್ರಯತ್ನಪೂರ್ವಕವಾಗಿ ಇರುತ್ತೇನೆ' ಎಂದು ಸಂಕಲ್ಪ ಮಾಡಬೇಕು. ಅನಂತರ ಐದು ಜನಗಳಿಗಾಗಲೀ ಅಥವಾ ಒಬ್ಬನಿಗೇ ಆಗಲಿ, ಶಿವಪಂಚಾಕ್ಷರೀಜಪಕ್ಕೋಸ್ಕರ ವರಣವನ್ನು ಕೊಡಬೇಕು. ಅನಂತರ ಅವರು ಶಿವಪಂಚಾಕ್ಷರೀ ಜಪವನ್ನು ಮಾಡುತ್ತಿರಬೇಕು.

ಶಿವಪುರಾಣ ಹೇಳುವವನಾಗಲೀ ಕೇಳುವವನಾಗಲೀ ನಾನಾ ಕೆಲಸಗಳ ಗಡಿಬಿಡಿಯಲ್ಲಿರಬಾರದು. ಕಾಮಾದಿ ವಿಕಾರರಹಿತನಾಗಿರಬೇಕು. ನಾಸ್ತಿಕನಾಗಿರಬಾರದು. ಇದಕ್ಕೆ ವಿರುದ್ಧವಾಗಿದ್ದರೆ, ಹೇಳುವವನಿಗೂ ಕೇಳುವವರಿಗೂ ಯಾವ ಪುಣ್ಯವೂ ಬಾರದು; ಬದಲಿಗೆ ಪಾಪ ಬರುವುದು. ಇದಕ್ಕಾಗಿ ಕೇಳುವವರು ಶುದ್ಧರಾಗಿ, ಪ್ರಸನ್ನಚಿತ್ತರಾಗಿ, ಒಳ್ಳೆ ಬುದ್ಧಿಯುಳ್ಳವರಾಗಿರಬೇಕು. ನೀತಿನಿಯಮದಂತೆ ಆದರದಿಂದ ಶಿವಪುರಾಣವನ್ನು ಕೇಳಬೇಕು. ಲೋಕವ್ಯವಹಾರದ ಚಿಂತೆ, ಧನ-ಮನೆ-ಮಕ್ಕಳ ಇತ್ಯಾದಿ ಲವಲೇಶದ ಯೋಚನೆಯನ್ನೂ ಮಾಡಬಾರದು. ಕೇವಲ ಶಿವಕಥೆಯನ್ನು ಕೇಳುವುದರಲ್ಲಿ ಮಾತ್ರ ಮನಸ್ಸಿಡುವ ಶುದ್ಧಮತಿಗಳಾಗಿರಬೇಕು. ನಿಯಮಬದ್ಧರಾಗಿ ಶಿವಪುರಾಣ ಹೇಳುವವರಿಗೆ ಮತ್ತು ಕೇಳುವವರಿಗೆ ಉತ್ತಮವಾದ ಫಲ ದೊರೆವುದು. ಶ್ರದ್ಧಾಭಕ್ತಿಯಿಂದ, ಅನ್ಯಯೋಚನೆಗಳನ್ನು ಬಿಟ್ಟು, ತನು-ಮನ ಶುಚಿಯಾಗಿಟ್ಟುಕೊಂಡು, ಮೌನದಿಂದ ಯಾರು ಶಿವಪುರಾಣ ಕೇಳುವರೋ ಅವರು ಪುಣ್ಯವಂತರಾಗುತ್ತಾರೆ.

ಭಕ್ತಿಯಿಲ್ಲದೆ ಕುಹಕಬುದ್ಧಿಯಿಂದ ಈ ಪುಣ್ಯಕಥೆಯನ್ನು ಕೇಳುವವರಿಗೆ ಶುಭಫಲ ಸಿಗುವುದಿಲ್ಲ. ಅದಕ್ಕೆ ಬದಲು, ಅವರಿಗೆ ಜನ್ಮಜನ್ಮದಲ್ಲೂ ದುಃಖವೇ ಪ್ರಾಪ್ತವಾಗುವುದು. ಶಿವಪುರಾಣವನ್ನು ಹೇಳುತ್ತಿರುವಾಗ ಮಧ್ಯದಲ್ಲಿ ಯಾರಾದರೂ ಎದ್ದುಹೋದರೆ ಅವರ ಎಲ್ಲಾ ಸಂಪತ್ತುಗಳು ನಾಶವಾಗುವುವು. ಯಾರು ಪುರಾಣ ಶ್ರವಣಕಾಲದಲ್ಲಿ ಪೇಟವನ್ನು ಧರಿಸಿ ಕೇಳುತ್ತಾರೋ, ಅವರಿಗೆ ಹುಟ್ಟುವ ಮಕ್ಕಳು ಪಾಪಿಗಳಾಗಿ, ಕುಲದೂಷಕರಾಗುವರು. ಯಾರು ತಾಂಬೂಲ ಮೆಲ್ಲುತ್ತಾ ಪುರಾಣವನ್ನು ಕೇಳುವರೋ ಅವರನ್ನು ಯಮಕಿಂಕರರು ನರಕಕ್ಕೆ ಒಯ್ದು, ಅಲ್ಲಿ ಅವರಿಗೆ ಅವರ ಅಮೇಧ್ಯವನ್ನೇ ತಿನ್ನಿಸುವರು. ಎತ್ತರವಾದ ಆಸನದಲ್ಲಿ ಕುಳಿತು ಶಿವಪುರಾಣವನ್ನು ಕೇಳುವವರು, ನರಕದಲ್ಲಿ ದುಃಖವನ್ನು ಅನುಭವಿಸಿ ಅನಂತರ ಕಾಗೆಗಳಾಗುವರು. ವೀರಾದಿ ಆಸನಗಳನ್ನು ಹಾಕಿಕೊಂಡು ಕುಳಿತು ಈ ಪುರಾಣವನ್ನು ಕೇಳುವವರು, ನರಕವನ್ನನುಭವಿಸಿ ವಿಷವೃಕ್ಷಗಳಾಗುವರು. ರೋಗವಿಲ್ಲದಿದ್ದರೂ ಯಾರು ಮಲಗಿಕೊಂಡು ಪುರಾಣವನ್ನು ಕೇಳುವರೋ ಅವರು ನರಕವನ್ನನುಭವಿಸಿ ಅಜಗರವೇ ಮುಂತಾದ ಸರ್ಪಗಳಾಗಿ ಹುಟ್ಟುವರು.

ಶಿವಪುರಾಣಿಕನನ್ನು ನಮಸ್ಕರಿಸದೆ, ಪುರಾಣವನ್ನು ಕೇಳುವವರು ನರಕಗಳನ್ನು ಅನುಭವಿಸಿ ಮತ್ತೀವೃಕ್ಷವಾಗಿ ಹುಟ್ಟುವರು. ಪುರಾಣಿಕನ ಆಸನಕ್ಕೆ ಸಮನಾಗಿ ಆಸನವನ್ನು ಹಾಕಿಕೊಂಡು ಪುರಾಣ ಕೇಳುವವರಿಗೆ ನರಕಪ್ರಾಪ್ತಿಯಾಗಿ, ಗುರುದ್ರೋಹ ಮಾಡಿದ ಪಾಪವನ್ನು ಪಡೆವರು. ಶಿವಕಥೆಯನ್ನೂ ಶಿವಕಥೆ ಕೇಳುವವರನ್ನೂ ನಿಂದಿಸಿದವರು ನೂರು ಜನ್ಮಗಳ ಕಾಲ ದುಃಖವನ್ನನುಭವಿಸಿ, ನಾಯಿಗಳಾಗಿ ಹುಟ್ಟುವರು. ಶಿವಪುರಾಣವನ್ನು ಹೇಳುತ್ತಿರುವಾಗ ಕೆಟ್ಟ ಮಾತುಗಳನ್ನಾಡುವವರು ಘೋರವಾದ ನರಕವನ್ನು ಅನುಭವಿಸಿ ಕತ್ತೆಗಳಾಗಿ ಹುಟ್ಟುವರು. ಪುರಾಣಕೀರ್ತನೆಗೆ ವಿಘ್ನ ಮಾಡುವವರು ಒಂದು ಕೋಟಿವರ್ಷಗಳ ಕಾಲ ನರಕವನ್ನನುಭವಿಸಿ ಹಂದಿಗಳಾಗಿ ಹುಟ್ಟುವರು. ಆದ್ದರಿಂದ ಸಾಕ್ಷಾತ್ ಶಿವಸ್ವರೂಪವಾದ ಶಿವಪುರಾಣವನ್ನು ಶ್ರದ್ಧಾ-ಭಕ್ತಿಯಿಂದ ಕೇಳಬೇಕು ಅಂತ ಸೂತಮುನಿಯು ಶಿವಪುರಾಣದ ವಿಧಿ-ವಿಧಾನಗಳನ್ನು ಶೌನಕಮುನಿಗೆ ತಿಳಿಸುತ್ತಾನೆ. ●

ಉತ್ತರ ಕರ್ನಾಟಕದಲ್ಲಿ ಹೆಚ್ಚು ಬಡವರು

ಉತ್ತರ ಕರ್ನಾಟಕದಲ್ಲಿ ಹೆಚ್ಚು ಬಡವರಿದ್ದಾರೆ ಎಂದು ನೀತಿ ಆಯೋಗದ ವರದಿಯ ದತ್ತಾಂಶಗಳು ತಿಳಿಸುತ್ತವೆ. ಕಲ್ಯಾಣ ಕರ್ನಾಟಕ ಹಾಗೂ ಕಿತ್ತೂರು ಕರ್ನಾಟಕದ ಮೂರು ಜಿಲ್ಲೆಗಳಲ್ಲಿ ಬಡವರ ಪ್ರಮಾಣ ಶೇ 19.42ರಿಂದ ಶೇ 41.67ರಷ್ಟಿದೆ. ಕಲ್ಯಾಣ ಕರ್ನಾಟಕ ಭಾಗದ ಬೀದರ್, ಕಲಬುರಗಿ, ಯಾದಗಿರಿ, ರಾಯಚೂರು, ಕೊಪ್ಪಳ ಹಾಗೂ ಬಳ್ಳಾರಿ ಜಿಲ್ಲೆಗಳು, ಕಿತ್ತೂರು ಕರ್ನಾಟಕದ ವಿಜಯಪುರ, ಬಾಗಲಕೋಟೆ ಹಾಗೂ ಗದಗ ಜಿಲ್ಲೆಗಳ ಜನರು ಮೂಲಸೌಕರ್ಯಗಳ ಕೊರತೆಯಿಂದ ಬಡವರೆನಿಸಿಕೊಂಡಿದ್ದಾರೆ. ಈ ವರದಿಯು ಪ್ರಾದೇಶಿಕ ಅಸಮಾನತೆ ಹಾಗೂ ಮೂಲಸೌಕರ್ಯಗಳನ್ನು ಒದಗಿಸುವಲ್ಲಿ ಎದುರಾಗಿರುವ ತಾರತಮ್ಯದತ್ತ ಬೊಟ್ಟು ಮಾಡಿದೆ.

ಶೇ 40-50ರಷ್ಟು ಬಡವರು ಇರುವ ಜಿಲ್ಲೆಗಳು	1 ಜಿಲ್ಲೆ
ಶೇ 30-40ರಷ್ಟು ಬಡವರು ಇರುವ ಜಿಲ್ಲೆಗಳು	1 ಜಿಲ್ಲೆ
ಶೇ 20-30ರಷ್ಟು ಬಡವರು ಇರುವ ಜಿಲ್ಲೆಗಳು	6 ಜಿಲ್ಲೆಗಳು
ಶೇ 10-20ರಷ್ಟು ಬಡವರು ಇರುವ ಜಿಲ್ಲೆಗಳು	13 ಜಿಲ್ಲೆಗಳು
ಶೇ 0-10ರಷ್ಟು ಬಡವರು ಇರುವ ಜಿಲ್ಲೆಗಳು	9 ಜಿಲ್ಲೆಗಳು



ಕಚ್ಚಾಮನೆ ಹೊಂದಿರುವವರ ಪ್ರಮಾಣ



ಆಧಾರ: ಬಹು ಆಯಾಮದ ಬಡತನ ಸೂಚ್ಯಂಕ ವರದಿ, ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ-5ರ ವರದಿ

ಪ್ರಜಾವಾಣಿ ಗ್ರಾಫಿಕ್ಸ್ | ಮಂಜುನಾಥ ಹುಲಕೊಪ್ಪದ

- ಕಲ್ಯಾಣ ಕರ್ನಾಟಕದ ಜಿಲ್ಲೆಗಳ ಪೈಕಿ ಅತ್ಯಂತ ಹೆಚ್ಚು ಬಡವರು ಕಂಡುಬಂದಿರುವುದು ಯಾದಗಿರಿ ಜಿಲ್ಲೆಯಲ್ಲಿ. ಇಲ್ಲಿ ಶೇ 41.67ರಷ್ಟು ಬಡವರಿದ್ದಾರೆ. ಮೂಲ ಸೌಕರ್ಯ ವಂಚಿತ ಜಿಲ್ಲೆಗಳಲ್ಲಿ ಯಾದಗಿರಿ ಮೊದಲ ಸ್ಥಾನದಲ್ಲಿದೆ
- ಯಾದಗಿರಿಯ ನಂತರದ ಸ್ಥಾನದಲ್ಲಿರುವುದು ರಾಯಚೂರು ಜಿಲ್ಲೆ. ಜಿಲ್ಲೆಯ ಶೇ 32.19ರಷ್ಟು ಜನರು ಬಡವರು ಎಂದು ವರದಿ ಅಭಿಪ್ರಾಯಪಟ್ಟಿದೆ
- ಶೇ 20ರಿಂದ ಶೇ 30ರಷ್ಟು ಬಡವರನ್ನು ಹೊಂದಿರುವ ಆರು ಜಿಲ್ಲೆಗಳಿವೆ. ಕೊಪ್ಪಳ, ಬಳ್ಳಾರಿ, ಕಲಬುರಗಿ, ವಿಜಯಪುರ, ಗದಗ ಮತ್ತು ಬಾಗಲಕೋಟೆ ಜಿಲ್ಲೆಗಳು ಈ ವರ್ಗದಲ್ಲಿವೆ
- ರಾಜ್ಯದಲ್ಲಿ ಅತಿ ಕಡಿಮೆ ಬಡವರನ್ನು ಹೊಂದಿರುವ ಜಿಲ್ಲೆಗಳ ಸಾಲಿನಲ್ಲಿ ಬೆಂಗಳೂರು (ಶೇ 2.31) ಮೊದಲ ಸ್ಥಾನದಲ್ಲಿದೆ. ಮಂಡ್ಯ, ಹಾಸನ, ದಕ್ಷಿಣ ಕನ್ನಡ, ಮೈಸೂರು, ಬೆಂಗಳೂರು ಗ್ರಾಮಾಂತರ, ಕೊಡಗು, ರಾಮನಗರ ಹಾಗೂ ಧಾರವಾಡ ಜಿಲ್ಲೆಗಳಲ್ಲಿ ಶೇ 10ಕ್ಕಿಂತ ಕಡಿಮೆ ಬಡವರಿದ್ದಾರೆ

21.9 % ರಾಜ್ಯದಲ್ಲಿ ಎಲ್‌ಪಿಜಿ ಸಂಪರ್ಕ ವಂಚಿತರ ಪ್ರಮಾಣ

25.21 % ಪ್ರತ್ಯೇಕ ಶೌಚಾಲಯ ವಂಚಿತರ ಪ್ರಮಾಣ

6.9 % ಶುದ್ಧ ಕುಡಿಯುವ ನೀರಿನ ಲಭ್ಯತೆ ಇಲ್ಲದವರ ಪ್ರಮಾಣ

0.90 % ವಿದ್ಯುತ್ ಸಂಪರ್ಕ ವಂಚಿತರ ಪ್ರಮಾಣ

5.10 % ಬ್ಯಾಂಕ್ ಖಾತೆ ಇಲ್ಲದವರ ಪ್ರಮಾಣ

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ ಕಮ್ಮರಡಿ — ಬುಧವಾರ ಜನವರಿ 5, 2022

ಶ್ರೀ ಪ್ಲವನಾಮ ಸಂವತ್ಸರ ದಕ್ಷಿಣಾಯಣ-ಹೇಮಂತ ಋತು ಧನುರ್ಮಾಸದ 20ನೇ ದಿನ
ತಿಥಿ: ತೃತೀಯ ಗಂ. 14-35 **ನಕ್ಷತ್ರ:** ಶ್ರವಣ ಗಂ. 08-46 **ಯೋಗ:** ವಜ್ರ ಗಂ. 18-14, **ಕರಣ:** ಗರಜೆ ಗಂ. 14-35, ವಣಿಜ್ ಗಂ. 25-27. ರಾಹುಕಾಲ : ಮಧ್ಯಾಹ್ನ 12:00-01:30
ಸೂರ್ಯೋದಯ : 06-59 ಸೂರ್ಯಾಸ್ತ : 06-13 ಮುಸ್ಲಿಂ ದಿನಾಂಕ : 01 ಜುಮಾದುಸ್ಸಾನಿ
ಅದೃಷ್ಟ ಸಂಖ್ಯೆ: 5, 8

ಮೇಷ: ಇಂದು ಸಾಮಾಜಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವಿರಿ. ಸ್ವಂತ ಉದ್ಯೋಗಿಗಳಿಗೆ ಅಧಿಕ ಲಾಭವಾಗುವುದು. ಹಣಕಾಸಿನ ಹೊಂದಿಕೆಯಾಗುವುದು. ನೂತನ ವಾಹನ ಕೊಳ್ಳುವ ಯೋಗವಿದೆ.

ವೃಷಭ: ದಿನಸಿ ವ್ಯಾಪಾರದಲ್ಲಿ ಪ್ರಗತಿ. ಹಿರಿಯರ ಆಸ್ತಿ ಲಭಿಸಲಿದೆ. ಇಂದು ಭವಿಷ್ಯದ ಯೋಜನೆಗಳಿಗೆ ಹೆಚ್ಚು ಗಮನ ಕೊಡಬೇಕಾಗಿಬರುವುದು. ವೈಯಕ್ತಿಕ ವಿಷಯಗಳ ಬಗ್ಗೆ ನಿಗಾ ವಹಿಸುವುದು ಉತ್ತಮ.

ಮಿಥುನ: ರಾಜಕಾರಣದಲ್ಲಿ ಹೆಚ್ಚಿನ ಸಮಯ ಕಳೆಯಬೇಕಾದ ಅನಿವಾರ್ಯತೆ ಉಂಟಾಗುವುದು. ನಿಮ್ಮ ಪರಿಸ್ಥಿತಿಗಳು ಸುಧಾರಿಸಲಿವೆ. ವಾಣಿಜ್ಯ ಅಥವಾ ಆರ್ಥಿಕ ಒಪ್ಪಂದಗಳ ನಿಯಮ ಉಲ್ಲಂಘನೆಯಾಗದಂತೆ ಜಾಗ್ರತರಾಗಿರಿ.

ಕರ್ಕಾಟಕ: ಕೌಟುಂಬಿಕ ವಿಷಯಗಳನ್ನು ತಂದೆಯೊಡನೆ ಚರ್ಚಿಸಿ ನಂತರದಲ್ಲಿ ತೀರ್ಮಾನಕ್ಕೆ ಬರುವುದು ಒಳ್ಳೆಯದು. ಅಭಿಪ್ರಾಯ ವಿನಿಮಯಗಳಿಂದ ಮನಸ್ಸಿಗೆ ನೆಮ್ಮದಿ. ಮಾನಸಿಕ ಸ್ಥೈರ್ಯ ಹೆಚ್ಚಲಿದೆ.

ಸಿಂಹ: ದಾಂಪತ್ಯ ಜೀವನ ಸುಖಮಯವಾಗಿ ಸಾಗಲಿದೆ. ಹಣಕಾಸಿನ ಸ್ಥಿತಿ ಉತ್ತಮಗೊಳ್ಳಲಿದೆ. ಕೃಷಿಯಲ್ಲಿ ಬೇಸಾಯದ ಕೆಲಸಗಳಿಂದಾಗಿ ಖರ್ಚು. ಇಂದಿನ ನಿಮ್ಮ ದೂರದ ಪ್ರಯಾಣಗಳು ಅನುಕೂಲಕರವಾಗಿರುವುದು.

ಕನ್ಯಾ: ವೃತ್ತಿ ಹಾಗೂ ವೈಯಕ್ತಿಕ ಜೀವನ ಎರಡೂ ತೃಪ್ತಿ ಎನಿಸಲಿದೆ. ಪಾಲುದಾರರೊಂದಿಗೆ ಮಾತುಕತೆ ನಡೆಸುವ ಅನಿವಾರ್ಯತೆ. ಸಮಸ್ಯೆಗಳನ್ನು ಶೀಘ್ರವಾಗಿ ಬಗೆಹರಿಸಿಕೊಳ್ಳಲು ಬೇಕಾದ ಧಾರ್ಮಿಕ ಪ್ರಯತ್ನವನ್ನು ಮಾಡಿ.

ತುಲಾ: ಷೇರು ವ್ಯವಹಾರಗಳಲ್ಲಿ ಹೆಚ್ಚು ಹಣ ತೊಡಗಿಸಬಹುದು. ಗುತ್ತಿಗೆ ಆಧಾರಿತ ಉತ್ತಮ ಉದ್ಯೋಗ ಸಿಗಲಿದೆ. ವ್ಯಾಪಾರ ವ್ಯವಹಾರಗಳಲ್ಲಿ ಚತುರ ನಡೆ ಇರಲಿ. ಕೌಟುಂಬಿಕ ವಿಷಯಗಳತ್ತ ಹೆಚ್ಚು ಗಮನಹರಿಸ ಬೇಕಾಗುವುದು.

ವೃಶ್ಚಿಕ: ಹಾಲಿನ ಪದಾರ್ಥಗಳ ಉತ್ಪಾದಕರಿಗೆ ಹೆಚ್ಚಿನ ಲಾಭ. ತಾಂತ್ರಿಕ ಕ್ಷೇತ್ರದಲ್ಲಿ ಹೆಚ್ಚಿನ ಪರಿಣತಿ ಹೊಂದಿರುವವರಿಗೆ ಉತ್ತಮ ಅವಕಾಶಗಳ ಜೊತೆಗೆ ಸ್ವಂತ ಉದ್ಯಮ ಸ್ಥಾಪಿಸುವ ಚೈತನ್ಯವು ಮೂಡಿ ಬರಲಿದೆ.

ಧನು: ಆಪ್ತಸ್ನೇಹಿತರ ಸಹಾಯದಿಂದ ನಿಮ್ಮ ಗೃಹ ಸಮಸ್ಯೆಗಳನ್ನು ಸುಲಭವಾಗಿ ಬಗೆಹರಿಸುವಿರಿ. ಅಧಿಕಾರಿಗಳ ಜೊತೆ ಮುಕ್ತ ಚರ್ಚೆ ಮಾಡಿದ್ದಲ್ಲಿ ಸಮಸ್ಯೆಗಳಿಗೆ ಶಾಶ್ವತ ಪರಿಹಾರವನ್ನು ಪಡೆದುಕೊಳ್ಳಬಹುದು. ಶಿವಾರಾಧನೆ ಮಾಡಿ.

ಮಕರ: ಈ ದಿನ ಉದ್ಯೋಗರಂಗದಲ್ಲಿ ಮೇಲಧಿಕಾರಿ ವರ್ಗದವರ ಕಿರಿಕಿರಿ ಇದ್ದರೂ ನಿಮ್ಮ ಪ್ರಯತ್ನಬಲಕ್ಕೆ ಯಶಸ್ಸು ಖಚಿತವಾಗಿ ದೊರಕಲಿದೆ. ಕೆಲವೊಂದು ಪ್ರತಿಕೂಲ ಫಲಗಳೇ ಕಾರ್ಯಕ್ಷೇತ್ರದಲ್ಲಿದ್ದರೂ ಚಿಂತಿಸದಿರಿ.

ಕುಂಭ: ನಿಮ್ಮೆಲ್ಲ ಆಕಾಂಕ್ಷೆಗಳು ಸಿದ್ಧಿಯಾಗಿ, ಧಾರ್ಮಿಕ ಪ್ರವೃತ್ತಿಗಳಲ್ಲಿ ಹೆಚ್ಚಿನ ಆಸಕ್ತಿಯನ್ನು ಹೊಂದುವಿರಿ. ಶಾರೀರಿಕ ಆರೋಗ್ಯ ಉತ್ತಮವಾಗುವುದು. ಹಣಕಾಸಿನ ತಾಪತ್ರಯಗಳು ಶೀಘ್ರದಲ್ಲಿ ಪರಿಹಾರವಾಗುವುದು.

ಮೀನ: ಶ್ರಮಜೀವಿಗಳಿಗೆ ಶ್ರಮಕ್ಕೆ ಮೀರಿದ ಪ್ರತಿಫಲ ಅನುಭವಕ್ಕೆ ಬರಲಿದೆ. ಕಾರ್ಯಕ್ಷೇತ್ರದಲ್ಲಿ ನೀತಿ-ನಿಯಮಗಳಿಗೆ ಬದ್ಧರಾದಲ್ಲಿ ಆಡಳಿತ ವರ್ಗದ ಸಹಾಯ ಹಸ್ತವು ಅನುಭವಕ್ಕೆ ಬರಲಿದೆ.

ಬೆರಗಿನ ಬೆಳಕು

ಗುರುರಾಜ ಕರಜಗಿ

ಹಿತ-ಮಿತವಾದ ಸ್ವಾತಂತ್ರ್ಯ

ಹರಡುವುದು ಸಾಜ ವಾಯುಗೆ ಸೈಸದದು ತಡೆಯನ್|
ಉರುಳಿಪುದದೆಲ್ಲವನು ತಡೆಗಳಿಲ್ಲದಿರೆ ||
ನರನ ಸ್ವತಂತ್ರಗತಿಯಂತು ಹಿತ-ಮಿತವಿರಲು |
ಅರಸೊ ಮಿತಿಯಾಯತಿಯ – ಮಂಕುತಿಮ್ಮ
|| 534 ||

ಪದ-ಅರ್ಥ: ಸಾಜ-ಸಹಜ, ಸೈಸದದು-ಸಹಿಸದದು, ತಡೆಯನ್ = ತಡೆಗಳನ್ನು, ಅಡ್ಡಿಗಳನ್ನು, ಉರುಳಿಪುದದೆಲ್ಲವನು = ಉರುಳಿಪುದು(ಉರುಳಿಸುವುದು-) + ಅದು + ಎಲ್ಲವನು, ಮಿತಿಯಾಯತಿಯ = ಮಿತಿಯ + ಆಯತಿಯ(ಹರಡಿಕೆ, ವಿಸ್ತಾರ).

ವಾಚ್ಯಾರ್ಥ: ಗಾಳಿಗೆ ಹರಡುವುದು ಸಹಜ. ಅದು ತಡೆಗಳನ್ನು ಸಹಿಸುವುದಿಲ್ಲ. ತಡೆಗಳನ್ನು ಕಟ್ಟದಿದ್ದರೆ ಅದು ಎಲ್ಲವನ್ನು ಉರುಳಿಸಿಬಿಡುತ್ತದೆ. ಮನುಷ್ಯನ ಸ್ವಾತಂತ್ರ್ಯದ ಗತಿಯೂ ಅದೇ. ಅದು ಹಿತ-ಮಿತವಾಗಿರಬೇಕು. ನಿನ್ನ ಮಿತಿಗಳ ವಿಸ್ತಾರವನ್ನು ಅರಸು.

ವಿವರಣೆ: ಭಾರತೀಯ ಶಾಸ್ತ್ರಗಳಲ್ಲಿ ವಾಯು ಒಬ್ಬ ದೇವತೆ. ದ್ವೈತ ಪರಂಪರೆಯಲ್ಲಿ ಮಹಾವಿಷ್ಣುವಿನ ನಂತರದ ಸ್ಥಾನ ಲಕ್ಷ್ಮಿಯದು. ಅನಂತರ ಬರುವ ಮುಖ್ಯ ದೇವತೆ ವಾಯು. ಅದಕ್ಕೆ ಕಾರಣ ವಾಯುವಿನ ಮಹತ್ವ. ವಾಯುವಿಲ್ಲದೆ ಪ್ರಪಂಚದಲ್ಲಿ ಚೇತನವಿಲ್ಲ. ದೇಹದಲ್ಲಿ ವಾಯುಸಂಚಾರ ನಿಂತೊಡನೆ ಅದು ಮೃತ ಶರೀರವಾಗುತ್ತದೆ. ಅದಕ್ಕೇ ಅದನ್ನು ಪ್ರಾಣವಾಯು ಎಂದು ಕರೆಯುತ್ತಾರೆ. ವಾಯುವಿನ ಗುಣವೇ ಎಲ್ಲೆಡೆಗೆ ಹರಡಿರುವುದು. ಅದು ಇಲ್ಲದ ಪ್ರವೇಶವೇ ಇಲ್ಲ. ಅದು ಒಮ್ಮೆ ವೇಗವನ್ನು ಪಡೆಯಿತೋ, ಅದರ ಆರ್ಭಟ ಹೇಳತೀರದು. ಅದರ ಚಲನೆಗೆ ಯಾವ ಅಡೆ-ತಡೆ ಬಂದರೂ ಅದನ್ನು ಕಿತ್ತೆಸೆಯುತ್ತದೆ. ನಾವು ಆಗಾಗ ಪ್ರಪಂಚದಲ್ಲಿ ಬರುವ ಚಂಡಮಾರುತಗಳ ಬಗ್ಗೆ ಕೇಳಿದ್ದೇವೆ. ಅವು ಮಾಡಿರುವ ಅನಾಹುತಗಳ ಅರಿವು ನಮಗಿದೆ. ಅದಕ್ಕೇ ಚಂಡಮಾರುತದ ಸುಳಿವು ತಿಳಿದೊಡನೆ, ಅದರಿಂದ ಪಾರಾಗಲು ಭದ್ರ ತಡೆಗಳನ್ನು ನಿರ್ಮಿಸಿ, ಜನರನ್ನು ಸ್ಥಳಾಂತರಗೊಳಿಸಿ ಪ್ರಾಣಹಾನಿಯನ್ನು ತಗ್ಗಿಸುತ್ತಾರೆ.

ಇದೆಂಥ ವಿಚಿತ್ರ! ವಾಯುವಿಲ್ಲದಿದ್ದರೆ ಪ್ರಾಣಹಾನಿ. ವಾಯುವಿನ ವೇಗ ಅತಿಯಾದರೆಯೂ ಪ್ರಾಣಹಾನಿ. ಹಾಗಾದರೆ ಮನುಷ್ಯನ ಬದುಕಿಗೆ ಈ ವಾಯು ಯಾವಾಗಲೂ ಹಿತ-ಮಿತವಾಗಿರಬೇಕು. ಕಡಿಮೆಯಾದರೆ ಉಸಿರುಗಟ್ಟಿಸುತ್ತದೆ, ಹೆಚ್ಚಾದರೆ ಉಡಾಯಿಸಿಬಿಡುತ್ತದೆ. ಕಗ್ಗ ಹೇಳುತ್ತದೆ, ಮನುಷ್ಯನ ಸ್ವತಂತ್ರತೆಯೂ ಹಾಗೆಯೇ ಹಿತ-ಮಿತವಾಗಿರಬೇಕು. ಅತಿಯಾದ ಸ್ವಾತಂತ್ರ್ಯ ಸ್ವೇಚ್ಛೆಯಾಗುತ್ತದೆ. ಅದು ಅನಾಹುತಕ್ಕೆ ಕಾರಣವಾಗುತ್ತದೆ. ಅದು ಮತ್ತೊಬ್ಬರ ಸ್ವಾತಂತ್ರ್ಯಕ್ಕೆ ಮಾರಕವಾಗಬಹುದು. ನಾನು ಎಷ್ಟು ಬೇಕಾದರೂ ಕುಡಿಯುತ್ತೇನೆ, ನನ್ನ ಆರೋಗ್ಯದ ಜವಾಬ್ದಾರಿ ನನ್ನದೇ ಎನ್ನುವ ವ್ಯಕ್ತಿ ಕುಡಿದು ವಾಹನ ಚಲಾಯಿಸಿದರೆ ಯಾವ ಅನಾಹುತ ಮಾಡಬಹುದೆಂಬುದನ್ನು ಊಹಿಸಬಹುದು. ಯಾವ ನಿಯಮಕ್ಕೂ ಬದ್ಧರಾಗದ ವ್ಯಕ್ತಿಗಳು ಸಮಾಜಕ್ಕೆ ಕಂಟಕರಾಗುವ ಸಾಧ್ಯತೆ ಹೆಚ್ಚು. ಅಪರಿಮಿತ ಸ್ವಾತಂತ್ರ್ಯವನ್ನು ತಮ್ಮ ಕೈಯಲ್ಲಿ ತೆಗೆದುಕೊಂಡ ಹಿಟ್ಲರ್, ಮುಸೋಲಿನಿ, ಗಝನಿ ಮಹಮ್ಮದ್ ಇವರುಗಳು ಮಾಡಿದ್ದೇನು?

ಅದಕ್ಕೇ ಕಗ್ಗ ಎಚ್ಚರಿಕೆಯನ್ನು ನೀಡುತ್ತದೆ. ನಿನ್ನ ಮಿತಿಯ ಸೀಮೆಗಳನ್ನು ಅರಿತಿಕೊ. ಆ ಮಿತಿಯಲ್ಲೇ ಕಾರ್ಯ ಮಾಡಿದರೆ ಕ್ಷೇಮ. ಕಾಡಿನಲ್ಲಿ ಹಸುವನ್ನು ಒಂದು ಉದ್ದವಾದ ಹಗ್ಗದಿಂದ ಗೂಟಕ್ಕೆ ಕಟ್ಟಿ ಬಿಡುತ್ತಾನೆ ಗೋಪಾಲಕ. ಹಸುವಿಗೆ ಸ್ವಾತಂತ್ರ್ಯವಿದೆ. ಆದರೆ ಅದಕ್ಕೆ ಮಿತಿ ಇದೆ. ಹಗ್ಗದ ಉದ್ದವೇ ಅದರ ಮಿತಿ. ಹಗ್ಗ ಕಿತ್ತುಕೊಂಡು ಕಾಡಿನೊಳಗೆ ಹೋದರೆ ಹಸುವಿಗೇ ಅಪಾಯ. ಮಿತಿಯನರಿತು ಬದುಕು ನಡೆಸಿದಾಗ ಅದು ಭದ್ರತೆಯನ್ನು, ಸಂತೋಷವನ್ನು ನೀಡುತ್ತದೆ. ❖

ಪದಬಂಧ 4829

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಹವಳ ಇಲ್ಲಿದೆ (3)
6.ತುಂಬಾ ನಾಜೂಕಾಗಿರುವ ಸ್ವಭಾವ! (5)
7.ಹಡಗಿನ ಮುಖ್ಯಾಧಿಕಾರಿ (3)
10.ಕ್ರಿಯೆಯನ್ನು ಹೇಳುವ ಶಬ್ದರೂಪ (5)
15.ಕೆಟ್ಟ ರೂಪವಿದು (3)
16.ನೀಚರನ್ನು ಶಿಕ್ಷಿಸುವುದು (5)
17.ಅನೇಕ ಚಿಕ್ಕ ಚಿಕ್ಕ ಮನೆಗಳಿರುವ ಪ್ರದೇಶ (3)

ಮೇಲಿಂದ ಕೆಳಕ್ಕೆ
1.ಸೂರ್ಯನ ಮತ್ತೊಂದು ಹೆಸರು (4)
2.ದನದ ಹತ್ತಿರವಿರುವ ಅನಂಗ ಕಾಣುತ್ತಿದ್ದಾನೆಯೇ? (3)
3.ಈಕೆ ಜನ್ಮ ಕೊಟ್ಟವಳು (3)
4.ಪ್ರಕೃತ ಕಾಲವಿದು (3)
5.ಅಳತೆಗೆ ಮೀರಿದ ಸ್ಥಿತಿ (4)
8.ಮನಸ್ಸಿನ ಒಲವು! (3)
9.ವಿರಾಟರಾಜನ ಸೇನಾಪತಿ (3)
11.ಮದುವೆಯಾಗುತ್ತಿರುವವ ತಿರುಗಿದ್ದಾನಲ್ಲಾ! (4)
12.ಕೆಡುಕು ಮಾಡುವುದು (4)
13.ಗಣಿಯಲ್ಲಿ ಹುಟ್ಟಿದುದು (3)
14.ತಾಳ್ಮೆ ಅಥವಾ ಸ್ಥೈರಣೆ (3)
15.ಅಂದೋಳನ ಇಲ್ಲಿ ಕಾಣುತ್ತಿದೆ (3)



4828ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 4.ಮಾಸ 5.ಚಂದನ 6.ಆಮ್ಲಜನಕ 9.ಪಾರಜ 10.ಗಣಿತ 11.ಕನಸುಗಾರ 14.ಇಂಗಿತ 15.ಕ್ಷಮೆ
ಮೇಲಿಂದ ಕೆಳಕ್ಕೆ: 1.ರೆಸಆ 2.ಸ್ಪಂದನ 3.ಮಂದಮಾರುತ 7.ಜಲಜನಕ 8.ಕಡೆಗಣಿಸು 9.ಪಾತರಗಿತ್ತಿ 12.ನಕಾಸೆ 13.ರಕ್ಷಕ

ಸುಡೊಕು 5215

9		1			7		3	
			2	3		1		5
5		2		1				7
2		5					7	
				5	3	8		9
	9		8				5	
4		3			2			
	5			4		7		2
7		9	6		5		1	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5214 ಸುಡೊಕು

8	9	5	6	7	2	4	1	3
7	3	1	9	5	4	6	8	2
6	2	4	3	1	8	7	5	9
5	8	3	7	6	9	1	2	4
1	7	6	2	4	5	3	9	8
2	4	9	8	3	1	5	6	7
9	5	7	1	8	3	2	4	6
4	6	2	5	9	7	8	3	1
3	1	8	4	2	6	9	7	5

ಆನೇಕಲ್ ಬಳಿ ಮತ್ತೆ ಆನೆಗಳ ಹಿಂಡು

ಪ್ರಜಾವಾಣಿ ವಾರ್ತೆ

ಆನೇಕಲ್ (ಬೆಂಗಳೂರು ಗ್ರಾಮಾಂತರ ಜಿಲ್ಲೆ): ಆಹಾರ ಅರಸಿ ಮರಿಗಳ ಸಮೇತ ಸೋಮವಾರದಿಂದ ಆನೇಕಲ್ ಬಳಿ ಬೀಡುಬಿಟ್ಟಿದ್ದ ಕಾಡಾನೆಗಳ ಹಿಂಡನ್ನು ಅರಣ್ಯ ಅಧಿಕಾರಿಗಳು ಮರಳಿ ಕಾಡಿಗೆ ಅಟ್ಟುವಲ್ಲಿ ಯಶಸ್ವಿಯಾಗಿದ್ದಾರೆ.

ಮೂರು ಮರಿಗಳೊಂದಿಗೆ ಬಂದ 31 ಕಾಡಾನೆಗಳ ಹಿಂಡು ಬೆಳಗಾದರೂ ಕಾಡಿನತ್ತ ತೆರಳದೆ ಮೆಣಸಿಗನಹಳ್ಳಿಯ ನೀಲಗಿರಿ ತೋಪುಗಳಲ್ಲಿ ಬಿಡಾರ ಹೂಡಿತ್ತು. ರಾತ್ರಿ ಸುತ್ತಮುತ್ತಲ ಜಮೀನಿನಲ್ಲಿದ್ದ ಚಪ್ಪರ ಬದನೆ, ಟೊಮೆಟೊ, ರಾಗಿ ಮೆದೆಯನ್ನು ತಿಂದು ಹಾಕಿವೆ.

ಸುದ್ದಿ ತಿಳಿದ ಸುತ್ತಮುತ್ತಲ ಗ್ರಾಮಗಳ ಜನರು ಗುಂಪುಗುಂಪಾಗಿ ತೋಪಿನ ಬಳಿ ಜಮಾಯಿಸಿದ್ದರಿಂದ ಬೆದರಿದ ಹಿಂಡು ಮರಿಗಳೊಂದಿಗೆ ಅತ್ತಿಂದಿತ್ತ ಓಡಾಡತೊಡಗಿತು. ಮೊಬೈಲ್‌ನಲ್ಲಿ ವಿಡಿಯೊ ಮತ್ತು ಚಿತ್ರ ತೆಗೆಯಲು ಮುಂದಾದ ಜನರತ್ತ ನುಗ್ಗಿ ಹೋದವು.

ಆನೆಗಳ ಹಿಂಡಿಗಿಂತ ಜನರ ಗುಂಪು ನಿಭಾಯಿಸುವುದೇ ಅರಣ್ಯ ಇಲಾಖೆ ಮತ್ತು ಪೊಲೀಸ್ ಇಲಾಖೆ ಸಿಬ್ಬಂದಿಗೆ ಸವಾಲಾಗಿತ್ತು. ಸಂಜೆ ವೇಳೆಗೆ ಪಟಾಕಿ ಸಿಡಿಸಿ ಆನೆಗಳ ಹಿಂಡನ್ನು ತಮಿಳುನಾಡಿನ ಗುಮ್ಮಳಾಪುರ ಕಾಡಿನತ್ತ ಓಡಿಸಲಾಯಿತು.

ಆನೇಕಲ್ ತಾಲ್ಲೂಕಿನ ಸೋಲೂರು ಬಳಿ ರಸ್ತೆಯಲ್ಲಿ ಮಂಗಳವಾರ ಕಂಡು ಬಂದ ಕಾಡಾನೆಗಳ ಹಿಂಡು

ರಾಮನಗರ ಜಿಲ್ಲಾಧಿಕಾರಿ, ಎಸ್ಪಿಯಿಂದ ಜಂಟಿ ತನಿಖೆ; ಸರ್ಕಾರಕ್ಕೆ ಶೀಘ್ರ ವರದಿ ಸಲ್ಲಿಕೆ

ಜಟಾಪಟಿ: ಪೊಲೀಸರ ವೈಫಲ್ಯದತ್ತ ಬೆಟ್ಟು

ಪ್ರಜಾವಾಣಿ ವಾರ್ತೆ

ರಾಮನಗರ: ಇಲ್ಲಿನ ಜಿಲ್ಲಾ ಕಚೇರಿಗಳ ಸಂಕೀರ್ಣದ ಆವರಣದಲ್ಲಿ ಸೋಮವಾರ ನಡೆದ ಸರ್ಕಾರಿ ಕಾರ್ಯಕ್ರಮದಲ್ಲಿ ಉಂಟಾದ ಬಿಗುವಿನ ಪರಿಸ್ಥಿತಿಗೆ ಪೊಲೀಸ್ ಹಾಗೂ ಗುಪ್ತಚರ ಇಲಾಖೆ ವೈಫಲ್ಯವೇ ಮೂಲ ಕಾರಣ ಎಂಬ ಆರೋಪ ಕೇಳಿಬಂದಿವೆ.

ಅಂಬೇಡ್ಕರ್, ಕೆಂಪೇಗೌಡರ ಪ್ರತಿಮೆ ಅನಾವರಣ ಹಾಗೂ ವಿವಿಧ ಕಾಮಗಾರಿಗಳಿಗೆ ಚಾಲನೆ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸಮ್ಮುಖದಲ್ಲಿಯೇ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ಹಾಗೂ ಸಂಸದ ಡಿ.ಕೆ.ಸುರೇಶ್ ಕಿತ್ತಾಡಿಕೊಂಡಿದ್ದರು. ಇದರಿಂದಾಗಿ ಇಡೀ ಕಾರ್ಯಕ್ರಮ ಅಸ್ತವ್ಯಸ್ತವಾಗಿದ್ದು, ಮುಖ್ಯಮಂತ್ರಿಗಳು ಮುಜುಗರಪಟ್ಟುಕೊಳ್ಳುವಂತೆ ಆಗಿತ್ತು.

ಗಣ್ಯರ ಭದ್ರತೆಗೆಂದು ಎಸ್.ಪಿ.ಗಿರೀಶ್ ‘ಕೆಂಪೇಗೌಡ ಪಡೆ’ ರಚಿಸಿದ್ದರು. ವೇದಿಕೆಯಲ್ಲಿ ರಾಮನಗರ ಎಸ್.ಪಿ ಜೊತೆಗೆ ಐಜಿಪಿ ಚಂದ್ರಶೇಖರ್ ಸಹ ಇದ್ದರು. ಹೀಗಿದ್ದೂ ಪ್ರತಿಭಟನಾಕಾರರು ವೇದಿಕೆಗೆ ನುಗ್ಗಿದ್ದರು. ಇದರಿಂದ ಗಣ್ಯರಿಗೂ ಇರಿಸು ಮುರಿಸಾಗಿತ್ತು. ಕಾರ್ಯಕ್ರಮದ ಉದ್ದಕ್ಕೂ ಪ್ರತಿಭಟನಾಕಾರರು ಘೋಷಣೆ ಕೂಗಿದ್ದರು. ಇದರಿಂದ ಕೆರಳಿದ ಅಶ್ವತ್ಥನಾರಾಯಣ ಸಿಟ್ಟಿನಲ್ಲಿ ಮಾತನಾಡಿದ್ದರು. ಅದಕ್ಕೆ ಸುರೇಶ್ ಸಹ ಅಷ್ಟೇ ಸಿಟ್ಟಿನಿಂದ ಉತ್ತರ ನೀಡಲು ಮುಂದಾದ ಕಾರಣ ವಾಗ್ವಾದನಡೆದಿತ್ತು.

ಎಡವಿದ್ದು ಎಲ್ಲಿ?: ಪ್ರತಿಮೆ ನಿರ್ಮಾಣ ವಿಚಾರದಲ್ಲಿ ಜಿಲ್ಲಾಡಳಿತ ದಲಿತ ಮುಖಂಡರನ್ನು ಕಡೆಗಣಿಸಿದೆ. ಕಾಟಾಚಾರಕ್ಕೆ ನಮ್ಮನ್ನು ಆಹ್ವಾನಿಸಿದೆ. ಇದನ್ನು ತಿದ್ದಿಕೊಳ್ಳದಿದ್ದರೆ ಪ್ರತಿಭಟಿಸುತ್ತೇವೆ ಎಂದು ಕೆಲ ಸಂಘಟನೆಗಳ ಮುಖಂಡರು ಭಾನುವಾರ ಸುದ್ದಿಗೋಷ್ಠಿಯಲ್ಲಿ ಎಚ್ಚರಿಸಿದ್ದರು.

ಸಂಸದ ಡಿ.ಕೆ.ಸುರೇಶ ಹಾಗೂ ಸಚಿವ ಅಶ್ವಥ್ ನಾರಾಯಣ ಅವರು ಗಲಾಟೆ ಮಾಡಿಕೊಂಡಿದ್ದು ಸರಿಯಲ್ಲ. ಇದು ಕರ್ನಾಟಕದ ಸಂಸ್ಕೃತಿಯೇ ಅಲ್ಲ.
ಬಸವರಾಜ ಬೊಮ್ಮಾಯಿ, ಮುಖ್ಯಮಂತ್ರಿ

ನಾವು ಬಿಜೆಪಿಯವರು, ಮಾಡುವುದೇ ಹೀಗೆ. ಗಂಡಸಾದವರು ಬನ್ನಿ’ ಎಂದು ಸವಾಲು ಹಾಕಿದಾಗ ನೋಡಿಕೊಂಡು ಸುಮ್ಮನಿರಲು ಸಾಧ್ಯವೇ
ಡಿ.ಕೆ.ಸುರೇಶ್, ಸಂಸದ



ನಾನೂ ರಾಮನಗರದ ಮಣ್ಣಿನವನೇ. ಜಿಲ್ಲೆಗೂ ನನಗೂ ಏನು ಸಂಬಂಧ ಎಂದು ಪ್ರಶ್ನಿಸಬೇಡಿ. ಗೂಂಡಾಗಿರಿ ಬಿಡಿ, ಪ್ರಜಾಪ್ರಭುತ್ವಕ್ಕೆ ಧಕ್ಕೆ ತರಬೇಡಿ
ಸಿ.ಎನ್. ಅಶ್ವತ್ಥನಾರಾಯಣ, ಸಚಿವ

ಡಿಕೆಶಿ ಸೋದರರು ಡಿಸ್ಯೆನ್ ವೀರರು: ಎಚ್‌ಡಿಕೆ ವ್ಯಂಗ್ಯ

ರಾಮನಗರ: 'ಕಲ್ಲು ಬಂಡೆಗಳನ್ನು ನುಂಗಿ, ಮಣ್ಣು ಬಗೆದು ಪರರಿಗೆ ಬಿಕರಿ ಮಾಡಿಕೊಂಡು ಕೋಟೆ ಕೊತ್ತಲ ಕಟ್ಟಿಕೊಂಡು ಮೆರೆಯುತ್ತಿರುವ ‘ಡಿಸ್ಯೆನ್ ವೀರರಿಗೆ ನಮ್ಮ ನೆಲ, ನಮ್ಮ ಜಲ ಎನ್ನುವುದು ಈಗ ನೆನಪಿಗೆ ಬಂದಿದೆ. ಅಭದ್ರತೆ ಅಡಿಪಾಯವನ್ನೇ ಅಲ್ಲಾಡಿಸುತ್ತಿದೆ! ಅಲ್ಲವೇ?' ಎಂದು ಅವರು ಎಚ್.ಡಿ.ಕುಮಾರಸ್ವಾಮಿ ಪ್ರಶ್ನಿಸಿದ್ದಾರೆ.

ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹಾಗೂ ಸಂಸದ ಡಿ.ಕೆ. ಸುರೇಶ್ ವಿರುದ್ಧ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಮಂಗಳವಾರ ಸರಣಿ ಟ್ವೀಟ್ ಮೂಲಕ ಕಿಡಿಕಾರಿದ್ದಾರೆ.

'ಕನಕಪುರ, ರಾಮನಗರ ಯಾರೊಬ್ಬರ ಸ್ವತ್ತಲ್ಲ. ಈ ನೆಲದ ಮಕ್ಕಳು ಎಂದು ಬಡಾಯಿ ಬಿಡುವ ಸಹೋದರರು ಈ ನೆಲವನ್ನು ಹೇಗೆಲ್ಲಾ ನುಂಗಿ ನೀರು ಕುಡಿಯುತ್ತಿದ್ದಾರೆ ಎಂಬುದು ಇಲ್ಲಿನ ಜನರಿಗೇ ಚೆನ್ನಾಗಿ ಗೊತ್ತು. ಆಟ ಎಂದ ಮೇಲೆ ಅಂತ್ಯವೂ ಇರಬೇಕಲ್ಲವೇ? ಆ ಕ್ಷಣ ಹತ್ತಿರ ಬಂದಿದೆಯೇನೋ' ಎಂದು ಹೇಳಿದ್ದಾರೆ.

‘ನಾವು ಹಾಸನದಿಂದ ಬಂದಿದ್ದೇವೆ, ನಿಜ. ಇಲ್ಲಿನ ಜನ ನಮ್ಮನ್ನು ಮನೆ ಮಕ್ಕಳೆಂದು ಭಾವಿಸಿದ್ದಾರೆ. ನಾವೂ ಹಾಗೆಯೇ ನಡೆದುಕೊಂಡಿದ್ದೇವೆ. ಜನರ ಪ್ರೀತಿ, ಅಭಿಮಾನ, ನಮ್ಮ ದುಡಿಮೆ ಫಲವಾಗಿ ಜಿಲ್ಲೆಯಲ್ಲಿ ರಾಜಕೀಯ ಮಾಡುತ್ತಿದ್ದೇವೆ. ಜನರೇ ನಮಗೆ ಅಧಿಕಾರ ನೀಡಿದ್ದಾರೆ. ಹರದನಹಳ್ಳಿ ನನ್ನ ಜನ್ಮಸ್ಥಳ. ಬಿಡದಿ ನನ್ನ ಕರ್ಮಸ್ಥಳ. ಇದುವೇ ನನ್ನ ಪಾಲಿನ ಧರ್ಮಸ್ಥಳ. ಈ ಮಣ್ಣಲ್ಲಿಯೇ ನಾನು ಮಣ್ಣಾಗುವೆ ಎಂದು ಈಗಾಗಲೇ ಹೇಳಿದ್ದೇನೆ.

ಇದರ ಹೊರತಾಗಿ ರಾಮನಗರಕ್ಕೆ ರಿಯಲ್ ಎಸ್ಟೇಟ್ ಮಾಡಲಿಕ್ಕೆ ನಾನು ಬಂದವನಲ್ಲ. ಹಾದಿ ತಪ್ಪಿದ ರಾಜಕಾರಣ ಬಹಳ ದಿನ ನಡೆಯಲ್ಲ. ಹಣ, ದರ್ಪ, ಧಮ್ಕಿ, ಧಿಮಾಕು ಇನ್ನು ಸಾಕು. ಜನ ಕೊಟ್ಟೂ ನೋಡುತ್ತಾರೆ, ಕೆಲವೊಮ್ಮೆ ಬಿಟ್ಟೂ ನೋಡುತ್ತಾರೆ. ಅನುಭವದಿಂದ ಪಾಠ ಕಲಿತರೆ ಒಳ್ಳೆಯದು. ಉಳಿದದ್ದು ಅವರಿಗೇ ಬಿಟ್ಟಿದ್ದು’ ಎಂದು ಕುಮಾರಸ್ವಾಮಿ ಹೇಳಿದ್ದಾರೆ.

ಅಂದೇ ರಾತ್ರಿ ಮುಖಂಡರೊಂದಿಗೆ ಜಿಲ್ಲಾಧಿಕಾರಿ ಸಭೆ ನಡೆಸಿದ್ದರು. ಬಹಿರಂಗವಾಗಿ ಅಸಮಾಧಾನ ಇದ್ದರೂ ಜಿಲ್ಲಾಡಳಿತ ಹಾಗೂ ಪೊಲೀಸರು ಬಿಗಿ ಭದ್ರತೆ ಕೈಗೊಂಡಿರಲಿಲ್ಲ. ಭದ್ರತೆ ನಡುವೆಯೂ ಪ್ರತಿಭಟನಾಕಾರರು ವೇದಿಕೆಗೆ ನುಗ್ಗಲು ಬಿಟ್ಟಿದ್ದು ಸರಿಯಲ್ಲ ಎಂದು ಹೇಳಲಾಗುತ್ತಿದೆ.

ತನಿಖೆ: ಘಟನೆ ಕುರಿತು ಗೃಹ ಸಚಿವರು ಈಗಾಗಲೇ ವರದಿ ಕೇಳಿದ್ದಾರೆ. ಜಿಲ್ಲಾಧಿಕಾರಿ ಕೆ.ರಾಕೇಶ್‌ಕುಮಾರ್ ಹಾಗೂ ಎಸ್.ಪಿ ಗಿರೀಶ್ ನೇತೃತ್ವದಲ್ಲಿ ತನಿಖೆ ನಡೆದಿದ್ದು, ಸದ್ಯದಲ್ಲೇ ಸರ್ಕಾರಕ್ಕೆ ವರದಿ ಸಲ್ಲಿಕೆ ಆಗಲಿದೆ.

‘ಡಿ.31ರಂದು ಮುಖ್ಯಮಂತ್ರಿಗಳ ಪ್ರವಾಸ ಕಾರ್ಯಕ್ರಮ ಖಾತ್ರಿಯಾದ ಕೂಡಲೇ ಎಲ್ಲ ಜನಪ್ರತಿನಿಧಿಗಳು, ಮುಖಂಡರ ಗಮನಕ್ಕೂ ತರಲಾಗಿತ್ತು. ಕಡಿಮೆ ಸಮಯದಲ್ಲಿ ಕಾರ್ಯಕ್ರಮ ಆಯೋಜಿಸಿದ್ದು, ಎಲ್ಲರೂ ಕೈ ಜೋಡಿಸಲು ಮನವಿ ಮಾಡಿದ್ದೆ. ಕಾರ್ಯಕ್ರಮದ ಹಿಂದಿನ ದಿನವೂ ಕೆಲವು ಮುಖಂಡರ ಜೊತೆ ಮಾತುಕತೆ ನಡೆಸಿದ್ದು, ಸಹಕಾರ ನೀಡುವುದಾಗಿ ಅವರು ಭರವಸೆ ನೀಡಿ ತೆರಳಿದ್ದರು. ಹೀಗಾಗಿ ಪ್ರತಿಭಟನೆ ಸುಳಿವೂ ಇರಲಿಲ್ಲ. ಆದಾಗ್ಯೂ ಕೆಲವರು ಕಪ್ಪು ಪಟ್ಟಿ ಧರಿಸಿ ಕಾರ್ಯಕ್ರಮಕ್ಕೆ ಬಂದಿದ್ದು, ವೇದಿಕೆಗೆ ನುಗ್ಗಿ ಬಂದರು. ಪೊಲೀಸರು ತಡೆಯಬೇಕಿತ್ತು. ಇಲ್ಲಿ ಎಡವಿದ್ದೇವೆ. ಕಾರ್ಯಕ್ರಮದ ವಿಡಿಯೊಗಳನ್ನು ನಾನು ಹಾಗೂ ಎಸ್.ಪಿ ಗಿರೀಶ್ ವೀಕ್ಷಿಸಿದ್ದು, ಘಟನೆಗೆ ಕಾರಣರಾದವರ ಮೇಲೆ ಕ್ರಮ ಕೈಗೊಳ್ಳುತ್ತಿದ್ದೇವೆ. ಈ ಕುರಿತು ಸರ್ಕಾರಕ್ಕೆ ವರದಿ ನೀಡಲಾಗುವುದು’ ಎಂದು ಜಿಲ್ಲಾಧಿಕಾರಿ ರಾಕೇಶ್‌ಕುಮಾರ್ ತಿಳಿಸಿದರು.

ಐವರ ವಿರುದ್ಧ ಪ್ರಕರಣ

ಮುಖ್ಯಮಂತ್ರಿ ಕಾರ್ಯಕ್ರಮಕ್ಕೆ ಅಡ್ಡಿಪಡಿಸಿದ ಆರೋಪದ ಮೇಲೆ ರಾಮನಗರ ಪೊಲೀಸರು ಐವರ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ. ಕಾಂಗ್ರೆಸ್ ಮುಖಂಡ ರಾಂಪುರ ನಾಗೇಶ್, ಸಂಘಟನೆಗಳ ಮುಖಂಡರಾದ ಕೋಟೆ ಕುಮಾರ್, ಗುಡ್ಡೆ ವೆಂಕಟೇಶ್, ಜಿ. ಗೋವಿಂದಯ್ಯ, ಗೌಸ್ ಪಾಷಾ ಎಂಬುವರ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

ರಾಜೀನಾಮೆಗೆ ವಾಟಾಳ್ ಆಗ್ರಹ: ಸೋಮವಾರ ನಡೆದ ಘಟನೆಯು ಪ್ರಜಾಪ್ರಭುತ್ವಕ್ಕೆ ಎಸಗಿದ ಅಪಚಾರ. ಮುಖ್ಯಮಂತ್ರಿ ಇರುವ ವೇದಿಕೆಯಲ್ಲಿ ಆ ರೀತಿ ನಡೆದುಕೊಳ್ಳಬಾರದಿತ್ತು. ಸಂಸದ ಡಿ.ಕೆ. ಸುರೇಶ್ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ವಾಟಾಳ್ ನಾಗರಾಜು ಆಗ್ರಹಪಡಿಸಿದ್ದಾರೆ.

ಮುಂದುವರಿದ ಪ್ರತಿಭಟನೆ: ಘಟನೆ ಖಂಡಿಸಿ ಜಿಲ್ಲೆಯಾದ್ಯಂತ ಮಂಗಳವಾರವೂ ಪ್ರತಿಭಟನೆಗಳು ಮುಂದುವರಿದವು. ಜಿಲ್ಲಾ ಕಚೇರಿಗಳ ಸಂಕೀರ್ಣದ ಬಳಿ ಬಿಜೆಪಿ ಕಾರ್ಯಕರ್ತರು ರಸ್ತೆ ತಡೆ ನಡೆಸಿದ್ದು, ಸಂಸದ ಡಿ.ಕೆ. ಸುರೇಶ್ ಬಂಧನಕ್ಕೆ ಒತ್ತಾಯಿಸಿದರು. ಮಾಗಡಿಯಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಅಶ್ವತ್ಥನಾರಾಯಣ ವಿರುದ್ಧ ಪ್ರತಿಭಟನೆ ಕೈಗೊಂಡರು.

ಸಾಮಾಜಿಕ ಜಾಲತಾಣಗಳಲ್ಲಿ ‘ಸಮರ’

ಸೋಮವಾರ ವೇದಿಕೆಯಲ್ಲಿ ಜಟಾಪಟಿ ನಡೆಸಿದ್ದ ಇಬ್ಬರು ನಾಯಕರು ಮಂಗಳವಾರ ಸಾಮಾಜಿಕ ಜಾಲತಾಣಗಳಲ್ಲಿ ಪರಸ್ಪರ ವಿರುದ್ಧ ಕಿಡಿಕಾರಿದ್ದಾರೆ.

‘ಡಿ.ಕೆ. ಸಹೋದರರಿಗೆ ಅಭದ್ರತೆ ಕಾಡುತ್ತಿದೆ. ಗೂಂಡಾಗಳನ್ನು ಕಟ್ಟಿಕೊಂಡು ಮೆರೆದವರನ್ನು ಮರೆಯಾಗಿಸುವ ಕಲೆ ನಮ್ಮ ರಾಮನಗರದ ಜನತೆಗೆ ಗೊತ್ತಿದೆ. ಇಲ್ಲಿ ಅಭಿವೃದ್ಧಿಗೆ ಮಾತ್ರ ಬೆಲೆ’ ಎಂದು ಸಚಿವ ಅಶ್ವತ್ಥನಾರಾಯಣ ಪೋಸ್ಟ್ ಹಾಕಿದ್ದಾರೆ.

ಇದಕ್ಕೆ ಪ್ರತಿಯಾಗಿ ಡಿ.ಕೆ.ಸುರೇಶ್, ‘ಕಾರ್ಯಕ್ರಮಕ್ಕೆ ದಲಿತಪರ ಸಂಘಟನೆಗಳು ಹಾಗೂ ಚಿಂತಕರನ್ನು ದೂರ ಇಟ್ಟಿದ್ದು ಸರಿಯೇ? ಇದು ಜಿಲ್ಲೆಗೆ ಆದ ಅವಮಾನ’ ಎಂದಿದ್ದಾರೆ.

ಸಿಖ್ ಬಾಲಕಿಯ ಕೇಶ ಮುಂಡನಕ್ಕೆ ತಡೆ

ಒಂದನೇ ಪುಟದಿಂದ

ಏತನ್ಮಧ್ಯೆ, ‘ಮಗು ಇತ್ತೀಚೆಗೆ ಬೈಗುಳಗಳನ್ನು ಕಲಿತಿದೆ ಹಾಗೂ ತಾನು ಕೂದಲು ಕತ್ತರಿಸಿಕೊಳ್ಳಲು ಕ್ಷೌರದ ಅಂಗಡಿಗೆ ಹೋಗುತ್ತೇನೆ ಎಂದು ಹೇಳುತ್ತಿದೆ. ಇದು ನನಗೆ ವಾಟ್ಸ್ ಆ್ಯಪ್ ಕಾಲ್‌ನಲ್ಲಿ ಮಾತನಾಡುವಾಗ ತಿಳಿದು ಬಂದಿದೆ. ಈ ನಡೆ ಸಿಖ್ ಧಾರ್ಮಿಕ ನಿಯಮಗಳಿಗೆ ವಿರುದ್ಧವಾದುದು’ ಎಂದು ಪತಿ ಮಧ್ಯಂತರ ಅರ್ಜಿ ಸಲ್ಲಿಸಿದ್ದರು.

‘10ಸಾವಿರ ಸದಸ್ಯತ್ವ ಮಾಡಿಸಿದವರಿಗೆ ಟಿಕೆಟ್’

ಕಲಬುರಗಿ: ಪ್ರತಿ ವಿಧಾನಸಭಾ ಕ್ಷೇತ್ರದಲ್ಲಿ ಕನಿಷ್ಠ 10 ಸಾವಿರ ಸದಸ್ಯತ್ವದ ನೋಂದಣಿ ಮಾಡಿಸಿದವರಿಗೆ ಮಾತ್ರ 2023ರ ವಿಧಾನಸಭಾ ಚುನಾವಣೆಯ ‘ಬಿ’ ಫಾರಂ ನೀಡಲಾಗುವುದು ಎಂದು ಜೆಡಿಎಸ್ ರಾಷ್ಟ್ರೀಯ ಘಟಕದ ಅಧ್ಯಕ್ಷ ಎಚ್.ಡಿ. ದೇವೇಗೌಡ ಹೇಳಿದರು.

ಪಂಜಾಬ್‌ನಲ್ಲಿ ರಾತ್ರಿ ಕರ್ಫ್ಯೂ: ಛತ್ತೀಸಗಡದಲ್ಲಿ ಸಾರ್ವಜನಿಕ ಸಮಾರಂಭಗಳಿಗೆ ನಿಷೇಧ

ಹಲವೆಡೆ ನಿರ್ಬಂಧ: ದೆಹಲಿಯಲ್ಲಿ ವಾರಾಂತ್ಯ ಕರ್ಫ್ಯೂ

ನವದೆಹಲಿ (ಪಿಟಿಐ): ಕೊರೊನಾ ವೈರಾಣುವಿನ ಹೊಸ ರೂಪಾಂತರ ತಳಿ ಓಮೈಕ್ರಾನ್ ಸೋಂಕು ಮತ್ತು ಡೆಲ್ಟಾ ತಳಿಯ ಸೋಂಕು ಪ್ರಕರಣಗಳ ಸಂಖ್ಯೆ ತೀವ್ರವಾಗಿ ಏರುತ್ತಿದ್ದಂತೆಯೇ ದೇಶದ ಹಲವು ರಾಜ್ಯಗಳಲ್ಲಿ ವಿವಿಧ ರೀತಿಯ ನಿರ್ಬಂಧಗಳನ್ನು ಹೇರಲಾಗಿದೆ. ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ವಾರಾಂತ್ಯದ ಕರ್ಫ್ಯೂ ಮತ್ತೆ ಬಂದಿದೆ.

ಅಗತ್ಯ ಸೇವೆಯಲ್ಲಿ ತೊಡಗಿರುವವರನ್ನು ಬಿಟ್ಟು ಉಳಿದ ಸರ್ಕಾರಿ ನೌಕರರನ್ನು ಮನೆಯಿಂದಲೇ ಕೆಲಸ ಮಾಡಲು ಸೂಚಿಸಲಾಗುವುದು. ಖಾಸಗಿ ಕಚೇರಿಗಳಲ್ಲಿ ಸಿಬ್ಬಂದಿ ಸಾಮರ್ಥ್ಯದ ಶೇ 50ರಷ್ಟು ಮಂದಿಗೆ ಮಾತ್ರ ಅವಕಾಶ ನೀಡಲಾಗುವುದು ಎಂದು ದೆಹಲಿ ಉಪ ಮುಖ್ಯಮಂತ್ರಿ ಮನೀಶ್ ಸಿಸೋಡಿಯಾ ಆನ್‌ಲೈನ್ ಮಾಧ್ಯಮಗೋಷ್ಠಿಯಲ್ಲಿ ಪ್ರಕಟಿಸಿದ್ದಾರೆ. ದೆಹಲಿ ವಿಪತ್ತು ನಿರ್ವಹಣಾ ಪ್ರಾಧಿಕಾರದ (ಡಿಡಿಎಂಎ) ಸಭೆಯಲ್ಲಿ ಈ ನಿರ್ಧಾರಗಳನ್ನು ಕೈಗೊಳ್ಳಲಾಗಿದೆ.

ಬಸ್ ಮತ್ತು ಮೆಟ್ರೊಗಳಲ್ಲಿ ಪೂರ್ಣ ಸಾಮರ್ಥ್ಯದಷ್ಟು ಜನರು ಸಂಚರಿಸಲು ಅವಕಾಶ ಕೊಡಲಾಗಿದೆ. ಬಸ್ ಮತ್ತು ಮೆಟ್ರೊಗಳ ಆಸನ ಸಾಮರ್ಥ್ಯದ ಶೇ 50ರಷ್ಟರಲ್ಲಿ ಮಾತ್ರ ಜನ ಸಂಚರಿಸಬಹುದು ಎಂಬ ನಿಯಮವನ್ನು ಹಿಂದೆ ಮಾಡಲಾಗಿತ್ತು. ಇದರಿಂದಾಗಿ ಬಸ್ ಮತ್ತು ಮೆಟ್ರೊ ನಿಲ್ದಾಣಗಳ ಮುಂದೆ ಜನರು ಸಾಲು ನಿಲ್ಲುವ ಸ್ಥಿತಿ ನಿರ್ಮಾಣ ಆಗಿತ್ತು.

ವಾರಾಂತ್ಯದ ಕರ್ಫ್ಯೂ ಶುಕ್ರವಾರ ರಾತ್ರಿಯೇ ಆರಂಭವಾಗಲಿದೆ. ಸೋಮವಾರ ಬೆಳಿಗ್ಗೆವರೆಗೆ ಇರುತ್ತದೆ ಎಂದು ಸಿಸೋಡಿಯಾ ತಿಳಿಸಿದ್ದಾರೆ.

ಕೋವಿಡ್ ದೃಢಪಡುವಿಕೆ ದರವು ಶೇ 0.5ರಷ್ಟನ್ನು ಮೀರಿದ ಕಾರಣ ಕಳೆದ ವರ್ಷದ ಡಿಸೆಂಬರ್ 28ರಂದು ಡಿಡಿಎಂಎ ದೆಹಲಿಯಲ್ಲಿ ‘ಯೆಲ್ಲೋ ಅಲರ್ಟ್’ ಘೋಷಿಸಿತ್ತು. ಸಿನಿಮಾ ಮಂದಿರ ಮತ್ತು ಜಿಮ್‌ಗಳನ್ನು ಬಂದ್ ಮಾಡಲು ಸೂಚಿಸಲಾಗಿತ್ತು. ಕಳೆದ ಡಿಸೆಂಬರ್ 27ರಿಂದಲೇ ದೆಹಲಿಯಲ್ಲಿ ರಾತ್ರಿ ಕರ್ಫ್ಯೂ ಜಾರಿಯಲ್ಲಿದೆ.

ಛತ್ತೀಸಗಡದಲ್ಲಿ ರ‍್ಯಾಲಿ, ಮೆರವಣಿಗೆ ಮತ್ತು ಇತರ ಸಾರ್ವಜನಿಕ ಕಾರ್ಯಕ್ರಮಗಳನ್ನು ನಿಷೇಧಿಸಲಾಗಿದೆ. ಕೋವಿಡ್ ದೃಢಪಡುವಿಕೆ ಪ್ರಮಾಣವು ಶೇ 4ಕ್ಕಿಂತ ಹೆಚ್ಚು ಇರುವ ಜಿಲ್ಲೆಗಳಲ್ಲಿ ರಾತ್ರಿ 10ರಿಂದ ಬೆಳಿಗ್ಗೆ 6ರವರೆಗೆ ಕರ್ಫ್ಯೂ ಹೇರಲಾಗಿದೆ.

ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳಲ್ಲಿ ಹಾಸಿಗೆ ಲಭ್ಯತೆಯ ಮಾಹಿತಿಯನ್ನು ಆನ್‌ಲೈನ್‌ನಲ್ಲಿ ಪ್ರಕಟಿಸಲು ಸೂಚಿಸಲಾಗಿದೆ. ಅಗತ್ಯ ಇದ್ದಲ್ಲೆಲ್ಲ ಸೆಕ್ಷನ್ 144ರ ಅನ್ವಯ ನಿರ್ಬಂಧಗಳನ್ನು ಹೇರಲು ಜಿಲ್ಲಾಡಳಿತಗಳಿಗೆ ಸೂಚಿಸಲಾಗಿದೆ.

ಕೋವಿಡ್ ಪ್ರಕರಣಗಳ ದೈನಂದಿನ ಸಂಖ್ಯೆಯು 20 ಸಾವಿರದ ಗಡಿ ದಾಟಿದರೆ ಮುಂಬೈ ನಗರದಲ್ಲಿ ಲಾಕ್‌ಡೌನ್ ಹೇರಬೇಕಾಗಬಹುದು ಎಂದು ನಗರದ ಮೇಯರ್ ಕಿಶೋರಿ ಪೆಡ್ನೇಕರ್ ಹೇಳಿದ್ದಾರೆ. ಪುಣೆ ಜಿಲ್ಲೆಯಲ್ಲಿ 1ರಿಂದ 8ನೇ ತರಗತಿವರೆಗಿನ ಶಾಲೆಗಳನ್ನು ಇದೇ 30ರವರೆಗೆ ಮುಚ್ಚಲು ಆದೇಶಿಸಲಾಗಿದೆ.

ಪಂಜಾಬ್‌ನಲ್ಲಿ ರಾತ್ರಿ ಕರ್ಫ್ಯೂ ಹೇರಲು ಮಂಗಳವಾರ ನಿರ್ಧರಿಸಲಾಗಿದೆ. ಶಿಕ್ಷಣ ಸಂಸ್ಥೆಗಳನ್ನು ಮುಚ್ಚಲು ಆದೇಶಿಸಲಾಗಿದೆ. ಸಿನಿಮಾ ಮಂದಿರ, ಸ್ಪಾ, ಮಾಲ್ ಮತ್ತು ಹೋಟೆಲುಗಳಲ್ಲಿ ಆಸನ ಸಾಮರ್ಥ್ಯದ ಶೇ 50ರಷ್ಟು ಜನರಿಗೆ ಮಾತ್ರ ಅವಕಾಶ ನೀಡಲಾಗಿದೆ. ಈ ನಿರ್ಬಂಧಗಳು ಇದೇ 15ರವರೆಗೆ ಜಾರಿಯಲ್ಲಿ ಇರಲಿವೆ.

ಫ್ರಾನ್ಸ್: ಕೊರೊನಾ ಹೊಸ ರೂಪಾಂತರ ತಳಿ ಪತ್ತೆ

ನವದೆಹಲಿ (ಪಿಟಿಐ): ಕೊರೊನಾ ವೈರಸ್‌ನ ರೂಪಾಂತರ ತಳಿ ಓಮೈಕ್ರಾನ್ ಜಗತ್ತಿನಾದ್ಯಂತ ವ್ಯಾಪಿಸಿ ಆತಂಕ ಮೂಡಿಸಿರುವ ನಡುವೆಯೇ, ಫ್ರಾನ್ಸ್‌ನಲ್ಲಿ ಹೊಸ ರೂಪಾಂತರ ತಳಿಯೊಂದನ್ನು ವಿಜ್ಞಾನಿಗಳು ಪತ್ತೆ ಹಚ್ಚಿದ್ದಾರೆ. ಬಿ.1.640.2 ತಳಿಯನ್ನು ‘ಐಎಚ್‌ಯು’ ಎಂದು ಕರೆಯಲಾಗಿದೆ. ಐಎಚ್‌ಯು ಮೆಡಿಟರೇನಿಯ ಇನ್‌ಫೆಕ್ಷನ್ ಸಂಸ್ಥೆಯ ಸಂಶೋಧಕರು 12 ಜನರಲ್ಲಿ ಈ ಹೊಸ ತಳಿಯನ್ನು ಪತ್ತೆಹಚ್ಚಿದ್ದಾರೆ. ಸೋಂಕಿತರು ಆಫ್ರಿಕಾದ ಕ್ಯಾಮರೂನ್ ದೇಶಕ್ಕೆ ಹೋಗಿ ಬಂದ ಪ್ರಯಾಣದ ಹಿನ್ನೆಲೆ ಹೊಂದಿದ್ದಾರೆ.

ಈ ತಳಿ ಹೇಗೆ ಹರಡಲಿದೆ, ಅದರ ವಿರುದ್ಧ ಈಗಿರುವ ಲಸಿಕೆಗಳು ರಕ್ಷಣೆ ನೀಡಲಿವೆಯೇ ಎಂಬ ಬಗ್ಗೆ ಈಗಲೇ ಖಚಿತವಾಗಿ ಹೇಳಲಾಗದು ಎಂದು ಅವರು ತಿಳಿಸಿದ್ದಾರೆ.

ಬಿ.1.640.2 ತಳಿಯು ಈವರೆಗೆ ಬೇರಾವುದೇ ದೇಶದಲ್ಲಿ ಕಂಡುಬಂದಿಲ್ಲ ಎಂದು ಸಂಶೋಧಕರು ಹೇಳಿದ್ದಾರೆ. ಕಳೆದ ವರ್ಷದ ನವೆಂಬರ್ ಮಧ್ಯಭಾಗದಲ್ಲಿ ಆರ್‌ಟಿಪಿಸಿಆರ್ ಪರೀಕ್ಷೆಯಲ್ಲಿ ಕೋವಿಡ್ ದೃಢಪಟ್ಟಿದ್ದ ವ್ಯಕ್ತಿಯೊಬ್ಬರಿಂದ ಸಂಗ್ರಹಿಸಿದ ಮಾದರಿಯಲ್ಲಿ ಈ ರೂಪಾಂತರ ತಳಿ ಮೊದಲಿಗೆ ಕಂಡುಬಂದಿತ್ತು.

‘ಹೊಸ ವೈರಾಣುಗಳು ಪತ್ತೆಯಾಗುತ್ತಲೇ ಇರುತ್ತವೆ. ಆದರೆ ಅವು ಹೆಚ್ಚು ಅಪಾಯಕಾರಿ ಎಂದರ್ಥವಲ್ಲ’ ಎಂದು ವೈರಾಣುಶಾಸ್ತ್ರಜ್ಞ ಎರಿಕ್ ಫಿಗಲ್ ಡಿಂಗ್ ಅವರು ಟ್ವೀಟ್ ಮಾಡಿದ್ದಾರೆ. ವೈರಸ್‌ನಲ್ಲಿರುವ ಮುಳ್ಳುಗಳು ಎಷ್ಟು ಬಾರಿ ದ್ವಿಗುಣಗೊಳ್ಳುವ ಸಾಮರ್ಥ್ಯ ಹೊಂದಿವೆ ಎಂಬುದರ ಮೇಲೆ ಅದು ಎಷ್ಟು ಪ್ರಮಾಣದಲ್ಲಿ ಅಪಾಯಕಾರಿ ಆಗಬಲ್ಲದು ಎಂಬುದು ನಿರ್ಧಾರವಾಗುತ್ತದೆ ಎಂದು ಅವರು ಹೇಳಿದ್ದಾರೆ.

ಓಮೈಕ್ರಾನ್ ರೀತಿಯಲ್ಲಿ ವೇಗವಾಗಿ ಹರಡುವ ಸಾಮರ್ಥ್ಯ ಮತ್ತು ರೋಗನಿರೋಧಕ ಶಕ್ತಿಯನ್ನು ಕುಂದಿಸುವ ಸಾಮರ್ಥ್ಯವನ್ನೂ ಗಳಿಸಿಕೊಂಡಾಗ ಮಾತ್ರ, ಇದೂ ಕಳವಳಕಾರಿ ಎಂದು ಘೋಷಿಸಬಹುದು ಎಂದು ಅವರು ವಿವರಿಸಿದ್ದಾರೆ.

- ಅಮೆರಿಕದಲ್ಲಿ ಒಂದೇ ದಿನದಲ್ಲಿ ದಾಖಲೆಯ 10 ಲಕ್ಷ ಕೋವಿಡ್ ಪ್ರಕರಣ ಪತ್ತೆ
- ಆರ್‌ಟಿಪಿಸಿಆರ್ ಪರೀಕ್ಷೆಯಲ್ಲಿ ಓಮೈಕ್ರಾನ್ ಪತ್ತೆಹಚ್ಚುವ ‘ಓಮಿಶೂರ್’ ಎಂಬ ಕಿಟ್ ಅನ್ನು ಟಾಟಾ ಮೆಡಿಕಲ್ ಅಂಡ್ ಡಯಾಗ್ನೋಸ್ಟಿಕ್ಸ್ ಅಭಿವೃದ್ಧಿಪಡಿಸಿದೆ
- ಕೋವಿಡ್ ದೃಢಪಟ್ಟ 66 ಪ್ರಯಾಣಿಕರು ಇದ್ದ ಹಡಗು ಮಂಗಳವಾರ ಸಂಜೆ ಗೋವಾದಿಂದ ಮುಂಬೈ ಬಂದರಿಗೆ ಬಂದಿದ್ದು, ಅವರನ್ನು ಕೋವಿಡ್ ಆರೈಕೆ ಕೇಂದ್ರಗಳಿಗೆ ಕಳುಹಿಸಲಾಗಿದೆ

ಕೋವಿಡ್ ಮೂರನೇ ಅಲೆ ಸನ್ನಿಹಿತವಾಗಿರುವ ಕಾರಣ ಕೊಯಮತ್ತೂರಿನಲ್ಲಿ ಕೋವಿಡ್ ಆರೈಕೆ ಕೇಂದ್ರವನ್ನು ಸಜ್ಜುಗೊಳಿಸಲಾಗಿದೆ ಪಿಟಿಐ ಚಿತ್ರ

ಕೇಜ್ರಿವಾಲ್ ಸೇರಿ ಹಲವರಿಗೆ ಕೋವಿಡ್

ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್, ಕಾಂಗ್ರೆಸ್ ಪಕ್ಷದ ಪ್ರಧಾನ ವಕ್ತಾರ ರಣದೀಪ್ ಸುರ್ಜೇವಾಲಾ, ಮಹಾರಾಷ್ಟ್ರ ಸಚಿವ ಏಕನಾಥ ಶಿಂಧೆ, ಶಿವಸೇನಾ ಸಂಸದ ಅರವಿಂದ ಸಾವಂತ್, ಕೇಂದ್ರದ ಮಾಜಿ ಸಚಿವ ಬಾಬುಲ್ ಸುಪ್ರಿಯೊ, ಬಿಜೆಪಿ ಸಂಸದ ಮನೋಜ್ ತಿವಾರಿ, ಬಂಗಾಳ ಕ್ರಿಕೆಟ್ ಅಸೋಸಿಯೇಷನ್ ಅಧ್ಯಕ್ಷ ಅವಿಶೇಕ್ ದಾಲ್ಮಿಯಾ, ಮಾಜಿ ಕ್ರಿಕೆಟಿಗ ಲಕ್ಷ್ಮೀ ರತನ್ ಶುಕ್ಲಾ, ನಟ ರಣವೀರ್ ಶೇರೆ ಅವರ ಪುತ್ರ ಹರೂನ್, ನಟಿ ದೃಷ್ಟಿ ಧಾಮಿ ಅವರಿಗೆ ಕೋವಿಡ್ ದೃಢಪಟ್ಟಿದೆ.

ಲಸಿಕೆ: 9 ಜಿಲ್ಲೆಗಳಲ್ಲಿ ಶೇ 100 ಸಾಧನೆ

ಬೆಂಗಳೂರು: ಕೋವಿಡ್ ಲಸಿಕೆಯ ಮೊದಲ ಡೋಸ್ ವಿತರಣೆಯಲ್ಲಿ ಶೇ 100 ರಷ್ಟು ಸಾಧನೆ ಮಾಡಿದ ರಾಜ್ಯದ ಜಿಲ್ಲೆಗಳ ಸಂಖ್ಯೆ 9ಕ್ಕೆ ಏರಿಕೆಯಾಗಿದೆ. ರಾಜ್ಯದ ಒಟ್ಟಾರೆ ಸಾಧನೆ ಶೇ 97 ರಷ್ಟಿದೆ.

ರಾಜ್ಯದಲ್ಲಿ 2021ರ ಜ.16ರಿಂದ ಲಸಿಕೆ ವಿತರಿಸಲಾಗುತ್ತಿದೆ. ಆರೋಗ್ಯ ಇಲಾಖೆಯು 18 ವರ್ಷಗಳು ಮೇಲ್ಪಟ್ಟ 4.89 ಕೋಟಿ ಮಂದಿಗೆ ಲಸಿಕೆ ಹಾಕುವ ಗುರಿ ಹಾಕಿಕೊಂಡಿದೆ. ಅವರಲ್ಲಿ 4.76 ಕೋಟಿ ಮಂದಿಗೆ ಮೊದಲ ಡೋಸ್ ಲಸಿಕೆ ನೀಡಲಾಗಿದೆ.

ಬೆಂಗಳೂರು ನಗರ (ಶೇ 129), ಗದಗ (ಶೇ 102), ವಿಜಯಪುರ (ಶೇ 102), ಬೀದರ್ (ಶೇ 101) ಹಾಗೂ ಬಾಗಲಕೋಟೆ (ಶೇ 100) ಜಿಲ್ಲೆ ಮೊದಲ ಡೋಸ್ ವಿತರಣೆಯಲ್ಲಿ ಮುಂಚೂಣಿಯಲ್ಲಿವೆ. ಧಾರವಾಡ, ಚಿಕ್ಕಬಳ್ಳಾಪುರ, ಕೋಲಾರ ಹಾಗೂ ಕೊಡಗಿನಲ್ಲಿ ಶೇ 100 ರಷ್ಟು ಗುರಿ ತಲುಪಲಾಗಿದೆ. ದಾವಣಗೆರೆ, ಬೆಳಗಾವಿ ಹಾಗೂ ಹಾಸನದಲ್ಲಿ ಶೇ 99 ರಷ್ಟು ಮಂದಿಗೆ ಮೊದಲ ಡೋಸ್ ಲಸಿಕೆ ನೀಡಲಾಗಿದೆ.

ಲಸಿಕೆಯ ಮೊದಲ ಡೋಸ್ ವಿತರಣೆಯಲ್ಲಿ ಬಿಬಿಎಂಪಿ (ಶೇ 92) ಕಡೆಯ ಸ್ಥಾನದಲ್ಲಿದೆ. ಬೆಂಗಳೂರು ಗ್ರಾಮಾಂತರ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯೂ (ಶೇ 95ಕ್ಕಿಂತ ಕಡಿಮೆ) ಹಿಂದೆ ಬಿದ್ದಿದೆ.

ಬೆಳಗಾವಿ, ಮಂಡ್ಯ: ಕೋವಿಡ್ ಹೆಚ್ಚಳ

ಬೆಳಗಾವಿ: ಜಿಲ್ಲೆಯಲ್ಲಿ ಮಂಗಳವಾರ 45 ಜನರಿಗೆ ಕೋವಿಡ್ ದೃಢಪಟ್ಟಿದ್ದು ಮತ್ತೆ ಕೊರೊನಾ ಸೋಂಕು ಹೆಚ್ಚುತ್ತಿರುವ ಆತಂಕ ಎದುರಾಗಿದೆ. ಸೋಮವಾರ 14 ಜನರಿಗೆ ಸೋಂಕು ತಗುಲಿತ್ತು.

ಮಂಡ್ಯ ವರದಿ: ತಮಿಳುನಾಡಿನ ಓಂಶಕ್ತಿ ದೇವಾಲಯಕ್ಕೆ ತೆರಳಿ ನಾಲ್ಕು ಬಸ್‌ಗಳಲ್ಲಿ ವಾಪಸು ಬಂದ ಶ್ರೀರಂಗಪಟ್ಟಣ ತಾಲ್ಲೂಕಿನ 33 ಮಹಿಳೆಯರಲ್ಲಿ ಕೋವಿಡ್– 19 ದೃಢಪಟ್ಟಿದೆ.

ವಿಲುಪುರಂ ಜಿಲ್ಲೆಯ ಮೇಲ್‌ಮರುವತ್ತೂರ್ ಪಟ್ಟಣದ ದೇವಾಲಯದ ಭೇಟಿಗೆ ಜ.18ರವರೆಗೆ ಅವಕಾಶವಿದ್ದು, ನೂರಾರು ಮಹಿಳೆಯರು ತೆರಳುತ್ತಿರುವುದು ಜಿಲ್ಲಾಡಳಿತಕ್ಕೆ ತಲೆನೋವು ತಂದಿದೆ. ಶ್ರೀರಂಗಪಟ್ಟಣದಲ್ಲಿರುವ ಆದಿಶಕ್ತಿ ದೇವಾಲಯದಲ್ಲಿ ಮಾಲಾಧಾರಣೆ ನೀಡಲಾಗುತ್ತಿದೆ.

ಜಿಲ್ಲೆಯ ಕೆ.ಆರ್.ಪೇಟೆ ತಾಲ್ಲೂಕಿನ ಮಾಕವಳ್ಳಿಯಲ್ಲಿ ಸರ್ಕಾರಿ ಪ್ರೌಢಶಾಲೆಯ 15 ಮಕ್ಕಳು, ಒಬ್ಬ ಶಿಕ್ಷಕರಿಗೆ ಕೋವಿಡ್ ದೃಢಪಟ್ಟಿದೆ. ‘ಶಾಲೆಗೆ ಒಂದು ವಾರ ರಜೆ ಘೋಷಿಸಿದೆ’ ಎಂದು ಬಿಇಒ ಬಸವರಾಜ್ ತಿಳಿಸಿದರು.

ಸುದ್ದಿ 2 ನಿಮಿಷ

ಸಿದ್ದರಾಮಯ್ಯಗೆ ‘ಮಾಚಿದೇವಶ್ರೀ’ ಪ್ರಶಸ್ತಿ

ಚಿತ್ರದುರ್ಗ: ಇಲ್ಲಿನ ಮಾಚಿದೇವ ಮಹಾಸಂಸ್ಥಾನ ಮಠ ಸ್ಥಾಪಿಸಿದ ‘ಮಾಚಿದೇವಶ್ರೀ’ ಪ್ರಶಸ್ತಿಗೆ ವಿಧಾನಸಭೆ ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಅವರನ್ನು ಆಯ್ಕೆ ಮಾಡಲಾಗಿದೆ. ಪ್ರಶಸ್ತಿ ₹ 25 ಸಾವಿರ ನಗದು ಹಾಗೂ ಫಲಕ ಒಳಗೊಂಡಿದೆ.

‘ಪಟ್ಟಾಧಿಕಾರದ ನಾಲ್ಕನೇ ವರ್ಷದ ನಿಮಿತ್ತ ಜ.5 ಮತ್ತು 6ರಂದು ಮಠದಲ್ಲಿ ‘ಕಾಯಕ ಜನೋತ್ಸವ’ ನಡೆಯಲಿದೆ. ಜ.6ರಂದು ಬೆಳಿಗ್ಗೆ 10.30ಕ್ಕೆ ಪ್ರಶಸ್ತಿ ಪ್ರದಾನ ಮಾಡಲಾಗುತ್ತಿದೆ’ ಎಂದು ಮಹಾಸಂಸ್ಥಾನದ ಪೀಠಾಧ್ಯಕ್ಷ ಬಸವ ಮಾಚಿದೇವ ಸ್ವಾಮೀಜಿ ತಿಳಿಸಿದರು.

ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದ ಅವರು, ‘ಸಚಿವ ಮುನಿರತ್ನ, ಸಂಸದ ಕರಡಿ ಸಂಗಣ್ಣ, ಶಾಸಕರಾದ ಭೀಮಾ ನಾಯ್ಕ್, ಉದಯ ಬಿ.ಗರುಡಾಚಾರ್, ಮಾಜಿ ಸಚಿವ ಎಚ್. ಆಂಜನೇಯ ಅವರಿಗೆ ‘ಮಾಚಿದೇವ ರತ್ನ’ ಹಾಗೂ ಮೈಸೂರು ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕಿ ಪ್ರೊ.ಅನ್ನಪೂರ್ಣಮ್ಮ ಅವರಿಗೆ ‘ಮಲ್ಲಿಗೆಮ್ಮ ಮಾತೋಶ್ರೀ’ ಪ್ರಶಸ್ತಿ ನೀಡಿ ಗೌರವಿಸಲಾಗುತ್ತಿದೆ’ ಎಂದು ತಿಳಿಸಿದರು.

‘ಮಡಿವಾಳರು ಇಂದಿಗೂ ಸಮಾಜದ ಮುಖ್ಯವಾಹಿನಿಗೆ ಬರಲು ಆಗುತ್ತಿಲ್ಲ. ರಾಜ್ಯ ಸರ್ಕಾರ, ಪ್ರೊ.ಅನ್ನಪೂರ್ಣಮ್ಮ ವರದಿ ಜಾರಿಗೆ ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಬೇಕು. ಸಮಾಜವನ್ನು ಪರಿಶಿಷ್ಟ ಜಾತಿ ಪಟ್ಟಿಗೆ ಸೇರಿಸಲು ಶೀಘ್ರ ಕ್ರಮವಹಿಸಬೇಬೇಕು’ ಎಂದು ಕೋರಿದರು.

ಅಂಗನವಾಡಿಗೆ ಪುತ್ರನನ್ನು ಸೇರಿಸಿದ ಪ್ರಧಾನ ಸಿವಿಲ್ ನ್ಯಾಯಾಧೀಶ

ಚನ್ನಪಟ್ಟಣ (ರಾಮನಗರ): ಇಲ್ಲಿನ ಜೆ.ಎಂ.ಎಫ್.ಸಿ ನ್ಯಾಯಾಲಯದ ಪ್ರಧಾನ ಸಿವಿಲ್ ನ್ಯಾಯಾಧೀಶ ಎಂ.ಮಹೇಂದ್ರ ಅವರು ತಮ್ಮ ಮೂರುವರೆ ವರ್ಷದ ಪುತ್ರನನ್ನು ನಗರದ ಸರ್ಕಾರಿ ಅಂಗನವಾಡಿಗೆ ಮಂಗಳವಾರ ದಾಖಲು ಮಾಡಿದ್ದಾರೆ.

ನಗರದ ಕೋಟೆ ಆಂಜನೇಯ ದೇವಾಲಯ ಬಳಿ ಇರುವ ಅಂಗನವಾಡಿ ಕೇಂದ್ರಕ್ಕೆ ಪತ್ನಿಯೊಂದಿಗೆ ಬಂದ ಅವರು, ಪುತ್ರ ಎಚ್.ಎಂ.ನಿದರ್ಶನನ್ನು ಅಂಗನವಾಡಿಗೆ ದಾಖಲಿಸಿದರು.

‘ಸರ್ಕಾರಿ ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣ ಸಿಗುತ್ತದೆ. ಸರ್ಕಾರವೂ ಹಲವು ಸವಲತ್ತು ಒದಗಿಸುತ್ತಿದೆ. ಕೆಲ ಪೋಷಕರು ಸರ್ಕಾರಿ ಶಾಲೆ ಎಂದರೆ ಮೂಗು ಮುರಿಯುತ್ತಿದ್ದಾರೆ. ಅಂತವರಿಗೆ ಪ್ರೇರಣೆಯಾಗಲಿ ಎಂದು ಮಗನನ್ನು ಅಂಗನವಾಡಿಗೆ ದಾಖಲು ಮಾಡಿಸಿದ್ದೇನೆ’ ಎಂದು ಹೇಳಿದರು.

‘ನಾನು ಕೂಡ ಸರ್ಕಾರಿ ಶಾಲೆ ಹಾಗೂ ಕಾಲೇಜಿನಲ್ಲಿಯೇ ವಿದ್ಯಾಭ್ಯಾಸ ಮಾಡಿದ್ದೇನೆ. ನನ್ನ ಮಗನಿಗೂ ಸರ್ಕಾರಿ ಶಾಲೆಯಲ್ಲಿ ಶಿಕ್ಷಣ ಕೊಡಿಸಬೇಕು ಎಂಬ ಮಹದಾಸೆ ಇದೆ’ ಎಂದರು.

‘ಪೋಷಕರಿಗೆ ಸರ್ಕಾರಿ ಶಾಲೆಗಳ ಬಗ್ಗೆ ತಾತ್ಸಾರ ಭಾವನೆ ಇದೆ. ಸಾಲ ಮಾಡಿಯಾದರೂ ಖಾಸಗಿ ಶಾಲೆಗಳಿಗೆ ಮಕ್ಕಳನ್ನು ದಾಖಲಿಸುವ ಪೋಷಕರಿಗೆ ನ್ಯಾಯಾಧೀಶರ ನಡೆ ಮಾದರಿ’ ಎಂದು ಸಿಡಿಪಿಒ ಎಂ.ಕೆ.ಸಿದ್ದಲಿಂಗಯ್ಯ ತಿಳಿಸಿದ್ದಾರೆ.

ಸಂಪುಟ ಪುನರ್‌ರಚನೆ ಬಿಜೆಪಿ ವರಿಷ್ಠರ ಒಲವು?

ಒಂದನೇ ಪುಟದಿಂದ

ಸಂಪುಟ ಪುನಾರಚನೆಯತ್ತ ವರಿಷ್ಠರು ಗಂಭೀರವಾಗಿ ಆಲೋಚನೆ ನಡೆಸಿರುವುದರಿಂದ, ಮುಖ್ಯಮಂತ್ರಿ ಬೊಮ್ಮಾಯಿ ಅವರ ಸ್ಥಾನ ಮುಂದಿನ ಚುನಾವಣೆವರೆಗೂ ಭದ್ರವಾದಂತಾಗಿದೆ ಎಂದೂ ಮೂಲಗಳು ವಿವರಿಸಿವೆ. ಕೆಲಸ ಮಾಡದೇ ನಿಷ್ಕ್ರಿಯವಾಗಿರುವ, ಪಕ್ಷದ ಬೆಳವಣಿಗೆಗೆ ಸಹಾಯಕವಲ್ಲದ ಕೆಲವು ಸಚಿವರ ಹೆಸರುಗಳನ್ನು ಪಟ್ಟಿ ಮಾಡಲಾಗಿದೆ. ಅವರಲ್ಲಿ ಕೆಲವು ಹಿರಿಯ ಸಚಿವರೂ ಇದ್ದಾರೆ. ಮುಖ್ಯಮಂತ್ರಿ ವಿರುದ್ಧವೇ ಅಪಪ್ರಚಾರ ಹುಟ್ಟು ಹಾಕುತ್ತಿದ್ದಾರೆ ಎನ್ನಲಾದವರ ಹೆಸರೂ ಕೈಬಿಡುವ ಸಚಿವರ ಪಟ್ಟಿಯಲ್ಲಿ ಸೇರಿದೆ ಎಂದು ಮೂಲಗಳು ಹೇಳಿವೆ.

ಇವರಲ್ಲಿ ಒಬ್ಬ ಸಚಿವರಂತೂ ಬೆಳಗಾವಿ ವಿಧಾನಮಂಡಲ ಅಧಿವೇಶನದಲ್ಲಿ ತಮ್ಮ ಪರ ಶಾಸಕರ ಬೆಂಬಲ ಕ್ರೋಡೀಕರಿಸಲು ಯತ್ನಿಸಿದ್ದರು. ಮುಖ್ಯಮಂತ್ರಿ ಬದಲಾವಣೆ ಪ್ರಸ್ತಾವ ಬಂದರೆ, ತಮ್ಮನ್ನು ಬೆಂಬಲಿಸಬೇಕು ಎಂಬ ಮನವಿಯನ್ನು ಕೆಲವು ಶಾಸಕರ ಮುಂದಿಟ್ಟಿದ್ದರು. ಮುಖ್ಯಮಂತ್ರಿ ಬೊಮ್ಮಾಯಿ ಅವರು ಈ ವಿಷಯವನ್ನು ವರಿಷ್ಠರ ಗಮನಕ್ಕೂ ತಂದಿದ್ದು, ಪಕ್ಷದ ಉಸ್ತುವಾರಿ ಅರುಣ್‌ಸಿಂಗ್ ಈ ವಿಚಾರವಾಗಿ ಎಚ್ಚರಿಕೆಯನ್ನೂ ನೀಡಿದ್ದಾರೆ.

ಬಹುತೇಕ ಸಚಿವರು ಮತ್ತು ಶಾಸಕರು ಸರ್ಕಾರ ಮಾಡಿರುವ ಉತ್ತಮ ಕೆಲಸಗಳನ್ನು ಬಿಂಬಿಸಿ ಜನರ ಮನಗೆಲ್ಲುವತ್ತ ಲಕ್ಷ್ಯ ಹರಿಸಿಲ್ಲ. ಕೇವಲ ಸ್ವಹಿತಾಸಕ್ತಿಯ ಚಟುವಟಿಕೆಗಳು ಮತ್ತು ಇತರ ಪಕ್ಷಗಳ ನಾಯಕರ ಜತೆ ಹೊಂದಾಣಿಕೆ ರಾಜಕೀಯ ಮಾಡುತ್ತಿರುವುದು ವರಿಷ್ಠರಲ್ಲಿ ಅಸಮಾಧಾನ ಮೂಡಿಸಿದೆ. ಇತ್ತೀಚೆಗೆ ನಡೆದ ವಿಧಾನಪರಿಷತ್ ಮತ್ತು ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಪಕ್ಷದ ನಿರ್ವಹಣೆ ಕಳಪೆಯಾಗಿದ್ದು, ಇದೇ ರೀತಿಯಲ್ಲಿ ಮುಂದುವರಿದರೆ ಚುನಾವಣೆ ಎದುರಿಸುವುದು ಕಷ್ಟವಾಗಬಹುದು ಎಂಬ ಚರ್ಚೆಯೂ ಪಕ್ಷದಲ್ಲಿ ನಡೆದಿದೆ.

ಸಂಪುಟಕ್ಕೆ ಹೊಸ ಸಚಿವರ ಸೇರ್ಪಡೆ ಸಂದರ್ಭದಲ್ಲಿ ಯುವಕರು ಮತ್ತು ಹೆಚ್ಚು ಕ್ರಿಯಾಶೀಲರಾದವರಿಗೆ ಆದ್ಯತೆ ನೀಡುವ ಸಾಧ್ಯತೆ ಇದೆ. ಪಕ್ಷದ ವರ್ಚಸ್ಸು ಹೆಚ್ಚಿಸುವುದರ ಜತೆಗೆ ಜಾತಿ, ಪ್ರಾದೇಶಿಕ ಸಮತೋಲನಕ್ಕೂ ಒತ್ತು ನೀಡಲಾಗುವುದು. ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರಿಗೂ ಈ ಬಾರಿ ಮಣೆ ಹಾಕುವ ಸಾಧ್ಯತೆ ಇದೆ. ಯತ್ನಾಳ ಅವರನ್ನು ತೆಗೆದುಕೊಂಡರೆ, ಮುರುಗೇಶ್ ನಿರಾಣಿ ಅವರನ್ನು ಸಂಪುಟದಿಂದ ಕೈಬಿಡುವ ಸಾಧ್ಯತೆ ಇದೆ ಎಂದೂ ಹೇಳಲಾಗುತ್ತಿದೆ.

ಪಾದಯಾತ್ರೆಗೆ 4,817 ಜನ ನೋಂದಣಿ– ಡಿಕೆಶಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮೇಕೆದಾಟು ಯೋಜನೆಯ ಅನುಷ್ಠಾನಕ್ಕೆ ಆಗ್ರಹಿಸಿ ಪಕ್ಷ ಜ. 9ರಿಂದ ಹಮ್ಮಿಕೊಂಡಿರುವ ಪಾದಯಾತ್ರೆಗೆ ಈಗಾಗಲೇ 4,817 ಜನ ಆನ್‌ಲೈನ್‌ನಲ್ಲಿ ಹೆಸರು ನೋಂದಾಯಿಸಿದ್ದಾರೆ. ಯಾತ್ರೆಗೆ ಎಲ್ಲ ಸಿದ್ಧತೆಗಳನ್ನು ಮಾಡಿಕೊಂಡಿದ್ದೇವೆ’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ಪಾದಯಾತ್ರೆಗೆ ತಯಾರಿ ಸಂಬಂಧಿಸಿದಂತೆ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಸೇರಿದಂತೆ ಪಕ್ಷದ ಹಿರಿಯ ನಾಯಕರ ಜೊತೆ ಮಂಗಳವಾರ ಸಮಾಲೋಚನೆ ನಡೆಸಿದ ಬಳಿಕ ಅವರು ಮಾತನಾಡಿದರು.

‘ಪಾದಯಾತ್ರೆಯ ಜೊತೆಗೆ 10 ಆಂಬುಲೆನ್ಸ್‌ಗಳು, 100 ವೈದ್ಯರು ಇರಲಿದ್ದಾರೆ. ಒಟ್ಟು 10 ದಿನಗಳ ಯಾತ್ರೆಯಲ್ಲಿ ರಾಜ್ಯದ ಎಲ್ಲ ಭಾಗಗಳಿಂದ ಕಾರ್ಯಕರ್ತರು ಭಾಗವಹಿಸಲಿದ್ದಾರೆ. ಮೈಸೂರು, ಹಾಸನ, ಮಂಡ್ಯ, ತುಮಕೂರು ಹೀಗೆ ಒಂದೊಂದು ಜಿಲ್ಲೆಯವರು ಒಂದೊಂದು ದಿನ ಭಾಗವಹಿಸಲಿದ್ದಾರೆ’ ಎಂದರು.

‘ನೀರಿಗಾಗಿ ನಾವು ಪಾದಯಾತ್ರೆ ಮಾಡುತ್ತೇವೆ. ನೀರು ಪಡೆಯುವುದು ನಮ್ಮ ಹಕ್ಕು. ಹೀಗಾಗಿ, ಯಾರು, ಯಾವುದೇ ರೀತಿಯ ಅಡಚಣೆ ಮಾಡಿದರೂ ಪಾದಯಾತ್ರೆ ನಡೆದೇ ನಡೆಯುತ್ತದೆ’ ಎಂದೂ ಹೇಳಿದರು.

ಮಲತಾಯಿ ಧೋರಣೆ: ‘ಮೇಕೆದಾಟು, ಮಹದಾಯಿ ಸೇರಿದಂತೆ ಎಲ್ಲ ನೀರಾವರಿ ಯೋಜನೆಗಳಲ್ಲಿ ರಾಜ್ಯದ ಬಗ್ಗೆ ಕೇಂದ್ರ ಸರ್ಕಾರ ಮಲತಾಯಿ ಧೋರಣೆ ತಾಳಿದೆ. ಈ ಅನ್ಯಾಯದ ವಿರುದ್ಧ ಪಾದಯಾತ್ರೆಯ ಮೂಲಕ ಪ್ರತಿಭಟನೆ ನಡೆಸುತ್ತೇವೆ’ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಈಶ್ವರ್ ಖಂಡ್ರೆ ಹೇಳಿದರು.

ಸಭೆಯಲ್ಲಿ ಕಾರ್ಯಾಧ್ಯಕ್ಷರಾದ ರಾಮಲಿಂಗಾರೆಡ್ಡಿ, ಆರ್. ಧ್ರುವನಾರಾಯಣ್, ಸಲೀಂ ಅಹಮದ್ ಹಾಗೂ ಎಂ.ಬಿ. ಪಾಟೀಲ, ಕೆ.ಜೆ. ಜಾರ್ಜ್, ಆರ್.ವಿ. ದೇಶಪಾಂಡೆ, ಬಿ.ಕೆ. ಹರಿಪ್ರಸಾದ್, ಅಲ್ಲಂ ವೀರಭದ್ರಪ್ಪ ಮತ್ತಿತರರು ಇದ್ದರು.

ಸಭೆಯಲ್ಲಿ ಸಿದ್ದರಾಮಯ್ಯ ಮಾತನಾಡಿದರು. ವೀರಪ್ಪ ಮೊಯಿಲಿ, ಡಿ.ಕೆ. ಶಿವಕುಮಾರ್, ಜಿ. ಪರಮೇಶ್ವರ, ಎಚ್.ಕೆ. ಪಾಟೀಲ ಇದ್ದರು

ಮೇಕೆದಾಟು: ಎಲ್ಲ ಅರ್ಜಿಗಳ ವಿಚಾರಣೆ 27ರಂದು: ‘ಸುಪ್ರೀಂ’

ನವದೆಹಲಿ: ಮೇಕೆದಾಟು ಅಣೆಕಟ್ಟು ಯೋಜನೆಗೆ ಸಂಬಂಧಿಸಿದ ಎಲ್ಲ ಅರ್ಜಿಗಳನ್ನು ಒಟ್ಟುಗೂಡಿಸಿ ಜನವರಿ 27ರಂದು ವಿಚಾರಣೆ ನಡೆಸಲಾಗುವುದು ಎಂದು ಸುಪ್ರೀಂ ಕೋರ್ಟ್ ಸೋಮವಾರ ತಿಳಿಸಿದೆ.

ರಾಷ್ಟ್ರೀಯ ಹಸಿರು ನ್ಯಾಯಮಂಡಳಿಯ (ಎನ್‌ಜಿಟಿ) ದಕ್ಷಿಣ ಪೀಠದ ಆದೇಶವನ್ನು ವಜಾ ಮಾಡಿದ್ದ ಎನ್‌ಜಿಟಿ ಪ್ರಧಾನ ಪೀಠದ ಆದೇಶವನ್ನು ಪ್ರಶ್ನಿಸಿ ತಮಿಳುನಾಡು ಸರ್ಕಾರ ಸಲ್ಲಿಸಿದ್ದ ಅರ್ಜಿಯನ್ನೂ ಸುಪ್ರೀ ಕೋರ್ಟ್ ಇತರೆ ಅರ್ಜಿಗಳ ಜೊತೆಗೆ ಪರಿಣಿಸಲಿದೆ.

ಬಿಜೆಪಿಯವರು ಜನಾಶೀರ್ವಾದ ಯಾತ್ರೆ ನಡೆಸಿದಾಗ ಆರೋಗ್ಯ ಸಚಿವ ಕೆ. ಸುಧಾಕರ್ ಎಲ್ಲಿದ್ದರು? ಪ್ರಧಾನಿ ಮೋದಿ ಸಭೆಗಳನ್ನು ನಡೆಸುತ್ತಲೇ ಇದ್ದಾರೆ. ಅವರಿಗೊಂದು ಕಾನೂನು, ನಮಗೊಂದು ಕಾನೂನಾ?
ಸಿದ್ದರಾಮಯ್ಯ,
ವಿಧಾನಸಭೆಯ ವಿರೋಧ ಪಕ್ಷದ ನಾಯಕ

ಉತ್ತರ ಪ್ರದೇಶ ಚುನಾವಣೆ: ಮುಖಂಡರ ಪಕ್ಷಾಂತರ ತಡೆಯಲು 16 ಸದಸ್ಯರ ಸಮಿತಿ ರಚಿಸಿದ ಬಿಜೆಪಿ

ಬ್ರಾಹ್ಮಣ ನಾಯಕರು ಎಸ್‌ಪಿಗೆ: ಬಿಜೆಪಿಗೆ ಕಳವಳ

ಪ್ರಜಾವಾಣಿ ವಾರ್ತೆ

ಲಖನೌ: ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರ ಭದ್ರಕೋಟೆ ಗೋರಖಪುರದ ಬ್ರಾಹ್ಮಣ ಸಮುದಾಯದ ಹಲವು ಮುಖಂಡರು ಬಿಜೆಪಿ ಮತ್ತು ಬಿಎಸ್‌ಪಿ ತೊರೆದು ಎಸ್‌ಪಿಗೆ ಇತ್ತೀಚಿನ ದಿನಗಳಲ್ಲಿ ಸೇರ್ಪಡೆ ಆಗಿದ್ದಾರೆ.

ಬಿಎಸ್‌ಪಿಯ ಲೋಕಸಭಾ ಸದಸ್ಯ ರಿತೇಶ್ ಪಾಂಡೆ ಅವರ ತಂದೆ ರಾಕೇಶ್ ಪಾಂಡೆ ಅವರು ಎಸ್‌ಪಿಗೆ ಸೇರಿದ್ದಾರೆ. ಬ್ರಾಹ್ಮಣ ಸಮುದಾಯದ ಮುಖಂಡ, ಮಾಜಿ ಶಾಸಕ ಬ್ರಿಜೇಶ್ ಮಿಶ್ರಾ ಅವರೂ ಸಮಾಜವಾದಿ ಪಕ್ಷದ (ಎಸ್‌ಪಿ) ಅಧ್ಯಕ್ಷ ಅಖಿಲೇಶ್ ಯಾದವ್ ಸಮ್ಮುಖದಲ್ಲಿ ಪಕ್ಷಕ್ಕೆ ಸೇರ್ಪಡೆ ಆದರು. ಬಿಜೆಪಿ ಶಾಸಕಿ ಮಾಧುರಿ ವರ್ಮಾ ಅವರು ಎಸ್‌ಪಿ ಸೇರಿದ್ದಾರೆ. ಅವರು ಪ್ರಭಾವಿ ಕುರ್ಮಿ ಸಮುದಾಯದ ನಾಯಕಿ. ಈ ಪಕ್ಷಾಂತರಗಳು ಚುನಾವಣೆಗೆ ಇನ್ನೇನು ಕೆಲವೇ ತಿಂಗಳಿರುವ ಈ ಸಂದರ್ಭದಲ್ಲಿ ಎಸ್‌ಪಿಯಲ್ಲಿ ಹುರುಪು ತುಂಬಿದೆ.

ರಾಕೇಶ್ ಪಾಂಡೆ ಅವರು ಅಂಬೇಡ್ಕರ್ ನಗರ ಲೋಕಸಭಾ ಕ್ಷೇತ್ರವನ್ನು ಪ್ರತಿನಿಧಿಸಿದ್ದರು. ಪೂರ್ವಾಂಚಲ ಪ್ರದೇಶದಲ್ಲಿ ಅವರು ಬ್ರಾಹ್ಮಣ ಸಮುದಾಯದ ಪ್ರಮುಖ ನಾಯಕ. ಪಾಂಡೆ ಅವರ ಮಗ 2014ರಲ್ಲಿ ಈ ಕ್ಷೇತ್ರದಲ್ಲಿ ಸ್ಪರ್ಧಿಸಿದ್ದರು.

ಪಾಂಡೆ ಅವರ ನಿರ್ಗಮನವು ಬಿಎಸ್‌ಪಿಗೆ ಭಾರಿ ಹಿನ್ನಡೆ ಎಂದು ಪರಿಗಣಿಸಲಾಗಿದೆ. ಏಕೆಂದರೆ, ಬ್ರಾಹ್ಮಣ ಸಮುದಾಯವನ್ನು ಓಲೈಸಲು ಬಿಎಸ್‌ಪಿ ಹರಸಾಹಸ ಪಡುತ್ತಿದೆ. ಎಸ್‌ಪಿ ಕೂಡ ಬ್ರಾಹ್ಮಣ ಸಮುದಾಯದ ಮತ ಪಡೆಯುವ ಮೂಲಕ ತನ್ನ ಬೆಂಬಲ ನೆಲೆ ವಿಸ್ತರಿಸಿಕೊಳ್ಳಲು ಯತ್ನಿಸುತ್ತಿದೆ. ಹಾಗಾಗಿ, ಬ್ರಾಹ್ಮಣ ಸಮುದಾಯದ ಹಲವು ಮುಖಂಡರ ಸೇರ್ಪಡೆಯು ಎಸ್‌ಪಿಗೆ ಅನುಕೂಲಕರವಾಗಿದೆ.

ಪೂರ್ವಾಂಚಲ ಪ್ರದೇಶದಲ್ಲಿ ಬ್ರಾಹ್ಮಣ ಸಮುದಾಯದ ಅತ್ಯಂತ ಪ್ರಮುಖ ನಾಯಕ, ಆರು ಬಾರಿ ಶಾಸಕರಾಗಿದ್ದ ಪಂಡಿತ್ ಹರಿಶಂಕರ್ ತಿವಾರಿ ಅವರು ಕೆಲ ದಿನಗಳ ಹಿಂದೆ ಬಿಎಸ್‌ಪಿ ತೊರೆದು ಎಸ್‌ಪಿ ಸೇರಿದ್ದರು. ಅವರ ಇಬ್ಬರು ಮಕ್ಕಳು ಕೂಡ ಎಸ್‌ಪಿಗೆ ಬಂದಿದ್ದಾರೆ. ಅವರಲ್ಲಿ ಒಬ್ಬರು ಶಾಸಕರಾಗಿದ್ದರೆ ಇನ್ನೊಬ್ಬರು ಮಾಜಿ ಸಂಸದ.

ಖಲೀಲಾಬಾದ್‌ನ ಬಿಜೆಪಿ ಶಾಸಕ ಮತ್ತು ಬ್ರಾಹ್ಮಣ ನಾಯಕ ದಿಗ್ವಿಜಯ್ ನಾರಾಯಣ್ ಚೌಬೆ ಅವರೂ ಇತರ ಹಲವು ಮುಖಂಡರ ಜತೆಗೆ ಎಸ್‌ಪಿಗೆ ಇತ್ತೀಚೆಗೆ ಸೇರಿದ್ದಾರೆ.

ಬ್ರಾಹ್ಮಣ ಸಮುದಾಯದ ಮುಖಂಡರು ಭಾರಿ ಸಂಖ್ಯೆಯಲ್ಲಿ ಎಸ್‌ಪಿ ಸೇರುತ್ತಿರುವುದು ಬಿಜೆಪಿಯಲ್ಲಿ ಕಳವಳಕ್ಕೆ ಕಾರಣವಾಗಿದೆ. ಬ್ರಾಹ್ಮಣ ಸಮುದಾಯದಲ್ಲಿರುವ ಅತೃಪ್ತಿಯ ಬೆಂಕಿ ನಂದಿಸಲು ಬಿಜೆಪಿ ಭಾರಿ ಪ್ರಯತ್ನ ನಡೆಸುತ್ತಿದೆ. ಪಕ್ಷ ಬಿಟ್ಟು ಹೋದವರನ್ನು ಮರಳಿ ಕರೆತರುವ ಯತ್ನವೂ ನಡೆದಿದೆ.

ರಾಜ್ಯಸಭಾ ಸದಸ್ಯ ಶಿವಪ್ರತಾಪ್ ಶುಕ್ಲಾ ಅವರ ನೇತೃತ್ವದಲ್ಲಿ 16 ಸದಸ್ಯರ ಸಮಿತಿಯನ್ನು ರಚಿಸಲಾಗಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಬ್ರಾಹ್ಮಣ ಸಮುದಾಯಕ್ಕಾಗಿ ಕೈಗೊಂಡ ಕ್ರಮಗಳನ್ನು ಸಮುದಾಯಕ್ಕೆ ವಿವರಿಸುವುದು ಈ ಸಮಿತಿಯ ಹೊಣೆಯಾಗಿದೆ.

ಬ್ರಾಹ್ಮಣ ಸಮುದಾಯದ ಮುಖಂಡ, ಲಖಿಂಪುರ ಖೇರಿಯ ಸಂಸದ ಅಜಯ್ ಮಿಶ್ರಾ ಅವರನ್ನು ಕೇಂದ್ರದಲ್ಲಿ ಸಚಿವರನ್ನಾಗಿ ಮಾಡಲಾಗಿದೆ. ಅಜಯ್ ಅವರ ಮಗ ಆಶಿಶ್ ಮಿಶ್ರಾ ಅವರು ರೈತರ ಮೇಲೆ ಎಸ್‌ಯುವಿ ಹರಿಸಿ ನಾಲ್ವರ ಹತ್ಯೆ ಪ್ರಕರಣದಲ್ಲಿ ಪ್ರಮುಖ ಆರೋಪಿ. ಅಜಯ್ ಅವರನ್ನು ಸಚಿವ ಸ್ಥಾನದಿಂದ ವಜಾ ಮಾಡಬೇಕು ಎಂದು ವಿರೋಧ ಪಕ್ಷಗಳು ಒತ್ತಾಯಿಸಿದ್ದರೂ ಸರ್ಕಾರ ಮಣಿದಿಲ್ಲ.

ಕಾಂಗ್ರೆಸ್ ಪಕ್ಷವು ಉತ್ತರ ಪ್ರದೇಶದ ಬರೇಲಿಯಲ್ಲಿ ಮಂಗಳವಾರ ಆಯೋಜಿಸಿದ್ದ ಮ್ಯಾರಥಾನ್‌ನಲ್ಲಿ ಭಾರಿ ಸಂಖ್ಯೆಯಲ್ಲಿ ಹೆಣ್ಣು ಮಕ್ಕಳು ಸೇರಿದ್ದರು. ಹೆಣ್ಣು ಮಕ್ಕಳು ಒಬ್ಬರ ಮೇಲೊಬ್ಬರು ಬಿದ್ದು ಕಾಲ್ತುಳಿತದಂತಹ ಸ್ಥಿತಿ ನಿರ್ಮಾಣ ಆಗಿತ್ತು

ಕಾಂಗ್ರೆಸ್ ಮ್ಯಾರಥಾನ್‌ನಲ್ಲಿ ಕಾಲ್ತುಳಿತದಂಥ ಸ್ಥಿತಿ

ಬರೇಲಿ (ಪಿಟಿಐ): ಕಾಂಗ್ರೆಸ್ ಪಕ್ಷವು ಆಯೋಜಿಸಿದ್ದ ಹೆಣ್ಣು ಮಕ್ಕಳ ಮ್ಯಾರಥಾನ್‌ನಲ್ಲಿ ಕಾಲ್ತುಳಿತದಂತಹ ಪರಿಸ್ಥಿತಿ ತಲೆದೋರಿದೆ. ಅದರಿಂದಾಗಿ ಮೂವರು ಹೆಣ್ಣು ಮಕ್ಕಳು ಗಾಯಗೊಂಡಿದ್ದಾರೆ. ಮ್ಯಾರಥಾನ್‌ನಲ್ಲಿ ಸೇರಿದ್ದ ಹೆಣ್ಣು ಮಕ್ಕಳ ಸಂಖ್ಯೆ ಅನುಮತಿ ನೀಡಿದ ಸಂಖ್ಯೆಗಿಂತ ಬಹಳ ಹೆಚ್ಚು ಇತ್ತು ಎಂದು ಅಧಿಕಾರಿಗಳು ಹೇಳಿದ್ದಾರೆ.

ಬಿಜೆಪಿಯ ಪಿತೂರಿಯಿಂದಾಗಿ ಇಂತಹ ಪರಿಸ್ಥಿತಿ ಉಂಟಾಯಿತು ಎಂದು ಕಾಂಗ್ರೆಸ್ ಹೇಳಿದೆ. ಕಾಂಗ್ರೆಸ್ ತನ್ನ ಕ್ಷುಲ್ಲಕ ರಾಜಕೀಯಕ್ಕಾಗಿ ಹೆಣ್ಣು ಮಕ್ಕಳನ್ನು ದಾಳವಾಗಿ ಬಳಸುತ್ತಿದೆ ಎಂದು ಬಿಜೆಪಿ ಆರೋಪಿಸಿದೆ.

‘200 ಹೆಣ್ಣು ಮಕ್ಕಳನ್ನು ಸೇರಿಸಲು ಅನುಮತಿ ನೀಡಲಾಗಿತ್ತು. ಆದರೆ, ಸೇರಿದ್ದ ಹೆಣ್ಣು ಮಕ್ಕಳ ಸಂಖ್ಯೆ ಬಹಳ ಹೆಚ್ಚು ಇತ್ತು’ ಎಂದು ಜಿಲ್ಲಾಧಿಕಾರಿ ರಾಜೀವ್ ಪಾಂಡೆ ಹೇಳಿದ್ದಾರೆ. ಘಟನೆಯ ಬಗ್ಗೆ ಸಮಗ್ರ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ಅವರು ತಿಳಿಸಿದ್ದಾರೆ.

ಉತ್ತರ ಪ್ರದೇಶದ ವಿವಿಧ ಭಾಗಗಳಲ್ಲಿ ಕಾಂಗ್ರೆಸ್ ಪಕ್ಷವು ಹೆಣ್ಣು ಮಕ್ಕಳಿಗಾಗಿ ಮ್ಯಾರಥಾನ್‌ಗಳನ್ನು ನಡೆಸುತ್ತಿದೆ. ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರು ಆರಂಭಿಸಿರುವ ‘ನಾನು ಹುಡುಗಿ, ನಾನು ಹೋರಾಡಬಲ್ಲೆ’ ಎಂಬ ಅಭಿಯಾನದ ಭಾಗವಾಗಿ ಇದು ನಡೆಯುತ್ತಿದೆ.

ಬರೇಲಿಯಲ್ಲಿ ಮಂಗಳವಾರ ನಡೆಸಲಾದ ಮ್ಯಾರಥಾನ್‌ನಲ್ಲಿ ಬೆಳಿಗ್ಗೆ 9 ಗಂಟೆಗೆ ಭಾರಿ ಸಂಖ್ಯೆಯಲ್ಲಿ ಹೆಣ್ಣು ಮಕ್ಕಳು ಸೇರಿದ್ದರು. ಓಡುವ ಭರದಲ್ಲಿ ಕೆಲವರು ಒಬ್ಬರ ಮೇಲೊಬ್ಬರು ಬಿದ್ದರು ಎಂಬುದನ್ನು ತೋರಿಸುವ ವಿಡಿಯೊಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ.

ಮಣಿಪುರ: ಆಯೋಗದ ಸಭೆ ಇಂದು

ನವದೆಹಲಿ (ಪಿಟಿಐ): ಮಣಿಪುರದಲ್ಲಿ ವಿಧಾನಸಭಾ ಚುನಾವಣೆ ನಡೆಸುವ ಕುರಿತಂತೆ ಚುನಾವಣಾ ಆಯೋಗವು ಉನ್ನತ ಅಧಿಕಾರಿಕಾರಿಗಳು ಹಾಗೂ ರಾಜಕೀಯ ಪಕ್ಷಗಳ ಜತೆ ಬುಧವಾರ ವರ್ಚ್ಯುವಲ್ ಸಭೆ ನಡೆಸಲಿದೆ.

ವಿಧಾನಸಭಾ ಚುನಾವಣೆಗಳು ನಡೆಯಬೇಕಿರುವ ಐದು ರಾಜ್ಯಗಳ ಪೈಕಿ ಮಣಿಪುರವೂ ಒಂದಾಗಿದೆ. ಉತ್ತರ ಪ್ರದೇಶ, ಪಂಜಾಬ್, ಗೋವಾ, ಉತ್ತರಾಖಂಡಗಳಲ್ಲಿ ಕೆಲವು ದಿನಗಳ ಹಿಂದೆ ಚುನಾವಣಾ ಆಯೋಗ ಸಭೆ ನಡೆಸಿತ್ತು.

ಇದೇ ತಿಂಗಳಲ್ಲಿ ಐದೂ ರಾಜ್ಯಗಳ ಚುನಾವಣಾ ದಿನಾಂಕವನ್ನು ಆಯೋಗ ಪ್ರಕಟಿಸುವ ನಿರೀಕ್ಷೆಯಿದೆ.

ಪಂಜಾಬ್ ಮುಖ್ಯಮಂತ್ರಿ ಚರಣ್‌ಜಿತ್ ಸಿಂಗ್ ಅವರು ಮೊರಿಂದಾ ಎಂಬಲ್ಲಿ ಮಂಗಳವಾರ ರ‍್ಯಾಲಿ ನಡೆಸಿದರು –ಪಿಟಿಐ ಚಿತ್ರ

ನುಡಿ-ಕಿಡಿ

ಶ್ರೀರಾಮ ಕಾಲ್ಪನಿಕ ವ್ಯಕ್ತಿ ಎಂದು ಹೇಳುವವರು ತಮ್ಮನ್ನು ಹಿಂದೂಗಳು ಎಂದು ಕರೆದುಕೊಳ್ಳಲು ಹೇಗೆ ಸಾಧ್ಯ? ಅಂಥವರು ಚುನಾವಣೆ ಬಂದಾಗ ಮಾತ್ರ ಹಿಂದೂಗಳಾಗುತ್ತಾರೆ

ಯೋಗಿ ಆದಿತ್ಯನಾಥ, ಉತ್ತರ ಪ್ರದೇಶ ಮುಖ್ಯಮಂತ್ರಿ

ಶಿರೋಮಣಿ ಅಕಾಲಿ ದಳವು ಅಧಿಕಾರಕ್ಕೆ ಬಂದರೆ, ಸಾರ್ವಜನಿಕ ನಿಧಿಯನ್ನು ದುರ್ಬಳಕೆ ಮಾಡಿಕೊಂಡದ್ದಕ್ಕೆ ಮತ್ತು ಜಾಹೀರಾತುಗಳಲ್ಲಿ ಸುಳ್ಳು ಮಾಹಿತಿ ನೀಡಿದ್ದಕ್ಕೆ ಪಂಜಾಬ್ ಮುಖ್ಯಮಂತ್ರಿ ಚರಣ್‌ಜಿತ್ ಸಿಂಗ್ ಚನ್ನಿ ಅವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಲಾಗುವುದು

ಸುಖಬೀರ್ ಸಿಂಗ್ ಬಾದಲ್, ಶಿರೋಮಣಿ ಅಕಾಲಿ ದಳ ಅಧ್ಯಕ್ಷ

‘ಗಾಂಧಿ ಕುಟುಂಬದವರು ಆಕಸ್ಮಿಕ ಹಿಂದೂಗಳು’

ಲಖನೌ: ನೆಹರೂ–ಗಾಂಧಿ ಕುಟುಂಬದವರು ‘ಆಕಸ್ಮಿಕ ಹಿಂದೂಗಳು’ ಎಂದು ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಹೇಳಿದ್ದಾರೆ. ಜನರ ಧರ್ಮಕ್ಕೆ ತಲೆಬಾಗುವಂತೆ ಅವರ ಮೇಲೆ ಒತ್ತಡ ಇದೆ. ಈ ಒತ್ತಡದಿಂದಾಗಿಯೇ ಅವರು ತಮ್ಮನ್ನು ಹಿಂದೂಗಳು ಎಂದು ಕರೆದುಕೊಳ್ಳುತ್ತಿದ್ದಾರೆ ಎಂದು ಯೋಗಿ ಹೇಳಿದ್ದಾರೆ. ಅಮೇಠಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಯೋಗಿ ಮಾತನಾಡಿದರು.

‘ಹಿಂದೂ ಎನ್ನಲು ಹೆಮ್ಮೆಯಾಗುತ್ತಿದೆ ಎಂದು ಮುಖ್ಯಮಂತ್ರಿಯಾಗುವ ಮುನ್ನವೂ ನಾನು ಹೇಳುತ್ತಿದ್ದೆ. ಅದನ್ನೇ ಇವತ್ತೂ ಹೇಳುತ್ತಿದ್ದೇನೆ’ ಎಂದರು. ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಅವರು ಪ್ರತಿಪಾದಿಸಿದ ಹಿಂದುತ್ವ ಚಿಂತನೆಯನ್ನು ಯೋಗಿ ಅಲ್ಲಗಳೆದಿದ್ದಾರೆ. ರಾಹುಲ್‌ಗೆ ಹಿಂದೂ ಧರ್ಮದ ಬಗ್ಗೆ ಏನೂ ತಿಳಿದಿಲ್ಲ, ಅವರಿಗೆ ಹಿಂದುತ್ವದ ಬಗ್ಗೆ ಮಾತನಾಡುವ ಹಕ್ಕಿಲ್ಲ ಎಂದು ಯೋಗಿ ಹೇಳಿದ್ದಾರೆ.

ಮೃದು ಹಿಂದುತ್ವದ ಮೊರೆ ಹೋಗಲು ಅಖಿಲೇಶ್ ನಿರ್ಧಾರ?

ಲಖನೌ: ‘ಎಸ್‌ಪಿ ಮುಸ್ಲಿಂ ಪರ’ ಎಂಬ ಬಿಜೆಪಿಯ ಆರೋಪಕ್ಕೆ ತಿರುಗೇಟು ನೀಡಲು ಎಸ್‌ಪಿ ಅಧ್ಯಕ್ಷ ಅಖಿಲೇಶ್ ಯಾದವ್ ಮುಂದಾಗಿದ್ದಾರೆ. ಅಖಿಲೇಶ್ ಅವರ ತಂದೆ ಮುಲಾಯಂ ಸಿಂಗ್ ಯಾದವ್ ಅವರು ಉತ್ತರ ಪ್ರದೇಶ ಮುಖ್ಯಮಂತ್ರಿಯಾಗಿದ್ದಾಗ ಅಯೋಧ್ಯೆಯಲ್ಲಿ ‘ಕರಸೇವಕ’ರ ಮೇಲೆ ಗೋಲಿಬಾರ್ ನಡೆಸಲಾಗಿದೆ ಎಂದು ಎಸ್‌ಪಿಯ ವಿರುದ್ಧ ಬಿಜೆಪಿ ಸದಾ ಹೇಳುತ್ತಿರುತ್ತದೆ. ಬಿಜೆಪಿಗೆ ತಿರುಗೇಟು ನೀಡುವುದಕ್ಕಾಗಿಯೆ ಅಖಿಲೇಶ್ ಅವರು ‘ಮೃದು ಹಿಂದುತ್ವ’ದ ಮೊರೆ ಹೋಗಲು ನಿರ್ಧರಿಸಿದ್ದಾರೆ ಎನ್ನಲಾಗಿದೆ.

ಪ್ರತಿ ರಾತ್ರಿಯೂ ಶ್ರೀಕೃಷ್ಣನು ಕನಸಿನಲ್ಲಿ ಬಂದು ‘ರಾಮ ರಾಜ್ಯ’ ಸ್ಥಾಪಿಸುವಂತೆ ಹೇಳುತ್ತಿದ್ದಾನೆ ಎಂದು ಅಖಿಲೇಶ್ ಅವರು ಕಾರ್ಯಕ್ರಮವೊಂದರಲ್ಲಿ ಹೇಳಿದ್ದಾರೆ. ಅಯೋಧ್ಯೆಯ ತಾತ್ಕಾಲಿಕ ರಾಮ ಮಂದಿರಕ್ಕೆ ಅಖಿಲೇಶ್ ಅವರು ಭೇಟಿ ನೀಡುವ ಸಾಧ್ಯತೆ ಇದೆ ಎಂದು ಎಸ್‌ಪಿಯ ಮುಖಂಡರೊಬ್ಬರು ಹೇಳಿದ್ದಾರೆ. ಈ ಮಂದಿರಕ್ಕೆ ಅಖಿಲೇಶ್ ಅವರು ಈವರೆಗೆ ಭೇಟಿ ನೀಡಿಲ್ಲ. ತಮ್ಮ ಪಕ್ಷವು ಅಧಿಕಾರದಲ್ಲಿ ಇದ್ದಿದ್ದರೆ ರಾಮ ಮಂದಿರ ನಿರ್ಮಾಣ ಯಾವಾಗಲೇ ಆಗುತ್ತಿತ್ತು ಎಂದು ಇತ್ತೀಚೆಗೆ ಅವರು ಹೇಳಿದ್ದಾರೆ.

ಕೇಂದ್ರ ಗೃಹ ಸಚಿವ ಅಮಿತ್ ಶಾ, ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಮತ್ತು ಬಿಜೆಪಿಯ ಇತರ ಮುಖಂಡರು ಅಯೋಧ್ಯೆ ವಿಚಾರವನ್ನು ಮುಂದಿಟ್ಟುಕೊಂಡು ಅಖಿಲೇಶ್ ಅವರನ್ನು ಟೀಕಿಸುತ್ತಿದ್ದಾರೆ. ಅಖಿಲೇಶ್ ಅವರು ಅಯೋಧ್ಯೆಗೆ ಭೇಟಿ ನೀಡಿದರೆ ಈ ಟೀಕೆಯ ಹರಿತವನ್ನು ಮೊಂಡಾಗಿಸಬಹುದು. ಇದರೊಂದಿಗೆ ‘ಮುಸ್ಲಿಂ ಪರ’ ಎಂಬ ಟೀಕೆಯಿಂದಲೂ ತಪ್ಪಿಸಿಕೊಳ್ಳಬಹುದು ಎಂಬುದು ಎಸ್‌ಪಿ ಮುಖಂಡರ ಅಭಿಪ್ರಾಯ. ಜತೆಗೆ, ಧರ್ಮದ ನೆಲೆಯಲ್ಲಿ ಜನರನ್ನು ಧ್ರುವೀಕರಿಸುವ ಬಿಜೆಪಿಯ ಪ್ರಯತ್ನವನ್ನು ನಿಷ್ಫಲಗೊಳಿಸಬಹುದು ಎಂಬ ಭಾವನೆಯೂ ಎಸ್‌ಪಿ ನಾಯಕರಲ್ಲಿ ಇದೆ.

ಬಹು ಮಾಧ್ಯಮ ಪ್ರಜಾವಾಣಿ LIVE
www.prajavani.net
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ
ಪಾಡ್‌ಕಾಸ್ಟ್:
ಪ್ರಚಲಿತ: ಬೆಳಿಗ್ಗೆ 9, **ಸಂಪಾದಕೀಯ:** ಬೆಳಿಗ್ಗೆ 9.30,
ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8
ನಾಳೆ
ಮೇಕೆದಾಟು ‘ರಾಜಕೀಯ’
ಭಾಗವಹಿಸುವವರು:
ಎಂ.ಸತೀಶ್ ರೆಡ್ಡಿ, ಬಿಜೆಪಿ ಶಾಸಕ
ರಿಜ್ವಾನ್ ಅರ್ಷದ್, ಕಾಂಗ್ರೆಸ್ ಶಾಸಕ
ಕೆ.ಟಿ.ಶ್ರೀಕಂಠೇಗೌಡ, ಜೆಡಿಎಸ್ ಶಾಸಕ
ನಂದಿನಿ ಜಯರಾಂ, ರೈತ ನಾಯಕಿ, ಮಂಡ್ಯ
ಸಂವಾದ
ಮಧ್ಯಾಹ್ನ 12 ರಿಂದ 1 ಗಂಟೆಯ ವರೆಗೆ

‘ಹಿಂದಿನ ಸರ್ಕಾರಗಳಿಂದ ಈಶಾನ್ಯ ಭಾರತ ನಿರ್ಲಕ್ಷ್ಯ’



ಇಂಫಾಲ್: ಕೇಂದ್ರದಲ್ಲಿ ಈ ಹಿಂದೆ ಆಡಳಿತ ನಡೆಸಿದ ಸರ್ಕಾರಗಳು ಈಶಾನ್ಯ ಭಾರತವನ್ನು ನಿರ್ಲಕ್ಷಿಸಿದ್ದವು. ಈ ಭಾಗದ ಅಭಿವೃದ್ಧಿ ವಿಷಯದಲ್ಲಿ ತಾರತಮ್ಯ ನೀತಿ ಅನುಸರಿಸಿದವು ಎಂದು ಪ್ರಧಾನಿ ನರೇಂದ್ರ ಮೋದಿ ಮಂಗಳವಾರ ಹೇಳಿದರು.

ಮಣಿಪುರದಲ್ಲಿ ₹ 4,815 ಕೋಟಿ ವೆಚ್ಚದ 22 ಯೋಜನೆಗಳಿಗೆ ಶಿಲಾನ್ಯಾಸ ನೆರವೇರಿಸಿ, ಕೆಲವು ಯೋಜನೆಗಳನ್ನು ಲೋಕಾರ್ಪಣೆಗೊಳಿಸಿದ ನಂತರ ನಡೆದ ಬಹಿರಂಗ ಸಭೆಯಲ್ಲಿ ಅವರು ಮಾತನಾಡಿದರು.

ಮಣಿಪುರ ವಿಧಾನಸಭೆಗೆ ಕೆಲವೇ ತಿಂಗಳಲ್ಲಿ ಚುನಾವಣೆ ನಡೆಯಲಿದ್ದು, ಅವರು ಪಕ್ಷದ ಚುನಾವಣಾ ಪ್ರಚಾರ ಕಾರ್ಯಕ್ಕೆ ಈ ಕಾರ್ಯಕ್ರಮಗಳ ಮೂಲಕ ಚಾಲನೆ ನೀಡಿದ್ದಾರೆ.

‘ಕೇಂದ್ರದಲ್ಲಿ ಹಾಗೂ ಈಶಾನ್ಯ ರಾಜ್ಯಗಳಲ್ಲಿ ಅಸ್ತಿತ್ವಕ್ಕೆ ಬಂದ ಬಿಜೆಪಿ ನೇತೃತ್ವದ ಸರ್ಕಾರಗಳು ಈ ಭಾಗದಲ್ಲಿ ಅಭಿವೃದ್ಧಿಗೆ ಚಾಲನೆ ನೀಡಿದವಲ್ಲದೇ, ಇಲ್ಲಿ ಶಾಂತಿ ನೆಲೆಸಲು ಶ್ರಮಿಸುತ್ತಿವೆ’ ಎಂದು ಮೋದಿ ಹೇಳಿದರು.

‘ಈಶಾನ್ಯ ರಾಜ್ಯಗಳು ದೇಶದ ಪ್ರಗತಿಗೆ ಚಾಲನಾಶಕ್ತಿಯಾಗಲಿವೆ. ಈ ಹಿಂದಿನ ಸರ್ಕಾರಗಳು ಮಣಿಪುರ ಸೇರಿದಂತೆ ಇಡೀ ಈಶಾನ್ಯ ಪ್ರದೇಶವನ್ನೇ ನಿರ್ಲಕ್ಷಿಸಿದವು. ಬೆಟ್ಟಗಳಿಂದ ಕೂಡಿದ ಪ್ರದೇಶ, ಕಣಿವೆ ನಡುವೆ ಭೇದ ಸೃಷ್ಟಿಸಲು ಪಿತೂರಿ ನಡೆಸಿದವು. ಈಗ ಇಲ್ಲಿ ಉಗ್ರವಾದ, ಹಿಂಸಾಚಾರ ಕೊನೆಗೊಂಡಿದೆ. ಶಾಂತಿ-ಅಭಿವೃದ್ಧಿಗೆ ನಾವು ಕ್ರಮ ಕೈಗೊಂಡಿದ್ದೇವೆ’ ಎಂದರು.

ಜಾರ್ಖಂಡ್: ಇಬ್ಬರು ಪೊಲೀಸರ ಗಂಟಲು ಸೀಳಿದ ನಕ್ಸಲರು

ಚೈಬಾಸಾ, ಜಾರ್ಖಂಡ್ (ಪಿಟಿಐ): ಪಶ್ಚಿಮ ಸಿಂಗ್‌ಭೂಮ್ ಜಿಲ್ಲೆಯಲ್ಲಿ ಮಂಗಳವಾರ ನಕ್ಸಲರು ದಾಳಿ ನಡೆಸಿದ್ದು, ಬಿಜೆಪಿಯ ಮಾಜಿ ಶಾಸಕ ಗುರುಚರಣ್ ನಾಯಕ್ ಪಾರಾಗಿದ್ದಾರೆ.

ಆದರೆ, ಶಾಸಕರ ಅಂಗರಕ್ಷಕರಾಗಿ ಕಾರ್ಯ ನಿರ್ವಹಿಸುತ್ತಿದ್ದ ಇಬ್ಬರು ಕಾನ್‌ಸ್ಟೆಬಲ್‌ಗಳ ಗಂಟಲು ಸೀಳಿರುವ ನಕ್ಸಲರು, ಮೂರು ಎಕೆ–47 ರೈಫಲ್‌ಗಳನ್ನು ದೋಚಿ ಪರಾರಿಯಾಗಿದ್ದಾರೆ ಎಂದು ಹಿರಿಯ ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

‘ನಿಷೇಧಿತ ಸಂಘಟನೆ ಸಿಪಿಐ(ಮಾವೊವಾದಿ) ಸೇರಿದ ಸದಸ್ಯರು ಈ ದಾಳಿ ನಡೆಸಿದ್ದಾರೆ. ಗೋಯಿಕೇರಾ ಪೊಲೀಸ್ ಠಾಣೆ ವ್ಯಾಪ್ತಿಯ ಝಿಲ್‌ರುವಾ ಗ್ರಾಮದಲ್ಲಿ ಫುಟ್ಬಾಲ್ ಪಂದ್ಯ ನಡೆಯುತ್ತಿತ್ತು. ಮಾಜಿ ಶಾಸಕ ನಾಯಕ ಮುಖ್ಯಅತಿಥಿಯಾಗಿ ಪಾಲ್ಗೊಂಡಿದ್ದರು. ಪಂದ್ಯ ಮುಗಿದ ನಂತರ, ವೀಕ್ಷಕರ ನಡುವೆ ಕುಳಿತಿದ್ದ ನಕ್ಸಲರು ಏಕಾಏಕಿ ದಾಳಿ ನಡೆಸಿದ್ದಾರೆ’ ಎಂದು ಚಕ್ರಧರಪುರದ ಪೊಲೀಸ್ ಅಧಿಕಾರಿ ದಿಲೀಪ್ ಖಾಲ್ಖೊ ತಿಳಿಸಿದ್ದಾರೆ.

‘ವಿದ್ಯಾವಂತರಿಂದಲೇ ಹೆಚ್ಚಿದ ಜಾತೀಯತೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಶಿಕ್ಷಣ ವೈಚಾರಿಕತೆಯಿಂದ ಕೂಡಿರಬೇಕು. ಸ್ನಾತಕೋತ್ತರ ಪದವಿಗಳನ್ನು ಪೂರೈಸಿ ಜಾತೀಯತೆ ಮಾಡುವುದು ನಿಜವಾದ ಶಿಕ್ಷಣ ಅಲ್ಲ. ಇಂದು ವಿದ್ಯಾವಂತರಿಂದಲೇ ಜಾತೀಯತೆ ಹೆಚ್ಚಾಗಿ ಬೆಳೆಯುತ್ತಿದೆ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಬೇಸರ ವ್ಯಕ್ತಪಡಿಸಿದರು.

ರಾಜ್ಯ ಸವಿತಾ ಸಮಾಜವು ಗಾಂಧಿಭವನದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಎಂ.ಎಸ್.ಮುತ್ತುರಾಜ್ ಅವರ ‘ನಾನು ಸ್ವಾಭಿಮಾನಿ ಕ್ಷೌರಿಕ’ ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಸ್ವಾತಂತ್ರ್ಯ ಬಂದಾಗ ಸಾಕ್ಷರತೆ ಪ್ರಮಾಣ ಶೇ 18ರಷ್ಟಿತ್ತು. ಈಗ ಶೇ 78ಕ್ಕೆ ಏರಿದೆ. ಆದರೂ ನಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿ ಆಮೂಲಾಗ್ರ ಬದಲಾವಣೆಗಳು ಆಗಿಲ್ಲ. ವಿದ್ಯೆ ಕಲಿತವರು ಜಾತಿಗಳ ಪರ ನಿಂತರೆ, ಅವರು ಪಡೆದ ಶಿಕ್ಷಣಕ್ಕೆ ಅರ್ಥವೇನು’ ಎಂದು ಪ್ರಶ್ನಿಸಿದರು.

ಜಾತಿ ಪರಿಶೀಲಿಸಿ ಬಾಡಿಗೆಗೆ ಮನೆ: ‘ನಗರ ಪ್ರದೇಶಗಳಲ್ಲಿ ಅಸ್ಪೃಶ್ಯತೆ ಮಾನಸಿಕ ರೂಪದಲ್ಲಿದ್ದು, ಮನೆ ಬಾಡಿಗೆ ಕೊಡುವ ಮುನ್ನ ಜಾತಿ ಪರಿಶೀಲನೆ ಮಾಡುತ್ತಾರೆ. ತಬ್ಬಲಿ ಜಾತಿಯವರು ತಮ್ಮ ಜಾತಿಯ ಹೆಸರು ಮುಚ್ಚಿಟ್ಟು, ಮನೆಗಳನ್ನು ಬಾಡಿಗೆಗೆ ಪಡೆಯುವ ಪರಿಸ್ಥಿತಿ ಇನ್ನೂ ಇದೆ’ ಎಂದು ನಿರ್ದೇಶಕ ನಾಗತಿಹಳ್ಳಿ ಚಂದ್ರಶೇಖರ್ ಬೇಸರ ವ್ಯಕ್ತಪಡಿಸಿದರು.

‘ಕ್ಷೌರಿಕನ ಮುಂದೆ ತಲೆ ತಗ್ಗಿಸದೆ ವಿಧಿಯಿಲ್ಲ. ಹಳ್ಳಿಗಳಲ್ಲಿ ಕ್ಷೌರಿಕರು ದಲಿತರಿಗೆ ಕ್ಷೌರ ಮಾಡಿದರೆ, ಮೇಲ್ವರ್ಗದವರು ಮುನಿಸಿಕೊಳ್ಳುತ್ತಾರೆ. ಶೂದ್ರರಲ್ಲೇ ಇರುವಂತಹ ಅಸ್ಪೃಶ್ಯ ಭಾವನೆ ತುಂಬಾ ಅಪಾಯಕಾರಿ. ಒಬ್ಬ ವ್ಯಕ್ತಿ ತನ್ನ ಜಾತಿಯ ಬಗ್ಗೆ ನಿರ್ಭಯದಿಂದ ಹೇಳಬೇಕು. ಜಾತಿಯ ಬಗ್ಗೆ ಹಿಂಜರಿಕೆ ಏಕೆ? ಅದೊಂದು ಕಠೋರ ವಾಸ್ತವವಾಗಿದ್ದು, ಅದನ್ನು ಮುಚ್ಚಿಟ್ಟು ಏನು ಮಾಡಬೇಕು. ಆ ಕಾರಣದಿಂದಲೇ ಈ ಪುಸ್ತಕಕ್ಕೆ ‘ನಾನು ಸ್ವಾಭಿಮಾನಿ ಕ್ಷೌರಿಕ’ ಎಂಬ ಹೆಸರು ಸೂಚಿಸಿದೆ’ ಎಂದರು.

‘ಹಳ್ಳಿಗಳಲ್ಲಿ ಅಸ್ಪೃಶ್ಯತೆ ಯಾವ ರೀತಿ ಇದೆ, ಭೂಮಾಲೀಕರು, ಜಮೀನ್ದಾರರು ಹಾಗೂ ಸಿರಿವಂತ ಸವರ್ಣೀಯರು ಅಸ್ಪೃಶ್ಯತೆಯನ್ನು ಯಾವ ರೀತಿ ಆಚರಿಸುತ್ತಾರೆ. ಅದು, ತಲೆಮಾರಿನಿಂದ ತಲೆಮಾರಿಗೆ ಹೇಗೆ ಸಾಗಿ ಬಂದಿದೆ. ಮೊದಲ ತಲೆಮಾರಿನಲ್ಲಿದ್ದ ಅಸ್ಪೃಶ್ಯತೆಯ ವಿಧೇಯತೆ, ಎರಡನೇ ತಲೆಮಾರಿನಲ್ಲಿ ಪ್ರತಿಭಟನೆಯಾಗಿ ರೂಪುಗೊಂಡ ಬಗೆಯನ್ನು ಮುತ್ತುರಾಜ್ ಈ ಪುಸ್ತಕದಲ್ಲಿ ಚಿತ್ರಿಸಿದ್ದಾರೆ’ ಎಂದು ಹೇಳಿದರು.

ಕಾಂಗ್ರೆಸ್ ಮುಖಂಡ ಎಚ್.ಎಂ.ರೇವಣ್ಣ, ‘ಈಗ ಕ್ಷೌರ ಮತ್ತು ಕೇಶಾಲಂಕಾರದ ವಿನ್ಯಾಸಗಳು ಬದಲಾಗಿವೆ. ಆಧುನಿಕತೆಗೆ ಒಳಗಾಗಿ ಕ್ಷೌರಿಕ ವೃತ್ತಿಯೂ ಅವನತಿಯತ್ತ ಸಾಗುತ್ತಿದೆ ಎನ್ನುವುದು ನನ್ನ ಅನಿಸಿಕೆ’ ಎಂದರು.

‘ಪ್ರಜಾವಾಣಿ’ಯ ಕಾರ್ಯ ನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ ಉಪಸ್ಥಿತರಿದ್ದರು.



ಕಾರ್ಯಕ್ರಮದಲ್ಲಿ (ಎಡದಿಂದ ಎರಡನೆಯವರು) ಚಲನಚಿತ್ರ ನಿರ್ದೇಶಕ ನಾಗತಿಹಳ್ಳಿ ಚಂದ್ರಶೇಖರ್ ‘ನಾನು ಸ್ವಾಭಿಮಾನಿ ಕ್ಷೌರಿಕ’ ಪುಸ್ತಕ ಬಿಡುಗಡೆ ಮಾಡಿದರು. (ಎಡದಿಂದ) ಪುಸ್ತಕದ ಲೇಖಕ ಎಂ.ಎಸ್.ಮುತ್ತುರಾಜ್, ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಕಾಂಗ್ರೆಸ್ ಮುಖಂಡ ಎಚ್.ಎಂ.ರೇವಣ್ಣ ಮತ್ತು ರಾಜ್ಯ ಸವಿತಾ ಸಮಾಜ ಅಧ್ಯಕ್ಷ ಎನ್.ಸಂಪತ್ ಕುಮಾರ್ ಇದ್ದಾರೆ ಪ್ರಜಾವಾಣಿ ಚಿತ್ರ

ಪುಸ್ತಕ ಪರಿಚಯ

ಪುಸ್ತಕ: ‘ನಾನು ಸ್ವಾಭಿಮಾನಿ ಕ್ಷೌರಿಕ’
ಲೇಖಕ: ಎಂ.ಎಸ್.ಮುತ್ತುರಾಜ್
ಪ್ರಕಾಶನ: ಲಕ್ಷ್ಮೀ ಮುದ್ರಣಾಲಯ
ಪುಟ: 208
ಬೆಲೆ: ₹200

‘ಕ್ಷೌರಿಕನ ಮುಖ ನೋಡಿಯೇ ಇಲ್ಲಿವರೆಗೆ ಬಂದೆ’

‘ನನ್ನ ಅಜ್ಜಿ ಮನೆ ಪಕ್ಕದಲ್ಲೇ ಕ್ಷೌರಿಕರ ಮನೆ ಇತ್ತು. ಅಲ್ಲಿ ನಾರಾಯಣ ಎಂಬ ಹುಡುಗ ಇದ್ದ. ನನ್ನ ಪುಸ್ತಕಗಳನ್ನು ಅವನಿಗೆ ನೀಡುತ್ತಿದ್ದೆ. ‘ಎದ್ದ ತಕ್ಷಣ ಅವನ ಮುಖ ನೋಡಬೇಡ’ ಎಂದು ಅಜ್ಜಿ ನನಗೆ ಹೇಳುತ್ತಿದ್ದರು. ಆದರೆ, ನಾವಿಬ್ಬರೂ ಆಪ್ತ ಸ್ನೇಹಿತರಾದೆವು. ಅವನನ್ನು ಬಿಟ್ಟು ನಾನು ಇರುತ್ತಿರಲಿಲ್ಲ. ರಜೆ ದಿನಗಳಲ್ಲಿ ಊರಿಗೆ ಹೋದಾಗ ನಾರಾಯಣನ ಜೊತೆಗೇ ಇರುತ್ತಿದ್ದೆ. ಅವನನ್ನು ನೋಡಿ, ಜೊತೆಯಲ್ಲೇ ಇದ್ದುದರಿಂದ ಇಂದು ಈ ಸ್ಥಿತಿಗೆ ಬರಲು ಸಾಧ್ಯವಾಯಿತು. ಮನುಷ್ಯರನ್ನು ಮನುಷ್ಯರಿಂದ ದೂರ ಮಾಡುವ ಇಂತಹ ಹುನ್ನಾರಗಳನ್ನು ಖಂಡಿಸಬೇಕು’ ಎಂದು ಸಿದ್ದರಾಮಯ್ಯ ಹೇಳಿದರು.

ಮರಗಳ ಕಡಿದ ಶಂಕೆ: ವ್ಯಕ್ತಿ ಹತ್ಯೆ

ಸಿಮ್‌ಡೇಗಾ, ಜಾರ್ಖಂಡ್: ಕಟ್ಟಿಗೆ ಕಳ್ಳತನಕ್ಕಾಗಿ ಮರಗಳನ್ನು ಕಡಿದ ಶಂಕೆ ಮೇಲೆ ವ್ಯಕ್ತಿಯನ್ನು ಉದ್ರಿಕ್ತರ ಗುಂಪೊಂದು ಹತ್ಯೆ ಮಾಡಿ, ಬೆಂಕಿ ಹಚ್ಚಿದೆ ಎಂದು ಆರೋಪಿಸಲಾಗಿದೆ.

ಜಾರ್ಖಂಡ್‌ನ ಸಿಮ್‌ಡೇಗಾ ಜಿಲ್ಲೆಯ ಕೊಲೆಬಿರಾ ಪೊಲೀಸ್ ಠಾಣೆ ವ್ಯಾಪ್ತಿಯ ಬೆಸ್ರಜಾರ ಬಜಾರ್ ಪ್ರದೇಶದಲ್ಲಿ ಈ ಘಟನೆ ನಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಹತ್ಯೆಗೀಡಾದ ವ್ಯಕ್ತಿಯನ್ನು ಸಂಜು ಪ್ರಧಾನ್ ಎಂದು ಗುರುತಿಸಲಾಗಿದೆ. ಸುಟ್ಟು ಕರಕಲಾಗಿದ್ದ ಸಂಜು ದೇಹವನ್ನು ಘಟನಾ ಸ್ಥಳದಲ್ಲಿ ವಶಪಡಿಸಿಕೊಳ್ಳಲಾಗಿದೆ ಎಂದು ಪೊಲೀಸ್ ಅಧಿಕಾರಿ ರಾಮೇಶ್ವರ್ ಭಗತ್ ಅವರು ತಿಳಿಸಿದ್ದಾರೆ.

15 ದಿನಗಳ ಹಿಂದೆಯಷ್ಟೇ, ಜಾರ್ಖಂಡ್ ವಿಧಾನಸಭೆಯಲ್ಲಿ ‘ಗುಂಪು ಹಿಂಸಾಚಾರ ಮತ್ತು ಗುಂಪು ಹತ್ಯೆ ತಡೆ ಮಸೂದೆ-2021’ ಅಂಗೀಕರಿಸಲಾಗಿದೆ.

ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರ, ಕಾಗಿನೆಲೆ, ಬ್ಯಾಡಗಿ ತಾಲೂಕ, ಹಾವೇರಿ ಜಿಲ್ಲೆ
ಸಂ:ಆಯುಕ್ತರು/ಕಾಅಪ್ರಾ/ಅಲ್ಪಾವಧಿಮರು–ಟೆಂಡರ್/2021–22/ ದಿನಾಂಕ:03–01–2022
ಅಲ್ಪಾವಧಿ ಮರು–ಟೆಂಡರ್ ಪ್ರಕಟಣೆ (3ನೇ ಕರೆ)(E-GOK ಇ–ಪ್ರಕ್ಯೂರಮೆಂಟ್ ಮುಖಾಂತರ ಮಾತ್ರ)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದ್ಯಾದೇಶ 1999–2000ರ ಪ್ರಕಾರ ಆಕ್ಟ್ 2000ರ ನಿಯಮದಂತೆ ಸ್ಟ್ಯಾಂಡರ್ಡ ಟೆಂಡರ್ ಡಾಕ್ಯೂಮೆಂಟ್‌ನ ಸೂಕ್ತ ಕೆ/ಡಬ್ಲೂ ನಿಯಮದನ್ವಯ ಇ–ಪ್ರಕ್ಯೂರಮೇಂಟ್ ಪೋರ್ಟಲ್ ಮುಖಾಂತರ ಅಲ್ಪಾವದಿ ಮರು–ಟೆಂಡರ್ (ಮೂರನೇ ಕರೆ) ಯನ್ನು ಈ ಕೆಳಗಡೆ ಸಹಿ ಮಾಡಿರುವವರು ಆಹ್ವಾನಿಸಿರುತ್ತಾರೆ. ಲೋಕೋಪಯೋಗಿ ಇಲಾಖೆಯಲ್ಲಿ ಸೂಕ್ತ ದರ್ಜೆಯಲ್ಲಿ ನೊಂದಾಯಿಸಿರುವ ಅರ್ಹ ಸಿವಿಲ್ ಗುತ್ತಿಗೆದಾರರು ಇ–ಪ್ರಕ್ಯೂರಮೆಂಟ್ ಪೋರ್ಟಲ್ http://eproc.karnataka.gov.in ಮುಖಾಂತರ ಕರೆದಿರುವ ಈ ಕೆಳಕಂಡ ಕಾಮಗಾರಿಗಳಿಗೆ ಅಲ್ಪಾವಧಿ ಮರು–ಟೆಂಡರ್ (ಮೂರನೇಕರೆ) ನಲ್ಲಿ ಭಾಗವಹಿಸುವುದು.
(1) ಖಾಲಿ ಟೆಂಡರ್ ಫಾರಂಗಳಿಗಾಗಿ ಅರ್ಜಿಸಲ್ಲಿಸಲು ಹಾಗೂ ಭರ್ತಿಮಾಡಿದ ಟೆಂಡರ್‌ಗಳನ್ನು ಸಲ್ಲಿಸಲುಕೊನೆಯ ದಿನಾಂಕ : **12–01–2022** ರ 16.30 ಗಂಟೆವರೆಗೆ. (2) ತಾಂತ್ರಿಕ ಬಿಡ್‌ತೆರೆಯುವ ದಿನಾಂಕ : **13–01–2022**ರ ಬೆಳಿಗ್ಗೆ 11.30 ಗಂಟೆಗೆ. (3) ಅರ್ಹಗುತ್ತಿಗೆದಾರರಆರ್ಥಿಕ ಬಿಡ್‌ತೆರೆಯುವ ದಿನಾಂಕ : **17–01–2022**ರ ಬೆಳಿಗ್ಗೆ 11.30 ಗಂಟೆಗೆ.

ಅ. ನಂ.	ಕಾಮಗಾರಿ ಹೆಸರು	ಟೆಂಡರಿಗಿಟ್ಟ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಖಾಲಿ ಟೆಂಡರ್ ಫಾರಂ ಬೆಲೆ	ಟೆಂಡರ್‌ದಾರರ ವರ್ಗ	ಕಾಮಗಾರಿ ಪೂರ್ಣಗೊಳಿಸಲು ನಿಗದಿ ಪಡಿಸಿದ ಕಾಲಮಿತಿ (ಮಳೆಗಾಲ ಅವಧಿ ಸಹಿತ)
1	ಕಾಗಿನೆಲೆ ಗ್ರಾಮದಲ್ಲಿ ಸುತ್ತ ಮುತ್ತಲಿನ ಅಭಿವೃದ್ಧಿ ಕಾಮಗಾರಿಗಳು RD/2021-22/OW/WORK_INDENT176/CALL-3	207.59	ಇ–ಪ್ರೋಕ್ಯೂರ–ಮೆಂಟ್‌ನಲ್ಲಿ ನಮೂದಿಸಿದ ಹಾಗೆ	ಪ್ರಥಮ ದರ್ಜೆ	12 ತಿಂಗಳು

ಮರು–ಟೆಂಡರನಲ್ಲಿಯ ನಿಬಂಧನೆಗಳನ್ನು ಹಾಗೂ ಷರತ್ತುಗಳ ವಿವರಗಳನ್ನು ಇ–GOKE–ಪ್ರಕ್ಯೂರಮೆಂಟ್ ಪ್ಲಾಟಫಾರಂನಲ್ಲಿ www.eproc.karnataka.gov.in ರಲ್ಲಿ ಪಡೆಯಬಹುದು ಹಾಗೂ ಆಯುಕ್ತರಕಚೇರಿಯಲ್ಲಿ ಹೆಚ್ಚಿನ ಮಾಹಿತಿಯನ್ನು ಪಡೆಯಬಹುದು. (ದೂರವಾಣಿ: 08375–289388).
ಸಹಿ/– ಆಯುಕ್ತರು, ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರ, ಕಾಗಿನೆಲೆ, ತಾ: ಬ್ಯಾಡಗಿ, ಜಿ. ಹಾವೇರಿ
ವಾಸಾಸಂಇ/ಹಾವೇರಿ/ಎಂಸಿಎ/353/2021–22


ಕರ್ನಾಟಕ ಸರ್ಕಾರ
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ
ಶ್ರೀ ನರೇಂದ್ರ ಮೋದಿ
ಸನ್ಮಾನ್ಯ ಪ್ರಧಾನಮಂತ್ರಿಗಳು
ಭಾರತ ಸರ್ಕಾರ
ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಘನತೆವೆತ್ತ ರಾಜ್ಯಪಾಲರಾದ ಶ್ರೀ ಥಾವರ್‌ಚಂದ್ ಗೆಹ್ಲೋಟ್, ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಎಸ್. ಬೊಮ್ಮಾಯಿ ಹಾಗೂ ರೇಷ್ಮೆ, ಯುವಸಬಲೀಕರಣ ಮತ್ತು ಕ್ರೀಡಾ ಸಚಿವರಾದ ಡಾ. ಕೆ.ಸಿ. ನಾರಾಯಣಗೌಡರವರ ಸಮ್ಮುಖದಲ್ಲಿ ಟೋಕಿಯೋ ಒಲಿಂಪಿಕ್ಸ್ ನಲ್ಲಿ ಭಾಗವಹಿಸಿದ ರಾಜ್ಯದ ಕ್ರೀಡಾಪಟುಗಳಿಗೆ ಮತ್ತು ಮಹಿಳಾ ಹಾಕಿ ಸಹಾಯಕ ತರಬೇತುದಾರರಾದ ಶ್ರೀಮತಿ ಬಿ.ಎಸ್. ಅಕಿಂತಾರವರಿಗೆ ತಲಾ ರೂ1 ಲಕ್ಷ ನಗದು ನೀಡುವುದರೊಂದಿಗೆ ಸನ್ಮಾನಿಸಿದ ಸಂದರ್ಭ.
ಆಸಕ್ತಿ ಪ್ರಕಟಣೆ
(Expression of Interest)
ವಿವಿಧ ಕ್ರೀಡೆಗಳಲ್ಲಿ ಪ್ರತಿಭೆ ಹೊಂದಿರುವ 5 ರಿಂದ ಪದವಿಯ ವರೆಗಿನ ರಾಜ್ಯದ ಕ್ರೀಡಾಪಟುಗಳನ್ನು ಇಲಾಖೆಯ ಅಧೀನದ ಕ್ರೀಡಾ ಶಾಲೆ / ವಸತಿ ನಿಲಯಕ್ಕೆ ಆಯ್ಕೆ ಮಾಡಿ ವೈಜ್ಞಾನಿಕ ರೀತಿಯಲ್ಲಿ ತರಬೇತಿ ನೀಡಲಾಗುತ್ತಿದೆ.
ಸದರಿ ಕ್ರೀಡಾಪಟುಗಳಿಗೆ ಉನ್ನತ ಮಟ್ಟದ ತರಬೇತಿ ನೀಡಲು
ಒಲಿಂಪಿಕ್ಸ್, ಪ್ಯಾರಾಲಿಂಪಿಕ್, ಏಷ್ಯನ್ ಗೇಮ್ಸ್, ಕಾಮನ್ ವೆಲ್ತ್, ವಿಶ್ವಚಾಂಪಿಯನ್ ಶಿಪ್ ಗಳಲ್ಲಿ ವಿಜೇತರಾದ ಹಾಗೂ ಭಾಗವಹಿಸಿದ ಮತ್ತು ಏಷ್ಯನ್ ಚಾಂಪಿಯನ್ ಶಿಪ್ ಗಳಲ್ಲಿ ಪದಕ ವಿಜೇತರಾದ ಮತ್ತು ರಾಜ್ಯ/ಕೇಂದ್ರ ಸರ್ಕಾರದ ಇಲಾಖೆಗಳಲ್ಲಿ ಹಾಗೂ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಮಾಜಿ ಕ್ರೀಡಾಪಟುಗಳ ಸೇವೆಯನ್ನು ಪಡೆಯುವ ಸಂಬಂಧ 'ಆಸಕ್ತಿ ಪ್ರಕಟಣೆ/ Expression Of Interest' ಅರ್ಜಿಗಳನ್ನು ಆಹ್ವಾನಿಸಲಾಗಿದೆ.
ಅರ್ಜಿಗಳನ್ನು www.karnataka.gov.in/dyes ನಲ್ಲಿ ಪಡೆಯಬಹುದು
ಅರ್ಜಿಗಳನ್ನು ಆಯುಕ್ತರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು ಇವರಿಗೆ ಸಲ್ಲಿಸಬೇಕು.
ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 30.01.2022 ಸಂಜೆ 4.00 ಗಂಟೆಯವರೆಗೆ
: ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ :
ಜಿಲ್ಲೆಯ ಉಪ/ಸಹಾಯಕ ನಿರ್ದೇಶಕರ ಕಛೇರಿ
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ
ಆಯುಕ್ತರ ಕಛೇರಿ
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ
ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು - 01
ಡಾ|| ಹೆಚ್ ಎನ್ ಗೋಪಾಲಕೃಷ್ಣ ಭಾ.ಆ.ಸೇ.,
ಆಯುಕ್ತರು
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ
ಸಾರ್ವಜನಿಕ ಆಸ್ತಿ ಪಾಸ್ತಿ ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು – ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ
ಡಾ|| ಶಾಲಿನಿ ರಜನೀಶ್ ಭಾ.ಆ.ಸೇ
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು
ಯುವ ಸಬಲೀಕರಣ ಮತ್ತು ಕ್ರೀಡೆ ಮತ್ತು ಯೋಜನಾ ಇಲಾಖೆ

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,625
ಇಂದಿನ ಅಂತ್ಯ	17,805
▲	180
ದಿನದ ಗರಿಷ್ಠ	17,827

ವಿನಿಮಯ ದರ

$ ಡಾಲರ್	74.58
£ ಪೌಂಡ್	100.40
€ ಯುರೊ	84.23
¥ ಯೆನ್ (100ಕ್ಕೆ)	64

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹515
12 ಮೊಟ್ಟೆಗೆ	₹68
ಮೈಸೂರು	
100 ಮೊಟ್ಟೆಗೆ	₹515

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1310 (1310)
ಸೋಯಾ (ರಿಫೈನ್ಡ್)	₹1195 (1193)
ಸೂರ್ಯಕಾಂತಿ (ರಿಫೈನ್ಡ್)	₹1240 (1250)
ಪಾಮೋಲಿನ್	₹1157 (1150)

ಮಲಬಾರ್: ಜನವರಿಯಲ್ಲಿ 22 ಮಳಿಗೆ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಲಬಾರ್ ಗೋಲ್ಡ್ ಆ್ಯಂಡ್ ಡೈಮಂಡ್ಸ್ ಹೊಸ ವರ್ಷದಲ್ಲಿ ದೇಶ ಮತ್ತು ಜಾಗತಿಕ ಮಟ್ಟದಲ್ಲಿ ತನ್ನ ವಹಿವಾಟು ವಿಸ್ತರಣೆಯನ್ನು ಘೋಷಿಸಿದೆ. 'ಜನವರಿ ತಿಂಗಳಿನಲ್ಲಿಯೇ ವಿಶ್ವದ ಹಲವೆಡೆ ಒಟ್ಟು 22 ಹೊಸ ಮಳಿಗೆಗಳನ್ನು ತೆರೆಯಲಿದ್ದು ಅದಕ್ಕಾಗಿ ₹ 800 ಕೋಟಿ ವೆಚ್ಚ ಮಾಡಲಾಗುತ್ತಿದೆ' ಎಂದು ಮಲಬಾರ್ ಸಮೂಹದ ಅಧ್ಯಕ್ಷ ಎಂ.ಪಿ. ಅಹಮದ್ ಮಂಗಳವಾರ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಕಂಪನಿಯು ತೆರೆಯಲಿರುವ ಒಟ್ಟಾರೆ ಮಳಿಗೆಗಳ ಪೈಕಿ 10 ಮಳಿಗೆಗಳು ಭಾರತದಲ್ಲಿ ಇರಲಿವೆ. ಉಳಿದ 12 ಮಳಿಗೆಗಳು ಪಶ್ಚಿಮ ಏಷ್ಯಾ ಮತ್ತು ಆಗ್ನೇಯ ಏಷ್ಯಾದಲ್ಲಿ ಇರಲಿವೆ' ಎಂದರು. ಆಭರಣ ಮಾರಾಟ ಕಂಪನಿಯೊಂದು ಒಂದೇ ತಿಂಗಳಲ್ಲಿ ಇಷ್ಟೊಂದು ಸಂಖ್ಯೆಯ ಮಳಿಗೆಗಳನ್ನು ತೆರೆಯುತ್ತಿರುವುದು ಭಾರತದಲ್ಲಿ ಇದೇ ಮೊದಲು ಎಂದು 'ಮಲಬಾರ್' ಕಂಪನಿ ಹೇಳಿದೆ.

ಎಂ.ಪಿ. ಅಹಮದ್

'ಮಳಿಗೆಗಳ ಒಟ್ಟಾರೆ ಸಂಖ್ಯೆಯನ್ನು 750ಕ್ಕೆ ಹೆಚ್ಚಿಸುವ ಮೂಲಕ ಜಾಗತಿಕ ಮಟ್ಟದಲ್ಲಿ ಚಿನ್ನಾಭರಣಗಳ ರಿಟೇಲ್ ಮಾರಾಟಗಾರರ ಸಾಲಿನಲ್ಲಿ ಮೊದಲ ಸ್ಥಾನ ಪಡೆಯುವ ಗುರಿಯನ್ನು ಇಟ್ಟುಕೊಳ್ಳಲಾಗಿದೆ. ಈ ಹೊಸ ಮಳಿಗೆಗಳಿಂದಾಗಿ ಚಿನ್ನಾಭರಣ ವ್ಯಾಪಾರದ ರಿಟೇಲ್, ತಯಾರಿಕೆ, ತಾಂತ್ರಿಕ ಮತ್ತು ಆಡಳಿತ ವಿಭಾಗಗಳಲ್ಲಿ ಐದು ಸಾವಿರ ಉದ್ಯೋಗಾವಕಾಶಗಳು ಸೃಷ್ಟಿಯಾಗಲಿವೆ' ಎಂದು ಅವರು ಮಾಹಿತಿ ನೀಡಿದರು.

ಮೊದಲ ಮಳಿಗೆಯು ಬೆಂಗಳೂರಿನ ಎಂ.ಜಿ. ರಸ್ತೆಯಲ್ಲಿ ಕಾರ್ಯಾರಂಭ ಮಾಡಲಿದೆ. ಆ ಬಳಿಕ ಮಹಾರಾಷ್ಟ್ರ, ತೆಲಂಗಾಣ, ತಮಿಳುನಾಡು, ಉತ್ತರ ಪ್ರದೇಶ, ದೆಹಲಿ, ಹರಿಯಾಣ ರಾಜ್ಯಗಳಲ್ಲಿ, ದುಬೈ, ಮಲೇಷ್ಯಾ, ಮಸ್ಕತ್‌ನಲ್ಲಿ ಕಾರ್ಯಾರಂಭ ಮಾಡಲಿವೆ.

ವಿಶ್ವದ ಅತ್ಯಂತ ಮೌಲ್ಯಯುತ ಕಂಪನಿ ₹ 224 ಲಕ್ಷ ಕೋಟಿಗೆ ಏರಿದ ಆ್ಯಪಲ್ ಮೌಲ್ಯ!

ನ್ಯೂಯಾರ್ಕ್ (ಎಎಫ್‌ಪಿ): ಅಮೆರಿಕದ ಆ್ಯಪಲ್ ಕಂಪನಿಯ ಮಾರುಕಟ್ಟೆ ಮೌಲ್ಯವು ಸೋಮವಾರ 3 ಟ್ರಿಲಿಯನ್ ಡಾಲರ್‌ಗೆ (ಸರಿಸುಮಾರು ₹ 224 ಲಕ್ಷ ಕೋಟಿ) ತಲುಪಿತ್ತು. ನಂತರ, ಷೇರು ಮೌಲ್ಯ ಇಳಿಕೆ ಕಂಡ ಕಾರಣ ಕಂಪನಿಯ ಮಾರುಕಟ್ಟೆ ಮೌಲ್ಯವು ತುಸು ಕಡಿಮೆ ಆಯಿತು.

ಮಾರುಕಟ್ಟೆ ಬಂಡವಾಳ ಲೆಕ್ಕಾಚಾರದಲ್ಲಿ ಇಷ್ಟು ಬೃಹತ್ ಆಗಿ ಬೆಳೆದಿರುವ ಅಮೆರಿಕದ ಮೊದಲ ಕಂಪನಿ ಆ್ಯಪಲ್.

ತಂತ್ರಜ್ಞಾನ ಕ್ಷೇತ್ರದ ದೈತ್ಯ ಕಂಪನಿಯಾಗಿರುವ ಆ್ಯಪಲ್‌ನ ಮಾರುಕಟ್ಟೆ ಮೌಲ್ಯವು 2020ರ ಆಗಸ್ಟ್‌ನಲ್ಲಿ 2 ಟ್ರಿಲಿಯನ್ ಡಾಲರ್ (₹ 149 ಲಕ್ಷ ಕೋಟಿ) ಗಡಿಯನ್ನು ದಾಟಿತ್ತು. 2 ಟ್ರಿಲಿಯನ್ ಡಾಲರ್‌ಗಿಂತ ಹೆಚ್ಚಿನ ಮಾರುಕಟ್ಟೆ ಬಂಡವಾಳ ಮೌಲ್ಯ ಹೊಂದಿರುವ ಅಮೆರಿಕದ ಮೊದಲ ಕಂಪನಿ ಎಂಬ ಹೆಗ್ಗಳಿಕೆಗೂ ಆ್ಯಪಲ್ ಪಾತ್ರವಾಗಿತ್ತು.

ಈಗಿನ ಮೌಲ್ಯವೃದ್ಧಿಯು ಆ್ಯಪಲ್ ಕಂಪನಿಯ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ (ಸಿಇಒ) ಟಿಮ್ ಕುಕ್ ಅವರ ಸಾಧನೆಯನ್ನು ಬಿಂಬಿಸುತ್ತಿದೆ. ಆ್ಯಪಲ್‌ನ ಸಹಸಂಸ್ಥಾಪಕ ಸ್ಟೀವ್ ಜಾಬ್ಸ್ ಅವರು ಸಾಯುವುದಕ್ಕಿಂತ ತುಸು ಮೊದಲು ಟಿಮ್ ಕುಕ್ ಸಿಇಒ ಆಗಿ ಅಧಿಕಾರ ವಹಿಸಿಕೊಂಡರು.

ಆರಂಭದಲ್ಲಿ, ಟಿಮ್ ಕುಕ್ ಅವರ ನಾಯಕತ್ವದ ಕುರಿತು ಪ್ರಶ್ನೆಗಳು ಮೂಡಿದ್ದವು. ಸ್ಟೀವ್ ಜಾಬ್ಸ್ ಅವರಷ್ಟೇ ಸಮರ್ಥವಾಗಿ, ಟಿಮ್ ಕುಕ್ ಅವರು ಕಂಪನಿಯನ್ನು ಮುಂದಕ್ಕೆ ಒಯ್ಯುವರೇ ಎಂದು ಕೆಲವರು ಅನುಮಾನ ವ್ಯಕ್ತಪಡಿಸಿದ್ದರು. ಆದರೆ, ಟಿಮ್ ಕುಕ್ ಅವರು ಕಂಪನಿಯ ಪಾಲಿಗೆ ಹೊಸ ವಹಿವಾಟುಗಳನ್ನು ಸೃಷ್ಟಿಸಿಕೊಟ್ಟಿದ್ದಾರೆ.

ಚಿನ್ನ ₹ 302, ಬೆಳ್ಳಿ ₹ 597 ಇಳಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಮಂಗಳವಾರ ಚಿನ್ನ, ಬೆಳ್ಳಿ ಧಾರಣೆ ಇಳಿಕೆ ಆಗಿದೆ. 10 ಗ್ರಾಂ ಚಿನ್ನದ ದರ ₹ 302ರಷ್ಟು ಇಳಿಕೆಯಾಗಿ ₹ 46,814ಕ್ಕೆ ತಲುಪಿದೆ.

ಬೆಳ್ಳಿ ಧಾರಣೆ ಕೆ.ಜಿ.ಗೆ ₹ 597ರಷ್ಟು ಕಡಿಮೆ ಆಗಿ ₹ 61,222ರಂತೆ ಮಾರಾಟವಾಗಿದೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಚಿನ್ನದ ಬೆಲೆ ಇಳಿಕೆ ಆಗಿರುವುದರಿಂದ ದೇಶಿ ಮಾರುಕಟ್ಟೆಯಲ್ಲಿಯೂ ಅದರ ಪರಿಣಾಮ ಕಂಡುಬಂದಿದೆ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್ ಹೇಳಿದೆ.

ಎಸ್‌ಬಿಐ: ಐಎಂಪಿಎಸ್ ಸೇವೆಗೆ ಶುಲ್ಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಐಎಂಪಿಎಸ್ ಸೇವೆ ಬಳಸಿ, ಎಸ್‌ಬಿಐ ಬ್ಯಾಂಕ್ ಶಾಖೆಗಳ ಮೂಲಕ ₹ 2 ಲಕ್ಷದಿಂದ ₹ 5 ಲಕ್ಷದವರೆಗಿನ ಮೊತ್ತ ವರ್ಗಾವಣೆ ಮಾಡುವುದಕ್ಕೆ ಫೆಬ್ರುವರಿ 1ರಿಂದ ₹ 20 (ಜಿಎಸ್‌ಟಿ ಪ್ರತ್ಯೇಕ) ಶುಲ್ಕ ಪಾವತಿಸಬೇಕು. ಐಎಂಪಿಎಸ್ ಮೂಲಕ ವರ್ಗಾವಣೆ ಮಾಡಬಹುದಾದ ಮೊತ್ತವನ್ನು ಎಸ್‌ಬಿಐ ₹ 2 ಲಕ್ಷದಿಂದ ₹ 5 ಲಕ್ಷಕ್ಕೆ ಹೆಚ್ಚಿಸಿದೆ.

₹ 2 ಲಕ್ಷಕ್ಕಿಂತ ಕಡಿಮೆ ಮೊತ್ತವನ್ನು ಐಎಂಪಿಎಸ್ ಸೇವೆ ಬಳಸಿ ಬ್ಯಾಂಕ್ ಶಾಖೆಗಳ ಮೂಲಕ ವರ್ಗಾವಣೆ ಮಾಡಿದರೆ ಪಾವತಿಸಬೇಕಾದ ಶುಲ್ಕದಲ್ಲಿ ಬದಲಾವಣೆ ಇಲ್ಲ ಎಂದು ಪ್ರಕಟಣೆ ತಿಳಿಸಿದೆ. ಡಿಜಿಟಲ್ ಬ್ಯಾಂಕಿಂಗ್ ವೇದಿಕೆಗಳ ಮೂಲಕ ಐಎಂಪಿಎಸ್ ಸೇವೆ ಬಳಸಿ, ಯಾವುದೇ ಶುಲ್ಕ ಇಲ್ಲದೆ ₹ 5 ಲಕ್ಷದವರೆಗೂ ಹಣ ವರ್ಗಾವಣೆ ಮಾಡಬಹುದು.

ಪ್ರಶ್ನೋತ್ತರ

ಯು.ಪಿ.ಪುರಾಣಿಕ್
ಬ್ಯಾಂಕಿಂಗ್-ಹಣಕಾಸು ತಜ್ಞ
uppuranik@gmail.com
ಮೊ: 9448015300

ಹೆಸರು, ಊರು ಬೇಡ

- **ಪ್ರಶ್ನೆ: ನಾನು ವಿಧವೆ. ನನಗೆ ಮಾನಸಿಕ ಕಾಯಿಲೆ ಇರುವ 27 ವರ್ಷ ವಯಸ್ಸಿನ ಮಗ ಇದ್ದಾನೆ. ಗಂಡನ ಪಿಂಚಣಿ ಬರುತ್ತಿದೆಯಾದರೂ ಅದು ಜೀವನಕ್ಕೆ ಸಾಲುವುದಿಲ್ಲ. ನನಗೆ ಎರಡು ವಾಸದ ಮನೆಗಳು ಮತ್ತು ಸ್ವಲ್ಪ ಕೃಷಿ ಜಮೀನು ಇವೆ. ಇವುಗಳ ಉಸ್ತುವಾರಿ ನೋಡಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಈ ಆಸ್ತಿ ಮಾರಾಟ ಮಾಡಿ ಬರುವ ಮೊತ್ತಕ್ಕೆ ತೆರಿಗೆ ಬರಬಹುದೇ? ತೆರಿಗೆ ಉಳಿಸಲು ಉಪಾಯ ತಿಳಿಸಿ.**

ಉತ್ತರ: ನಿಮ್ಮ ಪರಿಸ್ಥಿತಿ ತಿಳಿದು ಬೇಸರವಾಯಿತು. ನೀವು ಬಯಸಿದಂತೆ ಆಸ್ತಿ ಮಾರಾಟ ಮಾಡುವುದೇ ಉತ್ತಮ. ಉಳಿಯಲು ಒಂದು ಮನೆ ಮಾತ್ರ ಇರಿಸಿಕೊಳ್ಳಿ. ಆಸ್ತಿ ಮಾರಾಟ ಮಾಡಿ ಬರುವ ಹಣ ₹ 50 ಲಕ್ಷದೊಳಗಿದ್ದಲ್ಲಿ ಆ ಮೊತ್ತವನ್ನು ನ್ಯಾಷನಲ್ ಹೈವೇ ಅಥಾರಿಟಿ ಆಫ್ ಇಂಡಿಯಾ (ಎನ್‌ಎಚ್‌ಎಐ) ಅಥವಾ ರೂರಲ್ ಎಲೆಕ್ಟ್ರಿಫಿಕೇಷನ್ ಬಾಂಡ್‌ನಲ್ಲಿ (ಆರ್‌ಇಸಿ) ತೊಡಗಿಸಿದರೆ ತೆರಿಗೆಯಿಂದ ಸಂಪೂರ್ಣ ವಿನಾಯಿತಿ ಇದೆ. ಉಳಿದ ಹಣಕ್ಕೆ ಶೇಕಡ 20ರಷ್ಟು ತೆರಿಗೆ ಬರುತ್ತದೆ. ಇದೇ ವೇಳೆ ಹಣದುಬ್ಬರವನ್ನು ಕೂಡ ಲಾಭದಿಂದ ಕಳೆಯಬಹುದು. ನನಗೆ ಕರೆ ಮಾಡಿ, ತಿಳಿಸುತ್ತೇನೆ. ನಿಮ್ಮ ಪರಿಸ್ಥಿತಿಗೆ ಅನುಗುಣವಾಗಿ ಎಲ್ಲವನ್ನೂ ಲೆಕ್ಕಹಾಕಿ ಮುಂದೇನು ಮಾಡಬಹುದು ಎನ್ನುವುದನ್ನು ಹೇಳುತ್ತೇನೆ. ಬಾಂಡ್‌ಗಳ ಅವಧಿ ಐದು ವರ್ಷ. ಬಡ್ಡಿದರ ಶೇ 5ರಷ್ಟು. ಈ ಅವಧಿಯಲ್ಲಿ ಬಡ್ಡಿ ಪಡೆಯಬಹುದು. ಆದರೆ, ಅಸಲು ಮುಟ್ಟುವಂತಿಲ್ಲ.

ಹೆಸರು ಬೇಡ, ಊರು ಬ್ರಹ್ಮಾವರ, ಉಡುಪಿ ಜಿಲ್ಲೆ

- **ಪ್ರಶ್ನೆ: ನಾನು ಶಿಕ್ಷಕನಾಗಿ ನಿವೃತ್ತಿಯಾಗಿದ್ದೇನೆ. ಸ್ವಂತ ಮನೆ ಇದೆ. ಇಬ್ಬರು ಪ್ರಾಪ್ತ ವಯಸ್ಸಿನ ಹೆಣ್ಣು ಮಕ್ಕಳಿದ್ದಾರೆ. ನನಗೆ ನಿವೃತ್ತಿಯಿಂದ ₹ 47,74,581 ಬಂದಿದೆ. ಅದರಲ್ಲಿ ಪತ್ನಿಯ ಹೆಸರಿನಲ್ಲಿ ಎಲ್‌ಐಸಿ ಪಿಂಚಣಿ ಯೋಜನೆಯಲ್ಲಿ ₹ 17,27,000 ತೊಡಗಿಸಿದ್ದೇನೆ. ಈಗ ನನ್ನ ಖಾತೆಯಲ್ಲಿ ₹ 30,47,581 ಇದೆ. ಉತ್ತಮ ಉಳಿತಾಯ ಯೋಜನೆ-ತೆರಿಗೆ ವಿನಾಯಿತಿ ವಿಚಾರದಲ್ಲಿ ತಿಳಿಸಿ.**

ಉತ್ತರ: ತೆರಿಗೆ ಉಳಿಸಲು ಸೆಕ್ಷನ್ 80ಸಿ ಆಧಾರದ ಮೇಲೆ ಗರಿಷ್ಠ ₹ 1.50 ಲಕ್ಷ ಮೊತ್ತವನ್ನು 5 ವರ್ಷಗಳ ಬ್ಯಾಂಕ್ ಠೇವಣಿ ಮಾಡಬಹುದು. ಇದೇ ವೇಳೆ ಸ್ಟ್ಯಾಂಡರ್ಡ್ ಡಿಡಕ್ಷನ್ ಸೆಕ್ಷನ್ 16(I), ಠೇವಣಿಯ ಮೇಲಿನ ಬಡ್ಡಿ ಸೆಕ್ಷನ್ 80ಟಿಟಿಬಿ ಇವೆರಡರಿಂದ ಕ್ರಮವಾಗಿ ₹ 50 ಸಾವಿರ (ಒಟ್ಟಿನಲ್ಲಿ ₹ 1 ಲಕ್ಷ) ಒಟ್ಟು ಆದಾಯದಿಂದ ಕಳೆದು ತೆರಿಗೆ ಕೊಡಬಹುದು. ಈ ಮೂರು ಸೆಕ್ಷನ್‌ಗಳಿಂದ ಹಾಗೂ ಆದಾಯದ ಮಿತಿಯಿಂದ ನಿಮ್ಮ ವಾರ್ಷಿಕ ಆದಾಯ ₹ 7.5 ಲಕ್ಷದವರೆಗೆ ನಿಮಗೆ ತೆರಿಗೆ ಬರುವುದಿಲ್ಲ. ಆದರೆ ಐ.ಟಿ. ರಿಟರ್ನ್ಸ್ ಸಲ್ಲಿಸಬೇಕು. ನಿಮ್ಮಲ್ಲಿರುವ ಹಣ ನಿಮ್ಮ ಪ್ರಾಪ್ತ ವಯಸ್ಕರಾದ ಹೆಣ್ಣು ಮಕ್ಕಳ ಹೆಸರಿನಲ್ಲಿ ಠೇವಣಿ ಮಾಡಬಹುದು. ನಿಮ್ಮ ಹೆಸರಿನಲ್ಲಿ ₹ 15 ಲಕ್ಷ ಅಂಚೆ ಕಚೇರಿ ಹಿರಿಯ ನಾಗರಿಕರ ಠೇವಣಿಯಲ್ಲಿ ಇರಿಸಿ. ಮಕ್ಕಳ ಹೆಸರಿನಲ್ಲಿ ಇರಿಸುವುದಾದರೆ ಅಂಚೆ ಕಚೇರಿ ತಿಂಗಳ ವರಮಾನ ಯೋಜನೆಯಲ್ಲಿ (ಎಂಐಎಸ್) ಇರಿಸಿ. ಈ ಯೋಜನೆಯಲ್ಲಿ ತಲಾ ಗರಿಷ್ಠ ಮಿತಿ ₹ 4.50 ಲಕ್ಷ. ಇಂದಿನ ಬಡ್ಡಿದರ ಶೇ 6.6. ನಿಮ್ಮ ನಿವೃತ್ತ ಜೀವನ ಸುಖಮಯವಾಗಿರಲಿ.

ಪಿ.ವಿ. ಹಿರೇಮಠ, ಹುಬ್ಬಳ್ಳಿ

- **ಪ್ರಶ್ನೆ: ನಾನು ಹುಬ್ಬಳ್ಳಿಯಲ್ಲಿ ಖಾಲಿ ನಿವೇಶನ ಮಾರಾಟ ಮಾಡಿ ಬಂದ ಹಣದಿಂದ ಬೆಂಗಳೂರಿನಲ್ಲಿ 5–6 ವರ್ಷ ಹಳೆಯದಾದ ಅಪಾರ್ಟ್‌ಮೆಂಟ್ ಖರೀದಿಸಬಹುದೇ? ಹಾಗೆ ಖರೀದಿಸಿದರೆ ಬಂಡವಾಳ ವೃದ್ಧಿ ತೆರಿಗೆ ಉಳಿಯುತ್ತದೆಯೇ? ಅಥವಾ ಹಣಕಾಸು ಸಂಸ್ಥೆಗಳ ಮೂಲಕವೇ ಅಪಾರ್ಟ್‌ಮೆಂಟ್‌ಗೆ ಇ.ಎಂ.ಐ. ಸಾಲ ಪಡೆಯಬೇಕಾ? ನಿವೇಶನ ಮಾರಾಟ ಮಾಡಿದರೆ ₹ 36 ಲಕ್ಷದಿಂದ ₹ 40 ಲಕ್ಷ ಬರುವ ಸಾಧ್ಯತೆ ಇದೆ. ಹುಬ್ಬಳ್ಳಿಯಲ್ಲಿಯೇ 10–15 ವರ್ಷ ಹಳೆಯ ಮನೆ ಖರೀದಿಸಬಹುದೇ ಅಥವಾ ಹೊಸ ಅಪಾರ್ಟ್‌ಮೆಂಟ್‌ನ ಮನೆ ಖರೀದಿಸಬೇಕಾ ಎಂಬ ಅನುಮಾನ ಇದೆ.**

ಉತ್ತರ: ನೀವು ನಿಮ್ಮ ಹುಬ್ಬಳ್ಳಿಯ ನಿವೇಶನ ಮಾರಾಟ ಮಾಡಿ ದೇಶದ ಯಾವ ಭಾಗದಲ್ಲಿಯೂ ಬೇರೊಂದು ಅಪಾರ್ಟ್‌ಮೆಂಟ್ ಅಥವಾ ಮನೆ ಕೊಳ್ಳಬಹುದು ಅಥವಾ ನಿವೇಶನ ಕೊಂಡು ಮನೆ ಕಟ್ಟಿಸಬಹುದು (ಸೆಕ್ಷನ್ 54). ಹೊಸ ಮನೆ ಅಥವಾ ಅಪಾರ್ಟ್‌ಮೆಂಟ್ ಅನ್ನೇ ಕೊಳ್ಳಬೇಕು ಅಥವಾ ಆರ್ಥಿಕ ಸಂಸ್ಥೆಗಳ ಮೂಲಕವೇ ಕೊಳ್ಳಬೇಕು ಎನ್ನುವ ನಿರ್ಬಂಧ ಇಲ್ಲ. ಒಟ್ಟಿನಲ್ಲಿ ಹಳೆಯದಾಗಲಿ, ಹೊಸತಾಗಲಿ ಖರೀದಿಸುವುದು ವಾಸದ ಮನೆ ಆಗಿರಬೇಕು. ನಿವೇಶನ ಮಾರಾಟ ಮಾಡಿ ಬರುವ ಮೊತ್ತವನ್ನು ಈ ಕೆಳಗಿನಂತೆ ವಿನಿಯೋಗಿಸಬೇಕು. 1) ಕಟ್ಟಿದ ಮನೆ-ಅಪಾರ್ಟ್‌ಮೆಂಟ್ ಆದಲ್ಲಿ ಮಾರಾಟ ಮಾಡಿದ ತಾರೀಕಿನಿಂದ ಎರಡು ವರ್ಷ 2) ನಿವೇಶನ ಕೊಂಡು ಮನೆ ಕಟ್ಟಿಸುವುದಾದರೆ ಮೂರು ವರ್ಷ. ಈ ಅವಧಿಯಲ್ಲಿ ಮಾರಾಟ ಮಾಡಿ ಬಂದ ಲಾಭ ಕ್ಯಾಪಿಟಲ್ ಗೇನ್ ಕಾಯ್ದೆ 1988ರಂತೆ ಬ್ಯಾಂಕ್‌ನಲ್ಲಿ ಉಳಿತಾಯ ಖಾತೆ ಅಥವಾ ಅವಧಿ ಠೇವಣಿಯಲ್ಲಿ ಇರಿಸಬೇಕು.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ. ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-56001.
ಇ-ಮೇಲ್: businessdesk@prajavani.co.in

ಸೆನ್ಸೆಕ್ಸ್, ನಿಫ್ಟಿ ಏರಿಕೆ

ಮುಂಬೈ (ಪಿಟಿಐ): ದೇಶದ ಷೇರುಪೇಟೆಗಳಲ್ಲಿ ಸತತ ಮೂರನೇ ದಿನವೂ ಸಕಾರಾತ್ಮಕ ವಹಿವಾಟು ನಡೆಯಿತು. ಹೇಳಿದ್ದಾರೆ. ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ 672 ಅಂಶ ಹೆಚ್ಚಾಗಿ 59,855 ಅಂಶಗಳಲ್ಲಿ ವಹಿವಾಟು ಅಂತ್ಯವಾಗಿದೆ. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 180 ಅಂಶ ಹೆಚ್ಚಾಗಿ 17,805ಕ್ಕೆ ತಲುಪಿದೆ.

ಮುಂಬೈ ಧಾರಣೆ

ಶೇಂಗಾ

4-1-2022

ಜಾವಾ 70/80(ಹೊಸ)	10500-10550
ಜಾವಾ 80/90(ಹೊಸ)	10400-10450
ದಪ್ಪ ಮಧ್ಯಪ್ರದೇಶ(ಹೊಸ)	9850-9900
ದಪ್ಪ ಗುಜರಾತ್(ಹೊಸ)	8950-9000

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1320 (1320)
ಒಂದು ವಾರದ ಡೆಲಿವರಿ	1315 (1315)
ಸೋಯಾ ಕಚ್ಚಾ	1140 (1130)
ಪಾಮ್ ವಾರದ ಡೆಲಿವರಿ	1155 (1149)
ಸೂರ್ಯಕಾಂತಿ ಎಣ್ಣೆ ಕಚ್ಚಾ	1180 (1183)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ	47,850 (48,750)
ಬೆಳ್ಳಿ ಕೆ.ಜಿ	61,600 (61,500)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	450-500
ನಡುಗೋಲು	550-600
ರಾಶಿ	650-700
ರಾಶಿ ಉತ್ತಮ	800-850
ಜರಡಿ	900-950
ಹೆರಕಿದ್ದು	1100-1200
ಹಸಿರು ಸಾಧಾರಣ	750-800
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1300-1450
ಕಾಳು ಮೆಣಸು	490
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-53000
ಕುಂದಾಪುರ	
ಹಳೆಚಾಲಿ	46000-53000
ಹೊಸಚಾಲಿ	38000-44000
ಕಾರ್ಕಳ	
ಹೊಸತು	40000-45000
ಹಳತು	46000-53000
ಪುತ್ತೂರು	
ಕೋಕ	11000-26000
ಹೊಸಚಾಲಿ	27500-45000
ಸಿದ್ದಾಪುರ	
ಬಿಳಿಗೋಟು	26599-38512
ಚಾಲಿ	46589-48499
ಕೋಕ	28612-38109
ಹೊಸಚಾಲಿ	32789-40869
ಕೆಂಪುಗೋಟು	26099-34099
ರಾಶಿ	44099-48509
ತಟ್ಟಿಬೆಟ್ಟೆ	36899-47499
ಶಿರಸಿ	
ಬೆಟ್ಟೆ	23299-46891
ಬಿಳಿಗೋಟು	20119-42299
ಚಾಲಿ	34759-49409
ರಾಶಿ	35909-48799
ಯಲ್ಲಾಪುರ	
ಬಿಳಿಗೋಟು	28299-34629
ಚಾಲಿ	38299-49179
ಕೋಕ	21899-32899
ಕೆಂಪುಗೋಟು	30399-38799
ರಾಶಿ	45779-52894
ತಟ್ಟಿಬೆಟ್ಟೆ	38699-44860
ರಾಮನಗರ ರೇಷ್ಮೆ	
ಮಿಶ್ರತಳಿ	400-635
ದ್ವಿತಳಿ	400-820

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	15200	15200	15300	223.30 ಸೆಂಟ್ಸ್
ಎಸಿ	6945	6800	6550	
ಆರ್‌ಪಿ	6500	6800	6400	ಲಂಡನ್
ಆರ್‌ಸಿ	3900	4000	3900	2370 ಡಾಲರ್ಸ್

ಡಿಸೆಂಬರ್‌ನಲ್ಲಿ ಉತ್ಪಾದನೆ ಹೆಚ್ಚಳ: ಎನ್‌ಎಂಡಿಸಿ

ಬೆಂಗಳೂರು: ಕೇಂದ್ರ ಸರ್ಕಾರಿ ಸ್ವಾಮ್ಯದ ಎನ್‌ಎಂಡಿಸಿ ಲಿಮಿಟೆಡ್, 2021ರ ಡಿಸೆಂಬರ್‌ನಲ್ಲಿ 39.5 ಲಕ್ಷ ಟನ್ ಕಬ್ಬಿಣದ ಅದಿರು ಉತ್ಪಾದನೆ ಮಾಡಿದ್ದು, 34 ಕೋಟಿ ಟನ್ ಅದಿರನ್ನು ಮಾರಾಟ ಮಾಡಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ ಮಾರಾಟದಲ್ಲಿ ಅಲ್ಪ ಏರಿಕೆ ಕಂಡುಬಂದಿದೆ ಎಂದು ತಿಳಿಸಿದೆ.

ಪ್ರಸಕ್ತ ಹಣಕಾಸು ವರ್ಷದ 9 ತಿಂಗಳುಗಳಲ್ಲಿ ಉತ್ಪಾದನೆ ಮತ್ತು ಮಾರಾಟವು ಕ್ರಮವಾಗಿ 2.83 ಕೋಟಿ ಟನ್ ಮತ್ತು 2.83 ಕೋಟಿ ಟನ್ ಆಗಿದೆ. ಹಿಂದಿನ ಹಣಕಾಸು ವರ್ಷಕ್ಕೆ ಹೋಲಿಸಿದರೆ ಉತ್ಪಾದನೆಯಲ್ಲಿ ಶೇ30ರಷ್ಟು ಮತ್ತು ಮಾರಾಟದಲ್ಲಿ ಶೇ 27ರಷ್ಟು ಬೆಳವಣಿಗೆ ಸಾಧ್ಯವಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

ತಕ್ಷಣ ಬೇಕಾಗಿದ್ದಾರೆ ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲಿನ ಕಂಪನಿಗಳಿಗೆ ಹಾಗೂ ಆಫೀಸ್‌ಗಳಿಗೆ ಯುವಕ ಯುವತಿಯರು ಕೆಲಸಕ್ಕೆ ಬೇಕಾಗಿದ್ದಾರೆ 7th, SSLC, PUC, ITI, Degree Pass/ Fail ಆದವರಿಗೆ (ವಿದ್ಯಾರ್ಹತೆಯಿಲ್ಲದವರಿಗೂ) ಉಚಿತ ವಸತಿಯೂಟದೊಂದಿಗೆ ESI/ PF ನೊಂದಿಗೆ ಸಂಬಳ:16,500/ ರಿಂದ 45,000/ ದವರೆಗೆ: 9742260055, 9538133533

ಕಂಪನಿಗಳಿಗೆ ಬೇಕಾಗಿದ್ದಾರೆ. ಟಾಟಾಮೋಟಾರ್ಸ್, TVS, ಬ್ರಿಟಾನಿಯಾಗಳಿಗೆ SSLC, PUC, Degree ಯವರು ITIನವರುಗಳು (ವಿದ್ಯಾರ್ಹತೆಯಿಲ್ಲದವರಿಗೂ) 18,100- 56,000/- ವಸತಿಯೂಟದೊಂದಿಗೆ. 7899778278, 9611715755

ಬೇಕಾಗಿದ್ದಾರೆ ಟಯೋಟಾ, ಟಾಟಾಮೋಟರ್ಸ್, ಹೊಂಡ ಆನ್‌ಲೈನ್ ಕಂಪನಿಗಳಿಗೆ 10ನೇ, ಪಿಯುಸಿ, ಡಿಗ್ರಿ, ಡಿಪ್ಲೊಮಾದವರು 16,600-62000/- (ಮನೆಯಲ್ಲಿಯೇ ಕೆಲಸ) ವಸತಿಯೂಟದೊಂದಿಗೆ 8123884588, 8123884788

ಬೆಂಗಳೂರಿನ ಪ್ರತಿಷ್ಠಿತ ಕಂಪನಿಗೆ ಮಾಜಿ ಸೈನಿಕರು ಮತ್ತು ಅರೆ ಮಾಜಿ ಸೈನಿಕರುಗಳಾದ Army /BSF/ CRPF/ CISF ರವರುಗಳು ಕಂಪನಿಯ Security Task- Security'>Force ವಿಭಾಗಕ್ಕೆ ತುರ್ತಾಗಿ ಬೇಕಾಗಿದ್ದಾರೆ, Age below 50 years. ಸಂಪರ್ಕಿಸಿ: 8073334719

WORK FROM HOME ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8139955155 8139988588

ಬೆಂಗಳೂರಿನ ಪ್ರತಿಷ್ಠಿತ ಕಂಪನಿಗೆ ತುರ್ತಾಗಿ ಸರ್ಕಾರಿ ನಿವೃತ್ತ ಸರ್ವೇಯರ್ (Supervisor), ಸರ್ವೇ ಸೂಪರ್ವೈಸರ್ (Survey Supervisor) ಮತ್ತು ಭೂ-ದಾಖಲೆಗಳ ಸಹಾಯಕ ನಿರ್ದೇಶಕರು ಬೇಕಾಗಿದ್ದಾರೆ. (Asst. Director of Land Records) ಸಂಪರ್ಕಿಸಿ: 8073334719

OPPORTUNITY BANKING, office, Field work, Telecalling, Salary 16000/- - 24000/- SSLC, PUC Degree Pass/Fail. 7619689177.

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

Wanted

ತಕ್ಷಣ_ಬೇಕಾಗಿದ್ದಾರೆ 7TH, 10th, PUC, Diploma, any Degree, ITI, Pass/ Fail ಉಚಿತ ಊಟ+ವಸತಿ. ಸಂಬಳ 16,000-60,000. ಫೋ 9886639846, 7624918246.

ಕರ್ನಾಟಕದಾದ್ಯಂತ ಕಂಪನಿ /ಆಫೀಸ್ ಕೆಲಸಗಳಿಗೆ ಯುವಕ / ಯುವತಿಯರು ಬೇಕಾಗಿದ್ದಾರೆ.Any Education. ವಸತಿಯೂಟದೊಂದಿಗೆ Salary +OT. 17,800-48,000/- 9538811211, 9538811200

ಬೆಂಗಳೂರಿನ ಹತ್ತಿರ ಹೊಸೂರು ರಸ್ತೆಯಲ್ಲಿರುವ ವೃದ್ಧಾಶ್ರಮಕ್ಕೆ ಅಡುಗೆ ಸಹಾಯಕರು ಬೇಕಾಗಿದ್ದಾರೆ. ವಸತಿ, ಊಟ ಉಚಿತ. ಸೂಕ್ತ ಸಂಬಳ. ಮೊಬೈಲ್: 9880855005

CONNECT

ದಾವಣಗೆರೆಯ ಎಸ್. ನಿಜಲಿಂಗಪ್ಪ ಬಡಾವಣೆಯಲ್ಲಿ ಮಾರಾಟ
ಕಾಂಚೀಪುರಂ ಎ.ಜಿ. ಬಾಬು ಸಾಹ್ ರೇಷ್ಮೆ ಸೀರೆ ವ್ಯಾಪಾರಿಗಳು
ಸಂಕ್ರಾಂತಿ ಹಬ್ಬದ ಮಾರಾಟ
ಶ್ರೀ ಗುರು ಶಿವಯೋಗಿ ಬಕ್ಕೇಶ್ವರ ಮಹಾಸ್ವಾಮಿ ಕಲ್ಯಾಣ ಮಂಟಪ ಸಮಿತಿ
ಎಸ್. ನಿಜಲಿಂಗಪ್ಪ ಬಡಾವಣೆ, ರಿಂಗ್ ರೋಡ್ ಸರ್ಕಲ್ ಹತ್ತಿರ, ದಾವಣಗೆರೆ–577004.
ಮೊ. : 6385697571
ದಿನಾಂಕ: 5,6,7,8 & 9 ನೇ ಜನವರಿ 2022
ಕೊನೆಯ ದಿನ ಸಂಜೆ 5.00 ಗಂಟೆಗೆ ಮುಕ್ತಾಯ
ಬೆಳಿಗ್ಗೆ 11.00 ರಿಂದ ರಾತ್ರಿ 7.00 ರವರೆಗೆ
ಯಾವುದೇ ವಿನಿಮಯವಿಲ್ಲ, ಹಿಂತಿರಿಗಿಸುವುದಿಲ್ಲ
ಮಾಸ್ಕ್ ಕಡ್ಡಾಯ
ಮಕ್ಕಳಿಗೆ ಹಾಗೂ 60 ವರ್ಷಕ್ಕಿಂತ ಮೇಲ್ಪಟ್ಟ ವ್ಯಕ್ತಿಗಳಿಗೆ ಪ್ರವೇಶವಿಲ್ಲ
ಒಂದು ಬಾರಿಗೆ 50 ಜನರಿಗೆ ಮಾತ್ರ ಪ್ರವೇಶ
ಕೈಚೀಲ ಮತ್ತು ಸಾಮಾನುಗಳನ್ನು ಒಳಗೆ ಅನುಮತಿಸಲಾಗುವುದಿಲ್ಲ
ನಮ್ಮ ಚಾನೆಲ್ ಅನ್ನು ಸಬ್‌ಸ್ಕ್ರೈಬ್ ಮಾಡಿ
ಎ.ಜಿ. ಬಾಬು ಸಾಹ್ YouTube
ಹೊಸ ಮಾರಾಟ ಮತ್ತು ಮಾಹಿತಿಗಾಗಿ
ಬೆಲ್ ಐಕಾನ್ ಅನ್ನು ಒತ್ತಲು ಮರೆಯದಿರಿ

ಭವಿಷ್ಯ

Astrology

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ 100% ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್.ಉಚಿತ ಭವಿಷ್ಯ ಖಚಿತ ಪರಿಹಾರ ಶ್ರೀಕ್ಷೇತ್ರ ಧರ್ಮಸ್ಥಳ, 7022443071

★ನಂ.1 ಸ್ತ್ರೀಪುರುಷ★ ವಶೀಕರಣ ಸ್ಪೆಷಲಿಸ್ಟ್.ನಿಮ್ಮ ಯಾವುದೇ ಸಮಸ್ಯೆಗಳಿದ್ದರು ಶ್ರೀಕ್ಷೇತ್ರದಿಂದ.ಪಂಡಿತ್. ದೇವೇಂದ್ರಭಟ್ ಅವರಿಂದ ನೇರಪರಿಹಾರ ಒಮ್ಮೆ ಕರೆಮಾಡಿ,ನಿಮ್ಮ ಜೀವನ ಬದಲಾಯಿಸಿಕೊಳ್ಳಿ. 9845919804

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.

ಸಮಾಜಸೇವೆ

Old Age Home

ಸೇವಾ ಮನೋಭಾವವುಳ್ಳ ಯುವಕ, ಯುವತಿಯರು ಹಾಗೂ ದಂಪತಿಗಳು ಬೆಂಗಳೂರಿನಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ, ಉಚಿತ ಊಟ ವಸತಿಯೊಂದಿಗೆ ಉತ್ತಮ ಸಂಬಳ, ತರಬೇತಿ ನೀಡಲಾಗುವುದು ಸಂಪರ್ಕಿಸಿ: 9900371597, 9739320897, 9916551457, 9916544057, 9620761222

ಪ್ರವಾಸ

Travel

19.01.2022 ರಿಂದ 8ದಿನಗಳ ಕಾಶಿ, ಗಯಾ, ಪ್ರಯಾಗ, ಅಯೋಧ್ಯ, ನೈಮಿಶಾರಣ್ಯ ಗೋರಕ್-ಪುರ್/ 2022ರ ಏಪ್ರಿಲ್, ಮೇ, ಜೂನ್ ತಿಂಗಳಲ್ಲಿ 15/20/25ದಿನಗಳ ಗಂಗೋತ್ರಿ, ಯಮುನೋತ್ರಿ, ಬದರಿನಾಥ್, ಕೇದಾರನಾಥ್, ದೆಹಲಿ, ಕಾಶಿ,ಗಯಾ, ಪೂರಿಜಗನ್ನಾಥ್, ವೈಷ್ಣೋದೇವಿ.ಶ್ರೀಸುಧಾ ಟ್ರಾವೆಲ್ಸ್ 22429289, 9019301300, 9448119290

10.02.2022/ 10.03.2022- 11/15 ದಿನಗಳು ಕಾಶಿಯತ್ರ, ದೆಹಲಿ, ಆಗ್ರ, ಅಲಹಾಬದ್, ಗಯಾ, ಅಯೋಧ್ಯ, ಹರಿದ್ವರ, ಇತ್ಯಾದಿ.ಜನವರಿ, ಫೆಬ್ರವರಿ, ಮಾರ್ಚನಲ್ಲಿ ಅಂಡಮಾನ್ ಹವಳದ್ವೀಪ Royal Package- 'ಶ್ರೀಸಾಯಿ ರಾಘವೇಂದ್ರ ಟ್ರಾವೆಲ್ಸ್' 9845560219/ 9739847429.

★ರೈಲು ಮತ್ತು ವಿಮಾನದಲ್ಲಿ* 20.02.2022 17/13 ದಿನಗಳು ಸಂಪೂರ್ಣ ಕಾಶಿ ಪ್ರವಾಸ.,05.03.2022 12/16ದಿನಗಳು ಸಿಮ್ಲಾ, ಕುಲುಮನಾಲಿ,ವೈಷ್ಣೋದೇವಿ,ಸಪ್ತ ಶಕ್ತಿಪೀಠ ಪ್ರವಾಸ.ಆರ್.ಗಾಂಧಿ ಟೂರ್ಸ್(ರಿ).9945445809/ 9902433500

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ
BOOK YOUR CLASSIFIEDS ADVERTISEMENT
PRAJAVANI ALL KARNATAKA CLASSIFIEDS PACKAGE RATES

Per word	Ordinary	Bold	Ordinary Semi Display	Bold Semi Display
	60	85	70	115

CD Per Sqcm	Single Col	Double Col	Multi Col
	430	450	475

SPECIAL OFFER					
PAY	2	And	GET	1	Free
PAY	3	And	GET	2	Free
PAY	5	And	GET	5	Free

For More Details Contact:
Ph:080- 45557160 | 163 | 164 | M: 9880856233
9731810277 | 9901641752 | 9845114560 | 9886213331
dhclassifieds@deccanherald.co.in www.dhclassifieds.com
condition apply*

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

19ನೇ ವರ್ಷದ ಚಿರಸ್ಮರಣೆ



ಎನ್. ಗೋವಿಂದಯ್ಯ
ಜನನ: 18-09-1936
ಮರಣ: 05-01-2003

ನಿಮ್ಮ ಸನ್ಮಾರ್ಗದಲ್ಲಿ ಮುನ್ನಡೆಯುತ್ತಿರುವ ಶ್ರೀಮತಿ ಅಮ್ಮಯ್ಯಮ್ಮ ಮತ್ತು ಕುಟುಂಬವರ್ಗ

1) ಬನಶಂಕರಿ ಕೆಮಿಕಲ್ಸ್ ಪ್ರೈ. ಲಿ., ಮಾಲೂರು
2) ಬನಶಂಕರಿ ಇಂಡಸ್ಟ್ರೀಸ್ ಪ್ರೈ. ಲಿ.
3) ಬನಶಂಕರಿ ಕೆಮಿಕಲ್ಸ್ ಪ್ರೈ. ಲಿ. (SEZ ಹಾಸನ)
4) ಎಲ್. ಎನ್. ಸಾಲ್ವೆಂಟ್ಸ್ ಪ್ರೈ. ಲಿ., ಹೊಸಕೋಟೆ
5) ಇಂಡ್ ಪ್ಯೂರ್ ಕೆಮ್
6) ಬಿ.ಎಸ್.ಕೆ. ಪ್ಯೂರ್ ಕೆಮ್, ಬೊಮ್ಮಸಂದ್ರ
7) ಆದಿತ್ಯ ಕೆಮ್ ಫಾರ್ಮಾ
8) ಎಲ್. ಎನ್. ಬ್ರಿವರೀಸ್ ಪ್ರೈ. ಲಿ., ಚಾಮರಾಜನಗರ
9) ಭವಾನಿ ಎಂಟರ್‌ಪ್ರೈಸಸ್, ಪೀಣ್ಯ
10) ಶ್ರೀ ಸಾಯಿ ಇಂಡಸ್ಟ್ರೀಸ್, ಮದ್ದೂರು
11) ಬಿ.ಎಸ್.ಕೆ. ಸಾಲ್ವೆಂಟ್ಸ್ ಅಂಡ್ ಕೆಮಿಕಲ್ಸ್ ಪ್ರೈ.ಲಿ.
12) ಎಲ್.ಎನ್. ಲೈಫ್ ಸೈನ್ಸಸ್ ಪ್ರೈ.ಲಿ., ಹೈದರಾಬಾದ್

– ಸಿಬ್ಬಂದಿ ವರ್ಗ

ಭಾವಪೂರ್ಣ ಶ್ರದ್ಧಾಂಜಲಿ

ಶ್ರೀಯುತ ಜಿ.ಕೆ ರಾಮಚಂದ್ರಯ್ಯನವರು
ಜನನ: 04.03.1933 ಮರಣ : 01.01.2022
ಶ್ರೀಯುತರು ದೈವಾಧೀನರಾಗಿದ್ದು, ಇವರ ಅಂತಿಮ ಸಂಸ್ಕಾರವನ್ನು 05.01.2022ರಂದು ಗೊರಲಡಕು, ಹಿರಿಯೂರು (ತಾ), ಚಿತ್ರದುರ್ಗ (ಜಿ), ಇಲ್ಲಿ ಮಧ್ಯಾಹ್ನ 1.30 ಗಂಟೆಗೆ ಹಮ್ಮಿಕೊಳ್ಳಲಾಗಿದೆ.
ಇಂತಿ ದುಃಖತಪ್ತರು:
ಧರ್ಮಪತ್ನಿ ಕೆ.ಟಿ. ಜಯಮ್ಮ ಮತ್ತು ಕುಟುಂಬಸ್ಥರು, ಬೆಂಗಳೂರು. ಮೊ: 94487 06801

ಸವಿನೆನಪು



ಶ್ರೀ ಕೆ. ಬಿ. ಮಲ್ಲಪ್ಪ
ನಿಧನ: 05-01-2013
ಮಾಜಿ ಸಚಿವರು, ಕರ್ನಾಟಕ ಸರ್ಕಾರ
ಅರಕಲಗೂಡು ತಾ॥ ಹಾಸನ ಜಿಲ್ಲೆ
ಸದಾ ನಿಮ್ಮ ನೆನಪಿನಲ್ಲಿರುವ...
ಪತ್ನಿ-ಶಾರದಮ್ಮ ಮತ್ತು ಕುಟುಂಬದವರು ಹಾಗೂ ಅಪಾರ ಬಂಧುಮಿತ್ರರು
ಫೋ: 9448134242

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮ್ಯಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಚಿರಸ್ಮರಣೆ



ಸಿ. ಅಪ್ಪಾಜಿ
(ಮಾಜಿ ಶಾಸಕರು, ಕನಕಪುರ)
ನಿಮ್ಮ ಸವಿನೆನಪು ನಮ್ಮ ಮನದಲ್ಲಿ ಇಂದಿಗೂ ಹಸಿರಾಗಿ ನಮ್ಮ ಬಾಳಿಗೆ ನಂದಾದೀಪವಾಗಿ ಪ್ರಜ್ವಲಿಸುತ್ತಿದೆ. ನಿಮ್ಮ ಆದರ್ಶಗಳೇ ನಮ್ಮೆಲ್ಲರ ಬಾಳಿನ ದಾರಿದೀಪವಾಗಿ, ನಮ್ಮೆಲ್ಲರ ಮನದಾಳದಲ್ಲಿ ನಿತ್ಯವೂ ಪ್ರಜ್ವಲಿಸುತ್ತಿದ್ದೀರಿ.
ಮಕ್ಕಳು, ಮೊಮ್ಮಕ್ಕಳು ಮತ್ತು ಬಂಧು-ಮಿತ್ರರು

ಎರಡನೇ ಟೆಸ್ಟ್: ದಕ್ಷಿಣ ಆಫ್ರಿಕಾಗೆ ಅಲ್ಪ ಮುನ್ನಡೆ; ಕೀಗನ್, ಬವುಮಾ ಅರ್ಧಶತಕ

ಶಾರ್ದೂಲ್ ಠಾಕೂರ್ 'ಸೂಪರ್ ಸೆವೆನ್'

ಶಾರ್ದೂಲ್ ಠಾಕೂರ್ ಸಂಭ್ರಮ –ಎಎಫ್‌ಪಿ ಚಿತ್ರ

ಜೋಹಾನ್ಸ್‌ಬರ್ಗ್ (ಪಿಟಿಐ): ಮಧ್ಯಮವೇಗಿ ಶಾರ್ದೂಲ್ ಠಾಕೂರ್ ಏಳು ವಿಕೆಟ್‌ಗಳ ಭರ್ಜರಿ ಬೇಟೆ ಆಡಿದ್ದರಿಂದ ಆತಿಥೇಯ ದಕ್ಷಿಣ ಆಫ್ರಿಕಾ ತಂಡಕ್ಕೆ ಭಾರತದ ಎದುರಿನ ಟೆಸ್ಟ್‌ನಲ್ಲಿ ಅಲ್ಪ ಮುನ್ನಡೆ ಗಳಿಸಲು ಮಾತ್ರ ಸಾಧ್ಯವಾಯಿತು.

ವಾಂಡರರ್ಸ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಎರಡನೇ ಟೆಸ್ಟ್‌ನಲ್ಲಿ ಮೊದಲ ಇನಿಂಗ್ಸ್‌ನಲ್ಲಿ 202 ರನ್‌ಗಳ ಸಾಧಾರಣ ಮೊತ್ತ ಗಳಿಸಿದ್ದ ಪ್ರವಾಸಿ ಬಳಗವು ಆತಂಕದಲ್ಲಿತ್ತು. ದಕ್ಷಿಣ ಆಫ್ರಿಕಾ ತಂಡವು ಬೃಹತ್ ಮುನ್ನಡೆ ಗಳಿಸುವ ಆತ್ಮವಿಶ್ವಾಸದಲ್ಲಿತ್ತು. ಆದರೆ ಮಂಗಳವಾರ ಶಾರ್ದೂಲ್ (17.5–3–61–7) ಮೋಡಿ ಮಾಡಿದರು. ಅದರಿಂದಾಗಿ ಆತಿಥೇಯ ಬಳಗವು 79.4 ಓವರ್‌ಗಳಲ್ಲಿ 229 ರನ್ ಗಳಿಸಿ ಆಲೌಟ್ ಆಯಿತು. ಕೇವಲ 27 ರನ್‌ಗಳ ಮುನ್ನಡೆ ಪಡೆಯಿತು. ಕೀಗನ್ ಪೀಟರ್ಸನ್ (62, 118ಎ, 4x9) ತೆಂಬಾ ಬವುಮಾ (51; 60ಎ, 4X6, 6X1), ಕೈಲ್ ವೆರೆಯನ್, ಮಾರ್ಕೊ ಜ್ಯಾನ್ಸನ್ ಮತ್ತು ಕೇಶವ್ ಮಹಾರಾಜ್ ತಲಾ 21 ರನ್ ಗಳಿಸಿದ್ದರಿಂದ ತಂಡವು 200ರ ಗಡಿ ದಾಟಿತು. 179 ರನ್‌ಗಳಿಗೆ ಏಳು ವಿಕೆಟ್ ಕಳೆದುಕೊಂಡಿದ್ದ ತಂಡವು ಮುನ್ನಡೆ ಗಳಿಸಿತು.

ಎರಡನೇ ಇನಿಂಗ್ಸ್ ಆರಂಭಿಸಿದ ಭಾರತ ತಂಡವು 20 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 85 ರನ್ ಗಳಿಸಿತು. 'ಕರ್ನಾಟಕದ ಜೋಡಿ' ರಾಹುಲ್ (24) ಮತ್ತು ಮಯಂಕ್ ಅಗರವಾಲ್ (44) ಬೇಗನೆ ಔಟಾದರು. ಆದರೆ ಕಳೆದ ಕೆಲವು ಪಂದ್ಯಗಳಲ್ಲಿ ಲಯ ಕಂಡುಕೊಳ್ಳಲು ಪರದಾಡುತ್ತಿರುವ ಚೇತೇಶ್ವರ್ ಪೂಜಾರ (ಬ್ಯಾಟಿಂಗ್ 35) ಮತ್ತು ಅಜಿಂಕ್ಯ ರಹಾನೆ (ಬ್ಯಾಟಿಂಗ್ 11) ದಿನದಾಟದ ಮುಕ್ತಾಯದವರೆಗೂ ವಿಕೆಟ್ ಪತನಕ್ಕೆ ಅವಕಾಶ ಕೊಡಲಿಲ್ಲ. ಇದರಿಂದಾಗಿ ತಂಡವು 58 ರನ್‌ಗಳ ಮುನ್ನಡೆ ಸಾಧಿಸಿದೆ. ಎರಡನೇ ದಿನದಾಟದಲ್ಲಿ ಪತನವಾದ ಒಟ್ಟು 11 ವಿಕೆಟ್‌ಗಳೂ ಮಧ್ಯಮವೇಗಿಗಳ ಪಾಲಾದವು.

ಪಿಚ್‌ನಲ್ಲಿ ಚೆಂಡು ಟೆನಿಸ್‌ಬಾಲ್ ರೀತಿಯಲ್ಲಿ ಪುಟಯುತ್ತಿದ್ದು, 180 ರಿಂದ 200 ರನ್‌ಗಳ ಗುರಿಯೂ ನಾಲ್ಕನೇ ಇನಿಂಗ್ಸ್‌ನಲ್ಲಿ ಕಠಿಣವಾಗಲಿದೆ. ಮಳೆ ಮತ್ತು ಹವಾಮಾನ ವೈಪರಿತ್ಯ ಕಾಡದಿದ್ದರೆ ನಾಲ್ಕನೇ ದಿನವೇ ಪಂದ್ಯದ ಫಲಿತಾಂಶ ಹೊರಬೀಳುವ ಎಲ್ಲ ಸಾಧ್ಯತೆಗಳೂ ಇವೆ.

ಶಾರ್ದೂಲ್ ಮಿಂಚು: ಸೋಮವಾರ ಸಂಜೆ ಮೊದಲ ಇನಿಂಗ್ಸ್ ಆರಂಭಿಸಿದ್ದ ಆತಿಥೇಯ ತಂಡವು ಒಂದು ವಿಕೆಟ್‌ಗೆ 35 ರನ್ ಗಳಿಸಿತ್ತು.

ಮುಖ್ಯಾಂಶಗಳು
- ನಾಲ್ಕು ಕ್ಯಾಚ್ ಪಡೆದ ವಿಕೆಟ್‌ಕೀಪರ್ ರಿಷಭ್ ಪಂತ್
- ಸ್ಪಿನ್ನರ್‌ಗಳಿಗೆ ಸಿಗದ ಒಂದೂ ವಿಕೆಟ್
- ಟೆಸ್ಟ್‌ನಲ್ಲಿ ಮೊದಲ ಬಾರಿ ಐದು ವಿಕೆಟ್ ಗೊಂಚಲು ಗಳಿಸಿದ ಶಾರ್ದೂಲ್

ಕೀಗನ್ ಪೀಟರ್ಸನ್

ಕ್ರೀಸ್‌ನಲ್ಲಿದ್ದ ಕೀಗನ್ ಪೀಟರ್ಸನ್ ಮತ್ತು ನಾಯಕ ಡೀನ್ ಎಲ್ಗರ್ ತಾಳ್ಮೆಯ ಜೊತೆಯಾಟವಾಡಿದರು. ಎರಡನೇ ವಿಕೆಟ್‌ಗೆ 74 ರನ್ ಸೇರಿಸಿದರು. ಇನಿಂಗ್ಸ್‌ಗೆ ಬಲ ತುಂಬುವಂತಹ ಆಟವಾಡಿದರು.

ಆದರೆ, ಊಟದ ವಿರಾಮಕ್ಕೆ ಮುಂಚಿನ ಐದು ಓವರ್‌ಗಳಲ್ಲಿ ಚಿತ್ರಣ ಬದಲಾಯಿತು. ಶಾರ್ದೂಲ್ ಸ್ವಿಂಗ್ ಮೋಡಿ ಮೇಲುಗೈ ಸಾಧಿಸಿತು. ಡೀನ್ ಎಲ್ಗರ್ (28; 120ಎ), ಕೀಗನ್ ಪೀಟರ್ಸನ್ ಮತ್ತು ವ್ಯಾನ್ ಡರ್ ಡಸೆ (1) ವಿಕೆಟ್‌ಗಳನ್ನು ತಮ್ಮ ಬುಟ್ಟಿಗೆ ಹಾಕಿಕೊಂಡರು.

ಈ ಹಂತದಲ್ಲಿ ಸ್ನಾಯುಸೆಳೆತದಿಂದ ಬಳಲಿದ ಮೊಹಮ್ಮದ್ ಸಿರಾಜ್ ವಿಶ್ರಾಂತಿಗೆ ತೆರಳಿದರು. ಊಟದ ನಂತರ ಮತ್ತೆ ಮರಳಿದರು. ವಿರಾಮದ ನಂತರ ಶಾರ್ದೂಲ್ ದಾಳಿ ಮುಂದುವರಿಯಿತು. ವೆರೆಯನ್, ಅರ್ಧಶತಕ ಗಳಿಸಿದ ತೆಂಬಾ ಬವುಮಾ, ಮಾರ್ಕೊ ಜ್ಯಾನ್ಸನ್ ವಿಕೆಟ್‌ಗಳನ್ನು ಕಿತ್ತರು. ಮಿಂಚಿದ ಮಹಾರಾಜ್ ಅವರನ್ನು ಕ್ಲೀನ್‌ಬೌಲ್ಡ್ ಮಾಡಿದ ಬೂಮ್ರಾ ಸಂಭ್ರಮಿಸಿದರು. ಕೊನೆಯಲ್ಲಿ ಲುಂಗಿ ಗಿಡಿ ವಿಕೆಟ್ ಕೂಡ ಶಾರದೂಲ್ ಪಾಲಾಯಿತು.

ವಿಕೆಟ್ ಕೀಪರ್ ರಿಷಭ್ ಪಂತ್ ಪಾತ್ರವೂ ಇದರಲ್ಲಿ ಪ್ರಮುಖವಾಗಿತ್ತು. ನಾಲ್ಕು ಅಮೋಘ ಕ್ಯಾಚ್‌ಗಳನ್ನು ಪಡೆದರು. ಅವರ ಚುರುಕಾದ ಕೀಪಿಂಗ್ ಕೂಡ ಗಮನ ಸೆಳೆಯಿತು.

ಸ್ಕೋರ್ ಕಾರ್ಡ್

ಭಾರತ ಮೊದಲ ಇನಿಂಗ್ಸ್ 202 (63.1 ಓವರ್)
ದಕ್ಷಿಣ ಆಫ್ರಿಕಾ ಮೊದಲ ಇನಿಂಗ್ಸ್ 229 (79.4 ಓವರ್)
(ಸೋಮವಾರ 18 ಓವರ್‌ಗಳಲ್ಲಿ 1 ವಿಕೆಟ್‌ಗೆ 35))
ಎಲ್ಗರ್ ಸಿ ಪಂತ್ ಬಿ ಠಾಕೂರ್ 28 (120 ಎ, 4x4), ಪೀಟರ್ಸನ್ ಸಿ ಮಯಂಕ್ ಬಿ ಠಾಕೂರ್ 62 (118ಎ, 4x9), ಡಸೆ ಸಿ ಪಂತ್ ಬಿ ಠಾಕೂರ್ 1 (17ಎ), ಬವುಮಾ ಸಿ ಪಂತ್ ಬಿ ಠಾಕೂರ್ 51 (60ಎ, 4X6, 6X1), ವೆರೇನ್ ಎಲ್‌ಬಿಡಬ್ಲ್ಯು ಬಿ ಠಾಕೂರ್ 21 (72ಎ, 4X2), ಜ್ಯಾನ್ಸನ್ ಸಿ ಮತ್ತು ಬಿ ಠಾಕೂರ್ 21 (34ಎ, 4X3), ರಬಾಡ ಸಿ ಸಿರಾಜ್ ಬಿ ಶಮಿ 0 (6ಎ), ಮಹಾರಾಜ್ ಬಿ ಬೂಮ್ರಾ 21 (29ಎ, 4X3), ಡುಯೇನ್ ಔಟಾಗದೆ 1 (12ಎ), ಗಿಡಿ ಸಿ ಪಂತ್ ಬಿ ಠಾಕೂರ್ 0 (1ಎ)
ಇತರೆ (ಬೈ 4, ಲೆಗ್‌ಬೈ 4, ನೋಬಾಲ್ 3, ವೈಡ್ 5) 16
ವಿಕೆಟ್ ಪತನ: 2-28 (ಡೀನ್ ಎಲ್ಗರ್, 38.5), 3-101 (ಕೀಗನ್ ಪೀಟರ್ಸನ್, 42.6), 4-102 (ರಸ್ಸಿ ವ್ಯಾನ್ ಡರ್ ಡಸೆ, 44.4), 5-162 (ಕೈಲ್ ವೆರೇನ್, 64.6), 6-177 (ತೆಂಬಾ ಬವುಮಾ, 66.3), 7-179 (ಕಗಿಸೊ ರಬಾಡ, 67.3), 8-217 (ಕೇಶವ ಮಹಾರಾಜ್, 75.2), 9-228 (ಮಾರ್ಕೊ ಜ್ಯಾನ್ಸನ್, 79.1), 10-229 (ಲುಂಗಿ ಗಿಡಿ, 79.4)
ಬೌಲಿಂಗ್: ಜಸ್‌ಪ್ರೀತ್ ಬೂಮ್ರಾ 21–5–49–1, ಮೊಹಮ್ಮದ್ ಶಮಿ 21–5–52–2, ಮೊಹಮ್ಮದ್ ಸಿರಾಜ್ 9.5–2–24–0, ಶಾರ್ದೂಲ್ ಠಾಕೂರ್ 17.5–3–61–7, ರವಿಚಂದ್ರನ್ ಅಶ್ವಿನ್ 10–1–35–0
ಭಾರತ ಎರಡನೇ ಇನಿಂಗ್ಸ್ 2ಕ್ಕೆ 85 (20 ಓವರ್)
ರಾಹುಲ್ ಸಿ ಮರ್ಕರಮ್ ಬಿ ಜ್ಯಾನ್ಸನ್ 8 (21ಎ, 4X1), ಮಯಂಕ್ ಎಲ್‌ಬಿಡಬ್ಲ್ಯು ಡುಯೇನ್ 23 (37ಎ, 4X5), ಪೂಜಾರ ಬ್ಯಾಟಿಂಗ್ 35 (42ಎ, 4X7), ರಹಾನೆ ಬ್ಯಾಟಿಂಗ್ 11 (22ಎ, 4X1)
ಇತರೆ (ಬೈ 2, ಲೆಗ್‌ಬೈ 4, ನೋಬಾಲ್ 2) 8
ವಿಕೆಟ್ ಪತನ: 1–24 (ಕೆ.ಎಲ್. ರಾಹುಲ್, 6.5), 2–44 (ಮಯಂಕ್ ಅಗರವಾಲ್, 11.4)
ಬೌಲಿಂಗ್: ಕಗಿಸೊ ರಬಾಡ 6–1–26–0 ಡುಯೇನ್ ಒಲಿವಿಯರ್ 4–0–22–1, ಲುಂಗಿ ಗಿಡಿ 3–1–5–0, ಮಾರ್ಕೊ ಜ್ಯಾನ್ಸನ್ 6–2–18–1, ಕೇಶವ ಮಹಾರಾಜ್ 1–0–8–0

ಆಸ್ಟ್ರೇಲಿಯಾ ತಂಡಕ್ಕೆ ಸ್ಕಾಟ್

ಕ್ರಿಕೆಟ್: ಆ್ಯಷಸ್ ಸರಣಿಯ ನಾಲ್ಕನೇ ಟೆಸ್ಟ್ ಇಂದಿನಿಂದ

ಆಸ್ಟ್ರೇಲಿಯಾ ತಂಡದ ಕೋಚ್ ಜಸ್ಟಿನ್ ಲ್ಯಾಂಗರ್ ಮತ್ತುಬ್ಯಾಟರ್ ಡೇವಿಡ್ ವಾರ್ನರ್ ಪಿಚ್ ಪರಿಶೀಲಿಸಿದರು –ಎಎಫ್‌ಪಿ ಚಿತ್ರ

ಸಿಡ್ನಿ (ಎಪಿ): ಮೆಲ್ಬರ್ನ್ ಟೆಸ್ಟ್‌ನಲ್ಲಿ ತಮ್ಮ ಬಿರುಗಾಳಿ ವೇಗದ ದಾಳಿಯಿಂದ ಇಂಗ್ಲೆಂಡ್ ತಂಡವು ಕುಸಿಯಲು ಕಾರಣರಾಗಿದ್ದ ಸ್ಕಾಟ್ ಬೊಲ್ಯಾಂಡ್ ಬುಧವಾರ ಆರಂಭವಾಗಲಿರುವ ಆ್ಯಷಸ್ ಸರಣಿಯ ನಾಲ್ಕನೇ ಟೆಸ್ಟ್‌ನಲ್ಲಿ ಸ್ಥಾನ ಪಡೆದಿದ್ದಾರೆ.

ಗಾಯಗೊಂಡು ಎರಡು ಪಂದ್ಯಗಳನ್ನು ತಪ್ಪಿಸಿಕೊಂಡಿದ್ದ ಜೋಶ್ ಹ್ಯಾಜಲ್‌ವುಡ್ ಈ ಪಂದ್ಯಕ್ಕೆ ಮರಳುವ ಸಾಧ್ಯತೆಗಳಿವೆ ಎಂದು ಹೇಳಲಾಗಿತ್ತು. ಆದರೆ, ಅವರು ಇನ್ನೂ ಫಿಟ್ ಆಗಿರದ ಕಾರಣ ಸ್ಕಾಟ್ ಸ್ಥಾನ ಉಳಿಸಿಕೊಂಡರು. ಮೂರನೇ ಪಂದ್ಯದಲ್ಲಿ ಅವರು ಆರು ವಿಕೆಟ್‌ಗಳನ್ನು ಗಳಿಸಿದ್ದರು. ಕೋವಿಡ್‌ನಿಂದ ಬಳಲುತ್ತಿರುವ ಟ್ರಾವಿಸ್ ಹೆಡ್ ಬದಲು ಉಸ್ಮಾನ್ ಖ್ವಾಜಾ ಸ್ಥಾನ ಗಳಿಸಿದ್ದಾರೆ.5 ಪಂದ್ಯಗಳ ಸರಣಿಯನ್ನು 3–0ಯಿಂದ ಕೈವಶ ಮಾಡಿಕೊಂಡಿರುವ ಆಸ್ಟ್ರೇಲಿಯಾ ತಂಡ ಈಗ ಕ್ಲೀನ್‌ಸ್ವೀಪ್ ಮೇಲೆ ಕಣ್ಣಿಟ್ಟಿದೆ. ಸಿಡ್ನಿ ಪಿಚ್ ಪರಿಶೀಲಿಸಿದ ನಂತರ ನೇಥನ್ ಲಯನ್ ಜೊತೆಗೆ ಎರಡನೇ ಸ್ಪಿನ್ನರ್ ಮಿಚ್ ಸ್ವಿಪ್ಸನ್ ಅವರನ್ನು ಕಣಕ್ಕಿಳಿಸುವ ಸಾಧ್ಯತೆ ಇದೆ.

ಆದರೆ ಸೋತು ಸುಣ್ಣವಾಗಿರುವ ಇಂಗ್ಲೆಂಡ್ ತಂಡಕ್ಕೆ ಮತ್ತೊಂದು ಹೊಡೆತ ಬಿದ್ದಿದೆ. ಕೊರೊನಾ ಸೋಂಕಿಗೊಳಗಾಗಿರುವ ಮುಖ್ಯ ಕೋಚ್ ಕ್ರಿಸ್ ಸಿಲ್ವರ್ ವುಡ್ ಪ್ರತ್ಯೇಕವಾಸಕ್ಕೆ ತೆರಳಿದ್ದಾರೆ. ಸಹಾಯಕ ಕೋಚ್ ಗ್ರಹಾಂ ಥೋರ್ಪ್ ಮಾರ್ಗದರ್ಶನದಲ್ಲಿ ತಂಡ ಕಣಕ್ಕಿಳಿಯಲಿದೆ. ಬೌಲಿಂಗ್‌ನಲ್ಲಿ ಒಲಿ ರಾಬಿನ್ಸನ್, ಅನುಭವಿ ಜಿಮ್ಮಿ ಆ್ಯಂಡರ್ಸನ್ ಉತ್ತಮ ಲಯದಲ್ಲಿದ್ದಾರೆ. ಆದರೆ, ನಾಯಕ ಜೋ ರೂಟ್ ಬಿಟ್ಟರೆ ಉಳಿದ ಬ್ಯಾಟರ್‌ಗಳು ನಿರೀಕ್ಷಿತ ಆಟವಾಡಿಲ್ಲದಿರುವುದು ತಂಡದ ಚಿಂತೆಯಾಗಿದೆ. ಸಮಾಧಾನಕರ ಗೆಲುವಿಗಾಗಿ ಹೋರಾಡುವ ಒತ್ತಡವೂ ತಂಡದ ಮೇಲೆ ಇದೆ.

ಪಂದ್ಯ ಆರಂಭ: ಬೆಳಿಗ್ಗೆ 5
ನೇರಪ್ರಸಾರ: ಸೋನಿ ಸಿಕ್ಸ್

ಕೋವಿಡ್ ಹೆಚ್ಚಳ: ರಣಜಿ ಟ್ರೋಫಿ ಟೂರ್ನಿ ಮುಂದೂಡಿಕೆ

ಬೆಂಗಳೂರು: ದೇಶದಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚುತ್ತಿರುವುದರಿಂದ ಇದೇ ತಿಂಗಳು ಆರಂಭವಾಗಬೇಕಿದ್ದ ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯನ್ನು ಮುಂದೂಡಲಾಗಿದೆ.

ದೇಶಿ ಕ್ರಿಕೆಟ್ ಋತುವಿನ ಇತರ ಟೂರ್ನಿಗಳನ್ನೂ ಈ ಸಂದರ್ಭದಲ್ಲಿ ಮುಂದೂಡಲಾಗಿದೆ. ಕರ್ನಲ್ ಸಿ.ಕೆ. ನಾಯ್ಡು ಟ್ರೋಫಿ, ಸೀನಿಯರ್ ಮಹಿಳೆಯರ ಟಿ20 ಲೀಗ್ ಟೂರ್ನಿಗಳು ಅದರಲ್ಲಿ ಸೇರಿವೆ ಎಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಕಾರ್ಯದರ್ಶಿ ಜಯ್ ಶಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೋವಿಡ್ ಕಾರಣದಿಂದಾಗಿ 2020ರ ರಣಜಿ ಟ್ರೋಫಿಯನ್ನು ರದ್ದುಗೊಳಿಸಲಾಗಿತ್ತು. ಟೂರ್ನಿಯ ಇತಿಹಾಸದಲ್ಲಿಯೇ ಮೊದಲ ಬಾರಿ ರದ್ದಾಗಿತ್ತು. ಈ ತಿಂಗಳು ರಣಜಿ ಟೂರ್ನಿ ಆರಂಭವಾಗಬೇಕಿತ್ತು. ಫೆಬ್ರುವರಿಯಲ್ಲಿ ಉಳಿದ ಟೂರ್ನಿಗಳು ನಡೆಯಲಿದ್ದವು.

'ಆಟಗಾರರು, ನೆರವು ಸಿಬ್ಬಂದಿ, ಅಧಿಕಾರಿಗಳು ಮತ್ತಿತರರ ಆರೋಗ್ಯ ಸುರಕ್ಷತೆಗೆ ನಾವು ಪ್ರಾಮುಖ್ಯತೆ ಕೊಡುತ್ತೇವೆ. ಆದ್ದರಿಂದ ಈಗಿನ ಪರಿಸ್ಥಿತಿಯಲ್ಲಿ ಮೂರು ಟೂರ್ನಿಗಳನ್ನು ಮುಂದೂಡಲು ತೀರ್ಮಾನಿಸಲಾಗಿದೆ' ಎಂದು ಜಯ್ ಶಾ ತಿಳಿಸಿದ್ದಾರೆ.

ಸೌರಾಷ್ಟ್ರದ ಕ್ರಿಕೆಟಿಗ ಸಾವು

ರಾಜ್‌ಕೋಟ್ (ಪಿಟಿಐ): ಕೋವಿಡ್–19ರಿಂದ ಬಳಲುತ್ತಿದ್ದ ಸೌರಾಷ್ಟ್ರದ ಮಾಜಿ ಕ್ರಿಕೆಟಿಗ ಅಂಬಾಪ್ರಥಾಸಿಂಗ್ ಜಡೇಜ (69) ಮಂಗಳವಾರ ಮೃತಪಟ್ಟಿದ್ದಾರೆ. ಸೌರಾಷ್ಟ್ರ ಕ್ರಿಕೆಟ್ ಸಂಸ್ಥೆ (ಎಸ್‌ಸಿಎ) ಈ ವಿಷಯ ತಿಳಿಸಿದೆ.

ಜಾಮ್‌ನಗರದ ಜಡೇಜ, ಬಲಗೈ ಮಧ್ಯಮವೇಗಿ ಮತ್ತು ಬಲಗೈ ಬ್ಯಾಟರ್ ಆಗಿದ್ದರು. ಎಂಟು ರಣಜಿ ಟ್ರೋಫಿ ಪಂದ್ಯಗಳಲ್ಲಿ ಸೌರಾಷ್ಟ್ರ ತಂಡವನ್ನು ಪ್ರತಿನಿಧಿಸಿದ್ದರು. ಗುಜರಾತ್‌ನ ಡಿಎಸ್‌ಪಿ ಆಗಿಯೂ ಕಾರ್ಯನಿರ್ವಹಿಸಿದ್ದರು.

ಅಭಿಷೇಕ್ ದಾಲ್ಮಿಯಾ, ಶುಕ್ಲಾಗೆ ಸೋಂಕು: ಬಂಗಾಳ ಕ್ರಿಕೆಟ್ ಸಂಸ್ಥೆಯ ಅಧ್ಯಕ್ಷ (ಸಿಎಬಿ) ಅಧ್ಯಕ್ಷ ಅಭಿಷೇಕ್ ದಾಲ್ಮಿಯಾ, ತಂಡದ ಮಾಜಿ ನಾಯಕ ಮತ್ತು 23 ವರ್ಷದೊಳಗಿನವರ ತಂಡದ ಹಾಲಿ ಕೋಚ್ ಲಕ್ಷ್ಮಿರತನ್ ಶುಕ್ಲಾ ಅವರಿಗೂ ಕೋವಿಡ್ ಖಚಿತಪಟ್ಟಿದೆ.

ಆಸ್ಟ್ರೇಲಿಯಾ ಓಪನ್: ಜೊಕೊವಿಚ್ ಕಣಕ್ಕೆ

ಮೆಲ್ಬರ್ನ್ (ರಾಯಿಟರ್ಸ್): ಕೋವಿಡ್–19 ಲಸಿಕೆ ತೆಗೆದುಕೊಳ್ಳುವುದರಿಂದ 'ವೈದ್ಯಕೀಯ ವಿನಾಯಿತಿ' ಪಡೆದಿರುವ ನೊವಾಕ್ ಜೊಕೊವಿಚ್ ಅವರು ಆಸ್ಟ್ರೇಲಿಯಾ ಓಪನ್ ಟೆನಿಸ್ ಟೂರ್ನಿಯಲ್ಲಿ ಕಣಕ್ಕಿಳಿಯುವುದಾಗಿ ಪ್ರಕಟಿಸಿದ್ದಾರೆ.

ವಿಶ್ವ ಕ್ರಮಾಂಕದಲ್ಲಿ ಅಗ್ರಸ್ಥಾನದಲ್ಲಿರುವ ಸರ್ಬಿಯಾದ ಜೊಕೊವಿಚ್, ಲಸಿಕೆ ತೆಗೆದುಕೊಂಡಿದ್ದಾರೊ ಇಲ್ಲವೊ ಎಂಬುದನ್ನು ಬಹಿರಂಗಪಡಿಸಲು ನಿರಾಕರಿಸಿದ್ದರು. ಆಸ್ಟ್ರೇಲಿಯಾದ ಕ್ವಾರಂಟೈನ್ ನಿಯಮಗಳ ಕಾರಣ ಇದೇ 17ರಂದು ಆರಂಭವಾಗುವ ಟೂರ್ನಿಯಲ್ಲಿ ಕಣಕ್ಕಿಳಿಯುವ ಕುರಿತು ಅನುಮಾನ ವ್ಯಕ್ತಪಡಿಸಿದ್ದರು.

'ಲಸಿಕೆ ಕುರಿತು ವೈದ್ಯಕೀಯ ವಿನಾಯಿತಿಯ ಅನುಮತಿಯೊಂದಿಗೆ ಟೂರ್ನಿಗೆ ತೆರಳುತ್ತಿದ್ದೇನೆ' ಎಂದು ಸರ್ಬಿಯನ್ ಇನ್‌ಸ್ಟಾಗ್ರಾಂನಲ್ಲಿ ಬರೆದುಕೊಂಡಿದ್ದಾರೆ.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಪೌಷ್ಟಿಕ ಆಹಾರ ಸೇವಿಸಿ

ಪಶ್ಚಿಮ ಬಂಗಾಳದಲ್ಲಿ ಚುನಾವಣೋತ್ತರ ಹಿಂಸಾಚಾರ

ಹೈಕೋರ್ಟ್‌ಗೆ ಸಿಬಿಐ ವರದಿ ಸಲ್ಲಿಕೆ

ಕೋಲ್ಕತ್ತ (ಪಿಟಿಐ): ಕಳೆದ ವರ್ಷ ಏಪ್ರಿಲ್‌ನಲ್ಲಿ ಪಶ್ಚಿಮ ಬಂಗಾಳ ವಿಧಾನಸಭೆಗೆ ನಡೆದ ಚುನಾವಣೆ ನಂತರ ಸಂಭವಿಸಿದ್ದ ಹಿಂಸಾಚಾರ ಕುರಿತು ತನಿಖೆ ನಡೆಸುತ್ತಿರುವ ಸಿಬಿಐ, ಕಲ್ಕತ್ತಾ ಹೈಕೋರ್ಟ್‌ಗೆ ವಸ್ತುಸ್ಥಿತಿ ವರದಿಯನ್ನು ಸಲ್ಲಿಸಿದೆ.

ಮುಖ್ಯನ್ಯಾಯಮೂರ್ತಿ ಪ್ರಕಾಶ್ ಶ್ರೀವಾಸ್ತವ ನೇತೃತ್ವದ ವಿಭಾಗೀಯ ಪೀಠಕ್ಕೆ ಸಿಬಿಐ ವರದಿ ಸಲ್ಲಿಸಿದೆ.

ರಾಜಕೀಯ ಪ್ರತೀಕಾರದಿಂದ ನಡೆದಿತ್ತು ಎನ್ನಲಾದ ಹಿಂಸಾಚಾರ ನಂತರ ಹಲವರು ಮನೆಗಳನ್ನು ತೊರೆದಿದ್ದರು. ಈ ಜನರು ಮನೆಗಳಿಗೆ ಮರಳಿರುವ ಕುರಿತು ಮುಂದಿನ ವಿಚಾರಣೆ ವೇಳೆ ಪ್ರಮಾಣಪತ್ರ ಸಲ್ಲಿಸುವಂತೆ ವಿಭಾಗೀಯ ಪೀಠವು ರಾಜ್ಯ ಸರ್ಕಾರಕ್ಕೆ ಸೂಚಿಸಿತು. ವಿಚಾರಣೆಯನ್ನು ಜ.24ಕ್ಕೆ ಮುಂದೂಡಿತು.

ಹಿಂಸಾಚಾರ ಆರೋಪಗಳ ತನಿಖೆ ನಡೆಸುವಂತೆ ಹೈಕೋರ್ಟ್‌ನ ಐವರು ನ್ಯಾಯಾಧೀಶರ ಪೀಠ ಸಿಬಿಐಗೆ ನಿರ್ದೇಶನ ನೀಡಿತ್ತು. ಹೈಕೋರ್ಟ್‌ನ ಸೂಚನೆಯಂತೆ ಪೊಲೀಸ್ ಇಲಾಖೆ 64 ಘಟನೆಗಳ ಕುರಿತ ತನಿಖೆಯನ್ನು ತನಗೆ ಒಪ್ಪಿಸಿತ್ತು ಎಂದು ಸಿಬಿಐ ತಿಳಿಸಿದೆ.

ಬಂಧಿತ ವಿದ್ಯಾರ್ಥಿ ಜ.10ರ ವರೆಗೆ ಪೊಲೀಸ್ ಕಸ್ಟಡಿಗೆ

'ಬುಲ್ಲಿ ಬಾಯಿ': ಮಹಿಳೆ ಬಂಧನ

ಮುಂಬೈ (ಪಿಟಿಐ): 'ಬುಲ್ಲಿ ಬಾಯಿ' ಆ್ಯಪ್ ಪ್ರಕರಣಕ್ಕೆ ಸಂಬಂಧಿಸಿದಂತೆ ಮುಂಬೈ ಸೈಬರ್ ಘಟಕದ ಪೊಲೀಸರು ಉತ್ತರಾಖಂಡದಲ್ಲಿ 19 ವರ್ಷದ ಮಹಿಳೆಯನ್ನು ಬಂಧಿಸಿದ್ದಾರೆ ಎಂದು ಅಧಿಕಾರಿಗಳು ಮಂಗಳವಾರ ತಿಳಿಸಿದ್ದಾರೆ.

ಇದೇ ಪ್ರಕರಣಕ್ಕೆ ಸಂಬಂಧಿಸಿ, ಸೈಬರ್ ಘಟಕದ ಪೊಲೀಸರು ಬೆಂಗಳೂರಿನಲ್ಲಿ ಎಂಜಿನಿಯರಿಂಗ್ ವಿದ್ಯಾರ್ಥಿ ವಿಶಾಲ್ ಕುಮಾರ್ ಎಂಬಾತನನ್ನು ಬಂಧಿಸಿದ್ದಾರೆ. ಬಂಧಿತನನ್ನು ಬಾಂದ್ರಾ ಮೆಟ್ರೊಪಾಲಿಟನ್ ಕೋರ್ಟ್‌ಗೆ ಹಾಜರುಪಡಿಸಲಾಗಿದ್ದು, ಜ. 10ರವರೆಗೆ ಆತನನ್ನು ಪೊಲೀಸ್ ಕಸ್ಟಡಿಗೆ ಒಪ್ಪಿಸಿ ಕೋರ್ಟ್ ಆದೇಶಿಸಿತು. ಬೆಂಗಳೂರಿನಲ್ಲಿ ವಿಶಾಲ್ ಕುಮಾರ್‌ಗೆ ಸಂಬಂಧಪಟ್ಟ ಸ್ಥಳಗಳಲ್ಲಿ ಶೋಧ ಕಾರ್ಯ ಕೈಗೊಳ್ಳಲು ಸಹ ಪೊಲೀಸರಿಗೆ ಕೋರ್ಟ್ ಅನುಮತಿ ನೀಡಿತು.

ಉತ್ತರಾಖಂಡದಲ್ಲಿ ಬಂಧಿಸಲಾಗಿರುವ ಮಹಿಳೆ ಈ ಪ್ರಕರಣದ ಪ್ರಮುಖ ಆರೋಪಿ ಎನ್ನಲಾಗಿದೆ. 'ಬಂಧಿತ ಮಹಿಳೆಯ ವಿಚಾರಣೆ ನಡೆಯುತ್ತಿದೆ. ಉತ್ತರಾಖಂಡದ ಕೋರ್ಟ್‌ಗೆ ಹಾಜರುಪಡಿಸಿ, ಕಾನೂನು ಪ್ರಕ್ರಿಯೆಗಳು ಪೂರ್ಣಗೊಂಡ ನಂತರ ಆಕೆಯನ್ನು ಮುಂಬೈಗೆ ಕರೆ ತರಲಾಗುವುದು' ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ಬಂಧಿತರಿಗೆ ಪರಸ್ಪರರ ಪರಿಚಯವಿದ್ದು, ಪ್ರಕರಣ ಕುರಿತು ತನಿಖೆ ಮುಂದುವರಿದಿದೆ' ಎಂದು ಹೇಳಿರುವ ಅಧಿಕಾರಿಗಳು, ಬಂಧಿತ ಮಹಿಳೆ ಕುರಿತು ಹೆಚ್ಚಿನ ವಿವರಗಳನ್ನು ಬಹಿರಂಗಪಡಿಸಿಲ್ಲ.

ಪಶ್ಚಿಮ ಮುಂಬೈನ ಸೈಬರ್ ಪೊಲೀಸ್ ಠಾಣೆಯು 'ಬುಲ್ಲಿ ಬಾಯಿ' ಅಪ್ಲಿಕೇಷನ್ ಅಭಿವೃದ್ಧಿಪಡಿಸಿದವರು ಮತ್ತು ಈ ಆ್ಯಪ್ ಅನ್ನು ಪ್ರಚಾರ ಮಾಡಿದ ಟ್ವಿಟರ್ ಬಳಕೆದಾರರ ವಿರುದ್ಧ ಪ್ರಕರಣ ದಾಖಲಿಸಿದೆ.

ಈ ಮಧ್ಯೆ, ಈ ಆ್ಯಪ್ ಅನ್ನು ಅಭಿವೃದ್ಧಿಪಡಿಸಿರುವವರ ಕುರಿತು ದೆಹಲಿ ಪೊಲೀಸರು ಗಿಟ್‌ಹಬ್ ವೇದಿಕೆಯಿಂದ ಮಾಹಿತಿ ಕೇಳಿದ್ದು, ಆ್ಯಪ್ ಬಗ್ಗೆ ಮೊದಲು ಟ್ವೀಟ್ ಮಾಡಿರುವ ವ್ಯಕ್ತಿಯ ಖಾತೆಯ ಬಗ್ಗೆ ವಿವರ ನೀಡುವಂತೆ ಟ್ವಿಟರ್ ಸಂಸ್ಥೆಗೂ ಪತ್ರ ಬರೆದಿದ್ದಾರೆ.

ಇಡಬ್ಲ್ಯುಎಸ್ ಮೀಸಲು ಕೋಟಾ ಇಂದು ವಿಚಾರಣೆ

ನವದೆಹಲಿ (ಪಿಟಿಐ): ನೀಟ್–ಪಿಜಿಯಲ್ಲಿ ಇಡಬ್ಲ್ಯುಎಸ್ ವರ್ಗದ ಮೀಸಲಾತಿ ಕೋಟಾ ಕುರಿತ ಪ್ರಕರಣದ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ಬುಧವಾರ (ಜ.5) ನಡೆಸಲಿದೆ. ತುರ್ತಾಗಿ ವಿಚಾರಣೆಗೆ ಪರಿಗಣಿಸಬೇಕು ಎಂಬ ಕೇಂದ್ರ ಸರ್ಕಾರದ ಮನವಿಗೆ 'ಸುಪ್ರೀಂ' ಸ್ಪಂದಿಸಿದೆ.

ಇದು ತ್ರಿಸದಸ್ಯ ಪೀಠದ ಪರಿಧಿಗೆ ಬರುವುದಾದರೆ ವಿಚಾರಣೆ ತೆಗೆದುಕೊಳ್ಳಲಾಗುವುದು ಎಂದು ಮುಖ್ಯನ್ಯಾಯಮೂರ್ತಿ ಎನ್.ವಿ.ರಮಣ ಅವರಿದ್ದ ತ್ರಿಸದಸ್ಯ ಪೀಠವು ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರಿಗೆ ತಿಳಿಸಿತು. ಪೂರ್ವ ನಿಗದಿಯಂತೆ ಗುರುವಾರ ಇದು ವಿಚಾರಣೆಗೆ ಬರಬೇಕಿತ್ತು.

ದಕ್ಷಿಣ ಧ್ರುವಕ್ಕೆ ಏಕಾಂಗಿ ಚಾರಣ

ಲಂಡನ್: ಬ್ರಿಟನ್ ಸೇನೆಯಲ್ಲಿ ಅಧಿಕಾರಿಯಾಗಿರುವ ಭಾರತ ಮೂಲದ ಕ್ಯಾಪ್ಟನ್ ಹರ್‌ಪ್ರೀತ್ ಚಂಡಿ ಅವರು ದಕ್ಷಿಣ ಧ್ರುವಕ್ಕೆ ಏಕಾಂಗಿಯಾಗಿ ಚಾರಣ ಕೈಗೊಂಡು ಯಶಸ್ವಿಯಾಗಿದ್ದಾರೆ.

ಈ ಸಾಧನೆ ಮಾಡಿರುವ ಭಾರತ ಮೂಲದ ಮೊದಲ ಮಹಿಳೆ ಎಂಬ ಕೀರ್ತಿಗೆ ಅವರು ಪಾತ್ರರಾಗಿದ್ದಾರೆ.

32 ವರ್ಷದ ಹರ್‌ಪ್ರೀತ್ ಚಂಡಿ ಅವರು ಸೇನೆಯಲ್ಲಿ ಫಿಜಿಯೊಥೆರಪಿಸ್ಟ್ ಆಗಿ ಕಾರ್ಯ ನಿರ್ವಹಿಸುತ್ತಿದ್ದು, 'ಪೋಲಾರ್ ಪ್ರೀತ್' ಎಂದೂ ಖ್ಯಾತರಾಗಿದ್ದಾರೆ.

40 ದಿನಗಳಲ್ಲಿ 1,127 ಕಿ.ಮೀ. ದೂರ ಕ್ರಮಿಸುವ ಮೂಲಕ ಅವರು ಅಂಟಾರ್ಕ್ಟಿಕಾಕ್ಕೆ ಕೈಗೊಂಡಿದ್ದ ಈ ಸಾಹಸಯಾತ್ರೆಯನ್ನು ಪೂರ್ಣಗೊಳಿಸಿದರು. ಚಾರಣ ಮುಕ್ತಾಯಗೊಂಡ ಕುರಿತು ಅವರು ತಮ್ಮ ಬ್ಲಾಗ್‌ನಲ್ಲಿ ಬರೆದುಕೊಂಡಿದ್ದಾರೆ. ಮೈನಸ್ 50 ಡಿಗ್ರಿ ಸೆಲ್ಸಿಯಸ್ ತಾಪಮಾನ, ಇನ್ನೊಂದೆಡೆ ಗಂಟೆಗೆ 60 ಮೈಲು ವೇಗದಲ್ಲಿ ಬೀಸುತ್ತಿದ್ದ ಗಾಳಿ. ಇಂತಹ ಪ್ರತಿಕೂಲ ಹವಾಮಾನದಲ್ಲಿಯೇ ಚಾರಣ ಕೈಗೊಂಡಿದ್ದ ಅವರು, ಚಾರಣದ ಪ್ರತಿ ಹಂತ ಕುರಿತು ಬ್ಲಾಗ್‌ನಲ್ಲಿ ವಿವರಿಸಿದ್ದಾರೆ.

ಗಾಲ್ವಾನ್ ಕಣಿವೆಯಲ್ಲಿ ಭಾರತೀಯ ಸೇನೆಯ ಯೋಧರು

ಗಾಲ್ವಾನ್ ಕಣಿವೆ: ಯೋಧರಿಂದ ಹೊಸ ವರ್ಷಾಚರಣೆ

ನವದೆಹಲಿ: ಹೊಸ ವರ್ಷಾಚರಣೆ ಅಂಗವಾಗಿ ಲಡಾಖ್‌ನ ಗಾಲ್ವಾನ್ ಕಣಿವೆಯಲ್ಲಿ ಯೋಧರು ತ್ರಿವರ್ಣ ಧ್ವಜವನ್ನು ಹಿಡಿದು ಸಂಭ್ರಮಿಸಿದ ಚಿತ್ರಗಳನ್ನು ಭದ್ರತಾಪಡೆಗಳು ಮಂಗಳವಾರ ಬಿಡುಗಡೆ ಮಾಡಿವೆ.

ಕೇಂದ್ರ ಕಾನೂನು ಸಚಿವ ಕಿರಣ್ ರಿಜಿಜು ಸಹ ಸೇನಾ ಪಡೆಯ ಸಂಭ್ರಮಾಚರಣೆಯ ಚಿತ್ರಗಳನ್ನು, 'ಹೊಸ ವರ್ಷದ ಪ್ರಯುಕ್ತ ಗಾಲ್ವಾನ್ ಕಣಿವೆಯಲ್ಲಿ ಭಾರತೀಯ ಸೇನೆಯ ವೀರ ಯೋಧರು' ಎಂಬ ಶೀರ್ಷಿಕೆಯೊಂದಿಗೆ ಟ್ವೀಟ್‌ನಲ್ಲಿ ಹಂಚಿಕೊಂಡಿದ್ದಾರೆ.

ಚೀನಾ ಸೈನಿಕರು ಮೂರು ದಿನಗಳ ಹಿಂದೆ, ಗಾಲ್ವಾನ್ ಕಣಿವೆಗೆ ಹೊಂದಿಕೊಂಡಿರುವ ಗಡಿ ಪ್ರದೇಶದಲ್ಲಿ ತಮ್ಮ ರಾಷ್ಟ್ರಧ್ವಜಾರೋಹಣ ನೆರವೇರಿಸಿದ್ದರು. ಇದರ ವಿಡಿಯೊವೊಂದನ್ನು ಸರ್ಕಾರಿ ಒಡೆತನದ ಮಾಧ್ಯಮ ಬಿಡುಗಡೆ ಮಾಡಿತ್ತು. ಇದಕ್ಕೆ ತಿರುಗೇಟು ನೀಡುವ ಉದ್ದೇಶದಿಂದ ಭಾರತೀಯ ಯೋಧರು ತ್ರಿವರ್ಣ ಧ್ವಜ ಹಿಡಿದು ಸಂಭ್ರಮಿಸಿರುವ ಚಿತ್ರಗಳನ್ನು ಈಗ ಬಿಡುಗಡೆ ಮಾಡಲಾಗಿದೆ.

ತ್ರಿವರ್ಣ ಧ್ವಜದ ಜೊತೆಗೆ 30 ಯೋಧರು ಇರುವುದನ್ನು ಚಿತ್ರವೊಂದರಲ್ಲಿ ಕಾಣಬಹುದಾಗಿದೆ.

'ಪ್ರಧಾನಿ ಏಕೆ ಮೌನವಾಗಿದ್ದಾರೆ'

ನವದೆಹಲಿ (ಪಿಟಿಐ): ಪೂರ್ವ ಲಡಾಖ್‌ನ ಪಾಂಗಾಂಗ್ ಸರೋವರದ ಬದಿಯಲ್ಲಿ ಚೀನಾ ಸೇತುವೆ ನಿರ್ಮಿಸುತ್ತಿರುವುದರ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಏಕೆ ಮೌನವಾಗಿದ್ದಾರೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಪ್ರಶ್ನಿಸಿದ್ದಾರೆ.

'ಕಿವುಡನ ಹಾಗೆ ಪ್ರಧಾನಿ ಮೌನವಾಗಿರುವುದು ಸರಿಯಲ್ಲ. ನಮ್ಮ ಭೂಮಿ, ಗಡಿಗಳ ವಾಸ್ತವ ಸ್ಥಿತಿಯ ಬಗ್ಗೆ ಜನರಿಗೆ ಗೊತ್ತಾಗಬೇಕು ಎಂದು ಅವರು ಟ್ವೀಟ್ ಮಾಡಿದ್ದಾರೆ. ಇದರೊಂದಿಗೆ ಲಡಾಖ್‌ನ ವಾಸ್ತವ ನಿಯಂತ್ರಣ ರೇಖೆಯ (ಎಲ್‌ಎಸಿ) ಬಳಿ ಕಳೆದ ಎರಡು ತಿಂಗಳಿನಿಂದ ಚೀನಾ ಸೇತುವೆ ನಿರ್ಮಿಸುತ್ತಿದೆ ಎಂದು ಹೇಳುವ ಮಾಧ್ಯಮ ವರದಿಯೊಂದನ್ನು ಹಂಚಿಕೊಂಡಿದ್ದಾರೆ.

'ಪ್ರಧಾನಿ ವಿವರಿಸ ಬೇಕು' (ಕೊಯಮತ್ತೂರು ವರದಿ): ಭಾರತ-ಚೀನಾ ಗಡಿಯಲ್ಲಿನ ಬೆಳವಣಿಗೆಗಳ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಅವರು ದೇಶದ ಜನತೆಗೆ ವಿವರಿಸಬೇಕು ಎಂದು ಸಿಪಿಐನ ಪ್ರಧಾನ ಕಾರ್ಯದರ್ಶಿ ಡಿ.ರಾಜಾ ಅವರು ಮೋದಿಯನ್ನು ಒತ್ತಾಯಿಸಿದ್ದಾರೆ.

ಉದ್ಯೋಗ ವಾಣಿ

ಕರ್ನಾಟಕದಲ್ಲಿ e ವಿನ್ ಪ್ರಾಜೆಕ್ಟ್‌ಗಾಗಿ ಜಿಲ್ಲಾ ಮಟ್ಟದ ನೇಮಕಾತಿ

XEAM ವೆಂಚರ್ಸ್ ಪ್ರೈ. ಲಿ., (ಹೆಚ್‌ಆರ್ & ಐಟಿಇಎಸ್ ಕಂಪನಿ) ಇವರು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಯುಎನ್‌ಡಿಪಿ ಯೋಜನೆಯ ಇಲೆಕ್ಟ್ರಾನಿಕ್ ವಾಕ್ಸಿನ್ ಇಂಟೆಲಿಜೆನ್ಸ್ ನೆಟ್‌ವರ್ಕ್ (eವಿನ್)–ಎ ಅಡಿಯಲ್ಲಿ ಕರ್ನಾಟಕದಲ್ಲಿ ಅಗತ್ಯವಿರುವ ಖಾಲಿ ಹುದ್ದೆಗಳಿಗಾಗಿ ಅರ್ಜಿಗಳನ್ನು ಆಹ್ವಾನಿಸಿದ್ದಾರೆ.

ಹುದ್ದೆಗಳು ಮತ್ತು ಸ್ಥಳಗಳು	ಖಾಲಿ ಹುದ್ದೆಗಳ ಸಂ.
ವಾಕ್ಸಿನ್ ಕೋಲ್ಡ್ ಚೈನ್ ಮ್ಯಾನೇಜರ್ (ಕರ್ನಾಟಕ)	04

XEAM VENTURES PVT. LTD. ಹೆಚ್ಚಿನ ವಿವರಗಳಿಗಾಗಿ ಮತ್ತು ಅರ್ಜಿ ಸಲ್ಲಿಸಲು ದಯವಿಟ್ಟು ಸಂದರ್ಶಿಸಿ www.xeamventures.com/evin-undp

HAL Education Committee (R)
HAL Facilities Management Division Building
Vimanapura Post, Bangalore – 560017
Ph No: 080 – 2523 6066

Invites applications for the post of 'PRINCIPAL' (2 Posts) for HAL Schools, Bangalore, affiliated to CBSE, New Delhi

Further details such as qualification, pay, age limit & mode of applying can be had by visiting School Websites (www.halec.co.in, www.halpublicschool.com, www.halnewpublicschool.co.in, www.halgnanajyotischool.co.in) and HAL website (www.hal-india.com). The last date for receipt of applications by post is 29.01.2022.

Sd/-
(Secretary)

INDO-MIM COMPLEXITY SIMPLIFIED
Walk-in interview for Precision Machining Division

Indo MIM Private Limited the world's fastest growing and largest installed MIM capacity Company. Engaged in Metal Injection Molding (MIM) technology, based at Bangalore. Indo-MIM has achieved a leadership in the field of MIM providing precision engineered products to more than 30 countries worldwide.
Indo-MIM Private Limited is expanding its Business in Precision Machining and looking for

CNC TURNING/ TURNMILL SETTER

Primary Responsibilities
- Operating & Setting turning/4-axis turnmill machines
- Trouble shooting and problem solving
- Maintaining in process inspection report & 5's

Skills Required
- Knowledge about root cause analysis
- Program knowledge in Fanuc/ siemens control
- Knowledge in part prove out on Turnmill machine
- Knowledge in GD&T drawing study & inspection method
- Knowledge in Aerospace standard.
- knowledge in cutting tools

Qualifications, Skills & Abilities
- Should be DME / BE Mech.
- Experience Minimum 5 to 15 years
- Preferably aerospace background

Date: 9th January 2022 Reporting Time 8.30 AM
Venue: Ujjwala International Hotel, V-2, TVS Cross, Peenya 1st Stage, Peenya, Bengaluru-560058
Contact Number: +919740016032
Email Address: manohar.g@indo-mim.com

THE KARNATAKA STATE CRICKET ASSOCIATION
M. Chinnaswamy Stadium, Cubbon Road, Bangalore - 560 001.

The Karnataka State Cricket Association(KSCA) is looking for suitable candidates for the following posts:-

Chief Executive Officer:- Senior Executive having proven experience in a similar capacity, having good administrative, technical, human resources and financial skills with requisite educational qualifications. They should be capable of coordinating with State/Central government and local authorities. Persons retired from Government / Semi Government or large private organizations of similar capacity will be preferred. Working Knowledge of Kannada is essential.

General Manager – Projects & Infrastructure :- Experienced Civil Engineering graduate with minimum experience of 25 years in Infrastructure/ Building construction etc. The person should be capable of handling contracts, maintenance and tendering works. They should have adequate computer knowledge. Persons retired from Government and Semi Government and large private organizations of similar capacity will be preferred. Working Knowledge of Kannada is essential.

Assistant Manager – Electrical Engineering :- Minimum of 8 years experience in construction industry in the Electrical field. Must be an Electrical Engineering graduate and have computer knowledge. Age – 30 to 40. Working Knowledge of Kannada is essential.

Assistant Manager – Accounts – KSCA Sports Centre:-
Commerce Graduate/CA Inter (completed), having minimum working experience of 5 years in Accounts related field. The Candidate should have adequate computer knowledge to work on ERP, Tally and other such requirements. Age – 25 to 35. Working Knowledge of Kannada is essential.

Personal Secretary : - Minimum of 8 years experience in similar capacity. Should be a graduate and computer savvy. Knowledge of shorthand and typing in English is essential. Must be excellent in English and have working knowledge of Kannada.

Senior Officer –Kannada:- Should be a Graduate and Proficient in Kannada. The Candidate Should have computer knowledge and Typing skills in Kannada. Should be able to independently correspond with the Government and other authorities concerned. Should also be able to translate letters from Kannada to English and also from English to Kannada.

Remuneration : Commensurate with qualifications and experience for all the posts.
For further details, please contact Mr. Nithin Prabhakar on Mobile 9036151410 or email nitin@mindparkour.in with a copy to hrd@ksca.co.in The applications can be downloaded through website www.ksca.cricket. Candidates should apply **on or before 12th January, 2022 by 5:00 PM**

Hon. Secretary, KSCA

‘ಹೊಸ ವರ್ಷದ ಯಶಸ್ಸಿಗೆ ದಿಕ್ಸೂಚಿ ಏಷ್ಯಾ ಕಪ್ ಹಾಕಿ’

ಸವಿತಾ ಪೂನಿಯ

ಬೆಂಗಳೂರು (ಪಿಟಿಐ): ಈ ವರ್ಷದ ಯಶಸ್ಸಿನ ಪಯಣಕ್ಕೆ ಏಷ್ಯಾ ಕಪ್ ಹಾಕಿ ಚಾಂಪಿಯನ್‌ಷಿಪ್ ದಿಕ್ಸೂಚಿಯಾಗಲಿದೆ ಎಂದು ಭಾರತ ಮಹಿಳಾ ಹಾಕಿ ತಂಡದ ಉಪನಾಯಕಿ ಸವಿತಾ ಪೂನಿಯಾ ಹೇಳಿದರು.

ಒಮನ್‌ನಲ್ಲಿ ಇದೇ 21ರಿಂದ 28ರವರೆಗೆ ಏಷ್ಯಾ ಕಪ್ ಟೂರ್ನಿ ನಡೆಯಲಿದೆ. ಹಾಲಿ ಚಾಂಪಿಯನ್ ಭಾರತ ತಂಡವು ಇಲ್ಲಿಯ ಭಾರತ ಕ್ರೀಡಾ ಪ್ರಾಧಿಕಾರದ ವಸತಿ ನಿಲಯದಲ್ಲಿ ಪೂರ್ವಸಿದ್ಧತೆ ನಡೆಸುತ್ತಿದೆ. ಈ ಕುರಿತು ಮಂಗಳವಾರ ಹಾಕಿ ಇಂಡಿಯಾ ನೀಡಿರುವ ಪ್ರಕಟಣೆಯಲ್ಲಿ ಸವಿತಾ ಹೇಳಿಕೆ ನೀಡಿದ್ದಾರೆ. ‘2017ರಲ್ಲಿ ನಮ್ಮ ತಂಡ ಏಷ್ಯಾ ಕಪ್ ಜಯಿಸಿತ್ತು. ಅದರಿಂದಾಗಿ ಲಂಡನ್‌ನಲ್ಲಿ ನಡೆದ ವಿಶ್ವಕಪ್ ಟೂರ್ನಿಗೆ ನೇರ ಅರ್ಹತೆ ಗಳಿಸಿದೆವು. ಅದು ನಮ್ಮ ತಂಡ ಮತ್ತು ಭಾರತದ ಮಹಿಳಾ ಹಾಕಿ ಕ್ರೀಡೆಯು ಬೆಳವಣಿಗೆಯತ್ತ ಮುಖ ಮಾಡಲು ಕಾರಣವಾಯಿತು. ಕಳೆದ ನಾಲ್ಕು ವರ್ಷಗಳಲ್ಲಿ ನಮ್ಮ ತಂಡದ ಸಾಧನೆಯ ಓಟ ಆಶಾದಾಯಕವಾಗಿದೆ’ ಎಂದು ಸವಿತಾ ಹೇಳಿದರು.‘ಈಚೆಗೆ ಒಲಿಂಪಿಕ್ಸ್‌ನಲ್ಲಿ ನಮ್ಮ ತಂಡದ ಸಾಧನೆಯು ಗಮನಾರ್ಹವಾಗಿತ್ತು. ಅದರಿಂದಾಗಿ ತಂಡಕ್ಕೆ ಬಹಳಷ್ಟು ಬೆಂಬಲ ಲಭಿಸಿದೆ. ದೊಡ್ಡ ಮಟ್ಟದ ಸ್ಪರ್ಧೆಗಳಲ್ಲಿ ಉತ್ತಮವಾಗಿ ಆಡುವುದರಿಂದ ಬೆಳವಣಿಗೆಗೆ ಬಹಳಷ್ಟು ಅವಕಾಶ ಸಿಗುತ್ತದೆ. ಆತ್ಮವಿಶ್ವಾಸ ವೃದ್ಧಿಸುತ್ತದೆ’ ಎಂದು ಸವಿತಾ ಅಭಿಪ್ರಾಯಪಟ್ಟರು.

10 ಸಾವಿರ ಮೀಟರ್ ಓಟದ ಸ್ಪರ್ಧೆಯಲ್ಲಿ ಮೂರು ಮಂದಿ ಕೂಟ ದಾಖಲೆ

ಆಳ್ವಾಸ್ ಕಾಲೇಜಿನ ಆದೇಶ್ ದಾಖಲೆ

• ಮಹೇಶ ಎಸ್. ಕನ್ನೇಶ್ವರ

ಮೂಡುಬಿದಿರೆ ಸ್ವರಾಜ್ ಮೈದಾನದಲ್ಲಿ ಮಂಗಳವಾರ ನಡೆದ 81ನೇ ಅಂತರ ವಿವಿ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನ 10 ಸಾವಿರ ಮೀಟರ್ ಓಟದ ಸ್ಪರ್ಧೆಯಲ್ಲಿ ನೂತನ ಕೂಟ ದಾಖಲೆ ದಾಖಲಿಸಿದ ಆಳ್ವಾಸ್ ಕಾಲೇಜಿನ ಆದೇಶ್

ಮೂಡುಬಿದಿರೆ: ಆತಿಥೇಯ ಮಂಗಳೂರು ವಿಶ್ವವಿದ್ಯಾಲಯದ ಆಳ್ವಾಸ್ ಕಾಲೇಜಿನ ಆದೇಶ್ ಮಂಗಳವಾರ ಆರಂಭವಾದ 81ನೇ ಅಖಿಲ ಭಾರತ ಅಂತರ ವಿಶ್ವವಿದ್ಯಾಲಯ ಪುರುಷರ ಅಥ್ಲೆಟಿಕ್ಸ್ ಕೂಟದ 10 ಸಾವಿರ ಮೀಟರ್ ಓಟದ ಸ್ಪರ್ಧೆಯಲ್ಲಿ ಕೂಟ ದಾಖಲೆ ಬರೆದರು.

ಸ್ವರಾಜ್ ಮೈದಾನದಲ್ಲಿ ನಡೆಯುತ್ತಿರುವ ಕೂಟದಲ್ಲಿ, ಆದೇಶ್ 29 ನಿಮಿಷ, 15.46 ಸೆಕೆಂಡುಗಳಲ್ಲಿ ಗುರಿ ಮುಟ್ಟಿದರು. ಈ ಹಿಂದೆ ಮಂಗಳೂರು ವಿಶ್ವವಿದ್ಯಾಲಯದವರೇ ಆದ ನಾಗೇಂದ್ರ ಪ್ರತಾಪ್ ಸಿಂಗ್ (ಕಾಲ: 29 ನಿಮಿಷ 42.19 ಸೆ) ಅವರು ನಿರ್ಮಿಸಿದ್ದ ದಾಖಲೆಯನ್ನು ಆದೇಶ್ ಮೀರಿನಿಂತರು.

ಜನನಾಯಕ್ ಚಂದ್ರಶೇಖರ್ ವಿಶ್ವವಿದ್ಯಾಲಯದ ಆರಿಫ್ ಅಲಿ(29 ನಿಮಿಷ 18.82 ಸೆಕೆಂಡು) ಮತ್ತು ಜಾನ್‌ಪುರ್ ವೀರ್ ಬಹದ್ದೂರ್‌ಸಿಂಗ್ ಪೂರ್ವಾಂಚಲ್ ವಿಶ್ವವಿದ್ಯಾಲಯದ ರಾಮ್ ವಿನೋದ್ ಯಾದವ್(29 ನಿಮಿಷ 27.45 ಸೆ) ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನ ಪಡೆದರು. ಅವರೂ ಕೂಡ ಹಳೆಯ ದಾಖಲೆಯನ್ನು ಮೀರಿದರು.

ಫೈನಲ್‌ಗೆ ವಿಘ್ನೇಶ್, ಶಶಿಕಾಂತ್ : ಮಂಗಳೂರು ವಿಶ್ವವಿದ್ಯಾಲಯದ ವಿಘ್ನೇಶ್ ಮತ್ತು ಬೆಂಗಳೂರು ವಿಶ್ವವಿದ್ಯಾಲಯದ ಶಶಿಕಾಂತ್ ಅವರು 100 ಮೀಟರ್ಸ್ ಓಟದ ಫೈನಲ್ ತಲುಪಿದ್ದಾರೆ. ಮಂಗಳವಾರ ನಡೆದ ಹೀಟ್ಸ್‌ನಲ್ಲಿ ಅವರು ಅಂತಿಮ ಎಂಟರಲ್ಲಿ ಅರ್ಹತೆ ಗಿಟ್ಟಿಸಿದರು. ಅಮಿತ್ ತಿವಾರಿ (ಗುರುನಾನಾಕ್ ವಿವಿ), ತಮಿಳರಸು ಎಸ್ (ಭಾರತಿಯಾರ್ ವಿವಿ ಕೊಯಮತ್ತೂರು), ಅಮ್ಲಾನ್ ಬೋರ್ಗೊಹೈನ್ (ಕಳಿಂಗ ಇನ್‌ಸ್ಟಿಟ್ಯೂಟ್ ಆಫ್ ಇಂಡಸ್ಟ್ರಿಯಲ್ ಟೆಕ್ನಾಲಜಿ ಡೀಮ್ಡ್ ವಿವಿ), ಗುರು ಪ್ರಣವ್ (ಸಾವಿತ್ರಿಬಾಯಿ ಫುಲೆ ವಿವಿ), ಅಮನ್ ಖೋಖರ್(ಮಹರ್ಷಿ ದಯಾನಂದ ವಿವಿ) ಮತ್ತು ಅರುಣ್ ಕುಮಾರ್ ಸಿ,(ಭಾರತಿಯಾರ್ ವಿವಿ ಕೊಯಮತ್ತೂರು)

ಶಿವಮೊಗ್ಗದ ಕುವೆಂಪು ವಿಶ್ವವಿದ್ಯಾಲಯದ ವಿ. ಪ್ರಭಾಕರನ್ ಮತ್ತು ಮಂಗಳೂರು ವಿವಿಯ ಜಯ್ ಶಾ ಪ್ರದೀಪ್ ಟ್ರಿಪಲ್ ಜಂಪ್ ಫೈನಲ್‌ಗೆ ಲಗ್ಗೆ ಇಟ್ಟಿದ್ದಾರೆ. ಆತಿಥೇಯ ವಿವಿಯ ನಿಹಾಲ್ ಜೋಲ್ ಮತ್ತು ಮಹಾಂತೇಶ್ ಸಿದ್ಧ ಅವರು 400 ಮೀಟರ್ಸ್ ಓಟದಲ್ಲಿ, ವಿಕ್ರಾಂತ್ ಮಲಿಕ್, ಸಚಿನ್ ಯಾದವ್ ಅವರು ಜಾವೆಲಿನ್ ಥ್ರೋನಲ್ಲಿ ಫೈನಲ್ ಪ್ರವೇಶಿಸಿದ್ದಾರೆ.

ಟೆನಿಸ್: ಸಾನಿಯಾ, ಬೋಪಣ್ಣಗೆ ಮುನ್ನಡೆ

ಅಡಿಲೇಡ್ (ಪಿಟಿಐ): ಭಾರತದ ಸಾನಿಯಾ ಮಿರ್ಜಾ ಮತ್ತು ರೋಹನ್ ಬೋಪಣ್ಣ, ಕ್ರಮವಾಗಿ ಇಲ್ಲಿ ನಡೆಯುತ್ತಿರುವ ಡಬ್ಲ್ಯುಟಿಎ ಮತ್ತು ಎಟಿಪಿ ಟೂರ್ನಿಗಳಲ್ಲಿ ಮುನ್ನಡೆದಿದ್ದಾರೆ.

ಮಹಿಳಾ ಡಬಲ್ಸ್‌ನಲ್ಲಿ ಸಾನಿಯಾ ಅವರು ಉಕ್ರೇನ್‌ನ ನಾದಿಯಾ ಕಿಚೆನೊಕ್ ಜೊತೆಗೂಡಿ 16ರ ಘಟ್ಟದ ಪಂದ್ಯದಲ್ಲಿ 1-6, 6-3, 10-8ರಿಂದ ಕೆನಡಾದ ಗ್ಯಾಬ್ರಿಯೆಲಾ ದಾಬ್ರೊವಸ್ಕಿ ಮತ್ತು ಮೆಕ್ಸಿಕೊದ ಗಿಲಿಯಾನ ಒಲ್ಮೋಸ್ ಅವರನ್ನು ಸೋಲಿಸಿದರು.ಮೊದಲ ಸೆಟ್‌ನಲ್ಲಿ ಹಿನ್ನಡೆ ಅನುಭ ವಿಸಿದರೂ ಪುಟಿದೆದ್ದು ಎರಡನೇ ಶ್ರೇಯಾಂಕದ ಜೋಡಿಯನ್ನು ಮಣಿ ಸುವಲ್ಲಿ ಯಶಸ್ವಿಯಾದರು. ಭಾರತದ ರಾಮಕುಮಾರ್ ರಾಮನಾಥನ್ ಜೊತೆಗೂಡಿ ಕಣಕ್ಕಿಳಿದಿರುವ ಕನ್ನಡಿಗ ಬೋಪಣ್ಣ, ಮೊದಲ ಸುತ್ತಿನಲ್ಲಿ ಸುಲಭ ಜಯ ಸಂಪಾದಿಸಿದರು. ಈ ಜೋಡಿಯು 6-2, 6-1ರಿಂದ ಅಮೆರಿಕದ ಜೆಮಿ ಕೆರೆಟನಿ ಮತ್ತು ಬ್ರೆಜಿಲ್‌ನ ಫರ್ನಾಂಡೊ ರೊಂಬೊಲಿ ಅವರಿಗೆ ಸೋಲುಣಿಸಿದರು.

ಈ ಪ್ರಸಿದ್ಧ ಉತ್ಪನ್ನವನ್ನು ಶುದ್ಧ ಔಷಧೀಯ ಗಿಡಮೂಲಿಕೆಗಳೊಂದಿಗೆ ಪುರಾತನ ಆಯುರ್ವೇದಿಯ ಪದ್ಧತಿಯನುಸಾರ ಮಿಶ್ರಣ ಮಾಡಿ ತಯಾರಿಸಲಾಗಿದ್ದು ನಿಮ್ಮಲ್ಲಿ ಶಕ್ತಿ ಮತ್ತು ಉತ್ಸಾಹವನ್ನು ಉತ್ಪಾದಿಸಿ ಉಳಿಯುವಂತೆ ಮಾಡುತ್ತದೆ.
ಹೆಚ್ಚಿನ ಶಕ್ತಿ, ಜೀವಂತಿಕೆ ಹಾಗೂ ತ್ರಾಣವನ್ನು ಅನುಭವಿಸುತ್ತೀರಿ.

ಜಪಾನಿ–M
ಕ್ಯಾಪ್ಸ್ಯೂಲ್ (ಪುರುಷರಿಗೆ)
ಜಪಾನಿ–F
ಕ್ಯಾಪ್ಸ್ಯೂಲ್ (ಸ್ತ್ರೀಯರಿಗೆ)
ಪ್ರತಿದಿನ ಬೆಳಗ್ಗೆ ಒಂದು ಮತ್ತು ರಾತ್ರಿ ಒಂದು ಸೇವಿಸಿ
ಇನ್ನೂ ಹೆಚ್ಚಿನ ಪರಿಣಾಮ ಪಡೆಯ ಬಯಸುವ ಪುರುಷರು ಜಪಾನಿ–M ಕ್ಯಾಪ್ಸ್ಯೂಲ್ ಜೊತೆಗೆ ಜಪಾನಿ ತೈಲವನ್ನು ಕೂಡ ನಿಯಮಿತವಾಗಿ ಬಳಸಬಹುದು.
ಎಲ್ಲ ಔಷಧಾಲಯ ಮತ್ತು ಆಯುರ್ವೇದಿಕ್ ಅಂಗಡಿಗಳಲ್ಲಿ ಲಭ್ಯ

ಆರೋಗ್ಯಕ್ಕಾಗಿ ಅಡ್ಡ ಪರಿಣಾಮಗಳ ಬಗ್ಗೆ ಚಿಂತೆಯೇ?
ಸಿಹಿಯಾದ ನೆನಪುಗಳು
ಶಂಕರ್ ಫಾರ್ಮಸಿ ಯಾ ಡಯಾಬಿಟಿಕ್ ರಿಸರ್ಚ್ ಸೆಂಟರ್ ಇವರು ಅಭಿವೃದ್ಧಿಪಡಿಸಿರುವ ಔಷಧಿ
ಮಧುಮೇಹ -ಎನ್
ಆರೋಗ್ಯಕ್ಕಾಗಿ ಜೊತೆಯಾಗಿ ಹೋರಾಡೋಣ
ಆರೋಗ್ಯಕ್ಕಾಗಿ ಅಡ್ಡ ಪರಿಣಾಮಗಳಿಂದ ಸರ್ವಾಂಗಗಳನ್ನು ಕಾಪಾಡುವ ಆಯುರ್ವೇದಿಕ್ ಔಷಧಿ ಮಧುಮೇಹ-ಎನ್ ಸದಾ ಉಪಯೋಗಿಸಿರಿ ಮತ್ತು ಆರೋಗ್ಯಕರ ಜೀವನ ಸಾಗಿಸಿ
ಈ ಕೆಳಗೆ ಇರುವ ಲಕ್ಷಣಗಳನ್ನು ಮಧುಮೇಹ-ಎನ್ ನಿವಾರಿಸುತ್ತದೆ
• ಅತಿಯಾದ ನೀರಡಿಕೆ
• ಶ್ರಮವಿಲ್ಲದ ತೂಕ ಇಳಿಕೆ
• ಅತಿಯಾದ ಹಸಿವು
• ಅತಿಯಾದ ಆಯಾಸ
• ಅತಿಯಾದ ಶುಷ್ಕ ಚರ್ಮ
• ಮೆಲ್ಲನೆ ಗುಣವಾಗುವ ಗಂಟಲು ಕೆರೆತ
• ಸಾಮಾನ್ಯಕ್ಕಿಂತ ಅಧಿಕವಾದ ಸೋಂಕು

ಮಧುಮೇಹ–ಎನ್

ಶ್ರೀ ಶ್ರೀ ಶ್ರೀ ಡಾ|| ಮಹರ್ಷಿ ಆನಂದ ಗುರೂಜಿಯವರ ಆಶೀರ್ವಾದದೊಂದಿಗೆ

Also available at : amazon.in
ಸದಾ ಉಪಯೋಗಿಸಿ ಮಧುಮೇಹ–ಎನ್
ಹೆಚ್ಚಿನ ವಿವರಗಳಿಗೆ ವಿಚಾರಿಸಿರಿ:
From the house of A & J Health Care, Bangalore
For a Healthy Society
Ph: 8762226000, 9243112373.

ತಮಿಳ್ ತಲೈವಾಸ್ ಮತ್ತು ಯುಪಿ ಯೋಧಾ ಆಟಗಾರರ ಪೈಪೋಟಿ

ಪಾಯಿಂಟ್ಸ್ ಪಟ್ಟಿ					
ತಂಡ	ಪಂದ್ಯ	ಜಯ	ಸೋಲು	ಟೈ	ಪಾಯಿಂಟ್ಸ್
ಬೆಂಗಳೂರು ಬುಲ್ಸ್	6	4	1	1	23
ದಬಂಗ್ ಡೆಲ್ಲಿ	5	3	0	2	21
ಪಟ್ನಾ ಪೈರೇಟ್ಸ್	5	4	1	-	21
ಯು ಮುಂಬಾ	6	2	1	3	20
ತಮಿಳ್ ತಲೈವಾಸ್	6	2	1	3	19
ಬೆಂಗಾಲ್ ವಾರಿಯರ್ಸ್	6	3	3	-	16
ಹರಿಯಾಣ ಸ್ಟೀಲರ್ಸ್	6	2	3	1	15
ಯುಪಿ ಯೋಧಾ	6	1	3	2	14
ಗುಜರಾತ್ ಜೈಂಟ್ಸ್	5	1	2	2	13
ಜೈಪುರ್ ಪಿಂಕ್ ಪ್ಯಾಂಥರ್ಸ್	5	2	3	-	12
ತೆಲುಗು ಟೈಟನ್ಸ್	5	-	3	2	9
ಪುಣೇರಿ ಪಲ್ಟನ್	5	1	4	-	5

(ಮಂಗಳವಾರದ ಪಂದ್ಯಗಳ ಅಂತ್ಯಕ್ಕೆ)

ಕಬಡ್ಡಿ: ತಲೈವಾಸ್ ಜಯಭೇರಿ

ಬೆಂಗಳೂರು: ಮಂಜಿತ್ ಮತ್ತು ಅಜಿಂಕ್ಯ ಪವಾರ್ ಅವರ ಚುರುಕಾದ ದಾಳಿಯ ಬಲದಿಂದ ತಮಿಳ್ ತಲೈವಾಸ್ ತಂಡವು ಪ್ರೊ ಕಬಡ್ಡಿ ಟೂರ್ನಿಯಲ್ಲಿ ಮಂಗಳವಾರ ನಡೆದ ಪಂದ್ಯದಲ್ಲಿ ಜಯಭೇರಿ ಬಾರಿಸಿತು.

ವೈಟ್‌ಫೀಲ್ಡ್‌ನಲ್ಲಿರುವ ಗ್ರ್ಯಾಂಡ್ ಶೆರಟಾನ್ ಹೋಟೆಲ್‌ನಲ್ಲಿ ನಡೆದ ಪಂದ್ಯದಲ್ಲಿ ತಲೈವಾಸ್ ತಂಡವು 39–33 ರಿಂದ ಯು.ಪಿ. ಯೋಧಾ ವಿರುದ್ಧ ಜಯಿಸಿತು.

ಪಂದ್ಯದ ಆರಂಭದಿಂದಲೂ ತಲೈವಾಸ್ ತಂಡವು ಪಾರಮ್ಯ ಮೆರೆಯಿತು. ಇದರಿಂದಾಗಿ ಮೊದಲಾರ್ಧದ ವಿರಾಮದ ವೇಳೆಗೆ ತಲೈವಾಸ್ 21–10ರಿಂದ ಮುನ್ನಡೆ ಸಾಧಿಸಿತ್ತು. ಮಂಜೀತ್ ಮತ್ತು ಅಜಿಂಕ್ಯ ಕ್ರಮವಾಗಿ ಏಳು ಹಾಗೂ ಆರು ಅಂಕಗಳನ್ನು ಗಳಿಸಿತು. ಯೋಧಾ ತಂಡದ ಸುರೇಂದರ್ ಗಿಲ್ 14 ಅಂಕ ಗಳಿಸಿದರು. ಆದರೂ ತಂಡವು ಗೆಲುವಿನತ್ತ ಸಾಗಲಿಲ್ಲ.

ರೋಚಕ ಟೈ: ಹರಿಯಾಣ ಸ್ಟೀಲರ್ಸ್ ಮತ್ತು ಯು ಮುಂಬಾ ತಂಡಗಳ ನಡುವಣದ ಇನ್ನೊಂದು ಪಂದ್ಯವು ರೋಚಕ ಟೈ ಆಯಿತು.

ಉಭಯ ತಂಡಗಳು ಬಿರುಸಿನ ಪೈಪೋಟಿ ನಡೆಸಿದವು 24–24ರಿಂದ ಸಮಬಲ ಸಾಧಿಸಿದವು. ಮೊದಲಾರ್ಧದಲ್ಲಿ ಹರಿಯಾಣ ತಂಡವು 12–10ರಿಂದ ಮುನ್ನಡೆಯಲ್ಲಿತ್ತು.

ನಂತರ ಪುಟಿದೆದ್ದ ಮುಂಬಾ ತಂಡವು ಮುನ್ನಡೆ ಸಾಧಿಸುತ್ತ ಕೊನೆಯಲ್ಲಿ ಸಮಬಲ ಸಾಧಿಸಿತು. ಹರಿಯಾಣ ತಂಡದ ರೋಹಿತ್ ಗುಲಿಯಾ 8 ಅಂಕಗಳನ್ನು ಗಳಿಸಿದರು.

ಇಂದಿನ ಪಂದ್ಯ (ರಾತ್ರಿ)

ಪುಣೇರಿ ಪಲ್ಟನ್ Vs ಗುಜರಾತ್ ಜೈಂಟ್ಸ್ 7.30

ದಬಂಗ್ ಡೆಲ್ಲಿ – ತೆಲುಗು ಟೈಟನ್ಸ್ 8.30

ಲೈವ್: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಇಂಡಿಯನ್ ಸೂಪರ್ ಲೀಗ್ ಫುಟ್‌ಬಾಲ್ ಟೂರ್ನಿ

ಬಿಎಫ್‌ಸಿ–ಬೆಂಗಾಲ್ ಸಮಬಲ

ವಾಹೆಂಗ್‌ಬಮ್ ಅಂಗೌಸನಾ (ಎಡ) ಮತ್ತು ಬೆಂಗಳೂರು ಎಫ್‌ಸಿಯ ಸುನಿಲ್ ಚೆಟ್ರಿ ಚೆಂಡಿನ ಮೇಲೆ ನಿಯಂತ್ರಣ ಸಾಧಿಸಲು ಪ್ರಯತ್ನಿಸಿದರು– ಪಿಟಿಐ ಚಿತ್ರ

ಬ್ಯಾಂಬೊಲಿಮ್ (ಪಿಟಿಐ): ಬೆಂಗಳೂರು ಎಫ್‌ಸಿ ಮತ್ತು ಎಸ್‌ಸಿ ಈಸ್ಟ್ ಬೆಂಗಾಲ್ ನಡುವಣ ಪಂದ್ಯ 1–1ರ ಸಮಬಲದಲ್ಲಿ ಅಂತ್ಯವಾಯಿತು. ಇದರೊಂದಿಗೆ ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಯಲ್ಲಿ ಸುನಿಲ್ ಚೆಟ್ರಿ ನಾಯಕತ್ವದ ತಂಡದ ಪ್ಲೇ ಆಫ್ ಪ್ರವೇಶದ ಕನಸಿಗೆ ಮತ್ತಷ್ಟು ಹೊಡೆತ ಬಿತ್ತು.

ಮಂಗಳವಾರ ನಡೆದ ಹಣಾಹಣಿಯಲ್ಲಿ ಎಸ್‌ಸಿ ಈಸ್ಟ್ ಬೆಂಗಾಲ್ ತಂಡಕ್ಕೆ ಸೆಂಬೊಯಿ ಹಾಕಿಪ್ (28ನೇ ನಿಮಿಷ) ಮುನ್ನಡೆ ತಂದುಕೊಟ್ಟರು. ಆದರೆ ಸೌರವ್ ದಾಸ್ (55ನೇ ನಿಮಿಷ) ತಮ್ಮದೇ ಗೋಲುಪೆಟ್ಟಿಗೆಗೆ ಚೆಂಡು ಸೇರಿಸುವುದರ ಮೂಲಕ ಬೆಂಗಳೂರು ತಂಡಕ್ಕೆ ‘ಉಡುಗೊರೆ’ ನೀಡಿದರು. ಈ ಪಂದ್ಯದೊಂದಿಗೆ ಬೆಂಗಾಲ್ ತಂಡದ ನಿರಾಸೆಯ ಸರಣಿ ಮುಂದುವರಿಯಿತು. ಆಡಿದ ಒಂಬತ್ತು ಪಂದ್ಯಗಳಲ್ಲಿ ತಂಡವು ಒಂದು ಗೆಲುವೂ ದಾಖಲಿಸಿಲ್ಲ.

ಅಗ್ರಸ್ಥಾನಕ್ಕೆ ಎಟಿಕೆಎಂಬಿ–ಹೈದರಾಬಾದ್ ಎಫ್‌ಸಿ ಪೈಪೋಟಿ : ಜುವಾನ್ ಫೆರಾಂಡೊ ಕೋಚ್ ಆಗಿ ಅಧಿಕಾರ ವಹಿಸಿಕೊಂಡ ನಂತರ ಗೆಲುವಿನ ಹಾದಿಗೆ ಹಿಂತಿರುಗಿರುವ ಎಟಿಕೆ ಮೋಹನ್ ಬಾಗನ್ (ಎಟಿಕೆಎಂಬಿ) ತಂಡವು, ಬುಧ ವಾರ ಹೈದರಾಬಾದ್ ಎಫ್‌ಸಿ ಸವಾಲು ಎದುರಿಸಲಿದೆ.

ಈ ಪಂದ್ಯ ಗೆದ್ದು ಗೆದ್ದು ಪಾಯಿಂಟ್ಸ್ ಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಲು ಉಭಯ ತಂಡಗಳು ತವಕಿಸುತ್ತಿವೆ. ಎಟಿಕೆಎಂಬಿ ಸದ್ಯ ಎಂಟು ಪಂದ್ಯಗಳನ್ನು ಆಡಿದ್ದು, 14 ಪಾಯಿಂಟ್ಸ್‌ನೊಂದಿಗೆ ನಾಲ್ಕನೇ ಸ್ಥಾನದಲ್ಲಿದೆ. ಹೈದರಾಬಾದ್ ಕೂಡ ಇಷ್ಟೇ ಪಂದ್ಯಗಳ ಮೂಲಕ 15 ಪಾಯಿಂಟ್ಸ್ ಕಲೆಹಾಕಿದ್ದು, ಎರಡನೇ ಸ್ಥಾನದಲ್ಲಿದೆ. ಸದ್ಯ ಮುಂಬೈ ತಂಡವು (ಒಂಬತ್ತು ಪಂದ್ಯ, 16 ಪಾಯಿಂಟ್ಸ್) ಮೊದಲ ಸ್ಥಾನದಲ್ಲಿದೆ.

ಪಂದ್ಯ ಆರಂಭ: ರಾತ್ರಿ 7.30

ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಫುಟ್‌ಬಾಲ್: ಎಎಸ್‌ಸಿ ಸೆಂಟರ್‌ಗೆ ಜಯ

ಬೆಂಗಳೂರು: ಎಲಾಂಗ್‌ಬಮ್ ಟಂಡನ್ ಮಟೆಯ್ ಗಳಿಸಿದ ಗೋಲಿನ ನೆರವಿನಿಂದ ಎಎಸ್‌ಸಿ ಆ್ಯಂಡ್ ಸೆಂಟರ್ ಎಫ್‌ಸಿ ತಂಡವು ಜಯ ಗಳಿಸಿತು.

ಬಿಡಿಎಫ್‌ಎ ಸೂಪರ್ ಡಿವಿಷನ್ ಲೀಗ್ ಫುಟ್‌ಬಾಲ್ ಟೂರ್ನಿಯ ಪಂದ್ಯದಲ್ಲಿ ಎಎಸ್‌ಸಿ ಆ್ಯಂಡ್ ಸೆಂಟರ್ 1–0ಯಿಂದ ಜವಾಹರ್ ಯೂನಿಯನ್ ತಂಡವನ್ನು ಸೋಲಿಸಿತು. ಎಲಾಂಗ್‌ಬಮ್ ಆರನೇ ನಿಮಿಷದಲ್ಲಿ ಕಾಲ್ಚಳಕ ತೋರಿದರು.

ಮತ್ತೊಂದು ಹಣಾಹಣಿಯಲ್ಲಿ ಎಂಇಜಿ ಆ್ಯಂಡ್ ಸೆಂಟರ್ ಎಫ್‌ಸಿ ತಂಡವು 1–1ರಿಂದ ಬೆಂಗಳೂರು ಈಗಲ್ಸ್ ಎಫ್‌ಸಿಯೊಡನೆ ಡ್ರಾ ಸಾಧಿಸಿತು.

ಮೈಸೂರು ರೇಸ್

ಸ್ಯಾಂಡ್ ಡ್ಯೂನ್ ಗೆಲ್ಲುವ ನಿರೀಕ್ಷೆ

ರೇಸಿಂಗ್ ಪ್ಯಾಟ್ರನ್ಸ್ ಟ್ರೋಫಿ ಬುಧವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಮಧ್ಯಾಹ್ನ 2.00ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಬ್ಲ್ಯೂರಾಯ್ 1, ಐ ಕ್ಯಾನ್ 6, ಬ್ರೇಕಿಂಗ್ ನ್ಯೂಸ್ 2
2ನೇ ರೇಸ್: ಹೀ ಆ್ಯಸ್ ಡನ್ ಇಟ್ 1, ಡಾಲ್‌ಹೌಸಿ 4, ಸಸೆಕ್ಸ್ ಪ್ರೈಡ್ 11
3ನೇ ರೇಸ್: ಸೋ ಫಾರ್ 9, ಪರ್ಫೆಕ್ಟ್ ಲೆಗಸಿ 5, ರಾಯಲ್ ಡಿಸೈನ್ 1
4ನೇ ರೇಸ್: ಲೀಪ್ ಆಫ್ ಫೈತ್ 2, ಆಫ್ರಿಕನ್ ಎಂಪರರ್ 4, ಬೀಟ್ ದಿ ಆಡ್ಸ್ 3
5ನೇ ರೇಸ್: ಸ್ಯಾಂಡ್ ಡ್ಯೂನ್ 8, ಸೇಂಟ್ ಲೂಸಿಯಾ 6, ಸಾಂತೋರಿಣಿ 10
6ನೇ ರೇಸ್: ದಿ ಗೋಲ್ಡ್ 3, ಗೈಡಿಂಗ್ ಫೋರ್ಸ್ 8, ಕಾಂಟ್ರಿಬ್ಯೂಟರ್ 2
7ನೇ ರೇಸ್: ಬಯೋಮೆಟ್ರಿಕ್ 5, ರೈಸಿಂಗ್ ಸನ್ 8, ಟಿಯಾ ಮೇರಿಯಾ 9

ಉತ್ತಮ ಬೆಟ್: ಹೀ ಆ್ಯಸ್ ಡನ್ ಇಟ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7

ಟೆಸ್ಟ್: ಇಬಾದತ್ ದಾಳಿಗೆ ಕಿವೀಸ್ ಕಂಗಾಲು

ಮೌಂಟ್ ಮಾಂಗನೂಯಿ (ಎಪಿ): ಬಾಂಗ್ಲಾದೇಶ ತಂಡದ ಮಧ್ಯಮವೇಗಿ ಇಬಾದತ್ ಹುಸೇನ್ ಪರಿಣಾಮಕಾರಿ ದಾಳಿಯ ಮುಂದೆ ನ್ಯೂಜಿಲೆಂಡ್ ಸೋಲಿನ ಆತಂಕ ಎದುರಿಸುತ್ತಿದೆ.

ಇಬಾದತ್ ಹುಸೇನ್

ಇಲ್ಲಿ ನಡೆಯುತ್ತಿರುವ ಮೊದಲ ಟೆಸ್ಟ್‌ನಲ್ಲಿ ಬಾಂಗ್ಲಾದೇಶವು ಸೋಮವಾರ ಮೊದಲ ಇನಿಂಗ್ಸ್‌ನಲ್ಲಿ 130 ರನ್‌ಗಳ ಮುನ್ನಡೆ ಗಳಿಸಿತ್ತು. ಇಬಾದತ್ (39ಕ್ಕೆ4) ಬೌಲಿಂಗ್ ಮುಂದೆ ಕುಸಿದ ಆತಿಥೇಯ ತಂಡವು ನಾಲ್ಕನೇ ದಿನದಾಟದ ಮುಕ್ತಾಯಕ್ಕೆ 63 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 147 ರನ್ ಗಳಿಸಿತು. ರಾಸ್ ಟೇಲರ್ (ಬ್ಯಾಟಿಂಗ್ 37) ಮತ್ತು ರಚಿನ್ ರವೀಂದ್ರ (ಬ್ಯಾಟಿಂಗ್ 6) ಕ್ರೀಸ್‌ನಲ್ಲಿದ್ದಾರೆ.

ಇನಿಂಗ್ಸ್‌ನ 9ನೇ ಓವರ್‌ನಲ್ಲಿಯೇ ತಸ್ಕಿನ್ ಅಹಮದ್ ಮೊದಲ ಏಟು ಹೊಟ್ಟರು. ಆರಂಭಿಕ ಬ್ಯಾಟರ್ ಟಾಮ್ ಲಥಾಮ್ ವಿಕೆಟ್ ಗಳಿಸಿದರು. ಆದರೆ ಇನ್ನೊಂದು ಬದಿಯಲ್ಲಿದ್ದ ವಿಲ್ ಯಂಗ್ (69; 172ಎ, 4X7) ತಾಳ್ಮೆಯಿಂದ ಆಡಿದರು. ಅರ್ಧಶತಕದ ಗಡಿ ದಾಟಿದರು. ಮೊದಲ ಇನಿಂಗ್ಸ್‌ನಲ್ಲಿ ಮಿಂಚಿದ್ದ ಡೆವೊನ್ ಕಾನ್ವೆ (13 ರನ್) ಅವರನ್ನು ಹೆಚ್ಚು ಹೊತ್ತು ಆಡಲು ಇಬಾದತ್ ಬಿಡಲಿಲ್ಲ. ಇದಾಗಿ 19 ಓವರ್‌ಗಳ ನಂತರ ಯಂಗ್ ವಿಕೆಟ್ ಕೂಡ ಇಬಾದತ್ ಖಾತೆ ಸೇರಿತು. ಹೆನ್ರಿ ನಿಕೋಲ್ಸ್‌ಗೆ ಖಾತೆಯನ್ನೇ ತೆರೆಯಲು ಬಿಡದ ಇಬಾದತ್ ಮಿಂಚಿದರು. ಅಷ್ಟಕ್ಕೇ ನಿಲ್ಲದ ಅವರು ಇನ್ನೊಂದು ಓವರ್‌ನಲ್ಲಿ ಟಾಮ್ ಬ್ಲಂಡೆಲ್ ಅವರನ್ನು ಎಲ್‌ಬಿಡಬ್ಲ್ಯು ಬಲೆಗೆ ಕೆಡವಿದರು.

ಅನುಭವಿ ಟೇಲರ್ ಅವರ ಆಟದಿಂದಾಗಿ ತಂಡವು ಬಾಂಗ್ಲಾದ ಮುನ್ನಡೆ ಮೊತ್ತವನ್ನು ಚುಕ್ತಾ ಮಾಡಿದೆ. 17 ರನ್‌ಗಳ ಅಲ್ಪ ಮುನ್ನಡೆ ಪಡೆದಿದೆ.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ನ್ಯೂಜಿಲೆಂಡ್ 328, ಬಾಂಗ್ಲಾದೇಶ: 458, ಎರಡನೇ ಇನಿಂಗ್ಸ್: ನ್ಯೂಜಿಲೆಂಡ್: 63 ಓವರ್‌ಗಳಲ್ಲಿ 5ಕ್ಕೆ 147 (ವಿಲ್ ಯಂಗ್ 69, ರಾಸ್ ಟೇಲರ್ ಬ್ಯಾಟಿಂಗ್ 37, ರಚಿನ್ ರವೀಂದ್ರ ಬ್ಯಾಟಿಂಗ್ 6, ಇಬಾದತ್ ಹುಸೇನ್ 39ಕ್ಕೆ4)

ನಿಮ್ಮ ತ್ವಚೆಯ ಮೇಲೆ ಪ್ರಯೋಗ ಮಾಡುವುದನ್ನು ನಿಲ್ಲಿಸಿ, ವಿಶ್ವಾಸರ್ಹವಾದುದನ್ನು ನಿಮ್ಮದಾಗಿಸಿಕೊಳ್ಳಿ
ರೂಪ ಮಂತ್ರ

ನಿಮ್ಮ ಆಯ್ಕೆ ಯಾವುದು? ಪ್ರಯೋಗ ತಂತ್ರವೋ ಅಥವಾ ಆಯುರ್ವೇದಿಕ ರೂಪ ಮಂತ್ರವೊ?
Roop Mantra Ayurvedic Face Cream

ರೂಪ ಮಂತ್ರ ಆಯುರ್ವೇದಿಕ ಕ್ರೀಮ್‌ನಲ್ಲಿ ಅಡಕಗೊಂಡಿರುವ ಅಲೋವೆರಾ, ತುಳಸಿ, ದ್ರಾಕ್ಷಿ ಬೀಜ, ಅರಿಶಿಣ, ಚಂದನ ಮತ್ತು ಬದಾಮ್ ನಂತಹ ನೈಸರ್ಗಿಕ ಅಂಶಗಳು ಪ್ರಾಕೃತಿಕ ಚಿಕಿತ್ಸಕಾರಕಗಳಂತೆ ಕಾರ್ಯನಿರ್ವಹಿಸುತ್ತವೆ ಮತ್ತು ತ್ವಚೆಯ ತೇವಾಂಶವನ್ನು ಕಾಪಾಡಲು ನೆರವಾಗುತ್ತವೆ. ಇದರ ಆ್ಯಂಟಿ–ಆಕ್ಸಿಡಂಟ್ ಗುಣಧರ್ಮಗಳು ಹಾಗೂ ಪೋಷಕಾಂಶಗಳು ತಾರುಣ್ಯಭರಿತ ಕಾಂತಿಯುಕ್ತ ತ್ವಚೆಯನ್ನು ನಿರ್ವಹಿಸುತ್ತವೆ. ಈ ಆಯುರ್ವೇದಿಕ ಕ್ರೀಮ್, ತ್ವಚೆಯ ಶುಷ್ಕತೆ, ಕಳೆಗುಂದಿರುವಿಕೆ, ನರೆಗಳು, ಕಪ್ಪು ವೃತ್ತಗಳು, ಕಲೆಗಳು ಮತ್ತು ಇನ್ನಿತರ ತ್ವಚೆಯ ಸಮಸ್ಯೆಗಳನ್ನು ತಡೆಗಟ್ಟುವಟ್ಟುವಲ್ಲಿ ನೆರವಾಗುತ್ತದೆ.

Roop Mantra Ayurvedic Face Wash

ರೂಪ ಮಂತ್ರ ಆಯುರ್ವೇದಿಕ ಫೇಸ್ ವಾಷ್ ನಿಮ್ಮ ತ್ವಚೆಯಲ್ಲಿ ಹೆಚ್ಚುವರಿ ಜಿಡ್ಡನ್ನು ತೊಡೆದು ಹಾಕುತ್ತದೆ, ಸೋಂಕುಗಳು ಮತ್ತು ಮೊಡವೆಗಳನ್ನು ತಡೆಗಟ್ಟುತ್ತದೆ, ಕಲೆಗಳನ್ನು ನಿವಾರಿಸುತ್ತದೆ ಮತ್ತು ಆಳದಲ್ಲಿ ಅಡಗಿಕೊಂಡಿರುವ ಕೊಳೆಗಳನ್ನು ಕೂಡ ತೊಳೆದು ಹಾಕುತ್ತದೆ. ಎಲ್ಲಾ ರೂಪ ಮಂತ್ರ ಫೇಸ್ ವಾಷ್‌ಗಳು ನಿಮ್ಮ ತ್ವಚೆಯನ್ನು ಆರೋಗ್ಯವಾಗಿ, ತೇವಾಂಶಭರಿತವಾಗಿ ಮತ್ತು ಶುದ್ಧವಾಗಿರಿಸುತ್ತವೆ. ನೈಸರ್ಗಿಕ ಫೇಸ್ ವಾಷ್ ಜೊತೆಗೆ ಪ್ರತಿದಿನ ತಾಜಾತನದ ಅನುಭೂತಿ ಪಡೆಯಿರಿ.

24x7 Helpline : 87259 66666 • www.roopmantra.com